ಪೂರ್ವಾರ್ಧಕ್ಕೆ ॥

ಕಂ॥ ಪೊಂಗಳಸಂಗಳಿನೆಸೆವು ।
ತ್ತುಂಗಧ್ವಜತೋರಣಂಗಳಿಂ ಸೊಗಯಿಪ ಕೂ ॥
ಟಂಗ[1]ಳಿನೆಲ್ಲಂ ನಾಡೆ ಮ ।
ನಂಗೊಳಿಪುವು ಪುರದ ರಮ್ಯಹರ್ಮ್ಯಾಚಯಂಗಳ್ ॥ 99

ಅಪರಾರ್ಧಕ್ಕೆ ॥

ಕಂ॥ ಹರನಗಮಿಂತಿದು ಲಂಕೇ ।
ಶ್ವರನೀಗಿರಿವರಮನೊತ್ತಿ ಕಿಱುತ್ತಿದನ ॥
ಚ್ಚರಿವಟ್ಟು ಸುರವಿಯಚ್ಚರ ।
ಗರುಡೋರಗಸಮಿತಿ ನೆರೆದು ನಡೆ ನೋಡುವಿನಂ ॥ 100

ಸೂತ್ರಂ ॥ 21 ॥

ಅವು ಪರಮಾಗಿರೆ ಲಿಂಗಾಂ ।
ತವರ್ಣ್ಣಲೋಪಂ ಗುಣೋಕ್ತಿಗಕ್ಕುಂ ಪ್ರಾಯಂ ॥
ಸ್ವವಿಭಕ್ತ್ಯಂತ್ಯವ್ಯಕ್ಷರಮಾ ।
ಗಿ ವರ್ತ್ತಿಕುಂ ಸರ್ವ್ವನಾಮದೊಳ್ ಮತ್ತದುವುಂ ॥ 101

ಪ್ರಯೋಗಂ ॥

ಕಂ॥ ಇನಿಯುವು ವಿಷಯಸುಖಂ ನಂ ।
ಜಿನ ಸವಿವೊಲ್ ತತ್‌ಕ್ಷಣಂ ವ್ರತಾಚರಣಂ ಮು ॥
ದ್ದಿನ ಕಯ್ಪಿಯಂತೆ ವಿರಸಂ ।
ಮನಕ್ಕವೆರಡುಂ ವಿಪಾಕವಿಪರೀತಂಗಳ್ ॥ 102

ಪ್ರಾಯೋಗ್ರಹಣಕ್ಕೆ ॥

ಕಂ॥ ಬಂಡಣದೊಳೆನ್ನನೋಡಿಸಿ ।
ಕೊಂಡುಯ್ದಂ ನಿನ್ನನಾಸರಿತ್ಸುತನಾನುಂ ॥
ಪೆಂಡತಿಯೆನಾದೆನದಱಿಂ ।
ಪೆಂಡಿರ್ ಪೆಂಡಿರೊಳದೆಂತು ಕೂಡುವರಬಲೇ ॥ 103

1 ಗಳಿನೆಲ್ಲಂ, ಗಳಿವೆಲ್ಲಂ.

ಸೂತ್ರಂ ॥ 22 ॥

ಸ್ವರಮಿದಿರೊಳಕಾರಾಂತ ।
ಕ್ಕಿರೆ ಸಾಗಮಮುಕ್ಕುಮಲ್ಲಿ ಪುಲ್ಲಿಂಗದೊ[1]ಳ ॥
ನ್ನೆರಡನೆಯ ವಿಭಕ್ತಿಯನ ।
ತ್ತಿರಲಿತ್ತು ನಪುಂಸಕಕ್ಕೆ ದಾಗಮಮುಕ್ಕುಂ ॥ 104

ಪ್ರಯೋಗಂ ॥

ಕಂ॥ ಇವನಧಿಕಪುಣ್ಯನೀತನ ।
ನವಶ್ಯಮೋಲಗಿಸೆ ತೀ[2]ರ್ಗ್ಗಮಭಿಮತಮಿವನಿಂ ॥
ಭುವನವಿಶೇಷಕರಾರೆಂ ।
ದ[3]ವನವನತನಾದನಾಥರಾಧಿಪನಡಿಯೊಳ್ ॥ 105

ಮನದಿಂ ಪೇಗಂ ಮುಟ್ಟಿದ ।
ನನೂನಫಲಕುಸುಮಪಲ್ಲವಭ್ರಾಜಿತಮಂ ॥
ಬನದೊಳಗೆ ಪವನನಂದನ ।
ನನಿಂದ್ಯಗುಣನೆಸೆವಶೋಕಧಾತ್ರೀರುಹಮಂ ॥ 106

ಸೂತ್ರಂ ॥ 23 ॥

ಮ[4]ತ್ತಾ ದ್ವಿತೀಯೆಗಂ ಮನ ।
ವೊತ್ತರಿಸಿಕ್ಕುಗಂ ವಿಭಾಷೆಯಿಂ ನಿಧನದೊಳಂ ॥
ಪತ್ತಿ ನಿಮಿರ್ದಮುರ್ದು ನಿಲ್ಕುಮು ।
ದಾತ್ತತೆ ಮಿಗೆ ದಂ ತೃತೀಯೆಗೇದಂತಂ ಮೋಪ್ ॥ 107

ಪ್ರಯೋಗಂ ॥

ದ್ವಿತೀಯೆಗೆ ॥

ಕಂ॥ ನೆಲನಂ ನುಂಗಲುಮಂಬುಧಿ ।
ಜಲಮಂ ತವೆ ತುಳ್ಕಲುಂ ಕುಲಾಚಲಕುಲಮಂ ॥
ನೆಲೆಯಿಂ ಕಿ[5]ೞಲುಂ ತಾರಾ ।
ವಲಿಯನುದಿರ್ಚ್ಚಲುಮೊಡರ್ಚ್ಚದಂ ಚಕ್ರಧರಂ ॥ 108

* ಹರನಗಮಿಂತಿದು ಲಂಕೇ ।
ಶ್ವರನೀಗಿರಿವರಮನೊತ್ತಿ ಕಿೞ್ತಿತ್ತಿದನ ॥
ಚ್ಚರಿವಟ್ಟು ಸುರವಿಮುಚ್ಚರ ।
ಗರುಡೋರಗಸಮಿತಿ ಮೆಚ್ಚಿ ತಲೆದೂಗುವಿನಂ ॥ 109

---

1 ಶೋಧಿಂ ॥ ಎರಡನೆಯ. 2 ತೀರ್ಗ್ಗ. 3 ದವನವನ. 4 ಮತ್ತಂ. 5 ನೆಗಿಲ್. * ಈ ಪದ್ಯವು ಒಂದು ಪ್ರತಿಯಲ್ಲಿ ಇಲ್ಲ.

ತೃತೀಯೆಗೆ ||

ಕಂ|| ಭಯದಿಂದಂ ಮುೞಿಸಿಂದಂ |
ಸ್ಮಯದಿಂದಂ ರಾಗದಿಂದಮೞಿಪಿಂದಂ ದು ||
ರ್ನ್ನಯಮಂ ಭಾವಿಸದೆ ಯಾದೃ |
ಚ್ಛೆಯಿಂದೆ ನೆಗೞ್ವಂಗೆ ತೀರ್ವ್ವ ಕಜ್ಜಮುಮೊಳವೇ || 110

ವೃ || ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ |
ಕ್ಷೆಗೆ ಪೂರ್ಣ್ಣಕ್ಷಯಪುಣ್ಯನುಗ್ರತಪಮೆಂಬುಗ್ರಾಸಿಯಿಂ ಕೂಡೆ ಘಾ ||
ತಿಗಳಂ ಘಾತಿಸಿ ತದ್ಯುಗಂಧರಮಹಾಯೋಗೀಶ್ವರಂ ತಾಳ್ದಿದಂ |
ನೆಗೞ್ದಾರ್ಹಂತ್ಯಮನೇನನೀಯದೊ ಶುಭಧ್ಯಾನೋಪಯೋಗೋದಯಂ || 111

ಸೂತ್ರಂ || 24 ||

ಅಕ್ಕುಂ ಬಹುಳಮುಕಾರಾಂ |
ತಕ್ಕೆ ತೃತೀಯಾದಿಗ[1]ಳೊಳನಾಗಮಮುಮಱುವೆಂ |
ದಕ್ಕುಮವು ಸರ್ವ್ವನಾ[2]ಮದ |
ಪಕ್ಕದೊಳಿರೆ ಮೊದಲೊಳರ್ದ್ದಕಾರದ ನೆಲೆಯೊಳ್ || 112

ಉದಾಹರಣೆ ||

ಪೂರ್ವ್ವಾರ್ದ್ಧಕ್ಕೆ ||

ಕಂ|| ಮನುವಿನ ಮಾರ್ಗ್ಗಂ ಸುರಗುರು |
ವಿನಱಿವು ಪವಮಾನಸೂನುವೊಂದಾಯತಿ ಪೆಂ ||
ಪಿನೊಳೆಸೆವ ಕರ್ಣ್ಣನೊ[3]ರ್ನ್ನಡಿ |
ತನಗವು ನಿಜಮಾಗೆ ನೆಗೞ್ದನಾವಿಭುವಿಳೆಯೊಳ್ || 113

ಅಪರಾರ್ದ್ಧಕ್ಕೆ ||

ಕಂ|| ಅದಱಿಂದಾನೊಂದಂ ಬೇ |
ಡಿದಪೆಂ ಮಾರ್ಕ್ಕೊಳ್ಳದೀವುದೆಂಬುದುಮದಱೊಳ್ ||
ಪುದಿದನುರಾಗಂ ಮಣ್ದಿರೆ |
ತದಸ್ತುವೆಂದಿತ್ತನಮಳವಸ್ತುವನಾ[4]ತಂ || 114

ಸೂತ್ರಂ || 25 ||

ಮೊದಲೊಳನುಸ್ವಾರಂ ಬೆರ |
ಸದಂತಪುಲ್ಲಿಂಗದೊಳ್ ಗೆಯಕ್ಕುಂ ದ್ವಿತ್ವಂ ||
ವಿದಿತನಪುಂಸಕದೊಳ್ ಪ |
ಕ್ಷದಿಂ ತೃತೀಯಂ ಚತುರ್ತ್ಥಿಗಂತುಱುದುಮಱೊಳ್ || 115

1 ಗಳ್ಗನಾಗಮ, 2 ನಾಮದ, 3 ನೆಗೞ್ದಿ, 4 ನಾದಂ,

ಪ್ರಯೋಗಂ ||

ಕಂ || ಆತಂಗಮಾಕೆಗಂ ವಿ |
ಖ್ಯಾತಯಶಂ ಪುಟ್ಟಿದಂ ಕುಲಕ್ಕಂ ತಿಲಕಂ ||
ಭೂತಳದೊಳರ್ಗ್ಗಮಧಿಕಂ |
ನೀತಿಪರಂ ಪರಬಲಾಬ್ಧಿಗೌರ್ವ್ವಪ್ರತಿಮಂ || 116

ಸೂತ್ರಂ || 26 ||

ಅ[1]ತ್ತಣಿಮೊಂದನುಸಂಧಿಸಿ |
ಯೊ[2]ತ್ತಂಬರದಿಂ ತಗುಳ್ಚುವರ್ ಪಂಚಮಿಯೊಳ್ ||
ಬಿತ್ತರಿಸುವರ್ ತೃತೀಯಾ |
ವೃತ್ತಿಯುಮಂ ಪಂಚಮೀಪ್ರಯೋಗದೊಳರೆಬರ್ || 117

ಉದಾಹರಣೆ ||

ವೃ || ಕವಡಿಕೆ ಬಂದುದೋ[3]ಪಳುಚಿದಟ್ಟಿದಳಾಳ್ದನ ನಂಟರ[4]ತ್ತಣಿಂ |
ದವದಳಮಾಯ್ತು ಪೋಯ್ತುರವಣಂ ಪೊಲೆಮಾವುಗೆನೆಂ[5]ಬನಾದನಿ ||
ನ್ನವಧರಿಸಲ್ಕಮಾಜಿನೆ[6]ನುತುಂ ಮು[7]ಗುಳ್ದುಡುವನಿಲ್ಲಜಂಗೆ ತಾಂ |
ಕವಡಿಕೆ ಕೆಯ್ಯೊಳಿರ್ದ್ದಮವು ಮುಂದಲೆಯೊಳ್ ನೆಲಸಿರ್ದ್ದುವಲ್ಲವೇ || 118

ಮತ್ತಹಸ್ತಿಗಳ ಮಸ್ತಕದಿಂ ಬಿದಿರಿಂ ಫಣೀಂ |
ದ್ರೋತ್ತಮಾಂಗದಿನಗುರ್ವ್ವಿಪ ಪಂದಿಯ ಕೋಟ್ಕಳಿಂ ||
ಪತ್ತುವಿಟ್ಟಗನಿ[8]ಕುಂಜದೊಳೊಕ್ಕಳಮುತ್ತನಾ |
ಯುತ್ತುಮಿರ್ಪ್ಪ ಶಬರಪ್ರಿಯಕಾಮಿನಿಯರ್ಕ್ಕಳಂ[9] || 119

ಸೂತ್ರಂ || 27 ||

ಆದಿವಿಭಕ್ತಿಯೊಳಂ ಸ್ವಾ |
ಮ್ಯಾದಿಯೊಳಂ ಷಷ್ಠಿ ತಾನದಕ್ಕುಂ ಕೆಲರು ||
ತ್ಪಾದಿಸುವರ್ ಸ್ವಾಮಿತ್ವದೊ |
ಳಾದಮಭೇದದೆ ಚತುರ್ತ್ಥಿಯಂ ಷಷ್ಠಿಯುಮಂ || 120

ಲಕ್ಷ್ಯಂ ||

ಕಂ || ಕಿವಿಗಾದ ಸಂತಸಂ ಕ |
ಣ್ಣವತರಿಸಿದುದೀಗಳೆಮಗೆ ಕಾ[10]ಮಾಂಧಕಗ ||
ಳ್ಳವದಾ[11]ತಮಂತ್ರಸಿದ್ಧಿಯು |
ಮವಯವದಿಂದಾಯ್ತು ನಿನ್ನ ಬರೆ ಮು[12]ರಮಥನಾ || 121

---

1 ಅತ್ತಣಿನೊಂದನುಬಂಧಿಸಿ. 2 ತು (ಉ) ತ್ತಂಬರದಿಂ. 3 ಪೋದ. 4 ನತ್ತಣಿಂ. 5 ನಂಬ, ಪೆಂಬ.
6 ವೆನುತುಂ. 7 ಮಗುಳೆ ತಿರುವ. 8 ವಿಕಾಯ. 9 ಳಂ. 10 ಕಾಮಾಂತಕ. 11 ದಾತ. 12 ಮಧುಮಥನಾ.

ಅದಲ್ಲದೆಯುಂ ॥

ವೃ ॥ ತೆಂಕವಂ[1] ಕದೊಳಸಂಖ್ಯಬಲಂ ನಿ ।
ಕ್ಕಂಕೆಯಿಂ ನೃಪನ ಪೇೞೆ ವಿರುದ್ಧಾ ॥
ತಂಕನಳ್ಕಱೆ ಸುಶರ್ಮ್ಮನೃಪಂ ಮೇ ।
ಶಾಂಕುಶಂ ತುಱುಗೊಳಲ್ ಪೊ[2]ಱಮಟ್ಟಂ ॥ 122

ಸ್ವಾವ್ಯಾದಿಗೆ ॥

ವೃ ॥ ಮದನನ ಕೆಯ್ದುವೆಲ್ಲಿದನನಂಗನ ಕೆಯ್ಪಿಡಿಯೆಲ್ಲಿದಂ ಮಲಾ ।
ಸದ ಕಣೆಯೆಲ್ಲಿದಂ ಚದುರನ[3]ಲ್ಲಿದನೆಲ್ಲಿದನೆಲ್ಲಿದಂ ಮನೋ ॥
ದದ ಮೊದಲೆಲ್ಲಿದಂ ಸೊಬಗಿನಾಗರಮೆಲ್ಲಿದನಿಚ್ಛೆಯಾಣ್ಮನೆ ।
ಲ್ಲಿದನೆರ್ದೆಗಾಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ ॥ 123

ಅಪರಾರ್ಧಕ್ಕೆ ॥

ವೃ ॥ ಈತನೀನೆಲನನಾಳ್ವರಸಂ ಕೇ ।
ಳೀತನೀಧರಣಿಗೀಶ್ವರನೀಮಾ ॥
ತೀತನೀವಿಷಯನಾಯಕನೀತೋ ।
ರ್ವ್ವೀತನೀದೆಸೆಯ ನಾಳ್ಕಧಿನಾಥಂ ॥ 124

ಸೂತ್ರಂ ॥ 28 ॥

ಗುಣದಿಂ ಕ್ರಿಯೆಯಿಂ ನಿರ್ಧಾ ।
ರ[4]ಣೆಯೊಳ್ ಸಪ್ತಮಿಯುಮಕ್ಕುಮಾದಿಯುದಾಮಂ ॥
ತ್ರಣದೊಳ್ ನೆಗೞ್ಗುಂ ಸಾಧಾ ।
ರಣದೊಳ್ ಲೋಪಂ ತದೇಕವಚನಕ್ಕಕ್ಕುಂ ॥ 125

ಲಕ್ಷ್ಯಂ ॥

ಪೂರ್ವ್ವಾರ್ಧಕ್ಕೆ ॥

ವೃ ॥ ಸುರರೊಳಗೆಂತು ವಜ್ರಿ ಭಗಣಂಗಳೊಳೆಂತು ಸು[5]ಧಾಕರಂ ಮಹಾ ।
ಗಿರಿಗಳೊಳೆಂತು ಮೇರು ಭುಜಗಂಗಳೊಳೆಂತು ಭುಜಂಗನಾಯಕಂ ॥
ನರರೊಳಗೆಂತು ಚಕ್ರಿ ವಿಹಗಂಗಳೊಳೆಂತು ಗರುತ್ಮನಂತೆ ನೀಂ ।
ಪಿ[6]ರಿಯೆ ಜಿನೇಂದ್ರ ದೇವರೊಳಗಿಂದ್ರನ[7]ರೇಂದ್ರಫಣೀಂದ್ರವಂದಿತಾ ॥ 126

ಅಪರಾರ್ಧಕ್ಕೆ ॥

ವೃ ॥ ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚ್ಚಿ ಕೇಳ್ ತಾತ ಮಾ ।
ರುತ ಕೇಳ್ ಮಾರುತಮಾರ್ಗ್ಗ ಕೇಳ್ ಪಗೆವನಂ ಕೊಂದೆನ್ನ ಕೋಪಾಗ್ನಿಗಾ ॥
ಹುತಿಮಾಡಿಪ್ಪೆಂ ಕೊಲಲಾಱದಂದು ತಱಿಸಂದಾನೆನ್ನ ನಿಂದಗ್ನಿಗಾ ।
ಹುತಿಮಾಡಿಪ್ಪೆಂ ಗ[8]ಡಿಮೆಂದು ಪೂಣ್ದೊದ[9]ಱಿದಂ ಕೌರವ್ಯಕೋ[10]ಲಾಹಳಂ ॥ 127

1 ವಕ್ಷ. 2 ಮೆಱೆಮಟ್ಟ. 3 ಪುಟ್ಟಿದ. 4 ರ ದಿಂ. 5 ನಿಶಾಕರಂ. 6 ಪಿರಿಯ. 7 ಮನೀಂದ್ರನರೇಂದ್ರ. 8 ಗಡಮೆಂದು. 9 ಕಱಿದಂ. 10 ಕಾಳಾನಳಂ.

ಸೂತ್ರಂ ॥ 29 ॥

ಭಾಷೆಯೊಳೇಕತ್ವಕ್ಕ[1]ವಿ ।
ಶೇಷದಿನೇದಂತಮಲ್ಲಿ ವರ್ತ್ತಿಸುಗುಮಿರಾ ॥
ಶ್ಲೇಷಂ ತಾನಕ್ಕುಂ ಪರಿ ।
ಶೇಷದ್ವಿಬಹುತ್ವವಿಷಯಮೆನಿತನಿತರ್ಕ್ಕಂ ॥ 128

ಪ್ರಯೋಗಂ ॥

ವೃ ॥ ಎಳಮಾವೇ ತಳಿರುಯ್ಯಲೇ ಕೊಳ ತಗುಳ್ದಿಂದೋಳಮೇ ಕೋಗಿಲೇ ।
ಗಿಳಿಯೇ ತುಂಬಿಯ ಬಂಬಲೇ ಪುಳಿನಮೇ ಬೆಳ್ದಿಂಗಳೇ ಚಂದ್ರನೇ ॥
ಕೊಳನೇ ನಂದನಮೇ ಲತಾಭವನಮೇ ಸುಗ್ಗೀ ಕರಂ ಬ[2]ರ್ದ್ದಿದೆಂ ।
ಗಳ ನೀಮೆಲ್ಲರುಮೆನ್ನ ಬದ್ದುರ್ಗೆಯಾನಾನಲ್ಲಂಗೆ ಪೇೞಿಂಗ[3]ಡಿಂ ॥ 129

ಸುರತರುನಂದನಂಗಳಿರ ರತ್ನಪಿನದ್ಧವಿಮಾನಕೂಟ್ನಮಾಂ ।
ತರಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸುಂ ॥
ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ ।
ನ್ನರಮೆಱೆದುಯ್ವ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿ[4]ರ್ಪ್ಪುದೇ ॥ 130

ಸೂತ್ರಂ ॥ 30 ॥

ಎಸೆದಿರೆ ನಿಲ್ಕುಂ ಸಂಬೋ ।
ಧಿಸುವೆಡೆಗಳೊಳಮಂದರ್ದೆ ದೇಸೆಯಿಂ ಮಾರ್ಗ್ಗದೊಳಂ ॥
ನಿಸದಂ ಕ್ರಮಗತಿಯೊಳತಿ ।
ಪ್ರಶಸ್ತಿಯಿಂ ಹ್ರಸ್ವದೀರ್ಘ್ಘಕಾಕುಗಳೆರಡುಂ ॥ 131

ಪ್ರಯೋಗಂ ॥

ಹ್ರಸ್ವಕ್ಕೆ ॥

ವೃ ॥ ಕೇಳ ಮಾಧವ ಭವನ್ಮಥಿತ[5]ವ್ಯಾ ।
ಳೋಳದಾನವಕುಲಾಂಬುಧಿಲಬ್ಧೋ ॥
ನ್ಮೀಳನಂ ಭು[6]ವನಸಂಹೃತಿಮೂಲಂ ।
ಕಾಳಕೂಟಮೆನೆ ಪು[7]ಟ್ಟ ನಿಶಾಟಂ ॥ 132

ದೀರ್ಘ್ಘಕ್ಕೆ ॥

ವೃ ॥ ವಾರಣೇಂದ್ರಮಣಿಹೇಮವರಸ್ತ್ರೀ ।
ಸಾರವಸ್ತುಚಯಮುಂ ಕ್ರಮದಿಂ ಕೆ ॥
ಯ್ಸಾರಲಾಟಿಸುವ್ರೊ[8]ಡಿಂ ತಡಪಲ್ತೇ ।
ಕಾ[9]ರ್ಣಂ ಕುರುಪತೀ ನ[10]ಮಗೀಗಳ್ ॥ 133

---

1 ಕ್ಕವಿ. 2 ಬಂದಿದೆಂ. 3 ಗಡಾ. 4 ತಿಪ್ಪುದೇ. 5 ಕಾವ್ಯಾ. 6 ಭುವನಸಂಹೃತಿ. 7 ಪುಟ್ಟಿಸಂಟಾಜಂ, 8 ವಾಂಶಡಮಲ್ಪೇಂ. 9 [illegible]. 10 ಎಮಗೀಗಳ್,

ಸೂತ್ರಂ ॥ 31 ॥

ಸ್ವರಸಂಜ್ಞಕಂಗಳಮದಱ್ಗಂ ।
ದಿರೆ ಮುಂದೆ ವಿಕಲ್ಪದಿಂ ದ್ವಿತೀಯೆಗೆ ದೀರ್ಘಂ ॥
ದೊರೆಕೊಳ್ಗ ಮೆಲ್ಲಿಯಮಾನಂ ।
ಪುರಾತನೋಕ್ತಿಗಳೊಳಂ[1]ತದಲ್ಲಿ ಯಥೇಷ್ಟಂ ॥ 134

ಪ್ರಯೋಗಂ ॥

ವೃ ॥ ದಿವಾಕರನ ಪುಟ್ಟಿ ಪೋದ ದಿತಿಜಾಂಡಖಂಡಂಗಳಾ ।
ನವಂ ಪಿಡಿದು ಪದ್ಮಜಂ ತಗುಳೆ ಮಾಡಿ ಸಾ[2]ಮಂಗಳಂ ॥
ಸ[3]ವರ್ಷಜಲಜಾತಿಗಂಧಮುದಕೋಪಸತ್ವಂಗಳಾ ।
ನವಂ ಪಡೆದನಿಂದ್ರಜಾಲಿಗನವೋಲೆ ಕಣ್ಗೊಪ್ಪಿದಂ ॥ 135

ಸೂತ್ರಂ ॥ 32 ॥

ತುದಿಯೊಳ್ ದೀರ್ಘಾದೇಶಂ ।
ಪೊ[4]ದೆಬ್ದು ಷಷ್ಠೀವಿಭಕ್ತಿಗರೆಬರ ಮತದಿಂ ॥
ಪುದಿದಿಕ್ಕೆಱ್ಗಂ ಕೆಲಬರ್ ಖೇ ।
ದದೊಳಂ ಸಂಭ್ರಮದೊಳಂ ಪ್ರಯೋಗಿಸುವರದಂ ॥ 136

ಪ್ರಯೋಗಂ ॥

ಷಷ್ಠಿಯ ದೀರ್ಘಕ್ಕೆ ॥

ವೃ ॥ ಮೃಡನಾ ಗಂಗಾಂಬುಧಾರಾಜಟಲಿತಜಟನಾ ಪಾದಪ[5]ದ್ಮಕ್ಕೆ ಮುನ್ನಂ ।
ಪೊಡೆವಟ್ಟಿಂದ್ರಂ ಬೞಿಕ್ಕೀಕೆಗೆ ಪೊಡೆವಡೆ ತನ್ಮೌಲಿರತ್ನಪ್ರತಾನಂ ॥
ತೊ[6]ಡರ್ದುದ್ಯದ್ದ್ಯುತಿ ತಟ್ಟುತ್ತಿಡಿದಳೆಗಳ್[7]ವಿನ್ಮೊಡಿದಂತಪ್ಪವೀಗಳ್ ।
ಮುಡಿದತ್ತಿಂದ್ರಂಗಮುಗ್ರಾಸುರಬಲಮಥನೋದ್ಯೋಗಯೋಗಪ್ರಯೋಗಂ ॥ 137

ಖೇದಸಂಭ್ರಮಂಗಳ್ಗೆ ॥

ವೃ ॥ ಪೊಂಬೆಸದಿಂದಮೆಯ್ದೆ ಸಮೆದಂತೆಸೆದೊಪ್ಪುವ ಬಣ್ಣಮುಂ ಕರಂ ।
ಪಂಬಲಿಸಲ್ಕೆ ತಕ್ಕವಚಬಾಗಿಸದೋಗರಗಂಪುಮಾವ ಪೂ ॥
ವಿಂ ಬಗೆವಾಗಳಿಂತಿವಱೊಳಗ್ಗಳಮಾದೊಡಮುಕ್ಕಟಾ ಮರು ।
ಳ್ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿನ್ನಱವಿತ್ತದಿಂ ॥ 138
ಪುಗಿಲಂ ಕ್ರೀಡನಶೀಲನಕ್ಕರ[8]ಗನಾದಂ ಪಲ್ಲವಗ್ರಾಹಿ ವಾ ।
ಸುಗಿ ನಮ್ಮಾದುದನಾಗಲುಂ ನ[9]ಮೆಯುಲುಂ ಮೆಯ್ದುಕ್ಕಱ್ಗಮೇ ತಾ[10]ರನೆಂ ॥
ಪಗಡಾ ವೇ[11]ಳೆಯೆನೆಂಬ ಡೊಂ[12]ಬನಱಿಯೆಂ ಕು[13]ತ್ತಂ ನೆಲಕ್ಕಿಕ್ಕಿ[14]ದಂ ।
ದಗಲಿಂ ರಾ[15]ಜಿಗ ನಿನ್ನನೆನ್ನೊಡಲೊಳನ್ನೀಪ್ರಾಣಮುಳ್ಳನ್ನೆಗಂ ॥ 139

---

1 ಳಱಿವುದಲ್ಲಿ. 2 ನಾಮಂ. 3 ಸುವರ್ಣಬಲ. 4 ಪೊದಟ್ಟ. 5 ಯುಗ್ಮಕ್ಕೆ. 6 ಪೊಸರ್ದು. 7 ಳವಂಸೂಡಿದಂ ತಳ್ಕೈವಿಾಗಳ್. 8 ಗಲ. 9 ಪಮೆ. 10 ತಾನೆ. 11 ವೇಳೆಯ. 12 ದೊಬ. 13 ಮುತ್ತಂ. 14 ಕ್ಕಲಂ. 15 ರಾಜಿಗ, ರಾಜಗ.

ಸೂತ್ರಂ ॥ 33 ॥

ಮೊದಲ ವಿಭಕ್ತಿಯೆ ವಾಕ್ಯದ ।
ಮೊದಲೊಳ್ ಪುದಿದಿರೆಯುಮುಱುವಿಶೇಷಣಗತಿಯಿಂ ॥
ಪದಸಂತಾನಂ ತಾನದು ।
ತುದಿಯ ವಿಭಕ್ತಿಯೊಳೆ ಕಾರಕಾನ್ವಿತಮಕ್ಕುಂ ॥ 140

ಪ್ರಯೋಗಂ ॥

ಕಂ ॥ ಸಂಗತಸ[1]ತ್ವಂ ಕುರುರಾ ।
ಜಂಗಂ ಕರ್ಣಂಗಮೇಱಿಸಲ್ಕರಿದನಿದಂ ॥
ತಾಂಗಡಮೇಱಿಪನೀಪಾ ।
ರ್ವಂಗಕ್ಕಟ ಮೆಯ್ಯೊಳೊಂದು ಮರುಳುಂಟಕ್ಕುಂ ॥ 141

ನರಪರೊಳಗೊಂದು ಕೋಟಿಯು ।
ಮ[2]ರ ಚಾಪಬ[3]ಲಕ್ಕಧೀಶನಂ ದುಂದುಭಿಯುಂ ॥
ಬ[4]ರಿಸಿ ಮದವರಜನೆಂದಂ ।
ತಿರೆ ನೆಗೞೆಂದಾಹವಕ್ಕೆ ಪೇೞ್ದಂ ಬೆಸನಂ ॥ 142

ಸೂತ್ರಂ ॥ 34 ॥

ಕಾರಕಮುಂ ಕ್ರಿಯೆಯುಂ ಕ್ರಿಯೆ ।
ಕಾರಕದಿಂದನ್ವಿತಾರ್ಥಮಾಗಿರ್ಪನಮ ॥
ಧ್ಯಾರೋಪಮೆಯ್ದುಗುಂ ತ ।
ತ್ಕಾರಕಗತಿಯೊ[5]ಳೆ ವಿಭಕ್ತಿ ಪರಿಣತಮಕ್ಕುಂ ॥ 143

ಪ್ರಯೋಗಂ ॥

ವೃ ॥ ಅಮೃತದ ಕಂಡಸಕ್ಕರೆಯ ಕೂಟಮುಮೊ[6]ಲ್ವಳ ಕೂಟಮುಂ ಸಮಾ ।
ನಮೆ ವಲಮೊಲ್ಲದಳ್ಗೆ ವಿಟನೇ[7]ಟವಿಟಂ ಬ[8]ರೆ ಕೂಟಮಿಂಪನೀ ॥
ಗುಮೆ ಪೆಱಗೊಂಡೆನಾಬೆಲೆಗೆ ಮೆಯ್ವೆಲೆ ಮೆಸು ನಿನತಿ[9]ತ್ತೆನೆಂಬ ಕೂ ।
ಟಮನದನೊಂದುಕೂಟಮೆನಲಕ್ಕುಮೆ ನಂಜಿನ ಕಾಳಕೂಟಮುಂ ॥ 144

ಕಂ ॥ ಪಿಡಿಯ ಮೆಲಲ್ ಪಿಡಿ ಸ್ವಕ್ವದೊ ।
ಳಡಸಿದ ಪಲ್ಲವಕೆ ಪಲ್ಲಮುಱಿ ನಿಳ್ಕುವುದುಂ ॥
ಕಡೆಗಣ್ಣೊಳ್ ಕಂಡೊಂದಿಭ ।
ಮುಡಿದಿತ್ತುದು ಸಾರ್ದ್ರಸಲ್ಲಕೀಪಲ್ಲವಮಂ ॥ 145

1 ಸತ್ವರಕುರು. 2 ಮಾ. 3 ಬಲಕ್ಕಮಧೀಶನಂ. 4 ಬಱಿಸಿದುರವರಜನಂದಂ. 5 ಯೊಳ್. 6 ವೋಲ್ವಳ. 7 ವಾಟ. 8 ಬಗೆಗೂಳು. 9 ಗಿತ್ತೆ.

ವಿಭಕ್ತಿಪರಿಣಾಮಕ್ಕೆ ॥

ವೃ ॥ ಅಸುಹೃತ್ಸೇನೆಗೆ ಸಾಲ್ವನೊರ್ವ್ವನೆ ಗಡಂ ರುದ್ರಾವತಾರಂ ಗಡಂ ।
ನೊಸಲೊಳ್ ಕಣ್ ಗಡಮೆಂದು ನಂ[1]ಬಿ ಪೊಱದೆಂ ತಾನಕ್ಕೆ ತಮ್ಮಮ್ಮನ ॥
ಕ್ಕೆಸಲಂಬಂ ತಿರುವಾಯ್ಗೆ ತಂ[2]ದಱಿವರೇ ತಮ್ಮಿರ್ವ್ವರುಂ ಕೆಯ್ದುವಂ ।
ಬಿಸುಟರ್ ಜೋೞದ ಪಾೞಿಯುಂ ಬಗೆದರ[3]ಲ್ಲಾದ್ರೌಣಿಯುಂ ದ್ರೋಣನುಂ ॥ 146

ಸೂತ್ರಂ ॥ 35 ॥

ಜಾತಿಯೊಳಂ ಸಂಖ್ಯಾನಾ[4] ।
ಖ್ಯಾತಿಯೊಳಂ ಕೂಡಿ ನೆ[5]ಗೞ್ಗೆಮೇಕಬಹುತ್ವೋ ॥
ದ್ಯೋತನಪರಮೇಕತ್ವಂ ।
ಮಾತೇಂ ಭಾವದೊಳಮೇಕವಚನಮೆ ಅಕ್ಕುಂ ॥ 147

ಪ್ರಯೋಗಂ ॥

ಜಾತಿಗೆ ॥

ಕಂ ॥ ಕ[6]ರಿಯಿವು ಕರಿಯಲ್ಲಿವು ಗಿರಿ ।
ಗಿರಿಯಲ್ಲಿವು ಕರಿ ಕ[7]ರೀಂದ್ರಮಲ್ಲಿವು ಗಿರಿ ಪೋ ॥
ಕ[8]ರಿಗಿರಿಯೆಂದಿನಿಸಪ್ಪುಡ ।
ಮರಣ್ಯದೊಳಗಱಿಯಲಾಗ ಕರಿಯುಂ ಗಿರಿಯುಂ ॥ 148

ಸಂಖ್ಯೆಗೆ ॥

ಕಂ ॥ ದೆಸೆ ಪತ್ತು ಜಲಧಿ ನಾಲ್ಕು ।
ಗಗನವೊಂದು ಕುಲಾದ್ರಿಯೇೞು ತಾಮೆನೆ ಮತ್ತೀ ॥
ವಸುಧಾಮಧ್ಯದೊಳೆತ್ತಲ್ ।
ಮಿಸುಕುವನಿನ್ನೆತ್ತಲುೞಿವನಹಿತಕ್ಷಿತಿಪಂ ॥ 149

ಭಾವಕ್ಕೆ ॥

ಕಂ ॥ ನಡುವಣ ಕರ್ಪ್ಪಂ ಕಡೆಯುಣ ।
ಕಡುವೆಳ್ಪುಂ ತುದಿಯ ಕೂರ್ಪ್ಪುಮೆಸೆದಿರೆ ವಿಟರಂ ॥
ಬಿಡದಿಸಲೆ ತೆಗೆದ ಮದನನ ।
ನಿ[9]ಡಿಯಲರ್ಗಣೆಗಳನೆ ಪೋಲ್ತುವಾಕೆಯ ಕಣ್ಗಳ್ ॥ 150

ಸಂಖ್ಯಾಜಾತಿವ್ಯತ್ಯಯಕ್ಕೆ ॥

ವೃ ॥ ಸಂತಮಿ[10]ರ್ಪ್ಪದೆ ನವಗ್ರಹಮಾಕಾ ।
ದಂತಿಗಳ್ ಪದುಳಮೇ ದಿವದೊಳ್ ನಿ ॥
ಶ್ಚಿಂತಮಿರ್ಪ್ಪರೆ ಸುರರ್ ದಿತಿಪುತ್ರಾ ।
ಕ್ರಾಂತಿಯಿ[11]ಲ್ಲ ವಲಮೆಂಬುದುಮಾಗಳ್ ॥ 151

1 ನಚ್ಚಿ. 2 ದಂಡವರಿದಂ. 3 ರಲ್ಲಾ. 4 ನಾ. 5 ನೆಗೞ್ದ. 6 ಕರಿಯುವು. 7 ಮರಂಗಳ್ಗಿವುಕಂ. 8 ಗಿರಿವರಮೆಂ. 9 ನಿಡಿದ. 10 ಮಿರ್ಪ್ಪರೆ. 11 ಯುಲ್ಲ.

ಸೂತ್ರಂ ॥ 36 ॥

ನೀನಾಂ ತಾನೆನಿಕುಂ ಪ್ರಥ ।
ಮಾನಿರ್ದ್ದೇಶಕ್ಕೆ ನಿನಗೆಯೆನಗೆ ತನಗೆಯುಂ ॥
ಬೀನುಡಿ ಚತುರ್ತ್ಥಿಯೊಳ್ ಸಲೆ ।
ತಾನಕ್ಕುಂ ಯುಷ್ಮದಸ್ಮದನ್ಯೋಕ್ತಿಗಳೊಳ್ ॥ 152

ಉದಾಹರಣೆ ॥

ಕಂ ॥ ಆನುಂ ದುಶ್ಶಾಸನನುಂ ।
ನೀನುಂ ಮೂವರೆ ದಲಾತನುಂ ಕೞಿದ ಬೞಿ ॥
ಕ್ಕಾನುಂ ನೀ[1]ನೆ ದಲೀಗಳ್ ।
ನೀನುಮಗಲ್ದಿತ್ತ ವ್ರೋದಯಂಗಾಧಿಪತೀ ॥ 153

ತಾನೆ ಗ[2]ಡಳಿಪಂ ಮುಱುಕ್ರಂ ।
ತಾನೆ ಗಡಂ ತೊಡರ್ದ್ದು ಮುಡಿಗೆಗಂ ಜೋ[3]ವಕ್ಕಂ ॥
ತಾನೆ ಗಡ ಬಪ್ಪನೆನಿಸುವೊ ।
ಡಾ[4]ನರನಯ್ದಾಱುದೆವಸಮುಂ ಬೞ್ದಿಪನೇ ॥ 154

ವೃ ॥ ಎನಗೆ ಕೂರ್ಪ್ಪುದನಾಘಟಸಂಭವಂ ।
ನಿನಗೆ ಕೂ[5]ರನೞಿಲ್ ನಿನತಲ್ತು ಕೇ ॥
ಳನತು ತಂದೆಯ ಶೋಕಮನಿ[6]ರ್ವ್ವರಮುಂ ।
ಮುನಿವರಂ ತವೆ ಕೊಂ[7]ದೊಡನೀಗುವಂ ॥ 155

ತನಗೆ ಪೋ[8]ಗಿನಿಸೆಂಬನಿತಾದೊಡಾ ।
ವನುಮನಾವನುಮೊಲ್ಗ್ಗಮೆ ಮೆಚ್ಚಲಂ ॥
ತಿನಿತು ಮೆಚ್ಚದರೆಲ್ಲಮನೆನ್ಗ್ಗಮೆಂ ।
ದನಿತಱಿಂ ಪೞಿ ಸಾರ್ಗ್ಗಮೆ ಗೇಡರಂ ॥ 156

ಸೂತ್ರಂ ॥ 37 ॥

ಅವನಾತನೆಂಬ ಮಾತುಗ ।
ಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೈಣದೊಳ್ ॥
ನ್ನವಳಾಕೆಯೆಂಬ ನುಡಿ ಸಂ ।
ಭವಿಕುಂ ಶೇಷದೊಳದೆಂಬ ಮಾ[9]ತೆಸೆದಿರ್ಕ್ಕುಂ ॥ 157

---

1 ನೀನೇಕಲಿಗಳ್. 2 ಗಳಿದಪಂ. 3 ಜೋವಕ್ಕಂ, ಬಾವಕ್ಕಂ. 4 ದಾನವಯ್ದಾಱುದಿವಸದೊಳ್ ಬಂದಪನೇ.
5 ಕೂರನವಲ್ ನಿನಗೆ. 6 ನಿಸ್ಸರಮುಂ. 7 ಕೊಂದೊಡನೀಗುವಂ. 8 ಪೋಗೆನಿ. 9 ಮಾತೆಂದಿರ್ಕ್ಕುಂ.

ಪ್ರಯೋಗಂ ॥

ಕಂ ॥ ಅವನಾಕೆಯನಂತಾತನ ।
ನವಳುಮಗಲ್ದೊಂದುಪೊೞ್ತುಮಿರಲಾಱರ್ ಕೂ ॥
ರ್ಪವರನಿತುವರೆಗಮಾರೆನೆ ।
ಭವಾಂತರಸ್ನೇಹಮವರೊಳಾದುದಳುಂಬಂ ॥ 158

ವೃ ॥ ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾ ।
ೞ್ಮೊದಲದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತ್ತಿಗೆ ॥
ತ್ತಿದ ಪೊಸವಟ್ಟಮಂತದು ಮನೋಜನ ಕೆಯ್ಪಿಡಿಯೆಂದೆ ಮಾ[1]ೞ್ಪಿನಾ ।
ಸುದತಿಯ ರೂಪನಿಂ ಪೆಱತನೆಂದೊಡೆ ಚೀ ಕರಮೆಗ್ಗನಾಗನೇ ॥ 159

ಸೂತ್ರಂ ॥ 38 ॥

ನಿತ್ಯಂ ನಪುಂಸಕತ್ವಮ ।
ಪತ್ಯಕಲತ್ರಾದಿಶಬ್ದದೊಳ್ ಸ್ತ್ರೀಪುಂಸ ॥
ವ್ಯತ್ಯಯಮುಕ್ಕ್ಯಂ ಕರುಣೋ ।
ಪತ್ಯಕೆಗಳೊಳಂ ವಧಾಭಿಲಾಷಾದಿಯೊಳಂ ॥ 160

ಪ್ರಯೋಗಂ ॥

ಕಂ ॥ ತನಪತ್ಯಂ ಚಾ[2]ಗದ ಪೆಂ ।
ಪೊದಮಿರೆ ನೆಗೞ್ದಿಳ್ ಜಗಕ್ಕೆ ವಿನಯಗುಣೈಕಾ ॥
ಸ್ಪದೆ ಸುಗ್ಗಿಯಪ್ಪ ತನಗೊಂ ।
ದಿದ ಚಾಗನೆಡಂಗಿಯೆಂಬ ಪೆಸರೆಸೆವಿನೆಗಂ ॥ 161

ಸರಸತಿಗಂ ಸಿರಿಗಂ ಮ ।
ಚ್ಚರಿಸುವ ವಿದ್ಯಾವಿಶೇಷವಿಭವೋನ್ನತಿಯಿಂ ॥
ಸುರಮಾನವಲಲನೆಯರೇ[3] ।
ದೊರೆಯುರುಮಾನ್ನೃಪಕಳತ್ರಮಂ ಪೋಲ್ತಪರೇ ॥ 162

ಆದಿಗ್ರಹಣಕ್ಕೆ ॥

ವೃ ॥ ಬರ್ವಳೆ ಪೆಮ್ಮಕ್ಕಳ್ ಬಗೆಪೊಡಿನ್ನೆಮಗೀಕೆಯೆ ಗಂಡುಗೂಸು ತಾಂ ।
ಸರ್ವಕಲಾವಿದಗ್ಧೆ ಪೆಱತೇನೊ ಸರಸ್ವತಿಗತ್ತಮತ್ತೆ ಪ ॥
ನ್ನಿ[4]ರ್ವರಲಗ್ಗಳಂ ಶ್ರುತದೊಳಾದೊಡಮೋಸಿನಿಸೂನಮುಂಟು ಗಾಂ ।
ಧರ್ವಮನೊಂದುಮಂ ನೆಱೆಯೆ ಕಲ್ಲಳೆ ಕಲ್ಪಿಪುದಂ[5]ತದಂ ನೃಪಾ ॥ 163

---

1 ಮಾೞ್ಪೆ. 2 ಭಾವದ, 3 ರೇ. 4 ನ್ನಿರ್ವರೊಳಗ್ಗಳಂ. 5 ದಂತುಮಂ.

ಅಪರಾರ್ಧಕ್ಕೆ ।

ವೃ ॥ ಕರುಣದಿಂ ಮೃಗಮಂ ನಿ[1]ಜಾಂಕದೊಳಿಟ್ಟೊಡಾಕಱೆಯಾದೊಡೇ ।
ಧರೆ ಮೃಗಾಧಿಪನೆಂದುದಿಲ್ಲ ಮೃಗಾಂಕನೆಂದುದು ಚಂದ್ರನಂ ॥
ಕರುಣಮಿಲ್ಲದ ಸಿಂಗಮಂ ಮೃಗರಾಜನೆಂದುದು ಭೂಪರೊಳ್ ।
ಧರೆಗಧೀಶ್ವರನಕ್ಕುಮೇ ಪರಚಕ್ರಕರ್ಕಶನಲ್ಲದಂ ॥ 164

ಎಳನೀರೊತ್ತಿನೊಳೊತ್ತಿ ಬರ್ಪ ಪೊನಲೊಳ್ ಸಾಂದ್ರೇಂದುಕಾಂತೋಪಳೋ ।
ಚ್ಛಳಿತಾಚ್ಛಾಚ್ಛಜಳಪ್ರವಾಹಭರದೊಳ್ ಮಂದಾನಿಳಾಂದೋಳನಾ ॥
ಕುಳಿತಾರಾಮಫಳಾಮೃತೋಪಮರಸಸ್ರೋತಂಗಳೊಳ್ ಸಾಲ್ವಿನಂ ।
ಬೆಳೆದೋರಂತೊ[2]ಱಗಿರ್ದ ಶಾಲಿವನದಿಂ ಸೇವ್ಯಂ ನಗೋಪತ್ಯಕಂ ॥ 165

ಕಂ ॥ ಅವಳುಮನೊಲಿಸಿ ಕುಟಿಸಿ ।
ಗೋ[3]ವರ ಗುಗ್ಗುರಿಗೆಮಾಡಿಯುಂ ತಣಿಯುಮ್ ಪೆ ॥
ವರ್ಮ್ಮಮುಲಿಗನ[4]ಯೋ ಪೇಱಿರೇಂ ।
ಸ್ತ್ರೀವಧೆ ನಿನಗಶ್ವಮೇಧಮೋ ಸಂ[5]ಬಳಮೋ ॥ 166

ವೃ ॥ ಎನಗದಱಭಿಲಾಷೆ ತಾನದೇನುಂ ।
ಮನದೊಳಗಿಲ್ಲ ವಿವೇಕಶೂನ್ಯನಾದಂ ॥
ತನಗನುಚಿತಮು[6]ಪ್ಪುದೊಂದಕೃತ್ಯ ।
ಕ್ಕನಿತುಮರಂ ಬಗೆದಂದನೂಹೆಯಿಂದಂ ॥ 167

ಗ್ರೀವಾದಿಯೊಳ್ ವಿಕಲ್ಪಕ್ಕೆ ॥

ವೃ ॥ ಕೈಲಾಸಾದ್ರಿಯನೆತ್ತಿ ನೊಂದ ಭುಜಸಂದೋಹಂಗ[7]ಳಂ ಕೃಷ್ಣಕೇ ।
ಲಾಲಂ ಸೋರ್ವಿನಮೆಯ್ದೆ ನೀಳ್ದನಿತುಮಾಗ್ರೀವಂಗಳಂ ರಾಗದಿಂ ॥
ನೀಲಗ್ರೀವನಳುಂಬಮಪ್ಪ ದಯೆಯಿಂದಂ ನೀವಿ ರಾಗಾಬ್ಧಿ ಕ ।
ಲ್ಲೋಲಂ ಪೆರ್ಚ್ಚೆ ದಶಾನನಂಗೆ ಪಿರಿದೊಂದು[8]ತ್ಸಾಹಮಂ ಮಾಡಿದಂ ॥ 168

ಕಂ ॥ ಗ್ರೀವೆ ಮೊಗಮಂಸಮಳಿಕಂ ।
ಭ್ರೂ ವಕ್ಷಂ ತೋ[9]ಳ ತೊಳಂಕು ತೊಡೆಯುಂಪೆಡೆಯೊಳ್ ॥
ತೀವಿದುವು ಭೀಮನಿಸೆ ವಿಶಿ ।
ಖಾವಲಿ ಮಾಱಾಂತರಾತಿಸೇನೆಯ ಮೆಯ್ಯೊಳ್ ॥ 169

ಸೂತ್ರಂ ॥ 39 ॥

ಆಕಾರಕ್ಕೆ ಲಘೂಕೃತ ।
ಮೇಕಾರಂ ಬಹುಳಮಕ್ಕುಮೀದೂದಂತ ॥
ಕ್ಕೇಕಾಕ್ಷರಪದಮುಱಿಯೆ ನಿ ।
ರಾಕುಳದಿಂ ಹ್ರಸ್ವಮಕ್ಕುಮೆಲ್ಲೆಡೆಗಳೊಳಂ ॥ 170

---

1 ನಿಜಾಂಗ. 2 ತೊಱೆದಿರ್ದ, ತೆದಿರ್ದ. 3 ಗೋವರುಗುಗ್ಗುರಿಕೆ. 4 ನೆದೋ, ನೆದಂ. 5 ಸಂಬಳ.
6 ಮಪ್ಪುದೊಂದಕೃತ್ಯ, ಮಪ್ಪುದೊಂದುಕೃತ್ಯ. 7 ಗಳಂ. 8 ದಾಹ್ಲಾದಮಂ. 9 ತೊಳ್ಗಳದು.

ಪ್ರಯೋಗಂ॥

ಕಂ॥ ಧರೆಯುಂ ಕ್ಷಮೆಯಿಂ ಹಿಮವ ।
ದ್ಗಿರಿಸುತೆಯುಂ ಪೆಂಪಿನಿಂ ಸುರಾಪಗೆಯುಂ ಬಿ॥
ತ್ತರಿಸುವ ಜಸದೆಸಕದಿನನು ।
ಕರಿಸುವಳಾಕಾಂತೆ ಕಾಂತಿಯಿಂ ಶಶಿಕಳೆಯುಂ॥ 171

ಬಹುಳಗ್ರಹಣಕ್ಕೆ॥

ವೃ॥ ಕಮಲಂಬೊಲ್ ಮೊಗಮುತ್ಪಲಂಬೊಲಲರ್ಗಣ್ ಚಕ್ರಾಹ್ವಯುಂಬೊಲ್ ಕುಚಂ ।
ಭ್ರ[1]ಮರಂಬೊಲ್ ಕಚಮಿಕ್ಷುಚಾಪದಳಿನೀಜ್ಯಾಯಂತೆವೊಲ್ ಬಾಸೆ ಕ॥
ಣ್ಗಮರ್ದಿಂಬಾಗಿರೆ ಲ[2]ಕ್ಕಸೂಱೆ ಪರಸುತ್ತುಂ ಶ್ರೀಗಾ[3]ತ್ರಮಸ್ತೂಪಮೋ ।
ಪಮೆಯರ್ ದೈವದಗಣ್ಯಪುಣ್ಯವಧುವರ್ ಸೇಸಿಕ್ಕಿ ಬಂದಾಡಿದರ್॥ 172

ಅಂತುಮಲ್ಲದೆಯುಂ॥

ವೃ॥ ಉದಯಾಸ್ತೋನ್ನತಶೈಲಸೇತುಹಿಮವತ್ಕುಕ್ಕೀಳಪರ್ಯ್ಯಂತಸಂ ।
ಪದೆಯಂ ವಾರ್ಧಿತರತ್ತರಂಗನಿನದತ್ಕಾಂಚೀಕಳಾಪಾಂಚಿತಾ॥
ಸ್ಪದೆಯಂ ಸಾಧಿಸಿ ಕಬ್ಬಿಗಂಗೆ[4] ನೆಲನಂ ನಿರ್ವ್ಯಾಜದಿಂದಂ ನಿಮಿ ।
ರ್ಚಿದ ಗೆಲ್ಲಂ ಭುವನೈಕರಾಮಮಹಿಪಂಗಕ್ಕುಂ ಪೆಱರ್ಗ್ಗಕ್ಕುಮೇ॥ 173

ಅಪರಾರ್ಧಕ್ಕೆ॥

ವೃ॥ ಮದನವಿಭ್ರಮಲಕ್ಷ್ಮಿಗೆ ಮೂಲಂ ಮಾಗ್ವಧುಗಾಯತಿ ಲೀಲೆಗಾ ।
ಸ್ಪದಮಳುಕ್ಕೆಗೆ ತಾಯುರುಸೌಭಾಗ್ಯಕ್ಕೆ ವಿಳಾಸನಿಕೇತನಂ॥
ಮದಗಜಾಲಸಗಾಮಿನಿ ತಾನಾಕಾಮಿನಿ ಗೋಮಿನಿಯಿಂ ಮಿಗಿಲ್ ।
ಚದುರ ಮಾಱಿಯ ಸೀಳದ ಪೆಂಪಿಂದಾಸತಿಗಾರ್ ದೊರೆ ಧಾತ್ರಿಯೊಳ್॥ 174

ಏಕಾಕ್ಷರಪದಕ್ಕೆ॥

ವೃ॥ ಆಗಳ್ ಜಸಂ ಕೆಯ್ದುವನಿಕ್ಕಿ ವೀರ ।
ಶ್ರೀಗಾಣ್ಮನಮ್ ಪಾಣ್ಬತೆ[5]ನಕ್ಕೆಳಪ್ಪಯ್॥
ಪೋಗೇಕೆ ನೀಂ ಮೆಯ್ಗರೆದಿರ್ಪ್ಪೆಯೆಂದಾ ।
ಭೋಗೀಶ್ವರಂಗಂದು ವಿನಮ್ರನಾದಂ॥ 175

ಸೂತ್ರಂ॥ 40॥

ಧಾತುವಿಹಿತಂ ತೃಶಬ್ದಂ ।
ಖ್ಯಾತವಿಭಕ್ತ್ಯಂತರಂಗದೊಳ್ ನಿಲ್ಕುಂ ತಾ॥
ನಾ[6]ತೆಬದೆ ನಿಲ್ಲದಂದುಪ ।
ಜಾತಾರಾದೇಶಮಾಗಿ ನಿಯತಂ ನೆಗೞ್ಗುಂ॥ 176

1 ಚಮರಂ. 2 ಲಕ್ಕ. 3 ಗೋತ್ರು. 4 ಗಿನೆವಲಂ. 5 ತಳಕ್ಕೆನಪ್ಪಯ್. 6 ನೇತೆಯಿಂದಲ್ಲದೆಂದುಪ,

ಲಕ್ಷ್ಯಂ ||

ಕಂ || ಹೋತೃವೆನಾನಧ್ವರಿಯುಮೆ |
ಭ್ರಾತೃವೆ ನೀನುೞಿದಋತ್ವಿಜರ್ ಯಾದವರು ||
ದ್ಗಾತೃ ಶುಚಿಸಚಿವನೆನೆ ಸುರ |
ಜೇತೃವೆ ಪಶುವಾಗೆ[1]ಯಾಮೆ ಪೇೞವೆ ಮುನ್ನಂ || 177

ವೃ || ಆನ್ನೋಡರ್ಜ್ಜುನನೆಂಬೆನಂತಕಸುತಂ ಭರ್ತಾರನೆಂಬಾತನ[2] |
ಕ್ಕಂ ನಾನಾನ್ನವಿಪಾಕಿ ವಲ್ಲಲನವಂ ಭೀಮಂ ಹಯಾಧ್ಯಕ್ಷತಾ ||
ಸನ್ನದ್ಧಂ ನಕುಲಂ ಗವಾಧಿಕೃತನಾಸಾದೇವನಂದಾವಳಿಂ |
ದನ್ನರ್ ಕೀಚಕರಕ್ಕದರ್ ಮಗಳವೊಳ್ ಸೈರಂಧ್ರಿ ಪಾಂಚಾಲನಾ || 178

ಸೂತ್ರಂ || 41 ||

ಬಿದಿಗಭಿಧಾನಂ ತಾನಂ |
ತದಾದೊಡಕ್ಕಂ ವಿಧಾತೃಶಬ್ದಂ ರಾಂತಂ ||
ತ್ರಿದಿವಸ್ಥಿತರೊಳರಾದೇ |
ಶದಿಂದಮೊಡಗೂಡಿ ವರ್ತ್ತಿಕುಂ ಪಿತೃಶಬ್ದಂ || 179

ಉದಾಹರಣೆ ||

ಪೂರ್ವಾರ್ಧಕ್ಕೆ ||

ಕಂ || ಕೆಯ್ಯಾರಮೇಂ ಪೊಗೞಿಸ್ತ್ರಿಯೆ |
ಮುಖಸ್ತ್ವಾಂಬನಿತಂಬಮೊಂದೆ ಸುಂದರಿಯೆರಡುಂ ||
ಮು[3]ಖ್ಯಂ ಪಡೆದಗ್ಗಳಿಕೆಗೆ |
ಮೆಯ್ವೆರ್ಚ್ಚಿ ವಿಧಾತ್ರನಿ[4]ರದೆ ಮು[5]ಖ್ಯಂ ನೋೞ್ಪಂ || 180

ಅಪರಾರ್ಧಕ್ಕೆ ||

ಕಂ || ಉಡುವವರುಮನುಣ್ಬರುಮಂ |
ನಡೆ ನೋಡಿ ಕನಲ್ದೊನಲ್ದು ಮುನ್ನಿನ ಭವದೊಳ್ ||
ಕು[6]ಡದರ್ ಕಣ್ಬುಡಿನೊಳ್ ಧೃತಿ |
ಗಿಡೆ ಬಡವರ ಪಿತರರಂತೆ ಮಱುಗುತ್ತಿರ್ಕ್ಕುಂ || 181

ಸೂತ್ರಂ || 42 ||

ಶ್ವಯುವಾರ್ಧ್ವಸಖಿಯುನ್ನ |
ತ್ವಯುಮ[7]ನ್ನಂತಂ ಬಹುತ್ವವಿಷಯಕೃತಾದೇ ||
ಪಯುತಂ ವಿಕಲ್ಪದಿಂದಂ |
ಪ್ರಯೋಗಿಸಲ್ಪಡೆಗುಮೆಸೆವಿನಂ ಕನ್ನಡದೊಳ್ || 182

1 ಗಿವಾವೆ. 2 ನಾನಾನ್ನಾಪೋಜನ. 3 ಮುಖ್ಯಂ. 4 ನರದೆ. 5 ಮುಖ್ಯಾಂತಿಪೃರ. 6 ಕೆಡದಂ, 7 ಮುಮ್ಮಂತಂ.

ಪ್ರಯೋಗಂ ॥

ವೃ ॥ ಶ್ವಾನಂಗಳ್ ಗಂ[1]ಧಮಾತ್ತ್ರಂಡನನತಿಹಿತದಿಂ ಕಾಪುಗೊಂಡಿರ್ದ್ದುವುಗ್ರ ।
ಶ್ವಾನಂಗಳ್ ಕಂಡು ದೂರಾಂತರದೊಳಿವರ ಬರ್ಪ್ಪಂದಮಿಂಬಲ್ತಿದಸ್ಮ ॥
ದ್ಭೂನಾರೀನಾಥನೊಳ್ ತಕ್ತಿಱಿವ ಬವಸೆಯುಂ ಪೂ[2]ಣ್ದು ಬಂದಪ್ಪರೀತಂ ।
ಗೀನಿದ್ರಾಭಂಗಮಂ ಮಾಱ್ಪುದು ಪದನಱಮಾಲ್ತೆಂದು ನಿಂದಾಂತುಪಾಗಳ್ ॥ 183

ಈಯುಮಾನರನವದ್ಯವಿದ್ಯರಾ ।
ವ್ಯಾಯಶುದ್ಧರವದಾತಕೀರ್ತ್ತಿಗಳ್ ॥
ತೋಯಜಾಕ್ಷಿ ನಡೆ ನೋಡ ಮನ್ಮಥ ।
ಶ್ರೀಯನಾದರಿಸಿ ನಿಂದರಿಂತಿವರ್ ॥ 184

ಕಂ ॥ ಪ್ರಣಾತಗುಣರೆನಿಪ ವಿಬುಧಾ ।
ಗ್ರಣಿಗಳ್ ಕೆಯ್ಕೊಂಡು ಪೊಗೞೆ ಸಲೆ ನೆಗೞ್ದುವು ಧಾ ॥
ರಿಣಿಯೊಳಗೆ ನಾಗವರ್ಮ್ಮನ ।
ಗುಣವರ್ಮ್ಮನ ಕಂಬವರ್ಮ್ಮನಧ್ಯಾನಂಗಳ್ ॥ 185

ಸಮವಯಸಂ ಸಮಸತ್ವಂ ।
ಸಮಾನವಿಭವಂ ಸಮಾನಶೀಲವ್ಯಸನಂ ॥
ಸಮವಿದ್ಯಾವಿಭವಯುತಂ ।
ಸ[3]ಮಸುಖದುಃಖಂ ಸಹಾಯನಕ್ಕೆ ಸಖಾಯಂ ॥ 186

ವೃ ॥ ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ ಪೂರ್ವಪುಣ್ಯಾರ್ಜ್ಜಿತಂ ಕೇ ।
ಳೀಯಲ್ಬಂದತ್ತ[4]ದೊಂದಕ್ಷಯನಿಧಿಯೆನುತುಂ ತನ್ನನೊಲ್ದಾತ್ರಿಲೋಕ[5] ॥
ಶ್ರೀಯೆಲ್ಲಂ ಪೊರ್ದ್ದಿದಂತೇನೊಸೆದನೊ ಮನದೊಳ್ ಸೂಕ್ತಿಕರ್ಣ್ಣಾವತಂಸಂ ।
ಶ್ರೀಯಾಂಸಂ ಪೋರ್ನ್ನತಾಂಸಾ ಸುಕವಿಜನಮನೋಮಾನಸೋತ್ತಂಸಹಂಸಂ ॥ 187

ಕಂ ॥ ಅದ್ವೈತವಾದಿನಿವಹಮ ।
ದದ್ವಿರದಘಟಾವಿಪಾಟನೈಕಪಟಿಷ್ಠಂ ॥
ಸ್ಯಾದ್ವಾದಾಚಲಸಿಂಹಂ ।
ವಿದ್ವಾಂಸರ್ ಪೊಗೞೆ ವಾದಿರಾಜಂ ನೆಗೞ್ದಂ ॥ 188

ವಿಕಲ್ಪಗ್ರಹಣಕ್ಕೆ ॥

ವೃ ॥ ಜ್ಯಾಯನರಣ್ಯದೊಳ್ ನೆಲಸುಗುಂ[6] ಗಡಮು[7]ಯ್ಯ ಕನೀಯನನ್ವಯ ।
ಶ್ರೀ[8]ಯೊಳಧಿಷ್ಠಿತಂ ಗಡಮಿನಾನ್ವಯಜಾತರೊಳಿನ್ನವಿನ್ನವ ॥
ನ್ಯಾಯಮವಿನ್ನವಿನ್ನವಬಳಾಮುಖರತ್ವಮವಿನ್ನವಿನ್ನವ ।
ಶ್ರೀಯಮವಿನ್ನವಿನ್ನವಕ್ಕೃತಕ್ರಮವೃತ್ತಿಯನಾರೊ ಸೈರಿಪರ್ ॥ 189

1 ಕಂಡು. 2 ವಾ. ಪ್ರ. 3 ಸಮದುಃಖಸುಖಂ. 4 ಶಿ. 5 ಕೀ. 6 ಞು. 7 ಮಯ್ಯ, ಮುಯ್ಯ.
8 ಶ್ರೀಯೆ. ಕಬಳವೀಕ್ಷಿತಂ.

ಸೂತ್ರಂ ॥ 43 ॥

ಪಡೆಗುಂ ವಿಭಾಷೆಯಿಂದಂ ।
ಕಡೆಯೊಳದಂತತೆಯುಮಸ್ವರಂ ವೃದ್ಧನವೋಲ್ ॥
ಪಡೆಗುಮದರ್ಶನಮಂ ಮೇಣ್ ।
ಪಡೆಗುಂ ದ್ವ್ಯರ್ಥವವೃತ್ತಿಯುಂ ಮೇಣ್ ಶ್ರು[1]ತಿವೋಲ್ ॥ 190

ಪ್ರಯೋಗಂ ॥

ಕಂ ॥ ಪರಿಣತವಯಸರೆವಿರ್ಕ್ಕೆ ।
ಣ್ಗುರುಡರೆಮೆಮಗೆಂಬುಕೆಯ್ಯುವುದುಚಿತಂ ನಿ[2]ನ್ನೀ ॥
ಗುರು ನುಡಿದ ನುಡಿಗೊಡಂಬಡು ।
ಗುರುವಚನಮ[3]ಲಂಘನೀಯಮೆಂಬುದು ಮಗನೇ ॥ 191

ಮೊದಲೊಳ್ ಚಪಲಂ ಮರ್ಕ್ಕಟ ।
ನದು ವೃಶ್ಚಿಕದಷ್ಟನೆಂಬವೋಲ್ ನ[4]ವವಯದು ॥
ಸ್ಮದಮಂ[5]ತೆ ಸುತಂ ಪಿತೃಧನ ।
ಮದಮತ್ತಂ ಮೂರ್ಕ್ಖನೆಂದೊಡೇನಱಿಸುವುದೋ ॥ 192

ವ್ಯವಸ್ಥಿತವಿಭಾಷೆಗೆ ॥

ವೃ ॥ ಇವಂಬುನಿಧಿಕೂಪದಿಂದಮರನಂದನಕ್ಕೇತವೆ ।
ತ್ತುವಲ್ಲಿ ಗಱೆಯಾಗಲುಂ ಕಡಲ ಗುಣ್ಪನಾರಯ್ಯಲುಂ ॥
ದಿವಕ್ಕಡರಲೇಣಿಯುಂ ಸಮೆಯಲುಂ ವಲಂ ಬಾಱಿತ್ತೆಯೆಂ ।
ಬವ್ರೊಳ್ ಬೆಳೆದು ನಿಂದ ಪರ್ವ್ವದಿರ ಸುರ್ವ್ವಗುರ್ವ್ವಲ್ಲಿಯುಂ ॥ 193

ಲೋಪಕ್ಕೆ ॥

ಕಂ ॥ ಸರಿವಱೆಗ[6]ಱೆವಂತಿರೆ ಭೋ ।
ಗ್ಗರೆದೊರ್ಮ್ಮೊದಲೆಱಗಿ ದೆಸೆಗಳೆಲ್ಲಮನೊಡನಾ ॥
ವರಿಸಿ ತರತರದೆ ನಸು ಮಸು ।
ಳ್ದಿರ ಪುದಿದುವು ನಭವನಭವನಂಬುಗಳೆತ್ತಂ ॥ 194

ದ್ವ್ಯರ್ಥವಕ್ಕೆ ॥

ಕಂ ॥ ದಿಕ್ಕನಿತುಂ ತೋಱಿದುವು ಜ ।
ಲಕ್ಕನೆ ಮೂಕಾದಿಗಳ್ಗಮಂದತಿಲಲಿತಂ ॥
ವಾಕ್ಕುದುವು ಕುಸುಮಿಸಿದುವು ।
ಮಿ[7]ಕ್ಕೆಸೆವಾಕ್ಷುಪಕುಜಾತಮೀರುತ್ತುಗಳಂ 195

---

1 ಶ್ರುತಿವೋಲ, ಶ್ರುತಿಯೊಳ್. 2 ನೀನೀ. 3 ಮಲಂಘನೀಯಮುಕ. 4 ನವಯುವಮು, ನವಯುವ್ವನಮು. 5 ಮಂತ್ರಿ. 6 ಗಱೆ. 7 ಮಿಕ್ಕನವಾಕ್ಷದ.

ಸೂತ್ರಂ ॥ 44 ॥

ಅನುಸಂಧಿಸಿ ಕೃತ್ಸ್ನವ್ಯಂ ।
ಜನಂಗಳರೆ ಮುಂದೆ ಬಿಂದು ಪರಿವರ್ತಿಸುಗುಂ ॥
ಮನದೊಳ್ ವರ್ಗಂ ಪರಮಾ ।
ಗಿ ನಿಲೆ ವಿಕಲ್ಪದೆ ತದೀಯಪಂಚಮಮುಕ್ಕುಂ ॥ 196

ಪ್ರಯೋಗಂ ॥

ಪೂರ್ವಾರ್ಧಕ್ಕೆ ॥

ಕಂ ॥ ಕುಲಮುಂ ಚಲಮುಂ ವಿದ್ಯಾ ।
ಬಲಮುಂ ಶೌರ್ಯಾವಲೇಪಮುಂ ಪೊಗೞಿವೆ ನೆಲಂ ॥
ನೆಲಕೆಲ್ಲಂ ನೆಗೞ್ದಂ ದ್ವಿ ।
ಟ್ಕುಲಕುಲನಗದಳನಪಟುಪವಿಪ್ರತಿಮಭುಜಂ ॥ 197

ಅಪರಾರ್ಧಕ್ಕೆ ॥

ಕಂ ॥ ಪಂನಗತಳ್ಪಙ್ಕಂಸಹ ।
ರಂ ನಗಧರನಸುರಮರ್ದನಜ್ಜ್ಜಾಕ್ರಿ ಮುಕು ॥
ನ್ದಂ ನ[1]ಳಿನನಾಭನೇಗೊಳ ।
ಲೆನ್ನಂ ಬಲಗರ್ವದಿಂದಿದಿಜ್ಞ್ಯವನಾವಂ ॥ 198

ಇದು ಶಬ್ದಸ್ಮೃತಿಯೊಳ್ ನಾಮಪ್ರಕರಣಂ ದ್ವಿತೀಯಂ.

ಸಮಾಸ ಪ್ರಕರಣಂ.

ಸೂತ್ರಂ ॥ 45 ॥

ಸಂಗತಿಯಿಂದಂ ನಾಮಪ ।
ದಂಗಳಮೇಕಾರ್ಥಗತಿಯೊಳಾಗೆ ಸಮಾಸಂ ॥
ಸಂಗಳಸುಗುಂ ವಿಭಕ್ತಿಗ ।
ಳಂಗಳ್ಗಂತರದೊಳಲ್ಲಿ ಲೋಪಮುದಕ್ಕುಂ ॥ 199

ಲಕ್ಷ್ಯಂ ॥

ಕಂ ॥ ಕಡುಗಾಡಿ ನಾಡೆಯುಂ ಕ[2] ।
ಣ್ಗೆಡಱೆ ಮನಂ ಜೆರ್ಚೆ ಸುತನ ಬರ್ಪಂದಂ ಚೆ ॥
ಲ್ವೊಡರಿಸಿ ಬ[3]ಲ್ವಿಡಿವಿಡಿದುದು ।
ತೊಡರ್ದಳಿಪಿಂ ನೋೞ್ಪ ನೋಟಕರ್ಕಳ ಮನಮುಂ ॥ 200
*ಕೞಿದ ಮನಃಪ್ರಿಯವಿರಹದಿ ।
ನೞಲ್ದು ಬಸವೞಿದು ಮೋದೆ ತ[4]ಸ್ಸ್ವರದೊಳ್ ಬಾ ॥
ಸುೞಿ ತಳ್ಪ ಶೋಕಶಿಖಿಯಂ ।
ಕೞಿಲ್ಲೆಲೆಂದೊಟ್ಟಿದಸುಗೆದಳಿರಂ ಪೋಲ್ಕುಂ ॥ 201

1 ನಳಿನಾಭನನಿನಗೊಳ । ನೆನ್ನಂ, ನಳಿನಾಭನನಿನಗೊವಳ । ನೆನಂ, ನಳಿನನಾಭನಲೆಗೊಳ।ಲೆನ್ನಂ. 2 ಕಣ್ಗೆದಱಿ, ಕಣ್ಗೆಡರೆ. 3 ಬಲ್ವಿಳ, ಬಂದೀ. * ಈ ಪದ್ಯಕ್ಕೆ ಹಿಂದೆ—ಅಲ್ಲಿ ಗಮಕಶ್ವಕ್ಕೆ—ಎಂದು ಕೆಲವು ಪ್ರತಿಗಳಲ್ಲಿ ಇದೆ. 4 ಕಮ್ಪುರ.

ಅಂತುಮಲ್ಲದೆಯುಂ ॥

ವೃ ॥ ಬಲಿಯು ಮಾಂತರದ ಪೇಟದೊಳ್ ಪೊಲಗೆಟ್ಟು ಪ[1]ಱ್ಚನೆ ಬಿಟ್ಟ ಕ ।
ಣ್ಮಾಲೆಗರ್ಗಳಂ ಮಾಲೆದಿ[2]ಟ್ಟನೆಯ್ತರೆ ಕಾಯ್ದುಸುಂಗೊಳೆ ದೈತ್ಯನಂ ॥
ಪೊಲಸುನಾರ್ಪಿನೆಗಂ ತ್ರಿಶೂಲದಿನೊತ್ತಿ ಕೊಂದ ಕುಮಾರ ಕೂ ।
ತ್ತರ್ಗಲಸದಿಕ್ಕೆ ಭುಜಾಸಿಧಾರೆಯೊಳಂಕಮುಖ್ಯರದೇವನಾ ॥ 202

ಕಂ ॥ *ಆಜಂಬೂದ್ವೀಪಮುಖಾ ।
ರಾಜಕಿರೀಟಾನುಕಾರಿ ಚಾಮೀಕರಮಿ ॥
ಭ್ರಾಜಿತಕಟಕಮಗೇಂದ್ರಸ ।
ಮಾಜಚಮೂಚಕ್ರವರ್ತ್ತಿ ಮಂದರಶೈಲಂ ॥ 203

ಸೂತ್ರಂ ॥ 46 ॥

ಉತ್ತರಪದದರ್ತ್ಥಂ ಮೆ ।
ಯ್ವೆತ್ತಿರೆ ತತ್ಪುರುಷಮಂತದೇಕಾಶ್ರಯಮಾ ॥
ಗುತ್ತುಮಿರೆ ಕರ್ಮ್ಮಧಾರಯು ।
ಮೆ[3]ತ್ತಂ ದ್ವಿಗುಸಂಜ್ಞಮದುವೆ ಸಂಖ್ಯಾದಿಪದಂ ॥ 204

ಪ್ರಯೋಗಂ ॥

ತತ್ಪುರುಷಕ್ಕೆ ॥

ವೃ ॥ ಅರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ ।
ಲ್ಲರ ಬಗೆಗಲ್ತು ವಸ್ತುಕೃತಿಯುಂ ಸಲೆ ಪೇೞ್ವುದು ಕಲ್ತು ಪೇೞಿದಂ ॥
ದರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ ।
ಲ್ಲರ ಬಗೆಗಲ್ತುದಾವೆಡೆಗಮುಲ್ತುದು ಕಲ್ಪಿ ವಲಂ ಕವೀಂದ್ರರಾ ॥ 205

ಕರ್ಮ್ಮಧಾರಯಕ್ಕೆ ॥

ವೃ ॥ ಅಲರ್ಗಣ್ ಪೊಂಗಿದ ಲಾ[4]ಳೆವಾಯ್ ನಗೆಮೊಗಂ ತೊಂಗಲ್ಗುರುಳ್ ಕೆಂದಳಂ ।
ಸುಲಿಪಲ್ ನೋರ್ಮ್ಮುಡಿ ತಳ್ವಸಿಱ್ ಪೆಱೆನೊಸಲ್ ಪೊಂಬಾಳೆವಚ್ಚೋಲೆ ನೇ ॥
ಱಿಲ ಪಣ್ಣಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗರ್ಪ್ಪ ಪೆ ।
ರ್ಮ್ಮೊಲೆ ಚೆಲ್ವಾಗಿರೆ ನಿಂದ ಪೇಱತಿಯುರಂ ಕಂಡಂ ಮಹೀವಲ್ಲಭಂ ॥ 206

ದ್ವಿಗುವಿಂಗೆ ॥

ಕಂ ॥ ಇರ್ವ್ವಳ್ ಮೂವಾಳಿಕ್ಕೆ ।
ದ್ದರ್ವ್ವರೆಯೊಳ್ ಪ[5]ಳಗೆ ನಾರೆ ಕೊಳೆ ಪದಪೞಿಗಳ್ ॥
ಕರ್ವ್ವಿನ ಮಡಲಂತೆ ಕವ ।
ಲ್ತುರ್ವ್ವಿದ ಕೆಯ್ವೊಲಗಳಸಗು[6]ವೋಱೊಂದಡೆವೊಳ್ ॥ 207

1 ಪಕ್ಕನೆ. 2 ಪಟ್ಟ್ರನೆಯ್ತರೆ. * ಈ ಪದ್ಯ ಕೆಲವು ಪ್ರತಿಗಳಲ್ಲಿ ಇಲ್ಲ. 3 [illegible]. 4 ಲೋಳೆ.
5 ಬೆವಗೆಗಾಳ್. 6 ದಾಪೋ.

ಸೂತ್ರಂ ॥ 47 ॥

ದ್ವಿಪದಂ ಮೇಣ್ ಬಹುಪದಮು ।
ನ್ಯಪದಾರ್ತ್ಥದೊಳೊಂದಿ ನಿಲೆ ಬಹುವ್ರೀಹಿ ಸಮು ॥
ಸ್ತಪ[1]ದಾರ್ತ್ಥಂ ದ್ವಂದ್ವಂ ಪೂ ।
ರ್ವ್ವಪದಪ್ರಾಧಾನ್ಯಮವ್ಯಯೀಭಾ[2]ವಾಖ್ಯಂ ॥ 208

ಪ್ರಯೋಗಂ ॥

ಬಹುವ್ರೀಹಿಗೆ ॥

ಕಂ॥ ಕುಡುವಿಲ್ಲನೆಕ್ಕ ಸರಲುಂ ।
ನಡದು ದಲಂದೊರ್ವ್ವನೆರ್ದೆಯನೊಳ್ಗಬ್ಬಮುವೊ ॥
ೞ್ನುಡಿಯುಂ ಗೇಯುವಮುಮುಚ್ಛರ್ದ ।
ಕಡುಗಲ್ಲೆರ್ದೆಯೆರ್ದೆಯನಂಬು ಮೇಣುಚ್ಚರ್ಗುವೇ ॥ 209

ಪಟ್ಟುಕಮೂಗಿನ ಮು[3]ರವುಲಿ ।
ಪೊಟ್ಟೆಯ ಕುಸಿಗೊರಲ ಕೆಂ[4]ಚುದಲೆನವಿರ ಕ[5]ರಂ ॥
ಕೆಟ್ಟೊಡೆದ ಸ[6]ರದವಂ ಕ[7]ಡೆ ।
ಪಟ್ಟು ಮನಂಗೆಟ್ಟು ನಾಡುನಾಡಂ ತಿರಿಗುಂ ॥ 210

ದ್ವಂದ್ವಕ್ಕೆ ॥

ಕಂ॥ ಕಱೆಮಱೆಗಳೊಳವು ನೋಱೆಪ್ಪೊಡೆ ।
ಪೆಱಪೆಱರ ಕುಲಕ್ಕೆ ಕೊಂಡಕೊಟ್ಟೆಡೆಗಳೊಳಂ ॥
ಕಱೆಯಿಲ್ಲ ತೈಲನಲ್ಲದೆ ।
ಪೆಱನಾವೊಂ ಪೆ[8]ಕ್ಕ ನೋಱೆಪೊಡಿತ್ತಲೆಗೋಜಂ ॥ 211

ವೃ॥ ತೊಱಗೆಲೆ ಚಟ್ಟಹಳ್ಳಿ ನೆಗೞ್ದಾಜಿರಗೋಳಮೆನಿಪ್ಪಗುರ್ವ್ವವೆ ।
ತ್ತಱಿಕೆಯ ಬೇಡವಟ್ಟುಗಳ ಬೂತುಗಬೀರುಗಗೋ[9]ಯೆಯಕ್ಕರ್ಗ್ಗಳಂ ॥
ನೆಱೆಯರೆನಿಪ್ಪೊಡಂ ಕಿಡಿಸಲಂಕದ ಮುನ್ನಿನ ಚಕ್ರವರ್ತ್ತಿಗಳ್ ।
ಪೆ[10]ಱರಳವಲ್ತು ವಂ ಕಿಡಿಸಿತೊಟ್ಟಜೆ ತೈಲಪಚಕ್ರವರ್ತ್ತಿಯಾ ॥ 212

ಅವ್ಯಯೀಭಾವಕ್ಕೆ ॥

ಕಂ॥ ಸಂತಂ ಕಿಱ್ಕೆಱೆಗಳೊಳೋ ।
ರಂತಿರೆ ಕೆಯ್ಗಾವವಳ್ದಿರಂ ನೋಱ್ಪವರಂ ॥
ಮಿಂತಲೆವಾಯ್ತ್ತರೆ ಪ್ರೊಱನು ।
ಯ್ವಂ ತಾಗಿರೆ ತಗೆದು ಮದನನಾರ್ದ್ದಿಸುತಿರ್ಪ್ಪಂ ॥ 213

---

1 ಪದಾರ್ತ್ಥದ್ವಂದ್ವಂ. 2 ಭಾವಾರ್ತ್ಥಂ. 3 ಮರದುಲಿ । ದೊಟ್ಟರು. 4 ಕೆಂದಲೆಯನವಿರ. 5 ಕರ್ದ್ದಂ. 6 ಕರದವ. 7 ಬಗೆ । ಗಟ್ಟು. 8 ಬಕ್ಕರ. 9 ಗೋಲೆ. 10 ಪೆಱರಳವಲ್ಲ ವಂಕೆಡಿಸಿದೊಟ್ಟಜೆ.

ಸೂತ್ರಂ || 48 ||

ಪತ್ತಿರೆ ಕಾರಕದೊಳ್ ಮುಂ |
ದೊತ್ತಿ ಸಮರ್ತ್ಥಕ್ರಿಯಾಪದಂ ಪದವಿಧಿ ತಾ ||
ನೊತ್ತರಿಸುಗುಮದಱೊಳ್ ತ |
ಳ್ತ್ತಮದಂತಕ್ಕೆ ಬಿಂದು ಸಂದಿಸಿ ನಿಲ್ಕುಂ || 214

ಪ್ರಯೋಗಂ ||

ಕಂ || ಊ[1]ರೇೞಲ್ ಮನೆವಾಡ |
ಲ್ಕಾರಂಬಂಗೆಯ್ಯಲೆಟ್ಟ್ಯುಗೊಳಲಾಳಾಳ[2] ||
ಲ್ಕಾರಾಮಮಿಡಲ್ಕೆಂದುಂ |
ದಾರುಣತಾರೆಗಳನಾಱಿಯೆ ಪೆಱವಱೊಳುಚಿತಂ || 215

ಸೂತ್ರಂ || 49 ||

ಉತ್ತರಪದಂ ವಿಶೇಷ್ಯದೊ |
ಳೊತ್ತರಿಸಿರೆ ಪೂರ್ವ್ವಪದದುಪಾಂತ್ಯಸ್ವರದಿಂ ||
ದತ್ತಿರ್ದ್ದವರ್ಕ್ಕ ಲೋಪಂ |
ಮತ್ತಮಿಕಾರಕ್ಕೆ ಬಹುಳಮುಕ್ಕುಮೆಕಾರಂ || 216

ಪ್ರಯೋಗಂ ||

ಕಂ || ಪೆರ್ಮ್ಮರನನಡರ್ದ ವನಲತೆ |
ಕಾರ್ಮ್ಮುಗಿಲಂ ತಳ್ತು ಮಿಂಚು ವಿಂಧ್ಯಾಚಲಮಂ ||
ನೆರ್ಮ್ಮದ ನರ್ಮ್ಮದೆಯೆನಿಸಿದ |
ಳೊರ್ಮ್ಮೆಯೆ ವನಚರನನಪ್ಪಿ ವನಚರಿಯೊರ್ವ್ವಳ್ || 217

ಬಹುಳಗ್ರಹಣಕ್ಕೆ ||

ಕಂ || ಪಣ್ಗಾಯೆ ತಳ್ತು ತುಱುಂಗಲ |
ಬಿಣ್ಗೊನೆಯಿಂ ತೂಗಿ ತೊನೆವ ಕೌಂಗಂ ತನ್ನ ||
ತ್ತಣ್ಗೆ ಬರೆ ತೆಗೆವ ತೆಱದಿಂ |
ಕಣ್ಗೊಳಿಸಿದುದೆಳಸಿ ನಾಗಲತೆ ದಾಂಗುಡಿಯಿಂ || 218

ಸೂತ್ರಂ || 50 ||

ಸ್ವರಮಾದಿಯುಪ್ಪುವವು ಮುಂ |
ತಿರೆ ದೀರ್ಗ್ಘಂ ಮೊದಲೊಳಗುರುಗಳ್ಕುಂ ತದವಾಂ ||
ತರದೊಳ್ ಣಟಳನತಂಗಳ್ |
ದೊರೆಕೊಳೆ ತಳೆಗುಂ ದ್ವಿರುಕ್ತಿಯಂ ಬಹುಳತೆಯಿಂ || 219

---

1 ಊರ್ಕಱಲ್. 2 ಗ.

ಪ್ರಯೋಗಂ ॥

ಪೂರ್ವ್ವಾರ್ದ್ಧಕ್ಕೆ ॥

ಕಂ॥ ಕಾಱೊಸಡುಂ ಕರ್ಬ್ಬಯುಂ ।
ಪೇರೊಡಲುಂ ತೊಳಪ ದಾಡೆಯುಂ ಪೆರ್ಬ್ಬಗಿಱುಂ ॥
ಕ್ರೂರೇಕ್ಷಣಮುಂ ದನುಜಾ ।
ಕಾ[1]ರಮನೊಡರಿಸೆ ನಿಶಾಟರರ್ವ್ವಿಸಿ ತೋರ್ಪ್ಪರ್ ॥ 220

ಅಗುರುಗ್ರಹಣಕ್ಕೆ ॥

ವೃ॥ ಮೇಲುದಂ ಮುಱಿದು ಮೆಯ್ಮುಱಿದೊರ್ವ್ವಳೊಱಲ್ದು ಮುಂ।
ಬಾಲೆಯುಂ ತಿರಿಪಿ ನೂಂಕಿ ಪವಿತ್ರಮನಿಟ್ಟು ಪ ॥
ಚೊಳ್ಳೇಲೆವಚ್ಚದೊಳೊಡಂಬಡೆ ಬಂದು ವಿದಗ್ಧ ಭೂ ।
ಪಾಲನಂದನನನಂದರುಣಾಧರೆ ನೋಡಿದಳ್ ॥ 221

ಣಕಾರಕ್ಕೆ ॥

ಕಂ॥ ಪಣ್ಣನೆ ತೊೞಲ್ದು ತೀಡುವ ।
ತಣ್ಣೆಲರೊಳೆಲರ್ಚ್ಚೆ ವನಚರವ್ರಜಮುದಱೊಳ್ ॥
ತಣ್ಣನೆ ತಣಿದಿರೆ ಬ[2]ನದೊಳ್ ।
ಪಣ್ಣನೆ ತಿನುತಿರ್ಪ್ಪುವೆಳಸಿ ತರುಚರಕುಳಮುಂ ॥ 222

ಟಕಾರಕ್ಕೆ ॥

ಕಂ॥ ನಿಟ್ಟೆಯ್ದಿಯಾಗು ಪ[3]ತಿಯೊಳ್ ।
ತೊಟ್ಟನುವಶೆಯಾಗು ಶೀಲವತಿಯಾಗು ಚಿರಂ ॥
ನಿಟ್ಟಾಯುಮಾಗು ನೀನೆಂ ।
ದಿಟ್ಟರ್ ಸೇಸೆಯನಗಣ್ಯಪುಣ್ಯಾಂಗನೆಯರ್ ॥ 223

ಳಕಾರಕ್ಕೆ ॥

ಕಂ॥ ಅಳ್ಕಾಡಿ ನರನ ಕೂರ್ಗ್ಗಣೆ ।
ಯುಳ್ಳೆಱುಂಗಳ್ಕಿ ಬಳ್ಕಿ ಕುರುಬಲಮೆಲ್ಲಂ ॥
ಬೆಳ್ಳೇಟುವೋಡೆ ನಕ್ಕನಿ ।
ನೊಳ್ಳಳಿಡೆಗೋದನೊದಱಿ ಚಟ್ಟನೊಳೊವಜಂ ॥ 224

ನಕಾರಕ್ಕೆ ॥

ಕಂ॥ ಇನಿಯಳ ತ[4]ನಿಸೊಂ[5]ಕಿನ್ನುಣಿ ।
ಸನೆ ಮಾಲ್ಯಾಭರಣಲೇಪನಂ ತಂಬುಲಮೆಂ ॥
ಬಿನಿತುಂ ರಾಗಮನಾಗಿಸೆ ।
ಮನದೊಳ್ ದಿವಿಜೇಂದ್ರವಿಭವದಿಂ ಸುಖಮಿರ್ದ್ದಂ ॥ 225

1 ಕಾರಮುಮೊತ್ತರಿಸೆ. 2 ಪಿನಂ. 3 ಪತಿಗೆ । ಕಟ್ಟನುವಸೆ. 4 ಕಳ. 5 ನೊಂಕಿನ್ನುಗ.

ತಕಾರಕ್ಕೆ ||

ವೃ || ಮಡದೊಳೊಂದುವುದೆತ್ತ ಕಿತ್ತಡಿಗಳ್ಗನಿಪ್ಪತೊಳಪ್ಪುಮಾ |
ಮಡದೊಳೊಂದಿಯು ನಿಂದ ಕಿತ್ತಡಿಗಳ್ಗ ನಿತ್ಯನಿಯಾಮದಿಂ ||
ಪೊಡೆವಡಿಂಗಡಿವೆಂದು ನೀಱರನೂಱು ಸಾ[1]ಱುವ ಮಾಱ್ಕೆಯಿಂ |
ಪೊಡೆವ ಡಿಂಡಿಮಮೆಂಬಿನಂ ಕಳನೂಪುರಧ್ವನಿ ಪೊಣ್ಮುಗುಂ || 226

ಬಹುಳಗ್ರಹಣಕ್ಕೆ ||

ಕಂ || ಅಂಚೆಯುರಗಿಳಿಯು ಪುರುಳಿಯು |
ಕೊಂಚೆಯು ಕೋಗಿಲೆಯು ನವಿಲ ಪಾರಾವತದೊಂ ||
ದಿಂಚರದಿಂದಂ ಕಬ್ದಾ |
ತ್ಮಂ ಚರಮಚರಂ ಜಗಂ ದಲೆನಿಸಿದುದು ಬನಂ || 227

ಸೂತ್ರಂ || 51 ||

ಕಡಿದು ನಿಡಿದೆಂಬಿವೆರಡಱ |
ಕಡೆಯೊಳ್ ಟತ್ವಂ ತಕಾರಮಕ್ಕುಂ ಕಿಱಿದೆಂ ||
ಬೆಡೆಯೊಳ್ ಸ್ವರವಿರೆ ತಾಮವು |
ಪಡೆಗುಮುಕಾರಾಂತಭಾವಮಂ ವ್ಯಂಜನದೊಳ್ || 228

ಪ್ರಯೋಗಂ ||

ಕಂ || ಕಟ್ಟಾಯದ ಕಣಿ ಪೆಂಪಿನ |
ಕಟ್ಟಳಿ ಚಾ[2]ವಟದ ಮೇಱು ನನ್ನಿಯ ತವರೂರ್ ||
ನೆಟ್ಟನೆನಿಸಿದ ಜಸಂ ನೇ |
ರ್ವಟ್ಟರ್[3] ನಿಟ್ಟಾಯುಮಕ್ಕೆ ದುಟ್ಟತ[4]ಳಕ್ಕಂ || 229

ಬಾೞೆಯು ಖರ್ಜ್ಜೂರದ ಕಿ |
ತ್ತೀೞೆಯು ಕರ್ಮ್ಮರದ ಮಾವಿನರಸೇಱಿಲ ಕಂ ||
ಚೇೞೆಯು ಪಲಸಿನ ಮೇದಿಂ |
ನೊಱೆದುಮೆಸೆದ[5]ಕ್ಕರ್ಮದಱ ಬಹಿರುದ್ಯಾನಂ || 230

ಉದಂತಕ್ಕೆ ||

ಕಂ || ತೊ[6]ಡೆಯಿಂ ಕಡುಗುದುರೆಗಳಂ |
ಮಡವಿಂ ನ[7]ಡುಪಟ್ಟ ದಂತಿಯುಂ ನಿಡುದೋಳಿಂ ||
ಕಡುವಾಳಂ ಕೂರಸಿಯಿಂ |
ಕಡಂಗಿದ[8]ಣಿಯುಂ ಸಮಂತು ಬಸದಾ[9]ಗಿಸವಂ || 231

---

1 ನಾಱುವ. 2 ಚಾವಿಕನದವೆೞಗ. 3 ರವಿಬ್ಬ್ಯ. 4 [illegible]. 5 [illegible].
6 ಉಡಮ್ಪಿಂ. 7 ನಡ. 8 ದಾ. 9 ಮಾ.

ಕಂ ॥ ಕಿಱುನೆಲೆಯ ಲತಾಲಲಿತೆಗೆ ।
ತಿಱಿದುಕೊ[1]ಳಲ್ಕಪ್ಪ ಸಾರ್ಕ್ಕೆಯೊಳ್ಗೊಂಬುಗಳೊಳ್ ॥
ತುಱುಗಿದ ತಳಿರಿಂ ನನೆಯಿಂ ।
ಕಿಱುವಿಡಿಯಿಂದೆಸೆದುದಸದಳಂ ಮಾಕಂದಂ ॥ 232

ಸೂತ್ರಂ ॥ 52 ॥

ಪಚ್ಚನೆಯುಂ ಕೆಚ್ಚನೆಯುಂ ।
ಬೆಚ್ಚನೆಯುಮೆನಿಪ್ಪ ಶಬ್ದದಂತಕ್ಕಕ್ಕುಂ ॥
ಬೆಚ್ಚಂತಿರೆ ಮತ್ವಂ ಕೆಲ ।
ರಿಚ್ಚಯಿಪರ್ ಸ್ವಂತಮುಮನಿ[2]ಕಾರ್ಯತ್ವಮುಮಂ ॥ 233

ಪ್ರಯೋಗಂ ॥

ಮತ್ವಕ್ಕೆ ॥

ಕಂ ॥ ಪಂದಳಿರ ತೋರಣಂ ತ ।
ಳ್ತೊಂದಿದ ಕೆಂಗುಡಿಯು ಪುದಿವು ಮುತ್ತಿನ ಕ[3]ಡೆ ಚೆ ॥
ಲ್ವಿಂದೆಸೆವ ಮಂಗಳಾನಕ ।
ದೊಂದು ರವಂ ಬಗೆಗೆ ವಂದುದಂದರಮನೆಯೊಳ್ ॥ 234
ಎನಿತುಂ ಕಾಯ್ದುಂ ಪೆಂಸೀರ್ ।
ಮನೆಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ ॥
ಮನದೊಳ್ ಪು[4]ಲ್ಲದನೆಂತುಂ ।
ನೆನೆಯರಿ[5]ದಂ ನಂಬು ಕುರುಕುಲಾಂಬರಭಾನೂ ॥ 235

ಸ್ವಂತಕ್ಕೆ ॥

ಕಂ ॥ ಪಸುರ್ವೊನ್ನ ಜಗಲಿ ಪಚ್ಚೆಯ ।
ಪಸುರ್ವಂವರ್ ಮುತ್ತಿನಕ್ಕಿ ನೀಲದ ಜಾಗಂ ॥
ಕಿಸುಗಲ್ಲರುಣಸರೋರುಹ ।
ಮೆಸೆದಿರ್ದ್ದವು ರಾತ್ರಿಮತಿಯ ಬೀಡಿನೊಳೆತ್ತಂ ॥ 236
ವಾಸರಪತಿ ಬಿಸುಗದಿರಿಂ ।
ಪೇಸದೆ ತವೆ ಪೀರ್ಗ್ಗವೆಂಬ ಮಱುಕದೊಳಂಭೋ ॥
ಜಾಸನನಂಬುಜವನಮಂ ।
ಬಾಸಣಿಸಿದನೆನಿಪುವಿ[6]ಡಿದ ತಾವರೆಯೆಲೆಗಳ್ ॥ 237

* ಪಿತ್ವಕ್ಕೆ ॥

ಕಂ ॥ ಬೇಸಱಿಸುವಂಗಜಾಗ್ನಿಯ ।
ಕೇಸುರಿ ಕೊಳೆ ಕಱಿದ ಪತಿಯ ವಿರಹದಿನಾಗಳ್ ॥
ಕೀಸುಗಳೆದಂ[7]ತೆ ಕಡಗಮ ।
ನಾಸತಿ ಕಳೆದಿತ್ತು ಖಾತ್ರಕರಪಲ್ಲವದಿಂ ॥ 238

---

1 ಕೊಳಲೆಬಪ್ಪ. 2 ನಕಾರತ್ವ. 3 ಕೊಕೆ. 4 ಪುಲ್ಲವು. 5 ರದಂ. 6 ವಿಪಿನ. * ಇದಕ್ಕೆ ಪ್ರತಿಯಾಗಿ—ಯೋಗವಿಭಾಗದಿಂ ಕೇವಲಸ್ವಂತಕ್ಕುದಾಹರಣೆ—ಎಂದು ಪ್ರತಿಗಳಲ್ಲಿದೆ. 7 ದಂತೆ.

ಸೂತ್ರಂ ॥ 53 ॥

ಪೊ[1]ಸತು ಪೞದೆಳದು ಪೊಱಗೊಳ ।
ಗು ಸಮಮೆನಿಪ್ಪ[2]ವಱೊಳತ್ವಮಂತಕ್ಕೆ ನಿಪಾ ॥
ತಿಸೆಪಡೆಗುಮವಱೊಳೊಳಗಿಂ ।
ಗಸಂಗದಿಂ ಸಮನಿಸಿಕ್ಕುರ್ಗಮುಳ್ಳಾದೇಶಂ ॥ 239

ಪ್ರಯೋಗಂ ॥

ಕಂ ॥ ಪೊಸದೇಸೆಯಿಂ ಪೆಡಂಗಂ ।
ರಸಪುಷ್ಟಿಯನರ್ತ್ಥಸೃಷ್ಟಿಯಂ ಬಗೆವರೆ ಭಾ ॥
ವಿಸುವರೆ ಸಾ[3]ರಣಿಗೆಯುವ್ರೋಲ್ ।
ಕಸವನೆ ಪಿ[4]ಡಿವರ್ ಕೆಲರ್ ಮಹಾಪುರುಷರ್ಕ್ಕಳ್ ॥ 240

ತುಱುಕಲಡುಗೆಗಳೊಳೇಂ ಪಱ ।
ಗೆಱವೆಯ ಕೂೞ್ ತಿವುಡುಗಳೆದ ತೊವರಿಯ ತೊವೆ ಕಾ ॥
ಯ್ದೆಱಪಿ[5]ದ ತುಪ್ಪಂ ಕೋಸುವ ।
ಕೆಱಲಲ್ಲದೆ ದಿವ್ಯಭೋಜನಂ ಪೆ[6]ಱತುಂಟೇ ॥ 241

ಎಳದಳಿರ ತುಱುಗಲೊಳ್ ನೆಱೆ ।
ದಳದಳಿಪೆಳಮಾವಿನಳ್ಳಿಗೊಂಬಂ ತಳ್ತು ॥
ಯ್ದೆಳಸಿದ ವಸಂತದೂತಿಯ ।
ವಿಳಿರ್ವುರ್ಯ್ಯಲನಾಡುವಬಲೆ ಪಾಡಿದಳೊರ್ವ್ವಳ್ ॥ 242

ಅಳವಿಗೞಿದುರುನಿತಂಬ ।
ಸ್ಥಳಭಾರಮನಾಂತ ಕಾಲ್ಗೆ ಪೊಱ ಅ[7]ಡಿಗಳೊಳೇ ॥
ಲಳಿತತುಳಾಕೋಟಿಗಳಂ ।
ತಳೆವುದದೇವಿರಿದೊ ಮದಗಜಾಲಸಗತಿಯಾ ॥ 243

ಬಳಕೆಯ್ಯೊಳಿರ್ದ್ದ ಪಲ್ಗಿರಿ ।
ದೊಳವಾಲಂಗೊಂಡು ಮೊರೆವ ಭಷಕನ ತೆಱದಿಂ ॥
ದೊಳಪೊಕ್ಕು ದುರ್ಗ್ಗಮಂ ಸಂ[8] ।
ಚಳಚಿತ್ತಂ ನುಡಿಗುಮೆಮಗೆ ಬಲ್ಗಂಡಿಕೆಯಂ ॥ 244

ಸಮಸು[9]ತಿಯೊಳೊಂದಿದೊಳ್ಪಿನ ।
ರಮಣೀರಮಣೀಯಗೇಯಮಾಸ್ಥಾಯಿಕೆಯೊಳ್ ॥
ಸಮಸಂದಮರ್ದ್ದನ ಸರವೞೆ ।
ಸಮಂತು ಕ[10]ಱುದಪ್ಪುದೆಂಬಿನಂ ರಂಜಿಸುಗುಂ ॥ 245

---

1 ಪೊಸದು. 2 ಪ್ಪ. 3 ಸಾರಣಿಯುಂತಿರ. 4 ಪಿಡಿವೆಳಮುಪರ ಮಹಾ. 5 ಪಿದ. 6 ಪಡಿಕೊಳ್ಗದೇ. 7 ಮಾಡಿ.
8 ಚಂ. 9 ಸ್ಮೃತಿ, ಶ್ರುತಿ. 10 ಕಱುದೆರಪುವಿವೆಂಬಿನಂ.

ಕಂ॥ ಒಳಗುಳ್ಳೋವಣಮುಮರ್ದಿರೆ ।
ಚ[1]ಳನಂ ಪೊೞಗೆಸೆಯೆ ಬೆಳಪನೆಯ್ದುವ ಪೆಳಗಂ ॥
ಪೊಳೆವ ಸುಲಿವಲ್ಲೆ ಮಸುಳ್ಚಿಸೆ ।
ವಿಳಾಸದಿಂ ದರ್ಭಶಯನತಳಗತನಾದಂ ॥ 246

ಸೂತ್ರಂ ॥ 54 ॥

ತತ್ಪುರುಷಸಮಾಸದೊಳು ।
ದ್ಯುತ್ಪೂರ್ವ್ವಪದಾಂತ್ಯಲೋಪಮಕ್ಕುಂ ಪ್ರಚುರಂ ॥
ವ್ಯುತ್ಪಾದಿಸಲ್ಕೆ ಪಡೆಗುಂ ।
ತತ್ಪರದೊಳ್ಬೞಿಯುಮುಚಿತವರ್ಣಾಗಮಮುಮಂ ॥ 247

ಪ್ರಯೋಗಂ ॥

ಕಂ॥ ಅರನೇಱಿಲ ಪೊಂಬೂಱೆಯ ।
ಸುರಯಿಯ ಮಾಮರದ ಬಕ್ಕೆವಲಸಿನ ಪುದುವಿಂ ॥
ಪೆ[2]ರೆದುಬ್ಬಿದ ಕಿತ್ತಿಲೆ ದಿನ ।
ಕರಾಂಶುಗಳ್ಗಂ ವಿಭೇದಿಸಲ್ಕರಿದದಱೊಳ್ ॥ 248

ಪ್ರಚುರಗ್ರಹಣಕ್ಕೆ ॥

ಕಂ॥ ಅರಸುಗುಣಂಗಳನತಿಭೀ ।
ಕರಕಾಂತಂಗಳನವಂ ವಿಯಚ್ಚರರಾಜಂ ॥
ಧರಿಯಿಸಿದಂ ಜಳನಿಧಿ ಜಳ ।
ಚರಚಯಮುಮಂ ರತ್ನಚಯಮುಮಂ ಧರಿಯಿಪವೊಲ್ ॥ 249

ಪರಾರ್ದ್ಧಕ್ಕೆ ॥

ಕಂ॥ ಮಾಂಗಾಯ ಗೊಂಚಲೊಳಗುಱಿ ।
ದಿಂಗೊರಲಿಂದುಲಿವ ಗಣ್ಡುಗೋಗಿಲೆಗ[3]ಳರ ॥
ಲ್ದೊಂಗಲ ನಿಱಿದಳಿರೊಳಗೆ ಜಿ ।
ನುಂಗುವ ಪೆಣ್ದುಂಬಿಗಳುಮಳುಂಬಂ ಬನದೊಳ್ ॥ 250

ಸೂತ್ರಂ ॥ 55 ॥

ಪ್ರಾಯಿಕಮಕ್ಕುಂ ದೀರ್ಗ್ಘ ।
ನ್ಯಾಯಮದಂತೆಲ್ಲಶಬ್ದದೊಳ್ವ್ಯಾಪ್ತಿಗತಂ ॥
ಮಾಯೆಂಬುದು ಮಹಿಮಾಭಿ ।
ಪ್ರಾಯದೊಳೊಂದಿಕ್ಕೆವೊಂದಿ ಮ[4]ಹತೆಂಬುದಱೊಳ್ ॥ 251

1 ತಳವೊಂ. 2 ಪರಿದು. 3 ಯಮಲ॥ ಪೆರ್ತ್ರಿ. 4 ಮಹದಂ, ಮಹಮಂ.

ಪ್ರಯೋಗಂ ||

ವೃ || ಬಲ್ಲಂತೆಂತುಂ ಗುಣಮನೊಳಕೆ[1]ಯ್ದಾರ್ಪ್ಪನಾರ್ಪ್ಪಂದದಿಂದಿ |
ನ್ನಿಲ್ಲಿರ್ದ್ದಂ ಪೊಲ್ಲಮೆಯನುಗುಗೆಂಬುಕ್ತಿಯಂ ನನ್ನಿಮಾಳ್ಪಂ ||
ತೆಲ್ಲಾ ರ[2]ತ್ನಂಗಳುಮನೊಳಕೊಂಡೊಳ್ಪನಂಭೋಧಿ ಲೋಕ |
ಕ್ಕೆಲ್ಲಂ ಬೀಱಲ್ ಪೊಱಗೆ ಕಸಮಂ ನಿಚ್ಚಮೀಡಾಡುತಿರ್ಕ್ಕುಂ || 252

ಪ್ರಾಯೋಗ್ರಹಣಕ್ಕೆ ||

ಕಂ || ಎಲ್ಲಂಗಮೆಲ್ಲಧನಮುಮ |
ನೆಲ್ಲಡೆಯೊಳಮೆಲ್ಲತೆಱದೊಳಂ ಕುಡುಗೆಮ ಸಿ ||
ಲ್ಕಿಲ್ಲದೆ ಬವರದೊಳೇಂ ಗಳ |
ಗೆಲ್ಲಂಗುಡದಿರ್ಕ್ಕೆ ಪೊಣರ್ದೊಡಾರ್ಗ್ಗಂ ಗಂಡಂ || 253

ಉತ್ತರಾರ್ದ್ಧಕ್ಕೆ ||

ಕಂ || ಮಾದೇವನುಮಾದೇವಿಗೆ |
ಸಾದರದಿಂ ಪೇ[3]ಳ್ದನೀತನುತ್ತಮಸತ್ವಂ ||
ಮಾಡಾನಿ ಶೌ[4]ರ್ಯ್ಯಧನಮುದಿ |
ತೋದಿತಪುಣ್ಯಂ ಹಬ್ರಿಯುಂ ನರನೆಂಬಂ || 254

ಸೂತ್ರಂ || 56 ||

ಪರಿಗದಿತಬಹುವ್ರೀಹಿಗೆ |
ಚರಮದೊಳಕ್ಕುಂ ಯಥಾಪ್ರ[5]ಯೋಗಮಕಾರಂ ||
ಪರಪದಮಿಲ್ಲಂ[6]ಬೊಂದಿದು |
ದೊರೆಕೊಂಡಿರೆ[7]ಲಿತ್ವಮಂತ್ಯವರ್ಣ್ಣಕ್ಕ[8]ಕ್ಕುಂ || 255

ಪ್ರಯೋಗಂ ||

ಕಂ || ಬಲ್ದಲೆಯಂ ತೋಳ್ಸೀಳ್ದನ |
ಗಲ್ದರದಂ ಬಟ್ಟದೊಡೆಯುವಂ ಕೆಂಗಣ್ಣಂ ||
ನೇಲ್ದ ಕಿವಿಯಾತನೆನಿಸುವ |
ನೊಲ್ದೊಲಿಸುಗುಮೆಸೆವ ಪೇರಸಿರಿಯಂ ಧುರದೊಳ್ || 256

ಉತ್ತರಾರ್ದ್ಧಕ್ಕೆ |

ಕಂ || ಸೊಗಯಿಸುಗುಮೆ ಪಲ್ಲಿಲಿ ವಾ |
ಯ[9]ಗಿಲಿಲಿ ಗಂಧಂ ಸಮಂತು ಕೂರಿಲಿ ಕುಡುಗೋ ||
ಲ್ಮಿಗೆ ನಾಣಿಲಿಯೆನಿಸುವ ವಧು |
ನಗೆಗೆಡೆಯಕ್ಕುಂ ಸಮಸ್ತಜಗತೀತಳದೊಳ್ || 257

1 ಕೊಳ್ಗೆಯ್ಪ. 2 ಲೋಕಂ. 3 ಪೇಳ್ದ್ವಿನಾತ. 4 ಕಾರ್ಯ್ಯಕರ. 5 ಪ್ರಕಾರ. 6 ಬಂಕಿವ. 7 ರಲ್ತು.
8 ದೊಳಕ್ಕುಂ. 9 ಪಗಿಲಿಲಿಪಗ್ಗಂ.

ಸೂತ್ರಂ ॥ 57 ॥

ಬಂದೆಂಬುದರ್ಕ್ಕೆ ರೇಫಂ ।
ಸಂದಿಸುಗುಂ ಕಡೆಯೊಳೆರಡೆನಿಪ್ಪುದಱೊಳ್ತ ॥
ನೊಂದಿ ನೆಲಸುಗುಮಿರಾದೇ ।
ಶಂ ದಲ್ಕ್ರೇಣ್ಕೇಣುಕಾರಲೋಪಮುದಕ್ಕುಂ ॥ 258

ಪ್ರಯೋಗಂ ॥

ಕಂ ॥ ಒರೆಂಜಲ್ಗೊರ್ಪ್ಪಂತಿಗೆ ।
ವಾರದ ಖಳರೊಡನೆ ಬೆರಸಿ ಮೇ[1]ಳಂಗೊಂಡಂ ॥
ದಾರುಂ ಲಘುವಪ್ಪಪ್ಪರ್ ।
ಸ್ತ್ರರದೊಳಮರ್ದಂಬ ಶಿಥಿಲಸಂಯೋಗದವೊಲ್ ॥ 259

ಇರ್ಮ್ಮೆಯ್ಗಂ ಹಿತಮಂ ಜಿನ ।
ಧರ್ಮ್ಮಮನಿಂಬಾಗಿ ತಿಳಿದು ನೆಗೞ್ದಂಗಕ್ಕುಂ ॥
ಸ್ವರ್ಮ್ಮೋಕ್ಷಸಿದ್ಧಿ ಬಗೆನಂ ।
ದುಃಖ್ಮಂ ಪೆಱತಿಲ್ಲ ದೇಹಿಗೀಸಂಸೃತಿಯೊಳ್ ॥ 260

ಉಕಾರಲೋಪಕ್ಕೆ ।

ವೃ ॥ ಗೆಲವಂ ಕೊಂಡಭಿಮಾನಿಯಾದನೊಳಕೊಂಡನ್ಯಾವನೀಕಾಂತೆಯುಂ ।
ಸಲೆ ಕೌಱವೃತಿಯಾದನಿ[2]ತ್ತೆಱದೆರಟ್ಮಾತಾಡಿ ಬಟ್ದಂ ಜಗ ॥
ದ್ವಲಯಕ್ಕೊನ್ನಡಿಕಾ[3]ಱನಾದನ[4]ನಯಕ್ಕುಳ್ಳಿಕ್ಕೆ ಸಂಗ್ರಾಮಗೊ ।
ಳ್ಗಲಿಯಾದಂ ವಿಪರೀತಜಾತಚರಿತಂ ಭೂಪಾಲರೊಳ್ಕಾಮದಂ ॥ 261

ಸೂತ್ರಂ ॥ 58 ॥

ಅದಿದೆನ್ನದೆ ಮೂಱೆಂಬೀ ।
ಪದದಂತಂ ಲೋಪಮೆಯ್ದುಗುಂ ಕಪವರ್ಗ್ಗಂ ॥
ತುದಿಯೊಳ್ತ[5]ಗುಳ್ದು ಪುದಿದಿರೆ ।
ತದಾಗೆನುಂ ಹ್ರಸ್ವಪೂರ್ವ್ವಮಕ್ಕುಂ ಬಹುಳಂ ॥ 262

ಪ್ರಯೋಗಂ ॥

ವೃ ॥ ನೆಲಸಿರ್ದ್ದಪ್ಪುದಧಸ್ಥಳಂಬಿ[6]ಡಿದಧೋಲೋಕಂ ಸಮಂತೆಯ್ದಿ ಸು ।
ತ್ತಲುಮಿರ್ದ್ದಪ್ಪುದು ಮಧ್ಯಲೋಕಮೆಸೆದಿರ್ದ್ದಾಱಕೂಲಿಕಾಭಾಗದಾ ॥
ದಲೆಯೊಳ್ಬಂ[7]ದಪುದೂರ್ದ್ಧ್ವಲೋಕಮೆನೆ ಮೂಲೋಕಕ್ಕೆ ಪೆಂಪಿಂದಗುಂ ।
ದಲೆಯಾಗಿರ್ದ್ದುದು ದೇವದಂಪತಿರತಶ್ರೀಸುಂದರಂ ಮಂದರಂ ॥ 263

---

1 ಮೇಳ್ವಂ. 2 ನಿಕ್ಕುಳ್ಳಿರಿದರಟ್ಮಾತಾಗಿ. 3 ಗಾಱ. 4 ನಯಕ. 5 ಳೊಡಲ್ಬು. 6 ಬಿಡ. 7 ಳ್ಬಂದುದದೂ.

ಪರಾರ್ಧಕ್ಕೆ ॥

ವೃ ॥ ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ ಕೇಸರಿಪೀಠಮೊಂ[1]ದಿದಂ ।
ತಿಕ್ಕುವ ಚಾಮರಂ ಮಿಱುಪ ಪೂಗಳ ಗೊಂಚಲಶೋಕೆ ಭಾ[2]ನುಮಂ ॥
ಮಿಕ್ಕು ತೊ[3]ಳಪ್ಪ ಭಾವಳಯಮೊಪ್ಪುವ ಪನ್ನೆರಡುಂ ಗು[4]ಣಾಳಿ ಲೋ ।
ಕಕ್ಕೆ ವಿನೂತವೀರಜಿನಪಾಶ್ರಯಮೆಂ[5]ಬಿವು ಸರ್ವ್ವಮಂಗಳಂ ॥ 264

ಕಂ ॥ ಅನವರತದಾನದಿಂ ಮಿ ।
ಕ್ಕನೂನಸೂನೃತದಿನ[6]ಸಮಶೌರ್ಯ್ಯೋನ್ನತಿಯಿಂ ॥
ವನನಿಧಿಪರೀತಸಕಲಾ ।
ವನಿಯೊಳ್ಮ್ಮಿಪ್ಪುರಿವೊಲಾದುದಾನೃಪನ ಗುಣಂ ॥ 265

ಬಹುಳಕ್ಕೆ ॥

ವೃ ॥ ತೀವಿದ್ದರ್ತ್ತುಮೊದಲ್ ಮೊದಲ್ಗೆ ಪ[7]ಣೆಯುಂ ಮಾಗ[8]ಯ್ಯಮಾಗಯ್ಯನಿ ।
ತ್ತಾವಕ್ಕೆಯ್ದು ಕವಲ್ಕವಲ್ತು ಪಲವುಂ ಕೊಂಬಾದುವೊಳ್ಗೊಂಬುಮಂ ॥
ತೀವಿದ್ದರ್ತ್ತು ತಳಿರ್ ಮೊದಲ್ ಪಣೆ ಕವಲ್ಕೊಂಬೆಂಬುವೀಕೆಂದಳಿರ್ ।
ಮಾವಿಂಗಲ್ಲದೆ ಮಾವುಗಳ್ಗೆ ಪೆಱವಕ್ಕಿಂತೇಂ ಪಡಂಗಕ್ಕುಮೋ ॥ 266

ಸೂತ್ರಂ ॥ 59 ॥

ಉಪಹತಿ ನಾಲ್ಕಯ್ದೆಂಬಿವ ।
ಱು[9]ಪಥೆಯೊಳಾಱೆಂಬಿದರ್ಕ್ಕೆ ಮೊದಲೊಳ್ ಹ್ರಸ್ವಂ ॥
ಸ್ವಪರಸ್ವರಲೋಪಂ ಮ ।
ತ್ತಿರ್ಪುದೇೞಱೊಳಂತ್ಯಲೋಪಮೆಂಟರ್ಕ್ಕಕ್ಕುಂ ॥ 267

ಪ್ರಯೋಗಂ ॥

ಕಂ ॥ ಉರಗಂ ಕೊಂಡಲ್ಲಿಂ ನಾ ।
ಲ್ವೆರಲನಿತಂ ಕಳೆದು ಕಟ್ಟಿ ಮೇಗಂ ಬೇಗಂ ॥
ಸೆರೆವಿಡುಗೆ ಸುಡುಗೆ ಕಡಿದಿರ ।
ದರಿದಿಕ್ಕುಗೆ ನೀ[10]ವಿ ಕಳೆಗೆ ನಿರ್ವ್ವಿಷಮಕ್ಕುಂ ॥ 268

ಕೀಱಿ ಪುಗಲೆನೆಯುಮೆಂತುಂ ।
ಮೀಱಿದ[11]ನಂ ಪೊಕ್ಕು ಕಾಲೆಯುಂ ಶಾರ್ಙ್ಗಮನಂ ॥
ದೇಱಿಸಿದಪನಹಿಶಯ್ಯೆಯ ।
ನೇಱಿದನಯ್ಯಾಯ ಶಂಖಮಂ ಪೂರಿಸಿದಂ ॥ 269

ಅಱುದಿಂಗಳಾಯು[12]ವುಂಟೆನೆ ।
ಮಱುಗುವುದುಂ ನಲ್ಲರಲ್ಲಿ ತಮ್ಮಿಂ ಮುನ್ನಂ ॥
ಪಱಿವಟ್ಟು ಬರೆ ಕನಲ್ವುದು ।
ಮಱಿಪದೆ ನಾಲ್ವರ್ಗ್ಗೆ ನರಕದುಃಖದ ತೆಱನಂ ॥ 270

1 ಮೊಂದೆಶಂ । ದಿಕ್ಕು. 2 ಭಾಷಗಂ. 3 ಬೆಳಪ್ಪ, 4 ಗಣಾಳಿ. 5 ಮೆಂಬಿವು. 6 ನಸಿನ. 7 ಪಣೆಯಿಂ. 8 ಗಯ್ಯುಮಾಗಯ್ಯು. 9 ಱುಪಥೆಯಿನಾ. 10 ಗಿವಿಡುಗಳಗೆ. 11 ದಿನಂ. 12 ಪೊಂದೆನೆ.

ಕಂ॥ ಪಂಮುದ್ದಿರ್ಸು[1]ವುದು ದುತ್ತೂ ।
ರರಸಮನಿಂಬಾಗಿ ಪಿಱಿದು ನೆಲದೊಳ್ ಲವಣಂ ।
ಬೆರಸೊರಸಿಕೊಂಡು ಪೂಸುಗೆ ।
ಕರಗುಗುಮೇೞ್ಪೊರೆಯೆನಿಪ್ಪ ಕುರುವುಂ ಕ್ಷಣದೊಳ್ ॥ 271

ಕಣ್ಗೆ ದಱದೊಡನೆ ನಾಲ್ವ ।
ತ್ತಣ್ಗುವುದವರೆಗಮಾಗಿದೊಡಂಬುಧಿ ಕಡಲ ॥
ತ್ತಣ್ಗೆ ಹರಿ ಬಂದುದಂ[2]ಕಡು ।
ಜಾಣ್ಗೆ ಡದಱದಾಗಳವಧಿಬೋಧೋದಯದಿಂ ॥ 272

ಸೂತ್ರಂ ॥ 60 ॥

ಒಂಬತು ದಶಾಹತಿಯಿಂ[3]।
ತೊಂಬತ್ತೆನೆ ಸಲ್ಗುಮಗ್ರದೊಳ್ಪ್ಪಱರೆ ಮ ॥
ತ್ತೊಂಬಯ್ಯಾದೇಶಮನವ ।
ಲಂಬಿಸುಗುಮದಂತೆ ಮುಂತೆ ಸಾಸಿರಮಿರೆಯುಂ॥ 273

ಪ್ರಯೋಗಂ ॥

ಕಂ॥ ಸಾಸಿರಯೋಜನಮುಬ್ಬಿದ ಸು ।
ರಾಸುರಸಂಸೇವ್ಯಮಾಗಿ ತೊಂಬತ್ತೊಂಬ ॥
ಯ್ಸಾಸಿರಯೋಜನಮಂ ನೆಗೆ ।
ದೀಸುರಗಿರಿ ಪೆಂಪನೇಂ ಪುದುಂಗೊಳಿಸಿದುದೋ ॥ 274

ಸೂತ್ರಂ ॥ 61 ॥

ಒಂದೆರಡೆಂಬಿವು ಪರದೊ ।
ಳ್ಸಂದಿಸೆ ಪತ್ತರ್ಕೆ ಪನ್ನೆನಿಕ್ಕುಂ ರೂಪಂ ॥
ಮುಂದೆ ಪೆಱವೊ[4]ಂದಿ ನಿಲೆ ಪದಿ ।
ಯೆಂದಕ್ಕುಂ ಸ್ವರದೊಳಮದರ್ಕೆ ನಾಗಮಮಕ್ಕುಂ ॥ 275

ಪ್ರಯೋಗಂ ॥

ಕಂ॥ ಎನಗಿದು ಚೋದ್ಯಂ ಪನ್ನೊಂ ।
ದನೆಯದು ನೆಲೆ ತನ್ನ ನೆಗೞ್ದದಂತದು ಪದಿನಾ ॥
ಱನೆಯ ನೆಲೆಗುಯ್ದನೆಂಬುದ ।
ನೆನೆ ಸುವಿಧಿನರೇಂದ್ರನಚ್ಯುತೇಂದ್ರನುಮಾದಂ ॥ 276

ವೃ॥ ಸಾರಲ್ಪಲ್ಲದು ಪನ್ನೆರೞ್ಬರಿಸಮಂ ನಾಡಂ[5]ತಡಂಗಿಪ್ಪುರ್ದು ।
ಗ್ರಾರಣ್ಯಂಗಳೊಳೆತ್ತಮೊಂದು ಬರಿಸಂ ಮೆಯ್ದೋಱಲಾಗಾರ್ಗಮಂ ॥
ದಾರಯ್ದಾತ್ತರ್[6]ಡಮಾಡಿದಂದು ಮಗುೞ್ದಿತ್ತೀರಾಱುವರ್ಷಂಬರಂ ।
ಸಾರಲ್ಪಲ್ಲದು ನಾಡನೆಂಬ ಸಮಕಟ್ಟಂತಾದೊಡೆಂತಕ್ಕುಮೋ ॥ 277

1 ಸಿದುತಪ್ತಿರಸ್ಸರಸಮನಿಂಬಾಗಿ. 2 ಕಂಡೊತ್ತ, 3 ಯೊಳ್. 4 ತೊಂದು. 5 ದಕ್ಕ. 6 ಕ್ಷರದ.

ಸೂತ್ರಂ || 62 ||

ಸಾಸಿರವಿರೆ ಮುಂದೊತ್ತಿ ಸ |
ಮಾಸದೊಳಕ್ಕುಂ ಪಱಿನ್ನದರ್ಕೆ ಯಥೋಕ್ತಂ ||
ಶಾಸಿಸುವನ್ನರ್ಱರ್ಕಂ |
ಸಾಸಿರಕಂ ಪ್ರಾಂತಲೋಪಮಂ ಕೆಲವೆಡೆಯೊಳ್ || 278

ಪ್ರಯೋಗಂ ||

ವೃ || ಪಿಡಿಯೆಂ ಚಕ್ರಮನೆಂಬ ಚಕ್ರಿಯ[1] ನಿಲಾಚಕ್ರಂ ಭಯಂಗೊಳ್ವಿನಂ |
ಪಿಡಿಯಿಪ್ಪಂ ವ[2]ರಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ ||
ಪಡುವೆಣ್ಗು ವುರವ್ರೋಗೆ ಪೋ[3]ಗಲಿಸುವೆಂ ನಿಚ್ಚಂ ಧರಾಧೀಶರಂ |
ಪಡಲಿಟ್ಟಂತಿರೆ ಮಾಱ್ಪನೋವದೆ ಪಯಿಂಚಾಸಿರ್ವರಂ ಯುದ್ಧದೊಳ್ || 279

ಪರಾರ್ಧಕ್ಕೆ ||

ವೃ || ಒರ್ವಂ ಬಂದೊಂದೆತೇರೊಳ್ಸರದ ಕುರುಬಲವ್ಯೂಹಮಂ ಕೀಱಿ ಬೆಂ[4]ಕೊಂ |
ದುರ್ವೀಶಂ[5] ನೋಡೆ ಮಾಱಾಂತೆನಗಮರಿಯನಾಗಿರ್ದನೀವಿಟ್ಟುಗೊಡ್ಡಂ ||
ಸರ್ವಗ್ಗಂ ಸಲ್ಲದೆಂದೆಂದೊವಜನೊದಱಿ ನಿಂದೊರ್ವನುಂ ನೂಱನೂರ್ಬ್ಭ |
ಸಿರ್ವದ್ರ್ಯೋಣಕ್ಕರ್ಳಾದಂತಿ[6]ಸೆ ಮೊಗಸಿ ಸರಲ್ಪಾಯ್ದು ವಂದತ್ತು ಮಿತ್ತಂ || 280

ಕಂ || ಸಾಸಿರ್ವರ್ವನಿತೆಯರ |
ಯ್ಯಾಸಿರ್ವರ್ಪ್ರಿಯತನೂಜರಱಿಕೆಯ ಪದಿನೆ ||
ಣ್ಬಾಸಿರ್ವರರಸುಗಳ್ವೆರ |
ಸಾಸಾಸಿಗನುಚಿತದೀಕ್ಷೆಯಂ ಕೆಯ್ಕೊಂಡಂ || 281

ಸೂತ್ರಂ || 63 ||

ಬೆರಸಿ ಸಮಸಂಸ್ಕೃತಂಗ |
ಳ್ಬರೆ ಕನ್ನಡದೊ[7]ಳಗೆ ಸಮತೆಯಿಂದಂ ಸಲ್ಗುಂ ||
ನಿರವದ್ಯಮಾಗಿ ಪದವಿಧಿ |
ವಿರುದ್ಧಮಕ್ಕುಂ ತದನ್ಯಥಾವೃತ್ತಿಗಳೊಳ್ || 282

ಪ್ರಯೋಗಂ ||

ಕಂ || ಅರಸುಗುಣಂ ಪೞಿಯನಣಂ |
ಬರಲಿತ್ತುದೆ ಶಾಚದಳವು ಪರವೆಣ್ಗಿಸಂ ||
ತರಲಿತ್ತುದೆ ಅೞಿಜನದೊ |
ಳ್ಬ[8]ರಸರಲಿತ್ತುದೆ ಮಹಾನುಭಾವಂ ನೃಪನಾ || 283

---

1 ಯಾ. 2 ಶರ. 3 ಪೋಗವಿಸುವೆಂ. 4 ಎಱಿಬಿಂ | ಕು. 5 ಶರ. 6 ತರ. 7 ದೊಡನೆ 8 ಬೆರಸಿಕೃಚ.

ವಿರುದ್ಧಕ್ಕೆ ॥

ವೃ ॥ ತರವೇೞ್ಕುಂ ಮಣಿಕ್ಯಭಂಡಾರದ ಪುಡಿಕೆಗಳಂ ಪುಂಜಿಸಲ್ವೇೞ್ಕುಂ ವಸ್ತ್ರೋ॥
ತ್ಕರಮಂ ತೋಱಲ್ಕೆ ವೇೞ್ಕುಂ ತಿಗಳಸಿರಿಸವೇೞ್ಕುಂದೆ ವಾಹಂಗಳಂ ಬಿ ॥
ತ್ತರಿಸಲ್ವೇೞ್ಕುಂ ತ್ರಚೀನಾಂಬರಪರಿಕರಮಂ ಮಾಣದೆಂದೋಳಿಯಿಂ ಲೆಂ ।
ಕರನಾಗಳ್ವೇೞ್ಕೆ ನೀಯುಲ್ಕೆ [1]ರೆದವರ್ಗೆ ಮಹಾದಾನಮಂ ವಿಕ್ರಮಾಂಕಂ ॥ 284

ಇಲ್ಲಿ ಕೆಲತ್ತುರಗಾಸಿಶಬ್ದಂಗಳೊಳ ಸಮತೆಯ ನಿಷ್ಪ್ರಯೋಸುವರವಕ್ಕರ್ಣ ಲಕ್ಷ್ಯಂ ॥

ಕಂ ॥ ತುರಗದಟಿಂಗಳ್ಗವಿತರ ।
ತುರಂಗಮಾರೂಢನಾಗಿ ತನ್ನಯ ಹಯಮಂ ॥
ಪರಿಯಿಸಿ ಕೊಂಗುಳಿವರ್ಮ್ಮರ್ಗಂ ।
ಕರಾಸಿಯಿಂದಿಱಿದು ತವಿಸಿದಂ ಹಯಬಲಮಂ ॥ 285

ಕಂ ॥ ಕೂರಿಸಿ ವೀರಶ್ರೀಯಮಂ ।
ಕೂರದರಂ ಕೊಂದು ಸಮರಜಯಮಂ ಮಾಡ ॥
ಲ್ಕೂರಸಿಯೊಳ್ನಲಸುಗೆ ಕಂ ।
ಠೀರವವಾಹನೆ ಚಳುಕ್ಯಕಂಠೀರವನಾ ॥ 286

ಸೂತ್ರಂ ॥ 64 ॥

ಚಾಪಲವೀಪ್ಸಾಭೀಕ್ಷ್ಣ್ಯಸ ।
ವಿಾಪಾನುಕೃತಿಕ್ರಿಯಾಸಮಭಿಹಾರಾದಿ ॥
ಖ್ಯಾ[2]ಪನೆಯೊಳ್ ಪ[3]ದಕಕ್ಕಂ ।
ರೂಪದ್ವಿತ್ವಂ ಯಥಾಪ್ರಯೋಗಾನುಗತಂ ॥ 287

ಪ್ರಯೋಗಂ ॥

ಚಾಪಲಕ್ಕೆ ॥

ಕಂ ॥ ಅದಱಿಂದವೊಪ್ಪಿಸೊಪ್ಪಿಸು ।
ಸುದತಿಯುನಣ್ಣುಣ್ಣು ಸಾಚ್ಚರ್ಗಸಾಚ್ಚರ್ಗಲೆ ಎಲೆ ನೀ ॥
ನದಿರದೆ ನಿಲ್ನಿಲ್ನೀನೆ ।
ಲ್ಲದಿಚ್ಚರ್ಗದಿಚ್ಚರ್ಗನೆ ಜಟಾಯು ರಾಹಣನೆಂಗುಂ ॥ 288

ವೀಪ್ಸೆಗೆ ॥

ವೃ ॥ ಮುದಮೂರೂರಬಲಾಜನಕ್ಕೆ ಪರಿನೀರೂರೂರ ತೋಂಟಕ್ಕೆಸಂ ।
ಪದಮೂರೂರ ಗೃಹಕ್ಕೆ ಪಂಕಜದ ಚೆಲ್ವೂರೂರ ಗುಯ್ಯಲ್ಗೆ ಸಂ ॥
ಮುದಮೂರೂರ ಮ[4]ದಾಳಿಗಂಚೆಗಳ ಚೆಲ್ವೂರೂರ ಷಂಡಕ್ಕೆ ವಾ ।
ಲೊದವೂರೂರ ದನಕ್ಕ ತಕ್ಕರ್ಗಮದಱಿಂ ರ[5]ಮ್ಯಂ ತದುರ್ವೀತಳಂ ॥ 289

ಆಭೀಕ್ಷ್ಣ್ಯಕ್ಕೆ ॥

ವೃ ॥ ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ ।
ಡಳಿಯೊಡನಾಡಿಯಾಡಿ ನಡೆಗಲ್ತು ಕಳಾಪಿಗಳಾಟಮಂ ಮನಂ ।
ಗೊಳೆ ನಡೆ ನೋಡಿನೋಡಿ ಕುಣಿಯಲ್ಕೆಱೆ ಕಲ್ತು ಕಲಾಗುಣಂ ಪೊದ ।
ಳ್ದಿಳವಡೆ ಬಾಲಭಾವದೊಳೆ ಬಾಲಕಿಯರ್ಬ್ಬಳವನ್ನಿ[6]ರಂತರಂ ॥ 290

1 ಬ್ಬರಿವರ್ಗೆ. 2 ನ್ಯಾಪನೆ. 3 ಪದದಕ್ಕಂ. 4 ಬಂಧಾಳಿ. 5 ರಮ್ಯಂ. 6 ನಿರಾಕುಳಂ.

ಸಮೀಪಕ್ಕೆ ॥

ಕಂ॥ ಅಱಿವು ಕೊಲೆ ಕಳವು ಪುಸಿಯುವ ।
ಗಱಿಯಾ ಪಱಿಯೆಂಬ ದೋಷದೊಳ್ಪೊರೆದ ನರಂ ॥
ಕೆಱಿಕೆಱಿಗೆ ನರಕಬಿಲದೊ ।
ಳ್ಗಱಿಗಱನೆಱಿಗುಂ ರಸಾಂತಮಂ ತಾ[1]ಪಿನೆಗಂ ॥ 291

ಅನುಕೃತಿಗೆ ॥

ಕಂ॥ ವಿನುತಕ್ರೌಂಚಾಚಳರಂ ।
ಧ್ವನಿಕಟದಿಂ ಮೊಗಸಿ ಬರ್ಪ್ಪ ಹಂಸಾಳಿಯನಂ ॥
ದನುಕರಿಸಿ ಪರಿದು ಭೋರ್ಭ್ಭೋರ್ ।
ರೆನೆ ಪಾಯ್ದುದು ಹಿ[2]ಮನಗಕ್ಕೆ ಗಂಗಾಸ್ರೋತಂ ॥ 292

ತ್ರಿಪ್ರಯೋಗವುಮಿಲ್ಲಿ ಸಾ[3]ಧುವಕ್ಕುಂ ॥

ಕಂ॥ ಬೆಳಗೆಯ್ಗಳೊಳಿರ್ದ್ದತ್ತುಂ ।
ಕಳರವದಿಂ ಕೆಯ್ಯನೆತ್ತಿ ಹ[4]ಯುಲಲ್ಲೆನುತುಂ ॥
ಬಳಗಳ್ಘುಳ್ಘುಳ್ಘು[5]ಲ್ಲೆನೆ ।
ಗಿಳಿಸೋವಾಕೆಗಳಿನೊಪ್ಪುಗುಂ ಕೆಲವೆಡೆಯೊಳ್ ॥ 293

ಕ್ರಿಯಾಸಮಭಿಹಾರಕ್ಕೆ ॥

ಕಂ॥ ಅಡವಿ ಬಯಲಾಗೆ ನ[6]ದವೊ ।
ಟ್ಟುಡುಗೆ ತೆವರ್ಗಿಸವಾಗೆ ಬಟ್ಟೆಯೊಳೆಲ್ಲಂ ॥
ನಡೆ ನಡೆಯೆಂದೇಂ ನಡೆದುದೊ ।
ಪಡೆ ಪಡೆವಚ್ಚರಿಯನಾಸುರಾಪಗೆವರೆಗಂ ॥ 294

ಆದಿಗ್ರಹಣಕ್ಕೆ ॥

ಕಂ॥ ಅಂ[7]ತೆಂತೆನೆ ಪರಿಚಾರಕಿ ।
ಗಿಂತೆಂದಂ ಬ್ರಹ್ಮಚಾರಿ ಕಳೆಕಳೆ ಸಿತಗಂ ॥
ಗಿಂತು ಕಿಡಿಸುವುದೆ ತಪವನೆ ।
ದೆಂತುಂ ಗಿರಿಸು[8]ತೆಯಾ ಬಯಸಲಾತಂ ದೊರೆಯೇ ॥ 295

ಸೂತ್ರಂ ॥ 65 ॥

ಪಲ್ಲಟಿಸಿ ಡಕಾರದ ನೆಲೆ ॥
ಯಲ್ಲಿ ಱಕಾರಂ ೞಕಾರದೊಳ್ ರೇಫಂ ತಾ ॥
ನೆಲ್ಲಿಯುಮನುಕ್ತಂ ಪದವಿಧಿ ।
ಯಲ್ಲಿ ಪರಂ ವ್ಯಂಜನಾದಿಯಾಗಿರೆ ಬಹುಳಂ ॥ 296

---

1 ತಾಗುವಿನಂ. 2 ಹೇಮನಗಕೆ. 3 [illegible]. 4 ಚಲಲಚಿಸಿ. 5 ಘಿಲ್ಲನೆ. 6 ನಡೆ । ಟ್ಟುಡುಗೆ. 7 ಅಂತೆಗೆಮೆವೆ. 8 ಸುತೆಯ.

ಅದೆಂತೆನ್ನೊಡೆ ॥

ಕಂ ॥ ಕಾಡುಂ ಕೋಡುಂ ನಾಡುಂ ।
ನೀಡುಂ ನಾಮಂಗಳೊಳ್ ಕ್ರಿಯಾರ್ತ್ಥಂಗಳೊಳಂ ॥
ಮಾಡುವುದುಂ ನೋಡುವುದುಂ ।
ಬೇಡುವುದುಂ ಱತ್ವವಿಧಿಗೆ ಪರಿಗಣಿತಂಗಳ್ ॥ 297

ಅನಿತರ್ಕ್ಕಂ ಯಥಾಕ್ರಮದಿಂ ಪ್ರಯೋಗಂ ॥

ಕಂ ॥ ಕಾಱ್ಕಿಚ್ಚು ತಗುಳೆ ತಮ್ಮೊಳ್ ।
ಕೋಱ್ಕಟ್ಟಿ ವನದ್ವಿಪೇಂದ್ರಚಯಮತಿಭಯದಿಂ ॥
ನೀ[1]ಱ್ಕಿರಿಸಿ ನಿಲ್ಲದೆನಸುಂ ।
ನಾ[2]ಱ್ಕಿಡಿವೋಪಂತೆ ಪೋಪುದಿನಗತಟದಿಂ ॥ 298

ವೃ ॥ ಕಾಱ್ಪುರಮಾಗೆ ಕಾವ್ಯರಸಮರ್ತ್ಥಮುಮಕ್ಕರಮುಂ ಪ್ರತೀತಿಯುಂ[3] ।
ಮಾಱ್ಪಿನೆಗಂ ಜಲಕ್ಕನಿರೆ ಪೇ[4]ಱದೆ ಕೆಮ್ಮನೊ[5]ಱಂಟುಮೇಱ್ದು ಚೀಃ ॥
ನೋಱ್ಪದೆ ಮುಯ್ವನಾಕೃತಿಗೆ ಪಂ[6]ಜಿಕೆ ವೇಱ್ಪುದದರ್ಕ್ಕೆ ಟಿಪ್ಪಣಂ ।
ಬೇಱ್ಪುದು ಟೀಕು ವೇಱ್ಪುದೆನೆ ಪೇಱ್ದವನುಂ[7] ಕವಿಯೆಂಬ ಲೆಕ್ಕಮೇ ॥ 299

ಅಲ್ಲಿ ರೇಫಕ್ಕೆ ॥

ಕಂ ॥ ಮಾರ್ಪ್ಪಡಿಯೆ ಮಾಣನೀಭಟ ।
ನೇರ್ಪ್ಪಸವಿ[8]ಗನೀತನಿದಿರ್ಗೆ ಬರಲಾರ್ಪ್ಪವರಾರ್ ॥
ಮಾರ್ಪ್ಪಡೆಯೊಳ್[9]ನ್ನ ಘನದೋ ।
ರ್ದರ್ಪ್ಪಮನಾವರಿಸಿ ನೆಗೞ್ದ ಕ[10]ಲಿ ರಣವಜ್ರಂ ॥ 300

ಬಹುಳಗ್ರಹಣಕ್ಕೆ ॥

ವೃ ॥ ಪೇಱುಱಿರ್ದ್ದಿರ್ಪ್ಪತ್ತು ತೋಳ್ಗಳುಂ ದಶಮುಖಮು[11]ಖರಾಟೋಪಮುಂ ಮಿಱುತ್ತು ರೂಪಂ ।
ತೋಱುಱಿರ್ದ್ದಂತಿ[12]ರ್ದ್ದ ರೂಪುಂ ಹರನಿದಿರೊಳಗುರ್ವ್ವಿಪ್ಪಿನಂ ಪೊಣ್ಮಿದಣ್ಮಂ ॥
ಬೀಱುತ್ತುಂ ದೇವನಂ ಪೂ[13]ಜಿಸಲಮಯುವದಿಂದೊಂದೆರಱ್ಮೂಱುನಾಲ್ಕ ।
ಯ್ದಾಱೇೞೆಂಟೊಂಬತೆಂದಿಂತರಿಗುಮೆ ತಲೆಯೊಂ[14]ಬತ್ತುಮಂ ದೈತ್ಯರಾಜಂ ॥ 301

ಸೂತ್ರಂ ॥ 66 ॥

ಕೆಲಬರುಪಾಂತ್ಯದಕಾರದ ।
ನೆಲೆಯೊಳೞಕಾರಂ ವಯುದ್ವಯಕ್ಕೆ ದ್ವಿತ್ವಂ ॥
ಸಲೆ ಕೂಡೆ ಣಕಾರಂ ಕೇ ।
ವಲಂ ನಕಾರಕ್ಕೆ ಣತ್ವಮಕ್ಕುಮದೆಂಬರ್ ॥ 302

ಪ್ರಯೋಗಂ ॥

ಕಂ ॥ ಆವ್ರೊಂ ಕಾವ್ರೊಂ ಲೋಕಮ ।
ನಾವ್ರೊನಿನಮರರ್ಕ್ಕಳಮರರೆನಿಸಿದರೊಲವಿಂ ॥
ದಾವ್ರೊನುರಸ್ಥಳದೊಳ್ ಲ ।
ಕ್ಷ್ಮೀವಧು ನೆಲಸಿರ್ಪ್ಪಳಾಮುರದ್ವಿಷನೀತಂ ॥ 303

1 ತಿಱ್ಕಿರಿಸಿ. 2 ನಾಱ್ಕಿ. 3 ಯಂ. ಯುಂ. 4 ಪೇಱ್ವುದು. 5 ನೆಗೞು. 6 ಪಂಚಿಕೆ. 7 ನಂಕವಿಯನ್ನ ಲಕ್ಕಮೋ. 8 ವಿಗ. 9 ಳನ್ನಪದವೋ. 10 ಕವಿ. 11 ಕಾಶ. 12 ಕಪ್ಪ. 13 ಪುಜ್ವಿಸ. 14 ಯಂಪತ್ತು.

ವಕಾರದೌತ್ವಕ್ಕೆ ॥

ವೃ ॥ ಕಸವರದಾಸೆಯಿಂ[1] ಪದಪುದೋಪ್ಪ‍ರ್ಚಿವೆಂಡಿರ ನಲ್ಮೆಯೆಂದು ಭಾ ।
ವಿಸದಿರು ನೀಂ ಮನೋನಯನವಲ್ಲಭ ಕೂಗಿಸಿ ಕೂರ್ತು ನಿನ್ನ ಮೆಯ್ ॥
ಕಸವರಮೆನ್ನ ನಿನ್ನು ಸಿರದೌ[2]ದಲೆಗಾಣ್ಬೆನವೆಂದೆ ನಂಬು ಚೀ ।
ಕಸವರಪೇಟವೆಂಬುದೆರೆಕೊಳ್ವರ ಪೇಟಮದೆನ್ನ ಪೇಟವೋ ॥ 304

ಯಕಾರದೈತ್ವಕ್ಕೆ ॥

ವೃ ॥ ಅಸಿತೇಂದೀವರಲೋಲಲೋಚನೆಯನಂದಂತಾಸಭಾಮಧ್ಯದೊಳ್ ।
ಪಸುವಂ ಮೋದುವವೋಲೆ ಮೋದೆಯುವುದಂ ಕಂಡಂತೆ ಪಲ್ಗರ್ಚಿ ಸೈ ॥
ರಿಸಿದೆಂ ನಿನ್ನಯ ನನ್ನಿಗಿನ್ನೆವರೆಗಂ ದುಶ್ಶಾಸನೋರಸ್ಥಲೋ ।
ಚ್ಛ್ರಸಿತಾಸೃಗ್ಜಲಪಾನಮಂ ಬಯಸಿ ಬಾಯ್ ತೇರ್ಸೈಸ ಸೈತಿರ್ಪ್ಪನೇ ॥ 305

ನಕಾರಣ[3]ತ್ವಕ್ಕೆ ॥

ಕಂ ॥ ಕಣ್ಣಾರೆ ನೋಡಿ ಮಾವಿನ ।
ತಣ್ಣೆಳಲೊಳ್ ನಲಿವ ಸಿದ್ಧಚಾರಣಗಣಮಂ ॥
ಪಣ್ಣನೆ ಬಂದೆಳಗಾಯರ ।
ಪಣ್ಣನೆ ಪಱಿಪಱಿದು ತಿಂಬ ಬಲಿಮುಖಕುಲಮಂ ॥ 306

ಸೂತ್ರಂ ॥ 67 ॥

ಪೊಯ್ ಬಯ್ ಮೆತ್ತಾ ರಯ್ ಗೆಯ್ ।
ಸಯ್ಯೆಂದು ವಿಕಲ್ಪದಿಂ ಯಸಂಯೋಗದೊಳಾ ॥
ಶ್ರಯಿಸಿಕ್ಕುರ್ಗಂ ಗುರುಲಘುಗ[4]ತಿ ।
ನಿ[5]ಯಮಮಮದೇದೋದ್ವ್ಯಯಕ್ಕಮಕ್ಕುಂ ಪ್ರಾಯಂ ॥ 307

ಪ್ರಯೋಗಂ ॥

ಕಂ ॥ ನಡೆ ಕೋಲ್ವರಮೆಂದಂಬರ ।
ದೆಡೆಯಂ ಪು[6]ಣ್ಗೊತ್ತು ಕಾಳವಟ್ಟದ ಕೊ[7]ಪ್ಪಂ ॥
ಪಿಡಿದು ನೆಱಲ್ದರ್ಕಸುತಂ ।
ಗಿಡಿಗಂ ಪೊಯೆ ನೊಂದ ಭುಜಗನಿಪ್ಪಂತಿರ್ದಂ ॥ 308

ಮೆಯ್ಯ್ಯ ಮಸಿ ಕೊರಲ ಬ[8]ಕ್ಕಳ್ ।
ಪೊಯ್ಯ್ಯ ಪು[9]ಗಿಲ್ಗರೆವ ಕೆಯ್ಯ್ಯ ಕಂಕರಿಕೆ ಕರಂ ॥
ರಯ್ಯಮೆನೆ ಪಾಡುತಿರ್ದರ್ಗಳ್ ।
ನೊಯ್ಯನೆ ಕಡೆಗಣ್ಣೊಳಡರೆ ಚಪ್ಪರಿಸುತ್ತುಂ ॥ 309

ವೃ ॥ ಪಿಡಿದು ಮೆ[10]ಟ್ಟದೆ ನೋವದೆ ಪೆಂಡಿರಂ ।
ಜ[11]ಡಿಯೆಯುಂ ಬಯೆಯುಂ ಬಲಗರ್ವದಿಂ ॥
ಮಿಡಿಕಲಣ್ಮದೆ ನೋಡಿದ ಸಾಸಿಗಂ ।
ನುಡಿಯದಿಕ್ಕುವೆ ಬೀರಮನಾರೊಳಂ ॥ 310

1 ಜೊಲ್ವ ಪು. 2 ದೌಲೆಕಾಣ್ಬೆನ. 3 ಣಕಾರಕ್ಕೆ. 4 ಕತಿ. 5 ನಿಯತಮದೇ. 6 ಪುಗೆಸ್ವಕ್ಕುರ್. 7 ಕೊಪ್ಪಂ. 8 ಬಕ್ಕಂ. 9 ಕನಲ್ಗರೆವ, ಘೇಲ್ಗರೆವ. 10 ಮೆಟ್ಟದ. 11 ಜಡಿಪುಲುಂ ಬಯಲುಂ.

ಕಂ ॥ ಸುದ್ವ್ಯ ನಿಡುಖು[1]ಡುಗದಿರೆಯುಂ ।
ಮೆ[2]ಯ್ಯುರೆ ಮಲ್ಗಿದೆಯುಮಿಂತು ಸಂದಂದಿನಿಬರ ॥
ಬಯ್ಯಲೆ ಪೊಯ್ಯಲೆ ಕು[3]ರುಳಂ ।
ಕೊಯ್ಯಲೆ ಪೋಯ್ತಿಂತು ವಿನಯವತಿಗಂ ಪತಿಗಂ ॥ 311

ಆರಯೆ ಜಡನಾದೊಡಮಧಿ ।
ಕಾರಿಯ ಮಾಡಿದುದೆ ಪವಣದಂತಿಂತೆನವೇ ॥
ಡೂರೂರೊಳುಱುಗನಾದೊಡ ।
ಮೂ[4]ರಡಿ ಪವಣೆಂಬುದಲ್ತೆ ನಾಣ್ನುಡಿ ಜಗದೊಳ್ ॥ 312

ಆರಯ್ಯೆ ಸರ್ವ್ವಭೂತಾ ।
ಧಾರಂ ಮಱೆಯುಂ ನೃಪೇಂದ್ರನುಂ ಮಱೆಗಾಲಂ ॥
ಬಾರದೊಡಂ ನಿರ್ವ್ವಹಿಸುವ ।
ರಾರುಂ ನೃಪನಿಲ್ಲದಂದು ನಿರ್ವ್ವಹಿಸುವರೇ ॥ 313

ವೃ ॥ ಪೞಿದಂಗೆಮಲಿಮಾಗಡೆ ನಮ್ಮ ।
ಳ್ಳಾಳನೊಳ್ಗುದುರೆಯುಂ ರಥಕ[5]ಟ್ಟ್ಯಾ ॥
ವ್ಯಾಳದಂತಿಕುಲಮುಂ ಸಮಕಟ್ಟಿಂ ।
ಕಾಳೆಗಕ್ಕೆ ತಡೆದಪ್ಪುದಯುಕ್ತಂ ॥ 314

ಕಂ ॥ ನಿಮ್ಮಿಂ ಪಿಂಬಡಿನೊಳದೇ ।
ಸಮ್ಮದಮೆಮಗಂ ಧರಿತ್ರಿಗಂ ರಾಜ್ಯದ ಮೋ ॥
ಹಮ್ಮಱಿದುಮೊಂದದೆಮ್ಮೊಳ್ ।
ಕೆಮ್ಮನೆ ನೀಮಿನಿತುಮಾಗ್ರಹಂಗೆಯ್ಯದಿರಿಂ ॥ 315

ಆಯತಿ ನಿಮಿರ್ವಂತು ಗುಣಾ ।
ವ್ಯಾಯಮನೊಳಕೊಂಡು ಬ[6]ೞೆದ್ದಡದು ಬಾೞೆನಿಕುಂ ॥
ನ್ಯಾಯಮನೊಕ್ಕಳೆ ಪೞಿವಿನ ।
ಮಾಯಂ ಸಯೆ ಬೞ್ದದೊಂದು ಬಾೞಿಂ ಬಾೞೇ ॥ 316

ಕಾಯದೆ ಚಲಮಂ ಪಲರುಂ ।
ಚೀಯೆನೆ ಪತಿ ಸಾಯೆ ಸ[7]ಯ್ಯಲಂಜಿದ ನಾಯುಂ ॥
ನಾಯೆಂಬೆಸಾ[8]ಳ್ದನಂ ಕಾ ।
ದಾಯತಿ ನಿಲೆ ಸತ್ತ ನಾಯನಾಂ ನಾಯೆಂಬೆಂ ॥ 317

ಪಕಾರಕ್ಕೆ ॥

ವೃ ॥ ಕುಡಿದಂಭೋಧಿಗಳೇೞುಮಂ ತವಿಪುದೇ ಗೋತ್ರಾದ್ರಿಸಂಘಾತಮಂ ।
ಪಿಡಿದೇಂ ಕೀೞ್ವುದೆ ದಿಗ್ಗಜೇಂದ್ರಚಯಮಂ ಮಾ[9]ರ್ಪ್ಪಯ್ಯುದೇ ಕಟ್ಟ ನಿ ॥
ಮ್ಮಡಿಗೊಪ್ಪಿಪ್ಪುದೆ ಲೋಕಪಾಲಕರನಾಬ್ರಹ್ಮಾಂಡಮಂ ಚಂಚುವಿಂ ।
ದೊಡೆದೀಡಾಡುವುದೇ ವಿಹಂಗಮಮಿದೆಂದೇಕಬ್ಬ ನೀವೇಳಿಪಿರ ॥ 318

1 ಕಡುಗ. 2 ಮೆಯ್ಯುಡಗತನಾಗಿ ಮಲಗ್ಗಿ. 3 ಕರೆಯುಂ. 4 ಮಾಱ್ಪಿ. 5 ಕ್ಷಿ. 6 ಬಾಲ್ಪುದದು. 7 ಶಾಯು. 8 ನಾಳ್ವನಂ ಕೊಂಡಾ. 9 ಮಾಪ್ಸ್ಪ.

ಒಕಾರಕ್ಕೆ ॥

ವೃ ॥ ತಂದೆಯು ನನ್ನಿಗಿತ್ತನನುಜಂಗೆಳೆಯಂ ರಘುವಂಶನೆಂದು ಜೇ ।
ಯೆಂದಪುದೀಜಗಜ್ಜನವಿದಂ ಸಿ[1]ರಿಗೆಂಬುದೊ ಲೋಭವೆಂಬುದೋ ॥
ಪಂದೆತನಕ್ಕೆ ವೊತ್ತವೊದಲೆಂಬುದೊ ಮತ್ತಿನ[2]ನೆಂಪೊಡೂನನೆಂ ।
ಗುಂ ದೊರವೆತ್ತನೆಂಗುವೊ ಕುಲೋದ್ಗತನೆಂಗುವೊ ತಕ್ಕನೆಂಗುವೋ ॥ 319

ಪ್ರಯೋಗ್ರಹಣಕ್ಕೆ ॥

ಕಂ ॥ ಎಲೆವಳ್ಳಿಯ ತಳ್ಪಿಂದೇ ।
ಬೆಲೆವಾೞೆಯ ಪರಪಿನಿಂದಶೋಕೆಯ ಪೊದಱಿಂ ॥
ಮಲೆವಾಯ್ವ ಲತೆಯ ಪುದುವಿಂ ।
ತೊಲಗದು ಬನದೊಳಗೆ ಬ[3]ಳೆದ ಕತ್ತಲೆ ಪಗಲುಂ ॥ 320

ಒಲೆಯನೋಲೆಯೊಳಕ್ಕಿದ ।
ನಾಲೀಢವನಿಟ್ಟು ಬೇೞೆ ನು[4]ಡಿದಟ್ಟಿದನೇಂ ॥
ಚೋಳನೆ ಕೇರಳಧಾತ್ರೀ ।
ಪಾಲಂ ನುಡಿದಂತೆ ನಾಳೆ ನಿಲ್ಕಾಹವದೊಳ್ ॥ 321

ಇದು ಶಬ್ದಸ್ಮೃತಿಯೊಳ್ ಸಮಾಸಪ್ರಕರಣಂ ॥

ತದ್ಧಿತಪ್ರಕರಣಂ.

ಸೂತ್ರಂ ॥ 68 ॥

ಇವು ಪಣ್ಯಮಿವರ್ಗೆ ಮೇಣಿಂ ।
ತಿವು ಶಿಲ್ಪಂ ಮೇಣ್ ನಿಯೋಗಮಿವನಱಿವಂ ಮೇ ॥
ಣಿವನಾಚರಿಸುವನೆಂದಿಂ ।
ತಿವಱೊಳಗಪ್ರತ್ಯಯಂ ಯಥೋಕ್ತಿಯಿನಕ್ಕುಂ ॥ 322

ಪ್ರಯೋಗಂ ॥

ಕಂ ॥ ಗಂದಿಗನೆರವಣಿಗಂ ಸರ ।
ವಂದಿಗನಾಪಟ್ಟಸಾಲಿಗಂ ಬಾಣಸಿಗಂ ॥
ಮಾಂ[5]ದರಿಗಂ ಜೋಯಿಸಿಗಂ ।
ಸಂದಱಿಕೆಯ ಕಬ್ಬಿಗಂ ಸಮಂಜಸನೊಳನೇ ॥ 323

---

1 ಶರ. 2 ನೆಂಬುದೂನ. 3 ಪೊಳೆವ. 4 ನಡು. 5 ಮುದುರಿಗಂ.

ಸೂತ್ರಂ ॥ 69 ॥

ಇದಱೊಳವಂ ವ್ಯಾಪೃತನೆನೆ ।
ತದಗ್ರದೊಳ್ ಕಾಱಶಬ್ದಮುಕ್ಕುಂ ಕೆಯ್ಕೊಂ ॥
ಇದನೀತಂ ನಡೆಯಿಪನೆನೆ ।
ತೊದಳೇಂ ವಳಮೊಂದು ವಳ್ಳಮೊಂದಿವು ನೆಗಳ್ಗುಂ ॥ 324

ಪ್ರಯೋಗಂ ॥

ಕಂ॥ ನಗೆವಡಿಕಾಱಂ ನೀಱಂ ।
ಬಗೆಕಾಱಂ ಮಾಟಕಾಱನೊ[1]ಳ್ನುಡಿಕಾಱಂ ॥
ಪಗೆಕಾಱನಾಗಿಯುಂ ಕೆ ।
ಯ್ಮೆಗೆ ತಕ್ಕಂ ಕೆಯ್ದುಕಾಱನೆನಿಸಲ್ಕಾಱಂ ॥ 325
ಅಡಪವಳಂ ಪಡೆವಳ್ಳಂ ।
ಮಡಿವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ ॥
[2]ಆಡುವಳನೆಂದಿಂತಿವರಂ ।
ಕಡಂಗಿ ಬಿಡೆ ಜಡಿಯದಿರ್ಕ್ಕೆ ನಱುಮಱುವರಸಂ ॥ 326

ಸೂತ್ರಂ ॥ 70 ॥

ಇದನೀತಂ ಮಾಳ್ಪನೆನಿ ।
ಪ್ಪುದಱೊಳ್ ಗಾಱಪ್ರಯೋಗಮಕ್ಕುಮಪಭ್ರಂ ॥
ಶದೊಳಮದೆ ವರ್ತ್ತಿಕಂ ಮ ।
ತ್ತದರ್ಕ್ಕೆ ಕವರ್ಗ್ಗಾದಿಯಾದೊಡಾದಿಗೆ ಲೋಪಂ ॥ 327

ಪ್ರಯೋಗಂ ॥

ಕಂ॥ ಅಣಿಯರಮೊಸೆದೊಪ್ಪಿರ್ಪ್ಪುವು ।
ಮಣಿಗಾಱರ ಕಂಚಗಾಱರೊಱೆಗಾಱರ ತಿಂ ॥
ತಿಣಿಯೆನಿಪ ಮಾಲೆಗಾಱರ ।
ಗಣನಾತೀತಂಗಳಾಪಣಂಗಳ್ ಪೊೞಲೊಳ್ ॥ 328

ಆದಿವರ್ಣ್ಣಲೋಪಕ್ಕೆ ॥

ಕಂ॥ ಅಱಿದು ನರನೊ[3]ವಜರನ್ನಂ ।
*ಕಾಱಿಗೋರದ. ಱಿ. ನದಱಿನೊಡ್ತಿಸಿದಂ ಕ ॥
ಮ್ಮಾಱನಂಬು ಕಮ್ಮಾಱಂಗೆಂ ।
ದಱಿಯದೆ ನುಡಿವಂತು ನಾಡವರ್ ಗಾವಿಲರೇ ॥ 329

---

1 ನೊಳ್ನಗೆ, 2 ಅಡೆಬಳ, ಅಡಬಳ. 3 ನೋಂವಜನ್ನಂ. * ಕಾಱಿಗೋಱ್ಗಿಱಿಱಿನದಱಿನೊಡ್ಡಿಸಿದಂ—ಎಂದಿರಬಹುದೋ ಏನೋ ತಿಳಿಯದು, ಪದ್ಯದ ಅರ್ಥವು ಸ್ಪಷ್ಟವಾಗಿಲ್ಲ.

ಸೂತ್ರಂ ॥ 71 ॥

ಈಪೇೞ್ದನಿತುಂ ಶಬ್ದಕ ।
ಳಾಪಂ ಸ್ತ್ರೀವಿಷಯಮಾ[1]ದೊಡಿತಿಪರಮಕ್ಕುಂ ॥
ರೂಪಾನ್ಯತ್ವದೊಳಾದಿಗೆ ।
ಲೋಪಂ ತತ್ಪ್ರತ್ಯಯಕ್ಕೆ ಸಂಭವಿಸಿರ್ಕುಂ ॥ 330

ಪ್ರಯೋಗಂ ॥

ಕಂ॥ ಮಡಿಯಂ ಮಡಿವಳ್ತಿಯವೋಲ್ ।
ಬಿಡದಮೃತಾನ್ನಮನೂಜಲ್ವ ಬಾಣಸಿಗಿತಿವೋಲ್ ॥
ಕುಡುತಿ[2]ರ್ದಳ್ ಪೂವಾಲೆಯ ।
ನೆಡೆಯುಡುಗದೆ ಮಾಲೆಗಾರ್ತಿವೋಲ್ ಮತ್ತೊರ್ವಳ್ ॥ 331

ಸೂತ್ರಂ ॥ 72 ॥

ಇಂತಿದು ವಿಭಾಷೆಯಿಂ ಪ ।
ಣ್ಣಾರ್ಗಂತರದೊಳಮಕ್ಕುಮುೞಿವ ಗುಣವಚನಮುಮಾ ॥
ರಾಂತಮು[3]ಳಂತಂ ಸ್ತ್ರೈಣದೊ ।
ಳಂತವಱಿಂ ಪೆಱವು ಪುಂಸ್ತ್ವದೊಳ್ ಸ[4]ಮರೂಪಂ ॥ 332

ಪ್ರಯೋಗಂ ॥

ಕಂ॥ ಬಕ್ಕಲಿತಿ ಜೋಡೆಯಾದಂ ।
ತಕ್ಕುಮ[5]ವಳ್ ಸಿತಗೆ ಪತಿಗೆ ಮಿಗೆ ಕಾಯ್ವಳ್ ನೋ ॥
ಟಕ್ಕೆ ಕಡುಸೋಂಗಿ ಸಾಣಿಲಿ ।
ಬಕ್ಕಂಬಯಲೊಳಮಗಾರುಮಂ ಬಂ[6]ಚಿಸುವಳ್ ॥ 333

ಸೂತ್ರಂ ॥ 73 ॥

ಅಲ್ಲಿಯೆ ಪುಟ್ಟಿದನಿಂತಿವ ।
ನಲ್ಲಿಯೆ ತಾಂ ಬಳೆದನೆಂದು ಪೇೞ್ವರ್ತ್ಥದೊಳಂ ॥
ತೆಲ್ಲಮಿಚಪ್ರತ್ಯಯಮಿಂ ।
ತಲ್ಲಿ ಯಥಾಲಕ್ಷ್ಯಮಾದಿಗಕ್ಕುಂ ಹ್ರಸ್ವಂ ॥ 334

ಪ್ರಯೋಗಂ ॥

ಕಂ॥ ಪೊಟಿಲಿಂದ್ರಪುರಂ ಕಾಲೂರ್ ।
ಪೊಟಿಲಿಂದ್ರರ್ ಪೊಟಿಲ ಮಾನಸರ್ ಕಾಲುರಿಚರ್ ॥
ಪೊಟಿಲಿಪರೆನೆ ಸೊಗಯಿಸುವುದು ।
ಪೊಟಿಲಿಂ ಕಾಲೂರ್ಗಳಿಂದಮಂತಾವಿಷಯಂ ॥ 335

---

1 ಮಾನೊಸುಂದರ. 2 ತಿರ್ದರ್ಗಳ್. 3 ಮರಂಗಂ. 4 ಸ್ತ್ರೀರೂಪಂ. 5 ದವಳ್. 6 ಭಂಜಿ.

ಸೂತ್ರಂ ॥ 74 ॥

ಅಲ್ಲಿ ಇದುಂಪೆಂಬರ್ತ್ಥದೊ ।
ಳೆಲ್ಲಿಯುಮುಳ್ಕೊಡೆಯನಂತಶಬ್ದಮು[1]ವಕ್ಕುಂ ॥
ಎಲ್ಲಂವದೊಳಂ ಪೋಲಿಸು ।
ವಲ್ಲಿ ಗುಣಾಧಿಕ[2]ರೊಳಂತೆ ವ್ರೋ[3]ಲ್ ತಾನಕ್ಕುಂ ॥ 336

ಪ್ರಯೋಗಂ ॥

ಕಂ ॥ ಸಿರಿಯೊಡೆಯಂ ಸಿರಿಯುಳ್ಳಂ ।
ಸ[4]ರೂಪಿ ಗುಣವಂತನಧಿಕದಾನಿ ಮ[5]ಹೇಚ್ಛಂ ॥
ನರರೊಳಿವನೆನಿಸಿ ಬಾಳ್ವುವು ।
ಪುರಾತನೋದಾತ್ತಪುಣ್ಯಪರಿಪಾಕಫಲಂ ॥ 337

ಪರಾರ್ದ್ಧಕ್ಕೆ ॥

ವೃ ॥ ಸುರಪತಿಯಂತೆ ವಿಸ್ಫುರಿತನೇತ್ರಸಹಸ್ರವಿರಾಜಿತಂ ನರೇ ।
ಶ್ವರಭವನಾಗ್ರದಂತೆ ದೃಢವೇತ್ರಲತಾಶತದುಷ್ಪ್ರವೇಶಮುಂ ॥
ಬರತಳದಂತೆ ಋಕ್ಷಮೃಗಲುಬ್ಧಕಸಂಗತಮಂಬುರಾಶಿಯುಂ ।
ತಿರೆ ತತವಿದ್ರುಮದ್ಯುತಿ ನಿರಂತರಮೊಪ್ಪುಗುಮಾವನಾಂತರಂ ॥ 338

ಕಂ ॥ ಕರಿವ್ರೋಲ್ ಭದ್ರಗುಣಂ ಕೇ ।
ಸರಿವ್ರೋಲ್ ನಿರ್ವ್ಯಾಜಶೌರ್ಯ್ಯನಂಭೋನಿಧಿವ್ರೋಲ್ ॥
ಶರಣಾಗತರಕ್ಷಣಪಟು ।
ಗಿರಿವ್ರೋಲ್ ನಿಷ್ಕಂಪಚಿತ್ತನಾನೃಪತುಂ[6]ಗಂ ॥ 339

ಸೂತ್ರಂ ॥ 75 ॥

ಅವಱೊಳ್ ವ್ರೋಲ್ಗಕ್ಕುಂ ಹ್ರ ।
ಸ್ವವಿಧಾನಂ ಪಾಕ್ಷಿಕಂ ಮಕಾರಾಗಮದಿಂ ॥
ವ್ಯವಧಾನಮವರ್ಣ್ಣಕ್ಕ ।
ಕ್ಕವಲ್ಲಿ ಬಶ್ರುತಿ ವಕಾರದೊಳ್ ನೆಲೆಗೊಳ್ಗುಂ ॥ 340

ಪ್ರಯೋಗಂ ॥

ಪೂರ್ವ್ವಾರ್ದ್ಧಕ್ಕೆ ॥

ವೃ ॥ ಶ್ರೀಯ ಜವ್ವನ[ದ] ರೂಪಿನ ಗಾಡಿಯ ಪೆಂಪಿನೊಂ ।
ದಾ[7]ಯು ತಾನೆ ನಡೆತರ್ಪ್ಪವ್ರೋಲೊಪ್ಪಿರೆ ಬಂದಭಿ ॥
ಪ್ರಾಯಸಿದ್ಧಿಯನೆ ಚಿಂತಿಸುತುಂ ಮನದೊಳ್ ಜಯ ।
ಶ್ರೀಯ ದೂದವಿವ್ರೋಲಾಸತಿ ಕಂಡು ಶಿಖಂಡಿಯುಂ ॥ 341

ಅಪರಾರ್ದ್ಧಕ್ಕೆ ॥

ನಿಗಳಂಬೊಲ್ ತೊಡರ್ದ್ದಿರ್ದ್ದ ಮೋಹನಿಗಳಂ ನಿರ್ವ್ಯಾಕುಳಂ ಪಿಂಗೆ ಮ ।
ತ್ತಗಜೇಂದ್ರಂಬೊಲಲರ್ಗ್ಗಳಂ ಪ[8]ನಮಾನಂದಾನಂದದಿಂ ಪೊಕ್ಕನಾ ॥
ವಗಮಾದಳ್ಕುಱುಕ್ಕೆಯಿಂ ಮಕುಟಬದ್ಧರ ನೂರ್ವ್ವರಂತಲ್ಲಿ ದೀ ।
ಕ್ಷೆಗೊಳಲ್ ತನ್ನೊಡನ್ರೋಗೆ ನಿಶ್ಚಿತಮನಂ ಶ್ರೀಚಂದ್ರಭೂವಲ್ಲಭಂ ॥ 342

---

1 ಮುಮಾಳ್ಕುಂ. 2 ಶದೂ. 3 ಪೋಲೆನಲಕ್ಕುಂ. 4 ಸುರೂಪಿ. 5 ಮಹಾಂಶಂ. 6 ಷಕ್ರಂ. 7 ದಾಯ. 8 ಪರಮ.

ಸೂತ್ರಂ ॥ 76 ॥

ತನಮಿಕೆಯುಮೆಂಬಿವ್ರುಂ ಚೇ ।
ತನಭಾವದೊಳಕ್ಕುಮುೞಿದ ಭಾವಾರ್ತ್ಥದೊಳಂ ॥
ತನಿತಱೊಳಂ ಪ್ರು ಕೆಯೆಂಬಿವ್ರು ।
ಜನಿಯಿಕುಮಂತಲ್ಲಿ ಕದ್ವಿರುಕ್ತಿ ವಿಕಲ್ಪಂ ॥ 343

ಪ್ರಯೋಗಂ ॥

ಕಂ ॥ ಕಡುಗಲಿತನಮುಂ ಚಾಗದ ।
ಪೊಡಪ್ಪುರ್ವೊ[1]ಳ್ನುಡಿಯೊಳಾದ ಮಾನಸಿಕೆಯುಮು ॥
ಕ್ಕಡುಗದ ಶೌಚಮುಮಾಯದ ।
ಪಡೆವಾತುಂ ಪೆರ್ಮ್ಮೆವ[2]ಡೆದುವವನಿಂದಿಳೆಯೊಳ್ ॥ 344

ಪರಾರ್ದ್ಧಕ್ಕೆ ॥

ಕಂ ॥ ವಾ[3]ರಧಿಯದೊಂದು ಗುಣ್ಪುಂ ।
ಧಾರಿಣಿಯ ಪೊಗೞ್ತೆವೆತ್ತ ಪೆಂಪಿನ ತಿಣ್ಪುಂ ॥
ಮೇರುವಿನ ಬಿಣ್ಪುಮಾನೃಪ ।
ಧೀರನೊಳೊಂದಾಗಿ ನಿಂದುವೆನ್ನದರೊಳರೇ ॥ 345

ನಮಿತಾರಿಗೆ ದಮಿತಾರಿಗೆ ।
ಸಮಸ್ತಧಾತ್ರೀವಿಭಾಗದೊಳ್ ಭಾವಿಸೆ ವಿ ॥
ಕ್ರಮದ ನಿಮಿರ್ಕ್ಕೆಗಮಾಯತಿ ।
ಯುಮರ್ಕ್ಕೆಗಂ ಪೇ[4]ೞ ಪೋಲ್ಕೆಗಾವಂ ಬರ್ಪ್ಪಂ ॥ 346

ಕಕಾರದ್ವಿತ್ವಕ್ಕೆ ॥

ಕಂ ॥ ಬೇಸಱದಾಸಱದೆ ಪನಾ ।
ವಾಸಂಗಳೊಳುನ್ನತಿಕ್ಕೆ ನಿ[5]ಲೆ ನಮೆದವರೊಳ್ ॥
ನೇ[6]ಸನ್ನಿಕೆಯಿಂ ಕುರುಪತಿ ।
ಬೀಸರಮಂ ನುಡಿಯದೊಳ್ಳಿತಂ ನುಡಿದಪನೇ ॥ 347

ಸೂತ್ರಂ ॥ 77 ॥

ಒನ್ದೆರಡು ಮೂಱು ನಾಲ್ಕ ।
ಯ್ದೆನ್ದಿನಿತರ್ಕ್ಕಂ ಬಹುತ್ವವಾಚಿಗಳ[7]ಮರ್ದಂ ॥
ತೊನ್ದಿ ನೆಗೞ್ಗುಂ ವಿಕಲ್ಪಂ ।
ಸನ್ದಿಸಿ ನೆಲಸಿರೆ ಮೊಯೆಂಬುದಕ್ಕುಂ ಸೂೞೊಳ್ ॥ 348

---

1 ಪೊನ್ನುಗೆ. 2 ಪಡೆಗುಮುಪಮಂ. 3 ವಾರಿಧಿಯದೊಂದು. 4 ಪೇೞಲ್ಪೊಗರ್ಕ್ಕೆ. 5 ಗಿಡೆ. 6 ನೇಸನ್ನಿಕೆ.
7 ಳಮರ್ದೆಕ್ಕುಂದಿ.

ಪ್ರಯೋಗಂ ॥

ವೃ ॥ ಶಯುದಂಷ್ಟ್ರಾವಿಷದಂಶವೊಂದೆ ಜತುಗೇಹೋದ್ದೀಪನಂ ತಾನದೊಂ ।
ದೆ ಯಥೇಷ್ಟ[1]ಪ್ರಕೃತಂ ದುರೋದರಜಯಂ ಮತ್ತೊಂದೆ ಕಷ್ಟಪ್ರತಿ ॥
ಕ್ರಿಯೆ[2]ಯಪ್ಪವಿಷದೂಷಿತಾಶನವುದಂತೇನೊಂದೆ ಪೇೞ್ವಾಗಳೊ ।
ವ್ಮ್ರೆಯೊ ಮೇ[3]ಣಿವ್ಮ್ರೆಯೆ ಮೂವ್ಮ್ರೆಯೋಕುರುಕುಳಪ್ರಾರಬ್ಧದುರ್ವೃತ್ತಕಂ ॥ 349

ಕಂ ॥ ನೂರ್ವ್ಮ್ರೆ ಪಸು ಕಱೆವುದಂ ತಾ ।
ನೊರ್ವ್ಮ್ರೆಯೆ ಕಱೆವೆರ್ವ್ಮ್ರೆಯಲ್ಲದಱಿಯೆರ್ವ್ಮ್ರೆಗಳೀ ॥
ಯೆರ್ವ್ಮ್ರೆಗಳೊಳಗಿಲ್ಲೆನಿಸಿ ।
ರ್ದ್ವೆರ್ವ್ಮ್ರೆಯ ಪಿಂಡುಗಳೆನೊಪ್ಪುಗುಂ ಕೆಲವೆಡೆಯೊಳ್ ॥ 350

ವಿಕಲ್ಪಕ್ಕೆ ॥

ವೃ ॥ ತನಗಿಂಬಪ್ಪುದನಾಯ್ದು ನೋಡಿ ಪಲವುಂ ಬಿಲ್ವಿಲ್ಲಗಳೊಳ್ ಬಿಲ್ಲನೊಂ ।
ದನೆ ಕೊಂಡೇಱಿಸಿ ನೀವಿ ಜೇವೊಡೆದಡುತ್ತೊರ್ಂದಂಬಿನಿಂದೊಂದು[4] ಸೂ ॥
ೞ್ವನೆಯುಂ ಪಾವಿನ ಪನ್ನೊಳಾದುವನತಿಪ್ರಾರಂಭದಿಂದೇಱುವಂ[5]।
ಜನಕಾಧೀಶತನೂಜೆಯಾಣ್ಮನಿಸುವಂತೆಚ್ಚಂ ಮಹೇಂದ್ರಾಂ[6]ತಕಂ ॥ 351

ಸೂತ್ರಂ ॥ 78 ॥

ಆಳಿಪ್ರತ್ಯಯಮಕ್ಕುಂ ।
ಶೀಳಾದ್ಯರ್ತ್ಥಂಗಳಂ ವಿವಕ್ಷಿಸೆ ಪೆಱತೊಂ ॥
ದಾಳಾಪಮಂತದೇನೊ ಯ ।
ಥಾಳೋಕನಿರೂಪಿತೋಕ್ತಿಗಳ್ಗನುಸಾರಂ ॥ 352

ಪ್ರಯೋಗಂ ॥

ಕಂ ॥ ಮಾಱಾಳಿಯುಮೋದಾಳಿಯು ।
ಮೇಱಾಳಿಯುಮಪ್ಪನಾಗಿ ಪೆ[7]ಡೆವಾಳಿಯೆ ಕೇಳ್ ॥
ನೀಱಂ ಜೂದಾಳಿ ಕರಂ ।
ನೀಱಂ ಮಾತಾಳಿ ಕರೆಯೆ ಸಿಗ್ಗಾಳಿಯೆ[7]ವಳ್ ॥ 353

ಸೂತ್ರಂ ॥ 79 ॥

ಅದುವಿದುವುದುವೆಂಬಿಂತೀ[8] ।
ವಿದಿತಾರ್ತ್ಥದ ಸರ್ವ್ವನಾಮಶಬ್ದಕ್ಕಕ್ಕುಂ ॥
ತದುಪಾಧಿವಿಹಿತಪ[9]ರಿಮಾ ।
ಣದೊಳನಿತಿನಿತೆನಿತೆನಿಪ್ಪ ರೂಪನಿಪಾತಂ ॥ 354

---

1 ಸ್ವಂಪ್ರಕೃತಂ. 2 ಯಮವ್ಪ. 3 ಪೇಱೆ. 4 ರಸೂ । ಱನೆಯುಂ. 5 ಏಱ್ಕಳಂ. 6 ಱಡಪಾಳ. 7 ಯೆವಂ. 8 ತಿವು. 9 ಪರಿಗಾವು.

ಪ್ರಯೋಗಂ ‖

ವೃ ‖ ಅನಿತೊಂದಣ್ಮನಿತೊಂದು ದರ್ಪ್ಪವನಿತೊಂದೌದ್ಧತ್ಯಮುಂ ಮುನ್ನಮಾ ।
ದನೊಳಿನ್ನಪ್ಪನೊಳುಂಟೆ ದಾನವರೊಳೆಂಬುದ್ವೃತ್ತನಂ ನಾರಸಿಂ ‖
ಹನ ರೂಪಿಂ ನಖದೊಳ್ ವಿದಾರಿಸಿ ಕುಸುಂಭಾರಕ್ತಮಂ ಪಟ್ಟಗಾ ।
ಣನೆ ಪಾಸಂ ತ[1]ವೆ ತೋಡುವಂತೆ ಕರುಳಂ ನೀಂ ತೋಡಿದೈ ದೈತ್ಯನಾ ‖ 355

ಕಂ ‖ ಅನಿತಱಲುಮಿನಿತು ಮಱುಕಮು ।
ಮಿನಿತು ಮನಃಕ್ಷತಮುಮಾವನಿಂದಾದುದವಂ ‖
ಗನಿತಱಲನಿನಿತು ಮಱುಕಮ ।
ನಿನಿತು ಮನಃಕ್ಷತಮನ[2]ಬ್ಬ ಮಾಡದೆ ಮಾಣೆಂ ‖ 356

ಜನನೀಜನಕಸಹೋದರ ।
ವನಿತಾಸುತಪಾತ್ರಮಿತ್ರಸಂಬಂಧಮದಂ ‖
ತೆನಿತೆನಿತು ಭವದೊಳಾಯ್ತ ।
ಲ್ಲೆನಿತೆನಿತಂ ನೆನೆವುದೆನಿತನವಧರಿಸುವುದೋ ‖ 357

ಇವಕ್ಕೆ ದ್ವಿತ್ವಪ್ರಯೋಗಮುಂ ಸೂತ್ರನಿರ್ದ್ದೇಶದೊಳ್ ಜ್ಞಾಪಕಸ್ಥಿ[3]ತಮಕ್ಕುಂ ‖

ವೃ ‖ ಕಾಯಲುಂ ಬಲಗರ್ವ್ವದಿಂ ನೆಲನೆಲ್ಲಮಂ ನೆಲಕೆಲ್ಲಮಾ ।
ತ್ತೀಯಲುಂ ತನಗಾಜಚತುರ್ಭ್ಬುಜಮುಂ ಭುಜದ್ವಯಮಾದನಿ ‖
ತ್ತಾದುದಾಯತಿ ತೋಳೆಳೊಪ್ಪಿರೆ ಮಿಕ್ಕ ಪೆಂಪಿನ ಕೀರ್ತ್ತಿನಾ ।
ರಾಯಣಂ ದಯೆಗೆಯ್ಗೆ ಚಾ[4]ಗಚತುರ್ಭ್ಬುಜಂ ಗರುಡಧ್ವಜಂ ‖ 358

ಎನಿತ್ತನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ‖
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತ ಬಿಲ್ಲಾನದನನ್ತ ಕೀಸುಗುಂ[5] ‖ 359

ಸೂತ್ರಂ ‖ 80 ‖

ಮತ್ತಮವಕ್ಕರ್ಕ್ಕುಂ ಸಮು ।
ಪಾತ್ತನಕಾರಂ ಪ್ರಕಾರಕಾಲಾರ್ತ್ಥಂ ಮೆ ‖
ಯ್ವೆತ್ತಿರೆ ತುದುವೆಂಬಿವು ವಿ[6] ।
ದ್ಯೋತ್ತಮರೀತ್ರೆಱದಿನಱಿಗೆ ಪೆಱವುಮನಿ[7]ದಱೊಳ್ ‖ 360

ಪ್ರಯೋಗಂ ‖

ಪ್ರಕಾರಾರ್ತ್ಥಕ್ಕೆ ‖

ವೃ ‖ ಅಂತು ಕಾಡುಗುಮೆ ಲೋಕಮನಿಂದ್ರಂ ।
ಗಂತು ಮಾಡುಗುಮೆ ಬನ್ನಮನೋವ್ರೋ ‖
ಅಂತು ಸೂಡುಗುಮೆ ಕೇಸುರಿಯಂ ಪೇ ।
ಱಂತು ಕೂಡುಗುಮೆ ಬೀ[8]ರಮದಾಗ್ರಂ ‖ 361

1 ಕನೆ, ಕಸ. 2 ನಬ. 3 ಪಿಥ. 4 ಭಾಗ. 5 ವಂ. 6 ಪ । ವೃತ್ರಮ. 7 ದಜ್ಞರೊಳ್. 8 ದಾಕಸಮಾ.

ಕಂ ॥ ಇಂತಿಂತೆ ಪಲಬರುಂ ತ ।
ತ್ಸಂತತಿಯೊಳ್ ಕಱಿದು ಪೋಗೆ ಜನಿಯಿಸಿದಂ ದು ॥
ಷ್ಯಂತಂ ದುಷ್ಯಂತಂಗವು ।
ನಂತಗುಣಂ ಭರತರಾಜನಾ[1]ದಂ ತನಯುಂ ॥ 362

ಎಂತೆಡಱದಯೆಂತುತ್ಕೃದ ।
ಯೆಂತೊವವಿದಯೆಂತುಮುಗುಳ್ತಿಯೆಂತೊದಱದವಾ ॥
ಯೆತ್ತಂತೆನಗಿದಿಚ್ಕೃದಯೆ ಮುಗು ।
[2]ಟ್ಟಿಂ ತೊಡರದಿರೆನೆ ಸಿತಾಶ್ವನೆಂದಂ ಕರ್ಣಂ ॥ 363

ಕಾಲಾರ್ತ್ಥಕ್ಕೆ ॥

ವೃ ॥ ಮುನಿಸಿಂ ಮೇಲೆತ್ತಿ ಬರ್ಪ್ಪಂದಿನ ವಿಪುಳಶಿಲಾಸ್ತಂಭಮುಂ ಕೀಱ ಕೀಱ್ವಂ ।
ದಿನ ಬೆಂಕೊಂಡಟ್ಟಿ ಕೊಲ್ವಂದಿನ ತಿರಿಪಿ ಕಪಿತ್ಥಾವನೀಜಾತದಿಂದಂ ॥
ಬನದೊಳ್ ಮೆಯ್ವೆರ್ಚ್ಚಿ ಪೊಯ್ವಂದಿನ ನಿಜಭುಜವಿಕ್ರಾಂತಮೇನಾದುದಿಂತೀ ।
ಜನಮೆಲ್ಲಂ ನೋಡೆ ಚಾವಟ್ಟದ ಬಿಸುವುಡಿಯೊಳ್ ಬಿಱ್ದು ಸ್ಥಾವಂತುಟಾಯ್ತೇ ॥ 364

ಇಂದು ಪಿಂಗಿದುವೆಮ್ಮ [3]ಪೀಡೆಗಳಿಂದು ಸಾರ್ದ್ದುವು ಸಮ್ಪು ತಾ ।
ವಿಂದವೋಘಫಲಂಗಳಾದುವು ಯಜ್ಞದಾನಸಮಾಧಿಗಳ್ ॥
ಇಂದು ನಂಬಿದೆವಾಮುಮೆಮ್ಮ ನೆಗೞ್ತೆಯೊಳ್ಪನದಲ್ಲದೆ ।
ಮ್ತಿಂದುವಂಶಮುಮಿಂದು ನಿಮ್ಮಗಳಮಾದುದಿದ-ಧರೇಶನಮ ॥ 365

ಕಂ ॥ ಎಂದಮರರನರೆಯುಟ್ಟುವೆ ।
ನೆಂದಮರಾವತಿಯನೀಱ್ದುಕೊಳ್ವಂ ಶಕ್ರಂ ॥
ಗೆಂದಭಿಭವಮಂ ಮಾಡುವೆ ।
ನೆಂ[4]ದಲ್ಲಿ ಪಲುಂಬಿ ಚಿಂತಿಸುಂ ದನುತನಯುಂ ॥ 366

ಅಲ್ಲಿ ವೆಱವು ಗ್ರಹಣಕ್ಕೆ ॥

ವೃ ॥ ವಿರಹದೊಳಾದ ವೇದನೆಯುನಾಱಸಲಾಮರನೊಳ್ಪತೆಂದು ಮಾ ।
ಮರದ ನೆೞಲ್ಗೆ ಪೋಪೆ ಗಡ ಕಾಮನ ಡಾಮರಮಲ್ಲಿ ಕೋಕಿಲೋ ॥
ತ್ಕರರ[5]ವಮಲ್ಲಿ ಚಾವಳಿಪ ರಾಜಶುಕವ್ರಜಮಲ್ಲಿ ಕಾಯ್ದು ಪ ।
ಲ್ಮೊರೆವ[6]ಮದಾಳಿಯಲ್ಲಿ ಸಖಿ ಸಾರದಿರಾಮರನಂ ವಸಂತದೊಳ್ ॥ 367

ಸೂತ್ರಂ ॥ 81 ॥

ಗಣನಾವಿಶೇಷಪರಿಪೂ ।
ರಣದೊಳಮನಿತಿನಿತೆನಿತ್ತು ಶಬ್ದಂಗಳ ಪೂ ॥
ರಣದೊಳಮನೆಯುಪ್ರತ್ಯಯು ।
ವೋಣರ್ದು ಸಮಂತೊಂದಿ ತೋಱುಗುಂ ತದ್ಧಿತದೊಳ್ ॥ 368

1 ನಂ ಬಂ. 2 ಟ್ಟಂ. 3 ಸೇದ. 4 ನೆಂದೆಂದು. 5 ರುಲಿಪಲ್ಲಿ. 6 ವಳನಾಳ.

ಪ್ರಯೋಗಂ ॥

ಕಂ॥ ಜಿನಮದನರೊಳಗೆ ಪದಿನಾ ।
ಱನೆಯಂ ತತ್ಸಕಲಚಕ್ರವರ್ತ್ತಿಗಳೊಳಗ ॥
ಯ್ದನೆಯನೆನೆ ಪುಣ್ಯಪುಂಜಾ ।
ಜ್ರ್ಜನಕ್ಕೆ ಶಾಂತೀ[1]ಶನಂತು ನೋಂತರು[2]ಮೊಳರೇ ॥ 369

ಇನಿತನೆಯ ಭವದೊಳಿಂತಾ ।
ಯ್ತನಿತನೆಯ ಭವಾಂತರಂಗಳೊಳ್ ಮತ್ತಂ ಮೇ ॥
[3]ಲನಿತು ಸುಖದುಃಖಫಲಮುಂ ।
ಜನಿಯಿಕುಮೆಂಡಱಿವುದಱಿದು ಸಂಸೃತಿಗತಿಯೊಳ್ ॥ 370

ಸೂತ್ರಂ ॥ 82 ॥

ಇರೆ ತದ್ಧಿತಪ್ರಯೋಗಂ ।
ಪರದೊಳ್ ಚರಮಸ್ವರಕ್ಕೆ ಲೋಪಮಪಕ್ಕುಂ ॥
ನಿಱವಿಸಿ ಮುನ್ನೆ ಸಮಾಸಂ ।
ತರದೊಳ್ ಪೇೞ್ದೊಂದು ಕಾರ್ಯ್ಯಮುಂ ಬಂದಿಕ್ಕುಂ ॥ 371

ಪ್ರಯೋಗಂ ॥

ವೃ॥ ತೊಟ್ಟು ತೀವಿ ಬಳೆಯಂ ನಿಡುದೋಳ್ಗಳೊಳೊಂದುಃ,
ತುಟ್ಟು ಪೆಣ್ಣುಡೆಯನಾ[4]ಡಿಸಿ ಬಾಹ್ಯಃಖಂಡಿ ಮುಂ ॥
ನೆಟ್ಟನರ್ಜ್ಜನನ ಸಾರಥಿಯೆಂಬುದನೇಗಳೀ ।
ಘಟ್ಟವಳ್ತಿ ನುಡಿದಳ್ ತಿಳಿವಂತೆಮಗೆಲ್ಲಮಂ ॥ 372

ಬರ್ಮ್ಮ ಪೋಗಿ ಮೃಗಯಾನಿಮಿತ್ತದಿಂ ।
ಧರ್ಮ್ಮಮಂ ಮಱೆದು ನೋ[5]ಡ ಬೇಡಿದೊಂ ॥
ಪೆರ್ಮ್ಮಗೆಟ್ಟು ಜಮದಗ್ನಿಯಂ ನೃಪಂ ।
ದುರ್ಮ್ಮದಂ ಸುರಭಿಯಂ ವಿಮೋಹದಿಂ ॥ 373

ಇದು ಶಬ್ದಸ್ಮೃತಿಯೊಳ್ ತದ್ಧಿತಪ್ರಕರಣಂ ॥

---

1 ಶಾಂತಿ. 2 ವರೊಳರೇ. 3 ನಿತು. 4 ನಾಡಿಸಿ. 5 ನೋಡ.

ಆಖ್ಯಾತಪ್ರಕರಣಂ.

ಸೂತ್ರಂ ॥ 83 ॥

ಭೂತವತಿ ವರ್ತ್ತಮಾನಂ ।
ಖ್ಯಾತಭವಿಷ್ಯಂತಿ ಸರ್ವ್ವಸಾಧನಿಯೆಂ[1]ಬಾ ॥
ಖ್ಯಾತವಿಭಕ್ತಿಗಳಕ್ಕುಮು ।
ತೀತಭವದ್ಭಾವಿಕಾಲವಿಧ್ಯಾದಿಗಳೊಳ್ ॥ 374

ಪ್ರಯೋಗಂ ॥

ಭೂತವತಿಗೆ ॥

ವೃ ॥ ತ್ರಿಭುವನರಾಜ್ಯಪಟ್ಟದೊಡವುಟ್ಟಿದನಾವಿಭು ಪುಟ್ಟಿದ[2]ನ್ನೆ ತಾಂ ।
ರಭಸದೆ ಸಿಂಹವಿಷ್ಟರಮನೇಱಿದನೆತ್ತಿದೆ ತಾವೆ ಮುಂದೆ ಬಂ ॥
ದಭಿಮತಮಪ್ಪ ಬೆಳ್ಗೊಡೆಗಳುಂ ನೆಗೆದೊಪ್ಪಿದುವಿಂತೆ ದಲ್ ಜಗ ।
ತ್ಪ್ರಭುತೆ ಜಗತ್ತ್ರಯಂಗಳೊಳಗಗ್ಗಳಮಾದುದು ದೈತ್ಯರಾಜನಾ ॥ 375

ವರ್ತ್ತಮಾನಕ್ಕೆ ॥

ವೃ ॥ ಎಸಗಿದುದೀಗಳೀಗಳೆನಿಸೊಯ್ಯನೆ ತೆಂಕಣ ಗಾಳಿ ಕೋರಕ ।
ಪ್ರಸರದಿ[3]ನೀಗಳೀಗಳೆಸೆದ[4]ಪ್ಪುದು ಚೂತಮಹೀಜಮೆಯ್ದೆ ರಾ ॥
ಗಿಸಿ ದೆಸೆಗೀಗಳೀಗಳುಲಿದಪ್ಪುದು ಕೋಗಿಲೆ ಕಂತು ಬಿಲ್ಲನೇ ।
ಱಿಸಿದಪನೀಗಳೀಗಳೆಲೆ ಸುಗ್ಗಿಯದೊಂದು ಪೊಡರ್ಪ್ಪದಾಗದೇ ॥ 376

ಭವಿಷ್ಯಂತಿಗೆ ॥

ವೃ ॥ ಕಡುಕೆಯ್ದಾಂತನ್ಯಸೈನ್ಯಂಗಳನಳಱೆ ಭರಂಗೆಯ್ದು ನಿಮ್ಮೊಂದೆ ಮೆಯ್ಯೊಳ್ ।
ಕಿಡಿಸಲ್ ಸಾ[5]ಲ್ವರ್ ಸಮಾಸಾದಿತರಣರಸಿಕರ್ ನಿಮ್ಮ ಮುಂದಾದಮಣ್ಮಂ ॥
ನುಡಿವಾಗಳ್ ನಾ[6]ಡೆ ಲಜ್ಜಾಕರಮದಱಿವದಂತಿರ್ಕ್ಕೆ ಜೀಯೆಂಬಿನಂ ಮಾ ।
ರ್ಪಡೆಗೆನ್ನೀಬಾಳಕೇಳೀವಿಳಸ[7]ನಮನದಂ ಯುದ್ಧದೊಳ್ ನಾಳೆ ತೋರ್ಪ್ಪೆಂ ॥ 377

ವಿಧ್ಯಾದಿಗೆ ॥

ಕಂ॥ ಮ[8]ರ್ಚ್ಚದಿರು ಬಸನಮಂ ಗಿೞ ।
ಗರ್ಚ್ಚದಿರು ಖಳಸ್ವಭಾವಮಂ[9] ಮನೆಯತ್ತಲ್ ॥
ಸೋರ್ಚ್ಚ ಹಿತರಪ್ಪರಂ ಸಲೆ ।
ಪೆರ್ಚ್ಚಿಸು ತಳವರ್ಗ್ಗಮಂ ಮನಂಗೊಳೆ ಮಗನೇ ॥ 378

1 ಯೆಂಬಾ. 2 ದನ್ನಿರಾ 3 ದೊಳೀ. 4 ವಿದ್ರ್ಯಮು. 5 ಸಾರ್ಪ್ವರ್. 6 ನೋಡೆ. 7 ಸಿತಮು. 8 ಮುಚ್ಚದಿರು. 9 ದೊಳಮು.

ಸೂತ್ರಂ ॥ 84 ॥

ಕವದಿನಮುರಯಿರೆನೆವೆನಿ ।
ಪ್ಪುವು ವರ್ತ್ತಿಕುಮನ್ಯಯುಷ್ಮದಸ್ಮದ್ವಿಷಯು ॥
ವ್ಯವಹೃತಿಗಳ್ಗೇಕಾನೇ ।
ಕವಚನದಿಂ ಪ್ರತಿವಿಭಕ್ತಿಪುರುಷಾಖ್ಯಂಗಳ್ ॥ 379

ಪ್ರಯೋಗಂ ॥

ಪ್ರಥಮಪುರುಷಕ್ಕೆ ॥

ಕಂ॥ ತೊಟ್ಟಂ ಸಂಮೋಹನಮಂ ।
ತೊ[1]ಟ್ಟನೆ ಭುಜವಿಜಯಶಾಲಿ ಫಲ್ಗುಣನಾಗಳ್ ॥
ಪುಟ್ಟಿದ ನಿದ್ರಾಭ[2]ರದಿಂ ।
ದೊಟ್ಟೈಸಿ ವಿರೋಧಿಭೂಭುಜರ್ ಮೊಯ್ಮರೆದರ್ ॥ 380

ಮಧ್ಯಮಪುರುಷಕ್ಕೆ ॥

ಕಂ॥ ನುಡಿದಯ್ ಪೊಚ್ಚಜವಾತಂ ।
ಬಿಡದೆನ್ನೊಳ್ ಜಬುಸುತಿಪುರ್ವದಾವುದು ಗಂಡು ॥
ಳ್ಳೊಡೆ ಮೊನೆಗಿದಿರ್ಚಿ ಬರವೇಳಿ' ।
ತೊಡದರ್[3]ಗಳ್ ಕಾಣ್ಬರೆಮ್ಮ ನಿಮ್ಮೊಂದಳವಂ ॥ 381

ಉತ್ತಮಪುರುಷಕ್ಕೆ ॥

ಕಂ॥ ಅಸುರಹರಂ ತೇರಂ ಸ ।
ಯ್ತಸಗುವನಾಂ ಕೀಱಿ ನಿಂದು ಬಿಲ್ಗೊಳ್ವನೆಸಲ್ ॥
ವಿಸಸನಮದಾವುದರಿದ ।
ಕ್ಕರ್ಗಸೂನುವಂ ಕೊಂದೆವೆಂದು ನಿಶ್ಚಿಂತಮಿರಿಂ ॥ 382

ಸೂತ್ರಂ ॥ 85 ॥

ಮಿಗದಾಸ್ವಾರ್ತ್ಥದೊಳಂತವು ।
ನೆಗೞ್ಗಂ ತಂತಮ್ಮ ಸಾಧನಂಗಳೊಳನಿತುಂ ॥
ಯುಗಪತ್ಪ್ರಯೋಗವಾವಂ ।
ದು ಗಣನೆಯೊಳ್ ಮುಂದೆ ನಿಂದುದಾವುದದಕ್ಕುಂ ॥ 383

ಪ್ರಯೋಗಂ ॥

ಸ್ವಾರ್ತ್ಥಕ್ಕೆ ॥

ವೃ ॥ ಎಂದಿಂತಾತನನಂದು ನಂಬಿಸಿಕೊಡಾಮುತ್ಸ್ಯತ್ಮಜಂ ನಂಬಿ ಸಾ ।
ನಂದಂ ಬಂದು ಸುರೇಂದ್ರಸೂನುಗೆ ಮಱಲ್ಗೆಯ್ದಂವನಾನಿನ್ನೆಗಂ ॥
ಬ[4]ಂತ ಕೆ ನೀಂ ದಯೆಯಿಂದವಮಾನಜಱಿದೆನಿಲ್ಲೀಗಳ್ ಮನಂದಂವೆನಿ ।
ನ್ನೊಂದುಂ ಸಂದೆಯಮಿಲ್ಲ ತೇರನೆಸಪೆಂ ನೀಂ ಕಾದಿ ಗೆಲ್ ಫಲ್ಗುನಾ ॥ 384

---

1 ಸೆಟ್ಟನೆ. 2 ಭರಮಿರದೊಟ್ಟೈಸಿ. 3 ವಾಗಗಡೆ. 4 ಬಂಧನೊಳಂತವುಯಿಂನೀಂದಯೆಯಿಂದವಮಾ.

ಯುಗಪತ್ಪ್ರಯೋಗಕ್ಕೆ ॥

ಕಂ ॥ ಆವುಂ ದ್ರೋಣರುಮಶ್ವ ।
ತ್ಥಾಮನುಮಂಗಾಧಿರಾಜನುಂ ಕೃಪನುಂ ಸಂ ॥
ಗ್ರಾಮದೊಳಾಂಪೆವರಾತಿಯ ।
ನೇಮಾತಡಿಯೆತ್ತು ತಡೆಯದಿರ್ ಭುವನಪತೀ ॥ 385

ಸೂತ್ರಂ ॥ 86 ॥

ದದಪವಕಾರಂಗಳ್ ಮೂ ।
ಲದೊಳಕ್ಕುಂ ಭೂತವರ್ತಮಾನಭವಿಷ್ಯ ॥
ದ್ವಿದಿತವಿಭಕ್ತಿತ್ರಿತಯ ।
ಕ್ಕದೆಲ್ಲವಚನಂಗಳೊಳವಿ[1]ದಾಗಮಮಕ್ಕುಂ ॥ 386

ಪ್ರಯೋಗಂ ॥

ಭೂತವತಿಗೆ ॥

ವೃ ॥ ಆಡಿದನಿಂದ್ರನಿಂದ್ರಗಣಿಕಾಗ[2]ಣಮಟ್ಟಜೆಯೊಳೊಲ್ದು ಮಂಗಳಂ ।
ಬಾಡಿಮದಬ್ಜಜಂ ಪರಸಿ ಸೇಸೆಯನಿಕ್ಕಿದನದ್ರಿ ತಾನೆ ಮುಂ ॥
ಪಾಡಿ ವಿಭೂತಿಯಿಂದೊಸಗೆಮಾಡಿದನಂಗಜನಂಗಲಕ್ಷ್ಮಿಯೊಳ್ ।
ಕೂಡಿದನೆಂದೊಡೇವೊಗೞ್ವುದೋ ಭವಶೈಲಭವಾವಿವಾಹಮಂ ॥ 387

ವರ್ತಮಾನಕ್ಕೆ ॥

ಕಂ ॥ ಮಾಡಿದಪಂ ಖಳಸಮಿತಿಗೆ ।
ಕೇಡಂ ತಕ್ಕರನುದಾತ್ತಮಹಿಮೋನ್ನತಿಯೊಳ್ ॥
ಕೂಡಿದಪಂ ನೀಡಿಲ್ಲದೆ ।
ನೀಡಿದಪಂ ಬೇೞ್ಪವಂಗೆ ಬೇೞ್ಪುದನಿಂದ್ರಂ ॥ 388

ಭವಿಷ್ಯಂತಿಗೆ ॥

ವೃ ॥ ಬರ್ಪೆನವೋಘಮಬ್ದಸಮಯಕ್ಕೆ ಪಲುಂಬದೆ ಪಾರುತಿರ್ಪುದಾಂ ।
ಬರ್ಪುದನೆಂದು ಪೋದನಿನಿಯುಂ ಜಲದಾಳಿಗಳಿಂತಿವೇಗಳೇ ॥
ಬರ್ಪುವೆ ಬಂದನಿಲ್ಲ ತಡೆದಂ ಪರದೇಶದೊಳಾದ ಮುರ್ಚ್ಛನಿಂ ।
ಕೂರ್ಪೊಡೆ ಪರ್ಬರಲ್ಲದೊಡೆ ಬರ್ಪರೆ ಕಲ್ಲೆರ್ದೆಯಪ್ಪ ಮಾನಸರ್ ॥ 389

ಸೂತ್ರಂ ॥ 87 ॥

*ಭಾವಿಭವತ್ಕಾಲಂಗಳೊ ।
ಳಾವಿಹಿತವಿಭಕ್ತಿಯಾದಿ[3]ಗಳೊಳಾಗಮದಿಂ ॥
ತಾಂಪೊರ್ವರ್ ಕೆಲಬರ್ ಭಾ ।
ಷಾವಿದರುದ್ವಾದಿಯಕ್ಕುಮದುಮುಂ ಪ್ರಾಯಂ ॥ 390

1 ಗಿವಾಗಮು. 2 ಜನ. 3 ದ. * ಒಂ ಎ ಪ್ರತಿಯಲ್ಲಿ ಈ ಸೂತ್ರವೇ ಇಲ್ಲ.

ಸೂತ್ರಂ ॥ 88 ॥

ಅವಚಿಯೊಳಗೆ ನಪುಂಸಕಲಿಂ ।
ಗವಿಷಯಮವಾದಲ್ಲಿ ಮೊದಲ ಪುರುಷಂಗುದುವೆಂ ॥
ಬುವೆ ದಲ್ ಸಮನಿಸುಗುಂ ಸ್ತ್ರೀ ।
ವಿವಕ್ಷೆಯೊಳ್ ನೆಗೞ್ಗುಮೇಕವಚನಮವಳಂತಂ ॥ 391

ಪ್ರಯೋಗಂ ॥

ಕಂ ॥ ಊದಿದುದು ತಣ್ಣೆಲರ್ ಕಳ ।
ನಾದಂ ಸ್ವಾ[1]ದರದೊಳೊಂದಿ ನೆಗೞ್ದುದು ಪದ್ಮಾ ॥
ದೋದಮಿ[2]ನಿಸುಂ ತೊವತೆರ್ತ್ತ ವ ।
ರಾದುದು ಕೂಗಿದುವು ತಾಮ್ರಚೂಡಕುಳಂಗಳ್ ॥ 392

ಅಱಿವಳ್ ಪಾಂಡುತನೂಜರ ।
ತೆಱನೆಲ್ಲಮನೀಕೆ ನುಡಿವಳಲ್ಲಳ್ ತಪ್ಪಂ ॥
ಮಱಸಿ ಪುಸಿನುಡಿವ ಜಱುಚರ ।
ತೆಱನಂ ಕಂಡಱಿಯದಂತು ಕುಳಿಯರುಮೊಳರೇ ॥ 393

ಸೂತ್ರಂ ॥ 89 ॥

ಅರೆಬರ್ ತದೇಕವಚನಾಂ ।
ತರಂ ನಪುಂಸಕದೊಳಾಗೆ ತತ್ತ್ಯನ್ಯತರಂ ॥
ದೊರೆಕೊಳ್ಗುಮೊಂಬರವು ಮಱಂ ।
ತಿರೆ ಪೂ[3]ರ್ದ್ದಗುಮುಮದಿಕಾರಮುಕ್ಕೆಯಕಾರಂ ॥ 394

ಪ್ರಯೋಗಂ ॥

ವೃ ॥ ಪುಟ್ಟಿತು ಮುಟ್ಟಿದು ದಿವಮಂ ।
ಮೆಟ್ಟಿತು ಮೆಟ್ಟಿದು ರಸಾತ[4]ಳಾಗ್ರಮನೆಂಬೂ ॥
ಳ್ಪೆಟ್ಟಳವಾಗಿರೆ ದಿವಿಜರ ।
ದಿಟ್ಟಿಗೆ ಸೊಗಯಿಸಿತು ಮುಂದೆ ಮಂದರಶೈಲಂ ॥ 395

ಉರಗರಗಿದರ್ ದೈತ್ಯರ್ ಕಳ್ಕತ್ತರಳ್ಕಿದನಿಂದ್ರನೀ ।
ಶ್ವರನ ಮನಮು[5]ಱ್ಕಿಡಿತ್ತೋ[6]ಡಿತ್ತು ಕಿನ್ನರಸೈನ್ಯಮಾ ॥
ಸರಲ ಬರಮಂ ಕಂಡಿಂ ಕಟ್ಟಿತ್ತು ಭಾರತಮೆಂದು ತಾ ।
ಮರಯಲೆಱು ನೀರಂತಾಯ್ತುತ್ತಂ ಸುರಾಸುರಮಂಡಲಂ ॥ 396

ಸೂತ್ರಂ ॥ 90 ॥

ಅವಿಶಿಷ್ಟಲಿಂಗವಚನ ।
ವ್ಯವಸ್ಥೆಯಿಂದೊಂದಿ ಗುಂ ಕುಮಾದೇಶಂಗಳ್ ॥
ಬವರಿಸುಗುಂ ಸಂಪ್ರತಿಗಂ ।
ಭವಿಷ್ಯದತ್ಥರ್ದೊಳಮನ್ಯವಚನೋಕ್ತಿಗಳೊಳ್ ॥ 397

1 ಗಾಂದರ. 2 ವಿಷಿಸಂ. 3 ಪೂರ್ವ್ವಗೆಯುಮದ ಕಾರಮುಕ್ಕೆವಿಕಾರಂ. 4 ತಳಾಂತವು. 5 ಮುಳ್ಳುದಿ. 6 ತಿತ್ತಿತ್ತು.

ಪ್ರಯೋಗಂ ॥

ವೃ ॥ ಮೀಱುಗುಮಲ್ಲಿ ದೇವರೆಡೆವೊಕ್ಕೊಡಮಾತ್ಮಭುಜಪ್ರತಾಪಮಂ ।
ತೋಱುಗುಮುರ್ಕ್ಕಿ ದ[1]ನ್ಯನೃಪನಂದನರಂ ತವೆ ಕೊಂದು ನಾೞ್ಗಳಂ ॥
ತೀಱುಗುಮಾಗಳ[2]ಲ್ಲಿ ತೊಡರ್ದಾರುಮನುಗ್ರಪತತ್ರಿಭೂರಮಂ ।
ಪೇಱುಗುಮಂತುಮಾಂತೊಡಮರಂ ಬಡಿಯೊಳ್ ಪುಡಿಗುಟ್ಟಿ ತೂಱುಗುಂ ॥ 398

ಕಂ ॥ ಅರ್ಕ್ಕೇಂದುಗಳಂ ತವೆ ನುಂ ।
ಗಿರ್ಕ್ಕುಂ ಕಱ್ತಲೆ ಸಿಡಿಲ್ಗಳೆಱಗುಗುಮಂತುಂ ॥
ಬರ್ಕ್ಕುಂ ನಿನ್ನೋಪಳ್ ಭಯ ।
ಮಿರ್ಕ್ಕುಮೆ ನೀನಿರ್ಪ್ಪ ಮನದೊಳು[3]ಗ್ರತುಳಾರ್ಕ್ಕಾ ॥ 399

ಸೂತ್ರಂ ॥ 91 ॥

ಉಗೆಕೆವಿಕಲ್ಪಿತಮನ್ಯಾ ।
ರ್ತ್ಥಗತಿಯೊಳುತ್ವೇತ್ವಯು[4]ಕ್ತಿ ಯುಷ್ಮತ್ಸಂಜ್ಞೋ ॥
ಕ್ತಿಗಳೊಳಮಸ್ಮದ್ಬಹುವಚ ।
ನಗತಿಯೊಳಂ ನೆಗಳ್ದಿ ಸರ್ವ್ವಸಾಧನಿಗಕ್ಕುಂ ॥ 400

ಪ್ರಯೋಗಂ ॥

ಅನ್ಯಾರ್ತ್ಥಗತಿಗೆ ॥

ವೃ ॥ ಮೇದಿನಿ ಸಾಗರಾಂತಮದು ನಿನ್ನನೆ ಪತ್ತುಗೆ ನಿನ್ನ ವಕ್ಷದೊಳ್ ।
ಶ್ರೀ ದೊರೆಕೊಂಡು ಪೆ[5]ರ್ಚ್ಚುವೆರಸಿರ್ಕ್ಕೆ ಸಮುನ್ನತ ನವಗ್ರಹಂಗಳೇ ॥
ಕಾದಶಮಕ್ಕೆ ಕೀರ್ತ್ತಿ ಪರೆದಿರ್ಕ್ಕೆ ಜಯಾಂಗನೆ ಕೂ[6]ರ್ಕ್ಕೆ ನಿಚ್ಚಲುಂ ।
ವೇದದೊಳೋ[7]ದಿದಾಯು ನಿನಗಕ್ಕೆ ಚಿರಂ ಕಲಿಕಾಲಸೂ[8]ದನಾ ॥ 401

ಯುಷ್ಮತ್ಸಂಜ್ಞೋಕ್ತಿಗೆ ॥

ವೃ ॥ ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ ।
ಪಾಯದಡಂಗಿ ನಿಲ್ ಭ್ರಮರಿಯೊಳ್ ಭ್ರಮಿಯಂತಿರ ಎಚ್ಚರಾಗು ಖ ॥
ಖಗ್ಗಿಯುಧಚಾ[9]ಮರಂ ಪೊಳೆವ ಮಿಂಚನೆ ಪೋ[10]ಲ್ತಿರೆ ಬೀಸು ನೀಂ ಖಳ ।
ನ್ಯಾ[11]ಯದಿನೆಲ್ಲಮಂ ನೆಱೆಯೆ ಕಲ್ತುಪದೇಶಕನಾಗು ಲೋಕದೊಳ್ ॥ 402

ಕಂ ॥ ಹರಿ ನುಡಿಯೆ ನುಡಿಯಿಮುಲಿಯಲಿ ।
ಮಿರಿಮುಸಿರಲಿಮತ್ತಸಾರಿಮೆಲೆ ಮಿಡುಕದಿರಿಂ ॥
ಪಿರಿದುಂ ಗ[12]ಬಪಲಿಮೆಡೆಗೊಂ ।
ಡಿರದಿರಿಮೆನುತಿರೆ ಕಡಂಗಿ ಪಡಿಯಾಱರತ್ತಂ ॥ 403

1 ದಂದು. 2 ಮಲ್ಲಿ. 3 ಳುಗ್ರತಳಕರ್ಕ್ಕ. 4 ಯುಕ್. 5 ಪೆರ್ಚ್ಚು. 6 ಕೂರ್ಗ್ಗ. 7 ಳೊಂದಿ. 8 ಸಾಧನಾ. 9 ಚಾಪಮಂ. 10 ಪೊತ್ತಿರೆ. 11 ನ್ಯಾಯಮುಮ. 12 ಗಳಪಂಪೆಡೆಗೊಂಡಿರದಿಂ

ಅಸ್ಮದ್ಬಹುವಚನಗತಿಗೆ ||

ಕಂ || ನೆನೆಯದೆ ಕಜ್ಜದ ಬಿಣ್ಪಂ |
ಮುನಿವಱ ನೀನೊರ್ವನೆಂಬ ಹರಿಗಮಸಾಧ್ಯಂ ||
ಮನುಜವ್ರಾತಾಱಂ[1]ಕನೊ |
ಳನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್ || 404

ಸೂತ್ರಂ || 92 ||

ತದುಪಗತಮಧ್ಯಮೈಕ |
ತ್ವದೊಳಕ್ಕುಂ ಪ್ರಾಯದಿಂದಿಕಾರಮುಕಾರಂ ||
ವಿದಿತಸ್ವರೂಪಲೋಪಮು |
ಮದಂತೆ ಪೆಱವುಱಿಯೊಳಂ ಪ್ರ[2]ಕೃತ್ಯಂತದೊಳಂ || 405

ಪ್ರಯೋಗಂ ||

ವೃ || ಬಿಗಿ ಪುಗು ಬಿ[3]ಟ್ಟು ಕೂಡು ಜಡಿ ಒಗ್ಗಿಸು ಪೊ[4]ಯ್ಮ್ಮಲೆನೋಡು ಸಾ[5]ಯೆ ಸಾ |
ರ್ದ್ದುಗಿ ಕೊಳೆ ನೂಂ[6]ಕು ಸಾಚರ್ಬ್ಬ ಕಡೆದೋಱಿಱೊಡಸಂದಿಸು ಸಾರ್ದ್ದು ದಂ[7]ಡೆ ಗೊಳ್ ||
ಪುಗದೆಡೆಮಾಡು ಚಪ್ಪರಿಸು ರೂಪಿಡು ಕೂ[8]ಪಿಡು ಕೂ[9]ಪುರ್ಗದೋಱು ಮಾ |
ಱಗಿಸುದೆ ಕೂರ್ಮೆಯಿಕ್ಕು ತ[10]ಗೆ ತೊಂಗಲನಿಂಚನೆ ನೂಂಕು ಯು[11]ದ್ಧಮಂ || 406

ಸೂತ್ರಂ || 93 ||

ಕ್ರಿಯೆ ತಾಂ ಕ್ರಿಯಾರ್ತ್ಥಮಪ್ಪ |
ಲ್ಲಿಯುಲಕ್ಕುಂ ಮರ್ತ್ತಮಾನಗತಿಗುತ್ತುಮುತುಂ ||
ದ್ವಯಮುಮಕ್ಕುಂ ಪೂರ್ವ್ವಭವ |
ಕ್ರಿಯೆಯೊಳದುತ್ಪ್ರತ್ಯಯಂಗಳಕ್ಕುಂ ಪೀನಂ || 407

ಪ್ರಯೋಗಂ ||

ಕಂ || ತಿಂಗಳನಪ್ಪಿಕೊಳಲ್ ಪಾ[12] |
ಯ್ದಿಂಗಂ ಬೆಲೆಯಿಕ್ಕಲಮರಗಿರಿಶಿಖರಕ್ಕಂ ||
ಲಂಗಿಸಲೊಡರಿಸುವರ್ ಪ |
ರ್ವ್ವಂಗಳ್ ಪತ್ತೆಂಟು ದೆವಸಮೆನೆ ಪಲವೆಣ್ಗಳ್ || 408

ವೃ || ಕೆದಱುತ್ತುಂ ಮಣಲಂ ತೆಮಳ್ದೆ ಕೊಳುತುಂ ಧೂರೇಣುವಂ ಸೂಸುತುಂ |
ನದನದ್ಯಚ್ಛಜಲಂಗಳಂ ಮುಱಿಯುತುಂ ಭೂಜಂಗಳಂ ನುಗ್ಗುತುಂ ||
ಪೊದಱಂ ಸೀಳುತುಮೆಯ್ದೆ ವಂಶವನಮಂ ಕಾಡಾನೆಯಂ ಪೋಲ್ತು ಪೊ |
ಕ್ಕುದು ಬೀಡಂ ಲಯಕಾಲಕಾಲವಿ[13]ಚಲದ್ಭೀಮಾರುತಂ ಮಾರುತಂ || 409

1 ಱಂಕನೆ. 2 ಪ್ರಕೃತ್ಯಂತರದೊಳ್. 3 ಬಿಟ್ಟುಕೂಡ. 4 ಪೊಯ್ಮ್ಮಲೆ. 5 ಸಾಱಿ ಸಾಯಿ. 6 ನೂಂಕಿ. 7 ದಂಗೆಗೊಳ್. 8 ಕಾಪಿಡು. 9 ಕೂರ್ಪುರ್. 10 ತಗೆ. 11 ಬದ್ಧನಂ. 12 ಪಾ | ಯ್ದಿಂಗಂಬೆಲೆ. 13 ವಿಲಸ.

ಕಂ॥ ನಡುಗಿ ತ[1]ಡವರಿಸಿ ಶಂಕೆಯ ।
ಕಡುಗಾಯ್ಪಿಂಗಗಿದು ಜಡೆಗೞಡುವಿನೊಳಱುಗಳ್ ॥
ತೊಡರ್ದು ನುಸುಳ್ದೋಡಿ ಗಂಗೆಯ ।
ಮ[2]ಡುಗಳನಡಹಡಿಸಿ ಪುಗುವಿನಂ ಭಯವಶದಿಂ ॥ 410

ಸೂತ್ರಂ ॥ 94 ॥

ಪ್ರತಿಷೇಧದೊಳಂ ಕೆಲಬರ ।
ಮತದಿಂದಲ್ ವರ್ತ್ತಕಂ ಪದಾಂತರದಿಂ ಸಂ ॥
ಗತಿಯಾಗ[3]ಲ್ಲೋಪಂ ವೇಳ್ ।
ಚತುರ್ತ್ಥಿ ಸಮಾಸಲ್ಗವೆಂಬರದಱೊಳ್ ಕೆಲಬರ್ ॥ 411

ಪ್ರಯೋಗಂ ॥

ಕಂ॥ ನಗೆಯೊಳಮುಪ್ಪೊಡಮಿಂತೀ ।
ತೆಗಱ ದುರುಕ್ತಿಗಳನೆಮ್ಮೊಳಿಂ ನುಡಿಯಲ್ ನೀಂ ॥
ಬಗೆಯೊಳ್ ಱೞೊಂದನಣಂ ।
ಬಗೆಯಲ್ ಗಡ ನಿನಗೆ ಸುಮತಿ ಪೇೞಾಂ ಪೇೞೇ ॥ 412

ಪರಾರ್ತ್ಥಕ್ಕೆ ॥

ಕಂ॥ ತರವೇೞ್ ಮದವಾರಣಮಂ ।
ಬರವೇೞ್ ಸನ್ನದ್ಧವಾಜಿಸಾಧನಮಂ ಬಿ ॥
ತ್ತ[4]ರಿಸಲ್ಕೆವೇೞ್ ವರೂಥೋ ।
ತ್ಕರಮಂ ಬಲಿದೊಡ್ಡವೇೞ್ ಪದಾತಿಯನೀಗಳ್ ॥ 413

ಸೂತ್ರಂ ॥ 95 ॥

ಎಸೆಗುಂ ಭಾವದೊಳ್[5]ಮದೇ ।
ಕಸಂಜ್ಞವಚನಂ ಕ್ರಿಯಾಸಮಭಿಹಾರಂ ವ ॥
ರ್ತ್ತಿಸುತಿರೆ ತಾನೆಕ್ಕಂ ಸ ।
ರ್ವಸಾಧನೀಯಮಧ್ಯಮೈಕವಚನಮದೆಂದುಂ ॥ 414

ಪ್ರಯೋಗಂ ॥

ಭಾವಾರ್ತ್ಥಕ್ಕೆ ॥

ಕಂ॥ ಸಿಡಿಲಂ ಪೊಸವುದು ಕೇಶನ ।
ಪಡೆಯೊಳ್ ಪಟ್ಟರ್ಪ್ಪದೆಂಟುಮಾನೆಯ ಕೋಡಂ ॥
ಪಿ[6]ಡಿದೊತ್ತಿ ಕೀೞ್ವುದೇೞಿಂ ।
ಕಡಲೊಳಗೋಲಾಡುತಿರ್ಪ್ಪದವನ ವಿನೋದಂ ॥ 415

1 ತಡದಡಿಸಿ. 2 ಮಡುವಿನೊಳಲಬ್ಬಿ. 3 ಗಲಾಲೋಪಂ. 4 ತ್ತರಿಸಬರ. 5 ಳವಱ್ಕೇ । ಳವಂಙ್ಗೆ.
6 ಪಿಡಿದಱುರುಳಿಳ್ಚ.

ಕ್ರಿಯಾಸಮಭಿಹಾರಕ್ಕೆ ॥

ಕಂ॥ ಕೊಳ್ಕೊಳ್ಳೆಂದೊಡನೊಡನೆಯು ।
ತುಳ್ಕುವ ಯುವತಿಯರ ಕರಪರಿಚ್ಯುತಸಲಿಲಂ॥
ಗಳ್ಕಳೆ ಬಿಡೆ ಕೆದಱುವ [2]ಂ ।
ಜಳ್ಕದಿನಾದುದು ಸರೋವರಂ ಕಪಿಶಜಳಂ॥ 416

ಸೂತ್ರಂ ॥ 96 ॥

ಧಾತುಗನೇಕಾಕ್ಷರಕಾ ।
ಖ್ಯಾತವಿಭಕ್ತಿಗಳ **ಮೊದಲೊಳ**ಸು ತಾನಕ್ಕುಂ ॥
ಹೇತುಪ್ರಯೋಗದೊಳ್ ತ ।
ಜ್ಜಾತಿಯೆ ಕರ್ಣಾಟಧಾತುಗಳ್ಗಮು[1]ದಿರ್ಕ್ಕುಂ ॥ 417

ಪ್ರಯೋಗಂ ॥

ವೃ॥ ಎಸೆಗುಂ ಖುಜ್ಜಾಗತಂ ಕಣ್ಗೊ[illegible]ಸುಗುಮಳವಟ್ಟರ್ಧಖುಜ್ಜಾಗತಂ ಕೋ ।
ಭಿಸುಗುಂ ಪಾರ್ಶ್ವಾಗತಂ ನೋೞ್ಪರನೆೞಿಸುಗುಂ ಸಾಚಿ ತದ್ವಿದ್ಯರಂ ರಂ ॥
ಜಿಸುಗುಂ ದ್ವ್ಯ[2]ರ್ಧಾಕ್ಷಿಯೆಂಬಂತೆವೊಲಿರೆ ನೆ[3]ಗೞ್ದರ್ದಂಗನಾಭಂಗಿಯಿಂ ಚಿ ।
ತ್ರಿಸಿ ಚಿತ್ರಕ್ಕಾಯುವೊಯ್ದಂ ಮದನನೆನೆ ಕರಂ ಕಾಂತೆ ಕಣ್ಗೊಪ್ಪಿ ತೋರ್ಕ್ಕುಂ॥ 418

ಇಲ್ಲಿ ಉಪಾಂತ್ಯಕ್ಕೆ ಲಘ್ವೇಕಾಕ್ಷರಕ್ಕಿದಂತಪ್ರಯೋಗಂ ॥

ಕಂ॥ ಸುರರೊಸೆಯ ಸ[1]ಕಳ[4]ಮು ।
ಸುರನಿಕರಮತರ್ಕ್ಯಮಪ್ಪ ವಿಕ್ರಮಗುಣಮುಂ ॥
ಧರಿಯಿಸಿ ಸಂದಿರ್ದ್ದಂ ಭಾ ।
ಸುರತೇಜನುದಾತ್ತಕೀರ್ತ್ತಿನಿಳಯಂ ಕೃಷ್ಣಂ ॥ 419

ಪ್ರಕೃತಿಗಳಂ ಧಾತ್ವರ್ತ್ಥದ ।
ವಿಕಲ್ಪದಿಂದಱಿದು ಸಮಱಿಕೊಳ್ವುದು ಬಹುರೂ ॥
ಪಕಮನ[5]ದಂ ಪೇೞಿಲ್ಕಾ ।
ಸಕಳಂ ವಾಕ್ಪತಿಯುಮಾಱನುಱಿದವರಳವೇ ॥ 420

ಪ್ರತಿಬುದ್ಧರಂ ಕುಱಿತ್ತೀ ।
ಸ್ಥಿತಿಯಿಂದಂ ಕಿಱಿದು ಮಾರ್ಗ್ಗಸೂಚನೆಗೆಯ್ದೆಂ ॥
ಮತಿವಂತರಱಿದು ಪೇೞ್ವುದು ।
ವಿತರ್ಕ್ಕದಿಂ ಮತ್ತಮುಕ್ತಶೇಷಮನಿದಱೊಳ್ ॥ 421

ಇದು ಶಬ್ದಸ್ಮೃತಿಯೊಳ್ ಅಯ್ದನೆಯ ಆಖ್ಯಾತಪ್ರಕರಣಂ ॥

---

1 ಮವಳ್ಕುಂ. 2 ಧ್ಯಕ್ಷ್ಯಕ್ಷಮೆಂ, ಧ್ಯಕ್ಷಾರ್ಕ್ಷಮೆಂ. 3 ಬರೆದಿರ್ದ್ದಂ. 4 ಳಳಸಿಯುಳಿಳಳಮು.
5 ನವೀಣಂಬಿಸಲ್ಕು.

ಗೀತಿಕೆ ॥ ಇಂತಿರೆ ಶಬ್ದಂ ಸಂದೇಹ ।
ಧ್ವಾಂತೌಘಂ ಪಿಂಗಿರೆ ಜಲಕನಾಗೆ ಬುಧ ॥
ಸಂತತಿಗಪ್ಪಂತು ಪೇೞ್ದನಿದಂ ।
ಶಾಂತಮನಂ ಕವಿತಾಗುಣೋದಯಂ ॥ 422

ವೃ ॥ ಅಭಿಮತಶಬ್ದಸಂಸ್ಕರಣದಿಂ ಜನಮಂ ತಿಳಿವಂತು ಮಾಡಿ ವಾ ।
ಗ್ವಿಭವಮದಪ್ರತರ್ಕ್ಯಮೆನೆ ಸಂದೆಸಕಂ ದೆಸೆಯಂತನೆಯ್ದೆ ತ ॥
ತ್ಸಭೆಗ[1]ಳೊಳಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ ।
ದಭಿನವಶರ್ವ್ವವರ್ಮ್ಮನಿವನೆಂದಪುದುರ್ವ್ವರೆ ನಾಗವರ್ಮ್ಮನಂ ॥ 423

ಇದು ಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯಮಾ

ನಾನೂನಕವಿತಾಗುಣೋದಯಂ ಶ್ರೀನಾಗವರ್ಮ್ಮ

ಪ್ರಣೀತಮಪ್ಪ ಕಾವ್ಯಾವಲೋಕನ

ದೊಳ್ ಶಬ್ದಸ್ಮೃತಿಯೆಂಬುದು

ಪ್ರಥಮಾಧಿಕರಣಂ ॥

1 ಯೊಳಗಗ್ರ.

2. ಕಾವ್ಯಫಲವ್ಯಾವೃತ್ತ್ಯಧಿಕರಣಂ.

ಪದಪದಾರ್ಥ ಸಂಧಿದೋಷ ವಿನಿಶ್ಚಯ ಪ್ರಕರಣಂ.

ವೃ ॥ ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ ।
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವೊಡಂತಾ ॥
ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರ ।
ನ್ವಿತನಪ್ಪಂ ವೃದ್ಧನಾಲಸ್ಯಮನುೞಿದಸಪುದ್ಯೋಗಮಭ್ಯಾಸಕರ್ಮಂ ॥ 424

ಕಂ॥ ಶ್ರುತವಾರಿನಿಧಿಯ ಪಾರಮ ।
ನತಿಪ್ರಬಂಧಾ[1]ಭಿಯೋಗರಾರೆಯ್ದಿದೊಡಂ ॥
ಕೃತಪುಣ್ಯಂಗಲ್ಲದೆ ವಿ ।
ಶ್ರುತಕವಿತಾರತ್ನಮಲ್ಲಿ ಸಂಭವಿಸುಗುಮೇ ॥ 425

ಮದಮಿಲ್ಲದಿಭಂ ಮಧುವಿ ।
ಲ್ಲದ ಕುಸುಮಂ ಚಂದ್ರನಿ[2]ಲ್ಲದಿರುಳೊಳಪ್ಪುರ್ಗ ॥
ಲ್ಲದ ನೃಪತಿ ಕವಿತೆಯಿಲ್ಲದ ।
ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ ॥ 426

ಪರಮಪ್ರೀತಿನಿಮಿತ್ತಂ ।
ನಿರತಿಶಯಯಶೋನಿ[3]ದಾನಮಪ್ಪುದಱಿನಿಹಂ ॥
ಪರಮೆಂಬೆರಡರ್ಕಂ ಬಂ ।
ಧುರಕಾ[4]ವ್ಯನಿಬಂಧದಿಂ ಹಿತಂ ಪೆಱತುಂಟೇ ॥ 427

ಕೃತಿಸತಿಯ ಮೆಯ್ಯೊಳಳ್ಪನಿ ।
ತು ತಾನದೊಂದಱಿಯ ದೋಷವಾಗೆ ತದಾವ ॥
ರ್ಜಿತಮಪ್ಪ ಕೀರ್ತಿಯುಂ ನಿಂ ।
ದಿತಮಕ್ಕುಂ ದರ್ಪಣಾರ್ಪಿತಚ್ಛಾಯೆಯವೋಲ್ ॥ 428

ಕಂ ॥ ಅದಱಿಂದುಪೇಕ್ಷೆಗೆಯ್ಯದೆ ।
ಸದಭಿಮತೋದಾತ್ತಕೀರ್ತಿಯಂ ಬಯಸುವವಂ ॥
ಪದವಾಕ್ಯಾರ್ಥಂಗಳೊಳೊಂ ।
ದದಂತು ಪಿಂಗಿಸುಗೆ ದೋಷಮಂ ಕೃ[5]ತಿಯಿಂದಂ ॥ 429

1 ಧಾನಾರಾಗ. 2 ವಿಲ್ಲದೊಂದಿರುಳಳಪ್ಪರ. 3 ವಿಧಾನ. 4 ವಾಕ್ಯ. 5 ಕ್ರಮದಿಂದಂ.

ಪ್ರ[1]ಯೋಜನಸ್ಥಾಪನಂ॥

ಸೂತ್ರಂ ॥ 97 ॥

ಇರೆ ಶಬ್ದಾರ್ಥಂಗಳ್ ತ ।
ತ್ಪರತೆಯಿನದು ಕಾವ್ಯಮದಱೊಳಚಿತ್ರೈಕಾರ್ಥಂ ॥
ತರವಾಚಿ ಶಬ್ದಮು[2]ವಭಾ ।
ಸರೂಪಮಮಾಹ್ಲಾದಕಾರಿಯಪ್ಪುದದರ್ಥಂ ॥ 430

ಸೂತ್ರಂ ॥ 98 ॥

ಪ್ರಕರಣದಿಂ ಶಬ್ದಾಂತರ ।
ದ ಕೂಟದಿಂದಭಿನಯಂಗಳಿಂದಿಷ್ಟಾರ್ಥ ॥
ಪ್ರಕಟನಮಕ್ಕುಮನೇಕ ।
ಪ್ರಕಾರಮರ್ಥಂ ಪದಕ್ಕೆ ಸಂಭವಿಸುವೊಡಂ ॥ 431

ಉದಾಹರಣೆ ॥

ಪ್ರಕರಣಕ್ಕೆ ॥

ಕಂ ॥ ಏನೇನುಂ ಮದನುಜರೆನ ।
ಗಾನತರಣಮಾಗದಿರ್ದ್ದರುಂಮದಮವರ್ಗಂ ॥
ತೇನೇತಱೊಳಾಯ್ತದನಿನಿ ।
ಸಾನುಂ ಪೇಗದೊಳೆ ಕಳೆದು ತೋಱೆನೆ ರಣದೊಳ್ ॥ 432

ಶಬ್ದಾಂತರಸಂಸರ್ಗಕ್ಕೆ ॥

ಕಂ ॥ ಹರಿ ಪೊಯ್ಯೆ ಬಿರಿದ ಮದವ ।
ತ್ಕರಿಕುಂಭದಿನಗದೊಳೊಕ್ಕ ರಕ್ತಾರಕ್ತ ॥
ಸ್ಫುರಿತನವಮೌಕ್ತಿಕಂಗಳ ।
ನರೆಉಱ ವನಚರಿಯರೆರದ ಪಣ್ಗೆತ್ತಾಯ್ದರ್ ॥ 433

ಅಭಿನಯಕ್ಕೆ ॥

ಕಂ ॥ ಇನಿವಿರಿಯವಪ್ಪ ಮೊಲೆಯುವ ।
ಳಿನಿವಿರಿಯವೆನಿಪ್ಪ ಕಣ್ಗಳಾಕೆ ಮನಂಗೆ ॥
ಟ್ಟನಿತು ದೆವಸಂಗಳಂ ತ ।
ನ್ನಿನಿಱುನನಗಲ್ದಿಂ ಬೞಿಕ್ಕಮಿಂತಿಂತಾದಳ್ ॥ 434

1 ಪ್ರಯೋಗಸ್ಥಾಪನಂ. 2 ಮದಭಾ.

ಸೂತ್ರಂ ॥ 99 ॥

ಅಸಮರ್ತ್ಥಮಪ್ರತೀತಂ ।
ವಿಸಂಧಿ ವಿಪರೀತಕಲ್ಪನಂ ಕಷ್ಟಂ ನೀ ॥
ರಸಮೆಂದು ದೋಷಮಿವು ಸಮು ।
ನಿಸುಗುಂ ಪದದೊಳ್ ಪದಾಗಮಜ್ಞರ ಮತದಿಂ ॥ 435

ಸೂತ್ರಂ ॥ 100 ॥

ತೆಱದಿರೆ ತದ್ವಾಚಕತೆಯು ।
ನೆಱಪಲ್ ನೆಱೆಯದುದೆ ಕೃತಿಯೊಳಸಮರ್ತ್ಥಪದಂ ॥
ಪೆಱತೇಂ ಪ್ರತೀತಿ ಬಗೆಗೇ ।
ತೆಱದೊಳಂ ತೋಱದುದದಪ್ರತೀತಂ ಗೂಢಂ ॥ 436

ಉದಾಹರಣೆ ॥

ಅಸಮರ್ತ್ಥಕ್ಕೆ ॥

ಕಂ ॥ ಉರಗಾ[1]ಳಿ ನಂದನಾವಳಿ ।
ತರತರದಿಂದೆಱಗಿ ಜಳಭೃದಂತಿಕದೊಳ್ ಮಾ ॥
ಣ್ದಿರದೆ ಕುಡಿದುಪ್ಪುನೀರಂ ।
ಧರೆಗಿನಿದಂ ಕಱೆವುದಿಂತಿದೇಂ ವಿಸ್ಮಯಮೋ ॥ 437

ಅಪ್ರತೀತಕ್ಕೆ ॥

ಕಂ ॥ ಅಸಿತ[2]ರ್ದ್ಧಿ ವಯುಸ್ಯಾಧ್ವದೊ ।
ಳಸೆವ ನವಾಬ್ಜನ್ಮಶೋಭೆ ಮೇಚಕರೂಪ್ಯ ॥
ಪ್ರಸರದ ಮೆಯ್ಯೊಳ್ ಪ[3]ರ್ವ್ವರ ।
ಪಸರಿಸಿದ ಗುಣಂಗಳ[4]ವನನೇನಿಱಿಸಿದುವೋ ॥ 438

ಸೂತ್ರಂ ॥ 101 ॥

ಅವಿ[5]ಹಿತಸಂಹಿತೆ ಮೇಣ್ ಸಂ ।
ಧಿವಿರೂಪಂ ಬಗೆಯೆ ತಾಂ ವಿಸಂಧಿಯೆನಿಕ್ಕುಂ ॥
ಸ್ವವಿಕ[6]ಲ್ಪಿತದೊಳನಿಷ್ಟಾ ।
ರ್ತ್ಥವಾಗೆ ವಿಪರೀತಕಲ್ಪನಂ ತಾನಕ್ಕುಂ ॥ 439

1 ಗಾಣಿ, ಗಾಣ. 2 ತರ್ದ್ಧಿ. 3 ಪಜ್ಜರಂ. 4 ಳಳವನ. 5 ಎಂಡ. 6 ಕಲ್ಪನ.

ಉದಾಹರಣೆ ॥

ವಿಸಂಧಿಗೆ ॥

ಕಂ ॥ ಅಸಿಯ ಬಟಿಮೆ ಅಸದ ಪ[1]ಟ್ಟಿಗೆ ।
ಮಿಸುಗುವ ಆರಂ ತೊಳಪ್ಪ ಕನ್ನವುರಂ ಚೆ ॥
ಲ್ವೆಸೆದಿರೆ ಬಲವಪ್ಪರ್ ವಿಟರ್ ।
ಕುಸುಮೇಷುವ ಮೇಳದವರ್ಗಳೆನಿಸಿದರ[2]ದಱೊಳ್ ॥ 440

ವಿರೂಪಸಂಧಿಗೆ ॥

ಕಂ ॥ ಪ[3]ಸರಂ ಬಿಡದೆಸಪ ಮಳೀ ।
ನುಸರ್ಗೆಂದುದಿತೋಡುರಾಜನಂ ನಯದಿಂ ಕ ॥
ಲ್ಪಿಸಿ ಜಲಧಿ ನುಡಿವ ಮಾಱ್ಕೆಯಿ ।
ನೆಸೆದತ್ತು ಲ್ಲೋಲಬಹಲಕಲ್ಲೋಲರವಂ ॥ 441

ವಿಪರೀತಕಲ್ಪನಕ್ಕೆ ॥

ಕಂ ॥ ಬಳವದರಿಭೂಪದಾವಾ ।
ನಳ: ಕಳಿಂಗಾಧಿರಾಜ ನಿನ್ನುಗ್ರಶರಾ ॥
ವಳಿವಿಳಸಿತೋರುಧಾರಾ ।
ಜಳಸ[4]ಳಕರನಿಂದಮೆಯ್ದೆ ಮಱ್ಗುಗೆ ಧಾ[5]ರದೊಳ್ ॥ 442

ಸೂತ್ರಂ ॥ 102 ॥

ಶ್ರುತಿವಿರಸಪದಕ್ಷೇಪ ।
ಸ್ಥಿತಿ ಕಷ್ಟಂ ಗ್ರಾಮ್ಯಶಬ್ದಸಂದರ್ಭಸಮು ॥
ತ್ಥಿತಮುಮಸಭ್ಯಾರ್ತ್ಥಕ್ಕೃತಿ ।
ಸ್ಮೃತಿಯುಂ ನೀರಸಮೆನಿಪ್ಪುದಕ್ಕುಂ ದೋಷಂ ॥ 443

ಉದಾಹರಣೆ ॥

ಕಷ್ಟಕ್ಕೆ ॥

ಕಂ ॥ ಇದಿರ್ವರ್ಪರ್ನೊಲಾಯ್ತು ಪವನ ।
ವಿದಳತ್ತ[6]ರ್ವ್ಯಾರ್ದ್ಧ್ಯಪೋಢಪುಷ್ಪರಜಸ್ಸ ॥
ಕ್ತದಿನೊದವಿ ಮಾರುತಂ ಭ್ರಾ ।
ಮ್ಯದತ್ಯುದಗ್ರಾಳಿಝುಂಕೃತೋಜ್ಜೃಂಭಧ್ವಾನಂ ॥ 444

ನೀರಸಕ್ಕೆ ॥

ಕಂ ॥ ಅಂಗನೆಯೊಳ್ ಕಳ್ದಿಪ್ಪರ್ದ ।
ನಂಗಾಹಿಯನಱಿದು ಪೇ[7]ಳ್ದು ಪೊಡೆಯುಂ ಕಡುಪಿ ॥
ನ್ನಂಗಂ ದೊರೆಕೊಂಡಿರೆ ಕೊಂ ।
ಡಂ ಗಡಮೆಲೆ ತೈ[8]ಗ ಸಲಿಲದೇಂ ಚೋಜಿಗಮೋ ॥ 445

1 ಪಟ್ಟಿಗೆ, ಕಟ್ಟಿಗೆ. 2 ದವರೊಳ್. 3 ಪಸರಂ ಬಿಡದೆಸೆಗುವ ನುಸು । ಪಸಗ. 4 ಸೀಕರದಿಂ. 5 ಧರೆಯೊಳ್. 6 ತತ್ತ್ವಾರ್ದ್ಧ್ಯಪೋಢ. 7 ಪೊರ್ದ್ದುಪೊಡೆಯುಂ ಕುಱುಪಿ. 8 ತೈಗುಹುಃಯುದೇಂ

ತಲೆಮುಟ್ಟು ಪಾ[1]ಯ್ದು ಪೀ[2]ರ್ಯ್ದರ್ ।
ವಲೇಪದಿಂದಿೞದು ಬೞ್ದಮೞ್ದಂ ಪಾತ್ತ್ರಂ ॥
ಚಲುಕ[3]ಲದಿಂದೊಡನಿಕ್ಕಿದ ।
ನೂಲಿದದಿರೊಳ್ ಮಣಿಯಾದಾಂತ ಪರವಾಹಿನಿಯಂ ॥ 446

ಸೂತ್ರಂ ॥ 103 ॥

ಮಱಸುಂದು ಸೂಱಸುಂದೆನೆ ।
ಪಿಱಿತಿನಿಯೆನೆ ಪೂಱಿಯೆನೆ ಪದಾಂತರದಿಂದಂ ।
ನೆಱೆದು ನಿಲೆ ದು[4]ಷ್ಪ್ರತೀತಿಯ ।
ನಱಿಪುವ ಪೆಱಪೆಱವುಮಿನ್ನವೇ ಗ್ರಾಮ್ಯಂಗಳ್ ॥ 447

ಅದೆಂತೆನೆ ॥

ಕಂ ॥ ನೆಱೆಗೊಂಡು ತೊನೆವ ಸರಲಿಂ ।
ನೆಱಲ್ದು ರಥದೊಳಗೆ ಬಿೞ್ದು ಚಕ್ರಧರಂ ಮೆ ॥
ಯ್ಮಱೆದು ಗುಹಾಂತರದೊಳ್ ಪಿಂಗೆ ।
ಮಱಸುಂದಿದ ಪುಲಿಯನಾಗಳನಿಸಂ ಪೋಲ್ತಂ ॥ 448

ಮಚ್ಚರದ ಸೂಱಸುಂ[5]ದಿನ ।
ಪೊಚ್ಚಱನಾಂ[6]ತಿರ್ದ್ದ ಬಿರುದಿನೆಸಕದ ಪೆಱವುಂ ॥
ಕ[7]ಚ್ಚಕಳಿಗಳ ತೊಡರ್ಪ್ಪಿನ ।
ಮೆಚ್ಚವಣಿಗೆಯಂಕವುಂ ಮಹೀಶಂ ನೋೞ್ಕಂ ॥ 449

ಕೊಱೆವಲ್ ಬ[8]ತ್ತಿದ ಕಾಲ್ ಪಿಂ[9] ।
ಒಱಿಗೇಸಂ ನೆಕ್ಕಕದವು ಪೊಕ್ಕಿರ್ದ್ದ ಬಸಿರ ॥
ತೆಱೆದ ಮುಖಕುಹರಪ[10]ರ್ಬ್ಬಸೆ ।
ಪೆಱಿತಿನಿಗಳಬಳಗವೊಯ್ದ ತಂ[11]ದುದು ಮುನಿಯಂ ॥ 450

ವೃ ॥ ಮ[12]ತ್ತರುಡಂಗೆಗೊಂಡು ಬಡಿಯುಲ್ ಚಲದಿಂದೆನಸುಂ ದುರಾಗ್ರಹಂ ।
ಚಿತ್ತದೊಳಾಗೆ ನಿನ್ನ ಬೞಿಯಂ ಬರಲೀವು[illegible]ಸೇಂ[13]ಟವಾಳದಿಂ ॥
ಸುತ್ತುವರ್ಗಲ್ಲದೊಲ್ಲೆ ಬಿಡು ನೀನೆನಗಿಲ್ಲಳ ಪೂಱಿ ತೋ[14]ಱಿ ಪೇ ।
ಱತ್ತಿರಲಾಸೆಯಂ ಬಿಸುಟು ನೀಂ ಕ[15]ಳೆ ಪಾಂಟವುತಕ್ಕೆ ಸ್ವೈರಿಸೆಂ ॥ 451

ಇಂತೀಪೇೞ್ದುವುಮನಱಿದು ಪೆಱಪೆಱವು ಮನಱಿದುಕೊಳ್ವುದು ॥

ಕಂ ॥ ಅನುಕರಣದೊ[16]ಳೊಂದಿದ ವಾ ।
ತಿನಲ್ಲಿ ನಿರ್ದೋಷವಾಗೆ ಸಲ್ಗುಂ ಪೇೞ್ದಂ ॥
ತಿನಿತುಂ ಸ್ವರೂಪಕಥನದೊ ।
ಳನುವಾದಂ ಭಿನ್ನಶಬ್ದಮಪ್ಪುದಱಿಂದಂ ॥ 452

ಇದು ಕಾವ್ಯಮಲವ್ಯಾವೃತ್ತಿಯೊಳ್ ಪದಪದಾರ್ತ್ಥಸಂಧಿದೋಷ
ವಿನಿಶ್ಚಯಪ್ರಕರಣಂ ಪ್ರಥಮಂ ॥

---

1 ಪೊಯ್ದು. 2 ನಿಯ್ದಾರ್ ।। ಸ. 3 ಚಲನಿಂ. 4 ದುಃಪ್ರತೀತಿ. 5 [illegible]. 6 [illegible]. 7 [illegible]. 8 [illegible]. 9 ಪಿಂಪಿಱಿ. 10 ಮುಬ್ಬೆಸೆ. 11 ಬಂದವು. 12 ಪತ್ತು. 13 ಪಿಂತ. 14 ತೋಱದು. 15 ಕಲು. 16 ದಿನಂ.

ಕಾವ್ಯವಾಕ್ಯಾರ್ತ್ಥದೋಷಾನುಕೀರ್ತ್ತನಪ್ರಕರಣಂ.

ಸೂತ್ರಂ ॥ 104 ॥

ವಿದಿತಾರ್ತ್ಥಂ ಕ್ಷೋದಕ್ಷಮ ।
ಮುದಾತ್ತಶಬ್ದಂ ಪರಸ್ಪರಂ ಸಾಪೇಕ್ಷಂ ॥
ಪದಸಮುದಾಯಂ ವಾಕ್ಯಂ ।
ವ್ಯುದಸ್ತಕಾಂಕ್ಷಂ ತದೇಕವಸ್ತುನಿಬದ್ಧಂ ॥ 453

ಕ್ಷ್ಯಂ ॥

ಅಸವಸದಿಂ ಪೞಿಗೆಯ್ಯಂ ।
ಕಸವಂ ಸೋದಿಸದೆ ಬಿತ್ತಿದೊಕ್ಕಲಿಗನವೋಲ ॥
ಸಸಿಯುಂ ನೋಡಿ ತಳೋದರಿ ।
ಜಸುಸುಯ್ಗುಂ ಬಯ್ಗುಮಂ[1]ತೆ ಮಾಡಿದ ಬಿದಿಯಂ ॥ 454

ಸೂತ್ರಂ ॥ 105 ॥

ವ್ಯವಹಿತಮೇಕಾರ್ತ್ಥಂ ವ್ಯ ।
ರ್ತ್ಥಮಪಕ್ರಮಮಖಿಳಲೋಕಶಾಸ್ತ್ರವಿರುದ್ಧಂ ॥
ಸುವಿದಿತಯತಿಭಂಗಂ ಭಿ ।
ನ್ನವೃ[2]ತ್ತಮೆಂದಿಂತು ವಾಕ್ಯದೋಷಮಿವಕ್ಕುಂ ॥ 455

ಸೂತ್ರಂ ॥ 106 ॥

ವ್ಯತಿಕೀರ್ಣ್ಣಪದಕ್ರಮಮನು ।
ಚಿತಾನ್ವಯಂ ವ್ಯವಹಿತಾನ್ವಯಂ ಶಾನದು ದಲ್ ॥
ಮತಿಸಮ್ಮೋಹಮನಿದಿರವ ।
ರ್ಗೆ ತೊಡಚ್ಚರ್ಲ್ಪೇೞ್ವೆಡಲ್ಲಿಗ[3]ಲ್ಲದು ದೋಷಂ ॥ 456

ಅ[4]ವರ್ಕ್ಕ ಲಕ್ಷ್ಯಂ ॥

ಕಂ ॥ ಬಳಕೊಳ್ ಮುಂ ಸಿನಗಿಲ್ಲದ ।
ಮುಳಿಸಂ ಕಾಲ್ಗೆಱಗಿದೋಪನಂ ತೊಱೆ ದಯೆಯಿಂ ॥
ತಳಮು[5]ಳಗುತ್ತನುನಯದಿಂ ।
ತಿಳಿಪಲ್ಕೆಂದೆಱಗದನ್ನಮೆನ್ನರುಮುಱಿಗುಂ ॥ 457
ಪತ್ರಂ ಭುಜಂಗಸಮಿತಿ ಕ ।
ಳತ್ರಂ ದಳ್ಗುರಿ ವಿಭೂಷಣಾವಳಿ ಭೂಭೃ ॥
ತ್ಪುತ್ರಿ ಗವಾಧಿಪನಜಿನಂ ।
ನೇತ್ರಂ ನಿವಸನಮೆನಿಪ್ಪನೊಸೆಗೆಮಗಭವಂ ॥ 458

1 ಪಿಂತು. 2 ವೃತ್ತಮೆಂ. 3 ಗಲ್ಲಂ. 4 ಅದರ್ಕ್ಕ. 5 ಮುಳುಳು.

ಸೂತ್ರಂ || 107 ||

ಅವಧಾರಿಸದುಕ್ತಾರ್ಥಮ |
ನವಿಶೇಷದೆ ಮಗುಳ್ದು ನು[1]ಡಿದೊಡೇಕಾರ್ಥಂ ಕ್ರೋ ||
ಧ ವಿಷಾದಖೇದಭಯಹ |
ರ್ಷವಿಸ್ಮಯಾದಿಗಳೊಳನ್ನವಿಷ್ಟಮದುಷ್ಟಂ || 459

ಪ್ರಯೋಗಂ ||

ಪೂರ್ವಾರ್ಧಕ್ಕೆ ||

ಕಂ|| ಉನ್ಮನಮೆ ಮಾಳ್ಕುಮುತ್ಕೆಯ |
ನುನ್ಮದಬರ್ಹಿಣಶಿಖಂಡಿಕೇಕಾವಿರುತಂ ||
ತನ್ಮಧುರಧ್ವನಿಯುಂ ಜಳ |
ಧೃನ್ಮೇಘನಿನಾದಮೊದವೆ ದೆ[2]ಸೆದೆಸೆಗೆಸೆಗುಂ || 460

ಅಪರಾರ್ಧಕ್ಕೆ ||

ವೃ|| ಗಗನಾಧ್ವರ್ ಶರಣಾಗಿಮಾಗಿಮುಮರರ್ ನಿಂದಾ[3]ನಿಮಾನಿಂ ದಿಶಾ |
ಗಗಧೀಶರ ನೆರೆದೊಡ್ಡಿಮೊಡ್ಡಿಮುರಗರ್ ಬಂದೆಯ್ದಿಮೆಯ್ದಿಂ ಮನ ||
ಸ್ವಿಗಳೇದೈತ್ಯನನಿಕ್ಕಿ ಮಿಕ್ಕಿಮದಟರ ಪೂಣ್ಬಾಣ್ಮೆ ಮಾಣ್ಮಂ ಯಶೋ |
ರ್ಥಿಗಳನ್ನಂ ನೆಲೆಗುಯ್ಯಿಮುಯ್ಯಿಮನುತುಂ ತನ್ವಂಗಿ ಪುಷ್ಯಲ್ಕಿದಳ್ || 461

ಸೂತ್ರಂ || 108 ||

ಕರಿಕಳಭಮೆನೆ ಶಿರಶ್ಶೇ |
ಖರಮೆನೆ ನವಪುಷ್ಪಮಾಲೆಯೆನೆ ಮೌಕ್ತಿಕಭೂ[4] ||
ಸುರಹಾರಯಷ್ಟಿಯೆನೆ ಪೌ |
ನರುಕ್ತ್ಯಮಾಗದು ವಿಶೇಷಸಂಭಾವನೆಯೊಳ್ || 462

ಪ್ರಯೋಗಂ ||

ಕಂ|| ಆರಾಜಶಿರಶ್ಶೇಖರ |
ನಾರಿಂದಂ ಪಿರಿಯನಳವಿಯೊಳ್ ಬಳವದಹಂ ||
ಕಾರದೆ ಬ[5]ರೆ ತಗೆವಂ ಸ್ತಂ |
ಬೇರಮಕಳಭಮನು[6]ಪಾತ್ತವಾಲಧಿಮೂಲಂ || 463

ನವಕುಸುಮಮಾಲೆ ಮೌಕ್ತಿಕ |
ವಿವಿಕ್ತಹಾರಾನುಕಾರಿ ಕ[7]ರಮೊಪ್ಪಿರ್ಕುಂ ||
ಸವಿಲಾಸದಸ್ಯುವನಿತಾ |
ನಿವಹಘನಸ್ತನತಟಾಂತರವ್ಯಾಲಗ್ನಂ || 464

---

1 ಪಿಡುವುದೇ, ಬಿಡುವುದೇ. 2 ದಶದಿಶ. 3 ದಾಗಿಮಾಗಿಂ. 4 ಬಂಧುರ. 5 ವಿಲಕಿಗೆವಂ. 6 ನಾದಾತ್ತ 7 ಕಳ.

ಸೂತ್ರಂ || 109 ||

ವ್ಯರ್ಥಂ ಪೂರ್ವಾಪರವಿಹಿ |
ತಾ[1]ರ್ಥವ್ಯಾಘಾತದಿಂ ವಿರುದ್ಧಾರ್ಥಪದಂ ||
ಸಾ[2]ರ್ಥಕಮುಕ್ತಮನರ್ಥಕ |
ದರ್ಥಿತಜನದುಕ್ತಿವಿಷಯದೊಳ್ ಮತ್ತದುವುಂ || 465

ಆಯೆರಡರ್ಕಂ ಲಕ್ಷ್ಯಂ ||

ಕಂ || ಎಱಗಿಸು ಭುಜವಿಜಯದಿನಣ |
ಮುಱಿದ ಜಿಗುರ್ತ್ತಿರ್ಪ್ಪರಾತಿನೃಪರಂ ಧ[3]ರ್ಮ್ಮ ||
ಕ್ಕೆಱವಟ್ಟಾಗಿರ್ದ್ದಯೆ ನೀಂ |
ಪೆಱರಾರುಂ ನಿನಗ ಪಗೆವರೇಂ ಬರುವೊಳರೇ || 466
ಪರದಾರಗಮನಮಾ[4]ಯಾ |
ಚರಿತಂಗ[5]ನಗೇತು ಯುಕ್ತಮಕ್ಕುಂ ತತ್ತ್ವಂ ||
ದರರುಚಿರಮಧುರವ[6]ನಿತಾ |
ಧರಪಾನಂ ತಾನದೆಂತು ಪೇೞ್ ಕೂ[7]ಡುಗುಮೋ || 467

ಸೂತ್ರಂ || 110 ||

ಮೊದಲೊಳ್ ಮುಂ ಪೇೞ್ದುದ್ದೇ |
ಶದಂದಮನುದೇಶಮಾಗದಂದಕ್ರಮಮಿ ||
ನ್ನದುವುಂ ಸಂಬಂಧಕ್ಕಾ |
ವುದಾನುಪನುಬೋಧಹೇತುವಾದೊಡದೋಷಂ || 468

ಉದಾಹರಣೆ ||

ವೃ || ಸತ್ತ್ವರಜಸ್ತಮೋಗುಣವಿಭಾಗದಿನೀತ್ರಿಜಗಕ್ಕೆ ತಾನೆ ಕ |
ರ್ತೃತ್ವದೊಳೊಂದಿಯುಂ ನೆ[8]ಱೆಯೆ ಸಂಹರಿಸಲ್ ನೆ[9]ಱೆದಂ ಸಮಂತು ನಿ ||
ತ್ಯತ್ವಮನಾಂತುವಿನಾಶನಜನಚ್ಯುತನೆಂಬಿನೆಗಂ ವಿಭಿನ್ನಮಾ |
ರ್ತ್ತಿತ್ವಮನಪ್ಪುಕೆಯ್ಯೆ ಪರಮೇಶ್ವರನೀಗೆಮಗಾಪ್ತತತ್ತ್ವಮಂ || 469

ಕಂ || ವಾತಂ ಪಿತ್ತಂ ಕಫಮುಂ |
ಬೀತೆಱದಿಂ ಮೂಱು ದೋಷಮಾದ್ಯಂತಸಮಾ ||
ಖ್ಯಾತಂಗಳವುಷ್ಣದಿನತಿ |
ಶೀತದಿನುಪಶಮಿಕುಮಲ್ಲಿ ಮಾಧ್ಯಮದೆಱಂದುಂ || 470

ಸೂತ್ರಂ || 111 ||

ಕಾಳಸ್ವಭಾವದೇಶಸ |
ಮಾಳಕ್ಷಿತವಸ್ತುರೂಪವಿಪರೀತಮಮಂ[10] ||
ತಾಳೋಕವಿರುದ್ಧಂ ಗುಣ |
ದೋ[11]ಳಿಗೆ ಮಂದಿಕ್ಕುರ್ವಮರಮೆ ಕವಿಕೌಶಲದಿಂ || 471

---

1 ತಾರ್ಥಂ. 2 ಸ್ವಾರ್ಥಕ. 3 ಧರ್ಮ್ಮ. 4 ಮಾಯ್ಯಾ. 5 ನಿನಗೆಂತು. 6 ವೃತಾ. 7 ಮಾ. 8 ಬೆಱೆಯ. 9 ಮೆಱೆದುಂ. 10 ದಿಂನಾ. 11 ಲಾಲನದೊಳ್ ವಿಮುಗಿಮಕ್ಕ ಕವಿಕೌಶಲದಿಂ.

ಅನಿತರ್ಕ್ಯಂ ಲಕ್ಷ್ಯಂ ॥

ವೃ ॥ ವಿಕಚಾಂಭೋರುಹಷಂಡಮುನ್ಮದಮರಾಳಾನೀಕಮುತ್ಫುಲ್ಲಚಂ ।
ಪಕಮಾಕಂದಮಹೀಜಮುಜ್ಜ್ವಳವಿಮುದ್ರಂಗಂ ಸ್ಫುಟತ್ಕೋಕಿಲ ॥
ಪ್ರಕಟಾರಾವಪರಂಪರಾಪರಿಗತಾಶಾಕುಂಜಮಕ್ಷೀಬಕೇ ।
ಚಕದಂಬಂ ಜಗತೀಜನಕ್ಕೆ ಪಡೆವತ್ತಭ್ರಾಗಮಂ ರಾಗಮಂ ॥ 472

ಇದು ಕಾಲವಿರುದ್ಧಂ ॥

ಕಂ ॥ ಕೋಡುಳ್ಳ ತುರಂಗಂ ಬಂ ।
ಡಾ[1]ಡುವ ನವಕರ್ಣಿಕಾರಮತಿಮಧುರತೆಯೊಳ್ ॥
ಕೂಡಿದ ನಿಂಬಾರಾಮಂ ।
ನಾಡೊಳಗೊಳವೆಂದೊಡಿನ್ನದೇವರ್ಣ್ಣಿಪುದೋ ॥ 473

ಇದು ಸ್ವಭಾವವಿರುದ್ಧಂ ॥

ಅ ॥ ಕರ್ಪೂರಭೂರುಹಾರಾಮೋ ।
ತ್ಸರ್ಪದ್ಧೂಳೀ [ವಿ]ಧೂಸರಂ ॥
ತೋರ್ಪುದಾತಿಥ್ಯಮಂ ಮಾಡಲ್ ।
ಬರ್ಪಂತೀ ಮಲಯಾನಿಲಂ ॥ 474

ಇದು ದೇಶವಿರುದ್ಧಂ ॥

ಕಂ ॥ ಪೇಜೊಂದದ್ಭುತರಸಮಂ ।
ಬೀಜುತ್ತುಮನೇಕವಿವಿಧಫಲಪರಿಣತಿಯಿಂ ॥
ದಾಜಿಂ ಋತುಗಳುಮೊಡನೆಯೆ ।
ತೋಱಿದುವು ತಪಃಪ್ರಭಾವದಿಂ ಮು[2]ನಿಪತಿಯಾ ॥ 475

ಇದು ಕವಿಕೌಶಲಂ ॥

ಸೂತ್ರಂ ॥ 112 ॥

ನ್ಯಾಯಾಗಮನೃಪವಿದ್ಯಾ ।
ಮ್ನಾಯಕಲಾಕಾಮತಂತ್ರವಿಷಯವಿರೋಧ ॥
ಪ್ರಾಯಂ ಶಾಸ್ತ್ರವಿರುದ್ಧಂ ।
ಶ್ರೇಯಮದಂತೆಲ್ಲಿಯಾನುಮುಕ್ತಿಕ್ರಮದಿಂ ॥ 476

ಉದಾಹರಣೆ ॥

ಕಂ ॥ ಅವಿನಶ್ವರಗತಿ ಸಂ[3]ಸ್ಥಾ ।
ರವೆಂಬ ಸು[4]ಗತೋಕ್ತಿ ಸತ್ಯಮಂತಲ್ಲದೊಡಾ ॥
ನವನೀಲನೀರಜಾಕ್ಷಿಯ ।
ಸವಿಲಾಸಾಲೋಕಮಿನ್ನು ಮಿರ್ಕ್ಕುಮೆ ಮನದೊಳ್ ॥ 477

1 ತೋಱಿದ, 2 ಕನ್ನಮಿಪಾ, 3 ಸಂಚಾರ. 4 ಸಂಗತೋಕ್ತಿ.

ಕಂ ॥ ಉಪನಯನಂಗೆಯ್ವುದೆಯುಂ ।
ಸ್ವಪೂರ್ವ್ವವಾಸನೆಯ ಬಲದಿನಿಂತೀತಂ ವೇ ॥
ದಪುರಾಣವೇದಿಯಾದಂ ।
ವ್ಯಪೇಕ್ಷೆಗೆಯ್ಯುಗ್ಗಮೆ ವಿಶುದ್ಧಮಣಿ ಸಂ[1]ಸ್ಕೃತಿಯುಂ ॥ 478

ಉೞಿದುವಕ್ಕರವಿಾತೆಱದಿನಱಿದುಕೊಳ್ವುದು ॥

ಸೂತ್ರಂ ॥ 113 ॥

ನಿ[2]ಯತಸ್ಥಾನಂ ಪದವಿಸ್ಟೃ ।
ತಿಯೊಳಾದ ವಿರಾಮವಮಱಿಗೆ ಯತಿಯಕ್ಕುಮದ ॥
ಕ್ಕರ್[3]ಯ ಥಾಗತಿ ಯತಿಭಂಗಂ ।
ಪ್ರಯುಕ್ತಸಮಭರವಿಭಾಗದೊಳ್ ನಿ[4]ರ್ದ್ದೋಷಂ ॥ 479

ಪ್ರಯೋಗಂ ॥

ಕಂ ॥ ಅತಿಮೃದುವನಿೞಿಸುಗುಂ ಮ ।
ತ್ತತಿತೀವ್ರನನಣಮೆ ಜನಮುದೆಳಸದದೆಂತುಂ ॥
ಮತಿವಂತನಂ[5]ತಱಿಂದೀ ।
ಕ್ಷಿತಿಯುಂ ಬ[6]ಸದಾಗಿ ಮಾೞ್ಕೆ ಮಧ್ಯಮಗತಿಯಿಂ ॥ 480

ವೃ ॥ ಇಂತೀಪೇೞ್ದ ನೃಪಗುಣವಿಭೇದಂಗಳಂ ತಾಳ್ದಿ ನಿಂದಾ ।
ತಂ ತನ್ನೊಳ್ ತಾಳ್ದುಗುಮಖಿಳಲೋಕೈಕಸಾಮ್ರಾಜ್ಯಮಂ ವಿ ॥
ಭ್ರಾಂತೇಂ ಭೂವ್ಯಂ[7]ತರರಿಪುಗಳಂ ಗೆಲ್ದು ವಿಶ್ರಾಂತದಿಂ ಕ ।
ಲ್ಪಾಂತಸ್ಥಾಯಿಪ್ರಕಟವಿಹಟತ್ಕೀರ್ತ್ತಿಗಂ ಕಾಂತನಕ್ಕುಂ ॥ 481

ಸೂತ್ರಂ ॥ 114 ॥

ಗುರುಲಘುರಚನೆಗೆ ನಿರ್ದ್ದಿ ।
ಷ್ಟರೂಪಹೀನಾಧಿಕಾಕ್ಷರಂ ಛಂದದೊಳೂಂ ॥
ದಿರೆ ಭಿನ್ನವೃತ್ತಮೆಂಬುದು ।
ದುರುಕ್ತಮತ್ಯಂತದೋಷಮುಕ್ಕುಂ ಕೃತಿಯೊಳ್ ॥ 482

ಲಕ್ಷ್ಯಂ ॥

ಕಂ ॥ ಜೀಮೂತಕೇತುಗಣ್ಣಂ ।
ಗೆ ಮೇಘವಾಹನನದೆಂತು ಮುಂ ಬೆಸಕೆಯ್ದಂ ॥
ನಿಮ್ಮಣ್ಣಂಗೆ ಮತಂಗಂ ।
ಗಾಮಱ್ಕೆಯಿ ವಿನಯದಿಂದೆ ನೀಂ ಬೆಸಕೆಯ್ಯಿಂ ॥ 483

1 ಸತ್ಕ್ರಿಯೆ. 2 ನಿಯಮ. 3 ಕ್ಕರ್ಯಥಾಕ್ರಗತಿಯುಭಂಗಂ. 4 ನಿರ್ದುಷ್ಟಂ. 5 ರಱಿನಿಂತೀ. 6 ವಶವಾಗಿ. 7 ವ್ಯಂತರ.

ವೃ ॥ ಪಣಮನೀ[1]ಯನಂ ಪ್ರಿಯಂನುಡಿದೆಂತುಂ ।
ಮಾಣೆ ಮತ್ತವನ ಪಂಬಲನೆಂತುಂ ॥
ಕೇಣಕಾಱನನದೇಕೆಗ[2] ಕಾವ್ಯೆ ।
ನಾಣಪುತ್ತ ನಗೆಯಂ ನೀಂ ಬಗೆಯ್ಯೆ ॥ 484

ಸೂತ್ರಂ ॥ 115 ॥

ಮಿಗೆ ದಲ್ ವಲಂ ವೆಱಂ ಮ ।
ತ್ತೆ ಗಡಂ ಗಳ ಕೆನ್ನ ಮೆಂಬನರ್ತ್ಥಕಪದಮಂ ॥
ಸೊಗಯಿಸೆ ವಾ[3]ಕ್ಯಾಲಂಕೃತಿ ।
ನೆಗೞ್ವೆಡೆಯೊಳ್ ಪೇೞ್ಗೆ ಪೇೞದಿರ್ಕ್ಕೆಱಿಂದೆಡೆಯೊಳ್ ॥ 485

ಪ್ರಯೋಗಂ ॥

ವೃ ॥ ವಿರಹಿ ಮೃಗಂ ದ[4]ಲಂಜಿಸುವವಂ ಮಧು ದಲ್ ಬಲೆಗಳ್ ಲತಾಳಿ ದಲ್ ।
ಕರಿಕು ಕನಲ್ದು ಕಾಯ್ದು ವಿರಹಾಗ್ನಿ ದಲೊಪ್ಪುವ ಕೆಯ್ದೊಳಂ ದ[5]ಲಾ ॥
ಗುರಿ ಪವನಂ ದಲೆಂಬಿನಮನಂಗನ ಬೇಂಟೆಯ ಬಿಂ[6]ದದಂತೆ ಬಂ ।
ದಿರೆ ಪೊಸಸುಗ್ಗಿ ಕೆಯ್ಗೞಿಯೆ ಕಣ್ಗೆಸೆದಿರ್ದ್ದವು ನಂದನಾಳಿಗಳ್ ॥ 486

ಕಂ ॥ ಮಾವಿನ ಕೊನೆ ಮಾವಿನ ನನೆ ।
ಮಾವಿನ ಪೂ ಮಾವಿನೆಳೆಯ ಮಿಡಿ ಮಾವಿನ ಕಾಯ್ ॥
ಮಾವಿನ ಪಣ್ಣೆಂದು ಜನಂ ।
ಭಾವಿಸೆ ಸರ್ವ್ವಾಂಗಸುಂದರಂ ಮಾವೆ ವಲಂ ॥ 487

ವೃ ॥ ವಿಕ್ರಮವಹ್ನಿ ಮುನ್ನ ಕಾದುರ್ಕೊಂ[7]ಡುದು ತನ್ಮನಿಯಂ ಗಡಶ್ವಮೇ ।
ಧಕ್ರತು ಧೂ[8]ಮಮಾದುದು ಗಡಂ ಬೞಿಯಂ ಶಿಖಿ ಧೂಮಯೋನಿಯೆಂ ॥
ಬೀಕ್ರಮಮೆಂತು ೞಿಮನೆ ವಿಕ್ರಮಯಜ್ಞವಿ[9]ಧಾನಮಂ ಧರಾ ।
ಚಕ್ರಮೆ ಮೆಚ್ಚಿ ಬಣ್ಣಿಸೆ ಜಸಂಬಡೆದಂ ಪೊಲಕೇಶಿವಲ್ಲಭಂ ॥ 488

ತೊಳಗೆ ಪೊನ್ನರಥಂ ರಥವಾಜಿಗ[10]ಳ್ ।
ಕಿಳಿಜಿ ವೀರರಸಂ ಕರೆಗಣ್ಮೆ ಕಂ ॥
ಟಳಿಸೆ ಮೆಯ್ನವಿರ್ಗ್ಗಳನೊ[11]ಪ್ಪಿದಂ ।
ಗಳ ಸರಿತ್ಸುತನಾಹವಲಂಪಟಂ ॥ 489

ಅಂಕುರದಿಂ ಪ್ರವಾಳಚಯದಿಂ ನವಕುಟ್ಮಲಶೋಭೆಯಿಂ ಪಡಂ ।
ಗಂ ಕುಡುತಿರ್ಪ್ಪ ಪುಷ್ಪರುಚಿಯಿಂ ವಿಳಸತ್ಫಳಸಂಕುಳಂಗಳಿಂ ॥
ಪಂಕರುಹಾಸನಂ ಬರೆದು ಬ[12]ಚ್ಚಿರಿಸಿವಂತಿರೆ ನೋೞ್ಪೊಡೆತ್ತಲುಂ ।
ತಾಂ ಕರಮೊಪ್ಪಿತೋಱುವುದು ಬಂದ ಬಸಂತದೊ[13]ಳೊಂದು ಮಾಮರಂ ॥ 490

---

1 ನೀಯನಂ. 2 ಗಣಿಕೆವೆಗ್ಗೆ. ಗಳೆಗ್ಗೆ. 3 ಕಾವ್ಯ. 4 ದಲಂಜ (ಡ) ಮಿಂಪಿನಂ ಮದನಂ. 5 ದಲಾನಂ-ರಿವನಲಂ. 6 ಬೀಜದಂದವಿಂ ಬರೆ. 7 ಕೊಂಡುದು. 8 ಧೂಕ, ಮಾಕು. 9 ವಿಧಾನ. 10 ಯೊಳ್. 11 ಪೊಪ್ಪಿದಂ. 12 ಚಿತ್ರಿಸಿದಂತಿರೆ. 13 ದ ನಂದನಾಳಿಗಳ್.

ಕಂ ॥ ಪಗಲೊಪ್ಪದು ಕಿಱು ನಿಶೆಯೊಳ್ ।
ಸೊಗಯಿಸದರವಿಂದಮದಱಿನಂತೆರಡುಮನೆಂ ॥
ತು ಗಡ ಸಮನೆಂಬೆನಾಕೆಱು ।
ಮೃಗನಯನೆಯ ಪಗಲುಮಿರುಳುಮೊಪ್ಪುವ ಮೊಗಮಂ ॥ 491

ವೃ ॥ ಕೇಳಿಱ ಪೌರುಷಮನಾತ್ಮಪುಣ್ಯದಿಂ ।
ಬೇಱೆ ಮಾಡದೆ[1]ಸರ್ಪೊಂ ವಿರೋಧಿಯಂ ॥
ವಿಾ[2]ಱುಗುಂ ಮೆಱೆಮೆಱೆಂಕೆಯೊಂದಱಿಂ ।
ಪಾಱಲಾರ್ಕ್ಕಮೆ ಪತತ್ರಿರಾಜನುಂ ॥ 492

ಕಂ ॥ ಆಕಥೆ ಮತ್ತಂತೆಂದೊಡೆ ।
ಭೀಕರಕರಿಮಕರನಿಕರಭಿನ್ನತರಂಗಾ ॥
ನೀಕಲವಣಾಂಬುರಾಶಿವೃ[3] ।
ತಾಕೃತಿಕಮನೀಯಮುಂಟು ಜಂಬೂದ್ವೀಪಂ ॥ 493

ವೃ ॥ ಬಿಚ್ಚತಮಿದ್ದರ್ ಕಣ್ಣ ಪಸಪ್ಪೋಡುವಿನಂ ಸಲೆ ನೀನೆ ನೋಡ ಪೆ ।
ಮ್ಮರ್ಚ್ಚರನಿಕ್ಕಲೆನ್ನ ಭುಜದಂಡಮೆ ಸಾಲದೆ ಕೆನ್ನಮೆಲ್ಲಿಯುಂ ॥
ಮ[4]ಚ್ಚದೊನಿಲ್ಲ ನಿನ್ನಳವನಿನ್ನದಱಿಂ ಗಳ ನೀನೆಯಾ[5]ನಕ ।
ವೃಚ್ಚಿತನಯ್ ತ್ರಿಶಕ್ತಿಯುತನಯ್ ವಿಜಿಗೀಷುವಯಸ್ತ್ವೈರಿಯುಮ್ ॥ 494

ಉೞಿದುವರ್ಕ್ಕಮಿಾತೆಱದಿಂ ನೋಡಿಕೊಳ್ವುದು ॥

ಇದು ಕಾವ್ಯಮಲವ್ಯಾವೃತ್ತಿಯೊಳ್ ಕಾವ್ಯವಾಕ್ಯಾರ್ಥದೋಷಾನು
ಕೀರ್ತನಪ್ರಕರಣಂ ದ್ವಿತೀಯಂ ॥

ಗೀತಿಕೆ ॥ ಈಪೇೞ್ದ ಮಾೞ್ಕೆಯಿಂ ದೋಷಾ ।
ಲೇಪಂ ಪೊರ್ದದಂತಿರೆ ಸನ್ನಿಬಂಧ ॥
ವ್ಯಾಪೃತನಕ್ಕೆ ಗುಣವದರ್ತ್ಥಂ ।
ವ್ಯಾಪಕಮಾಗೆ ಕವಿತ್ವತತ್ವದೊಳ್ ॥ 495

ವೃ ॥ ಸ[6]ಮುಚಿತಕೃತಿದೋಷದೂಷ್ಯಮಾರ್ಗ ।
ಕ್ರಮಪರಿಭಾವಿತಚಿತ್ತವೃತ್ತಿಯಪ್ಪೊಂ ॥
ಗಮಳಿನಕವಿತಾಗುಣೋದಯಶ್ರೀ ।
ಸಮನಿಸುಗುಂ ಸತತಾಭಿಯೋಗದಿಂದಂ ॥ 496

ಸಾರವಿಚಾರಬಂಧುರಮತಿಪ್ರಸರಂ ಪರಿಪಕ್ವಶಾಸ್ತ್ರಸಂ ।
ಸ್ಕಾರನುಪೇತಕೌತುಕರಸಂ ವಿದಿತಾಗಮಲೋಕವೃತ್ತನು ॥
ತ್ಸಾರಿತಮತ್ಸರಂ ಸುಜನವತ್ಸಲನೆಲ್ಲಿಯುಮಿಾತನೆಂದು ಕೆ ।
ಯ್ಯಾರದೆ ಬಣ್ಣಿಕುಂ ವಿಬುಧಮಂಡಲಿ ಪಂಡಿತನಾಗವರ್ಮ್ಮನಂ ॥ 497

ಇದು ಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯಮಾನಾನೂನಕವಿತಾ
ಗುಣೋದಯಂ ಶ್ರೀನಾಗವರ್ಮ್ಮಪ್ರಣೀತಮಪ್ಪ ಕಾವ್ಯಾವಲೋಕನದೊಳ್
ಕಾವ್ಯಮಲವ್ಯಾವೃತ್ತಿಯೆಂಬುದು ದ್ವಿತೀಯಾಧಿಕರಣಂ ॥

1 ದಿಪಪಂ. 2 ವಿಾಱುತುಂ. 3 ಕೃತಾಕೃತ, ವೃತಾಕೃತ. 4 ಮೆಚ್ಚದೊನಿಲ್ಲ. 5 ಯಾನಕಾಲಪ್ರತ್ಯುತನ. 6 ಸಮುದಿತ.

3. ಗುಣವಿವೇಕಾಧಿಕರಣಂ.

ಮಾರ್ಗ್ಗವಿಭಾಗದರ್ಶನ ಪ್ರಕರಣಂ.

ವೃ ॥ ಇದು ಸೌಂದರ್ಯ್ಯಗುಣಪ್ರಕಾಶಮಿದು ತಾನಗ್ರಾಮ್ಯತಾ[1]ಧಾನಮಿಂ ।
ತಿದು ಭಾಸ್ವತ್ಪರಭಾಗರಮ್ಯಮಿದು ಬಂ[2]ಧಾಶ್ಲೇಷವಿಚ್ಛಿತ್ತಿಗಾ ॥
ಸ್ಪದಮೆಂದಿಂ[3]ತುಚಿತಪ್ರಯೋಗವಿ[4]ಧಿಯಿಂ ಸ[5]ಯ್ತುಪ್ಪಿನಂ ತಿರ್ದ್ದಿ ಪೇ ।
ಳ್ವುದು ಪೂಮಾಲೆಯನಿಂಬಿನಿಂ ಸಮೆವವೋಲ್ ಸತ್ಕಾವ್ಯಮಂ ಕಬ್ಬಿಗಂ ॥ 498

ಸೂತ್ರಂ ॥ **116** ॥

ನಿರತಿಶಯಕಾವ್ಯಶೋಭಾ ।
ಕರಂಗಳಾಗಿರ್ಪ್ಪ ಧರ್ಮ್ಮಮವು ಗುಣಮಕ್ಕುಂ ॥
ಪರಮಪುರಾಣಕವೀಶ್ವರ ।
ನಿರೂಪಿತಂಗಳ್ ವಿಚಿತ್ರಮಾರ್ಗ್ಗಯುತಂಗಳ್ ॥ 499

ಸೂತ್ರಂ ॥ **117** ॥

ಸಮಸಂಶ್ಲಿಷ್ಟಾರ್ತ್ಥವ್ಯ ।
ಕ್ತಿಮಧುರಕಾಂತಪ್ರಸನ್ನಸುಕುಮಾರೋಜ ॥
ಸ್ಸಮಭಿಮತೋದಾರಾಹ್ವಯ ।
ಸಮಾಧಿಗಳ್ ಕೃತಿಗುಣಂಗಳೀರಯ್ದಕ್ಕುಂ ॥ 500

ಅದೆಂತೆನೆ ॥

ಸೂತ್ರಂ ॥ **118** ॥

ಸಮಮೆಂಬುದು ಬಂಧದೊಳಮಿ ।
ಷಮಂ ಮೃದುಸ್ಫುಟವಿಮಿಶ್ರವಿ[6]ನ್ಯಾಸಪದ ॥
ಕ್ರಮದಿಂ ಮೂಱುಂ ತೆಱಂ ಬಂ ।
ಧಮುಂ ಯಥಾರ್ತ್ಥಾನುವೃತ್ತಿಯಿಂ ವರ್ತ್ತಿಸುಗುಂ ॥ 501

ಉದಾಹರಣೆ ॥

ಮೃದುಬಂಧಕ್ಕೆ ॥

ಕಂ ॥ ಶರದದೊಳೊನಲ್ದು ಬಿಡುತುಂ ।
ಧ[7]ರೇಂದ್ರಗಿರಿಕರಿಗಳುಡಿಯೆ ಪಾಯ್ದುವು ಕಾಯ್ಪಿಂ ॥
ಕರಟತಟಗಳಿತಮದಜಳ ।
ಪರಿಮಳಸಮವಿದಳದಳಿಕುಳಂ ನಗಕುಳಮಂ ॥ 502

---

1 ತಾದಾನ. 2 ಬಂಧಾಶ್ಲೇಷ. 3 ದೆ-ದು. 4 ವಿಧಿಯುಂ. 5 ಸಯ್ತುಪ್ಪಿನಂ. 6 [illegible]. 7 ಧುರುಗಿಂದರ

ಸ್ಫುಟಬಂಧಕ್ಕೆ ॥

ಕಂ ॥ ಅಂಭೋನಿಧಿಗಂಭೀರಂ ।
ಶುಂಭದ್ಭುಜಗೇಂದ್ರಭೋಗನಿಭಭುಜಪರಿಘಂ ॥
ಜಂಭಾರಿವೈಭವಂ ವಿ ।
ಶ್ವಂಭರೆಗಧಿನಾಥನಶ್ವಕಂಠಂ ಖಚರಂ ॥ 503

ಮಿಶ್ರಬಂಧಕ್ಕೆ ॥

ಕಂ ॥ ಹ[1]ಸ್ತಾವಚಯದಿನುರುಪು ।
ಷ್ಪಸ್ತಬಕಮನುನ್ಮದಭ್ರಮದ್ಭ್ರಮರಪರಿ ॥
ತ್ರಸ್ತಮತಿ ಮೆಲ್ಲನೆಱಗಿ ಘ ।
ನಸ್ತನವತಿ ಕೊಯ್ದಳಾಮ್ರಶಾಖೆಯೊಳೊರ್ವ್ವಳ್ ॥ 504

ಸೂತ್ರಂ ॥ 119 ॥

ಅಶಿಥಿಲಪದಚಯರಚನಾ ।
ತಿಶಯಂ ಸಂಶ್ಲಿಷ್ಟಮೆಂಬುದಕ್ಕುಂ[2] ನೇಯಂ ॥
ವಿಶದಾರ್ತ್ಥಂ ಶಬ್ದಾನ್ವಯ ।
ವ[3]ಶಮರ್ತ್ಥವ್ಯಕ್ತಿಯೆಂದು ಪೇೞಲ್ಪಡೆಗುಂ ॥ 505

ಉದಾಹರಣೆ ॥

ಸಂಶ್ಲಿಷ್ಟಕ್ಕೆ ॥

ಕಂ ॥ ಅದಿರದಿದಿರಿದಿರನೆಯ್ತಂ ।
ದೊದಱುತ್ತುಂ ಪೊಕ್ಕು ಪಟುಪವಿಪ್ರತಿಮ ಭುಜಂ ॥
ಕೆದಱಿ ಮೆಱೆದೋವದೆಚ್ಚಂ ।
ಕದನದೆ ವಿದ್ವಿಡ್ಬಳಪ್ರಧಾನರನಿಂದ್ರಂ ॥ 506

ಅರ್ತ್ಥವ್ಯಕ್ತಿಗೆ ॥

ಕಂ ॥ ಒರಂತೆ ಪರೆದ ನವಸಂ ।
ಧ್ಯಾರುಚಿಯಿಂದಪರದಿಗ್ವಿಭಾಗದೊಳಿನಿಸೊಂ ॥
ದಾರಕ್ತಮಾಗಿ ನೇಱಿಲ ।
ದೋರೆಯನನುಕರಿಪುದಾದುದಾಗಸಮಾಗಳ್ ॥ 507

ನೇಯಕ್ಕೆ ॥

ಕಂ ॥ ಆರಕ್ತಮಾಗಿ ನೇಱಿಲ ।
ದೋರೆಯನನುಕರಿಪುದಾದುದಾಗಸಮನೆ ಸಂ ॥
ಧ್ಯಾರುಚಿಯಿನಕ್ಕುಮೆಂದವ ।
ಧಾರಿಸಿ ನೆಱೆಯಱಿದುಕೊಳ್ವುದಿ[4]ದು ನೇಯಾರ್ತ್ಥಂ ॥ 508

---

1 ಹಸ್ತಾವಳಿ(ಲಿ)ಚಯದುಪುಂ. 2 ಕ್ಕುಮಮೇಯಂ. 3 ಮಜ. 4 ದದು.

ಸೂತ್ರಂ ‖ 120 ‖

ಅಗ್ರಾಮ್ಯವಚನವೃತ್ತಿ ಸ ।
ಮಗ್ರರಸಾಪೂರ್ಣ್ನಮಪ್ಪುದದು ಮಧುರಂ ನಿ ‖
ರ್ವ್ಯಗ್ರಪ[1]ದವಿಸ್ಮೃತಿ ಪರಚಿ ।
ತ್ತಗ್ರಹಣಸಮರ್ತ್ಥಮಪ್ಪುದಂತದು ಕಾಂತಂ ‖ 509

ಉದಾಹರಣೆ ‖

ಮಧುರಕ್ಕೆ ‖

ಕಂ ‖ ಅಳಿಕುಳರುತಿಗಳಿನವನತ ।
ಫಳತರುಗಳಿನುಚಿತಕುಸುಮಗಂಧದಿನಬಳಾ ‖
ವಿಳಸನದಿಂದೀವುದು ಗಂ ।
ಧಿ[2]ಳವಿಷಯಂ ಸಕಳವಿಷಯರಸರಸಿಕತೆಯಂ ‖ 510

ಕಾಂತಕ್ಕೆ ‖

ಕಂ ‖ ಅರಸಾಳ್ತನಮೆನ್ನದೆ ಕೇಳ ।
ಪರಮಾರ್ತ್ಥಮನೀಗಳೆನಗೆ ಸಾಮ್ರಾಜ್ಯಪದಂ ‖
ದೊರೆಕೊಂಡಂತಾದುದು ಪೋ ।
ಲ್ತಿರೆ ದೇವರ ಬರವೆ ದೇವದೇವರ ಬರವಂ ‖ 511

ಸೂತ್ರಂ ‖ 121 ‖

ಅತಿರೂಢಾರ್ತ್ಥಮಗೂಢಂ ।
ಪ್ರ[4]ತೀತಿಸುಭಗಂ ಪ್ರಸನ್ನಮೆನೆಪಡೆಗುಮಪಾ ‖
ಕೃತನಿಷ್ಠುರಾಕ್ಷರಂ ಲಾ ।
ಲಿತಲಲಿತಪದಪ್ರಕಾರಮದು ಸುಕುಮಾರಂ ‖ 512

ಅವರ್ಕ್ಕನುಕ್ರಮಪ್ರಯೋಗಂ ‖

ಕಂ ‖ ಮಡುಗಳೊಳಗಲರ್ದ ನೆ[5]ಯ್ದಿಲ ।
ಕಡುಗಂಪುಮನಿವಱ ಕಂ[6]ಪೆ ಗೆಲ್ದುವು ಸಾಸಿ ‖
ರ್ಮ್ಮಡಿಯೆನೆ ಪೊಂಬಣ್ಣದ ಕಂ ।
ಪಿಡಿದಿರೆ ಸೊಗಯಿಪುವು ಗಂಧಶಾಲಿವನಂಗಳ್ ‖ 513
ಮಣಿಭವನಂಗಳ ರುಚಿಗಳ್ ।
ಪೆಣೆದು ನಭೋಂಗಣದೊಳಮರಚಾಪವಿಲಾಸ ‖
ಕ್ಕೆಣೆಯಾಗಿರೆ ಬಹುವಿಧದಿಂ ।
ಕುಣಿವುವು ಕಾರ್ಗ್ಗತ್ತಲೆ ಕೇಗಿ ಸೋಗೆನವಿಲ್ಗಳ್ ‖ 514

1 ಪದಸ್ಥಿತಿರಚನೆಯೊಳ್ । ಪದ್ರಹಣ. 2 ಧಿಳ. 3 ಳಮ್ಮ. 4 ಪ್ರತೀತ. 5 ನಯ್ದಿಲ. 6 ಕಂಪು.

ಸೂತ್ರಂ ॥ 122 ॥

ಪಿರಿದುಂ ಸಮಾಸವಾಗಿರೆ ।
ವಿರಚಿಸುವುದು ತಾನದೋಜಮಕ್ಕುಂ ಲೋಕೋ ॥
ತ್ತರವರ್ಣ್ಣನಂ ವಿಶೇಷಣ ।
ಪರಪ್ರಕರ್ಷೋಕ್ತಿಯುಕ್ತಮಪ್ಪುದುದಾರಂ ॥ 515

ಉದಾಹರಣೆ ॥

ಓಜಕ್ಕೆ ॥

ಕಂ ॥ ಬಕಕುರರಪಕ್ಷವಿ[1]ಕ್ಷಿ ।
ಪ್ತಕಂಜಕಿಂಜಲ್ಕಪುಂಜಪಿಂಜರಿತಾಚ್ಛೋ ॥
ದಕಪರಿಪೂರ್ಣ್ಣತಟಾಕ ।
ಪ್ರಕರಸರೋನಿಕರರಂಜಿತಾಶಾವಲಯಂ ॥ 516

ಉದಾರಕ್ಕೆ ॥

ಕಂ ॥ ಬಹುಪೋ[2]ಷಣದಿಂ ಮಾವಿನ ।
ಸಹಕಾರದ ಸೊನೆಯ ಸೋನೆ ಬೆಳೆಯಿಸ ಬೆಳಗುಂ ॥
ಮಹಿಯೆನೆ ಬಣ್ಣಿಸುವ ಪಿತಾ ।
ಮಹಂಗಮರಿದೆಗ್ಗ ವೊಗ್ಗೆ ನಿನಗಮುದೆನಗಂ ॥ 517

ಮತ್ತಮಲ್ಲಿ ಶ್ಲಾಘ್ಯವಿಶೇಷಣಕ್ಕೆ ॥

ಕಂ ॥ ಮನೆಮನೆದಪ್ಪದೆಯುಂ ಪಳು ।
ಕಿನ ಕೇರ್ಗ್ಗಳ್ ಪವಳದೆಸೆವ ಕಂಬಂ ಕಕ್ಕೆ ॥
ತನದ ತೊಲೆ ಪೊನ್ನಪೊಸಜಂ ।
ತೆ ನೀಲದಡಿಗಲ್ಗಳೆಂದೊಡೇವಣ್ಣಿಪುದೋ ॥ 518

ಸೂತ್ರಂ ॥ 123 ॥

ಪೆಱವಱ ಧರ್ಮ್ಮಂಗಳನೇ ।
ತೆಱದಿಂದಂ ತಂದು ಪೆಱವಱೊಳ್ ಪತ್ತಿಸಿ ಕ ॥
ಣ್ಪೆಱೆಯೆ ಚತುರೋಕ್ತಿ ಕೃತಿಯೊಳ್ ।
ನೆಱೆದಿರೆ ಪೇೞ್ವುದು ಸಮಾಧಿಯೆನೆ ಪೆಸರ್ವಡೆಗುಂ ॥ 519

ಉದಾಹರಣೆ ॥

ಕಂ ॥ ವಿನಿಮೀಲಿತನೀಲಾಂಬುಜ ।
ವನಮುನ್ಮೀಲಿತನವೀನಕಮಲವನಂ ತ ॥
ದ್ದಿನಮುಖದೊಳ್ ಮಧುಪಾಳಿಗೆ ।
ಜನಿಯಿಸಿದುವು ಪೞವೆಯು ಸುಸಿಲ ಪೊಸ ಸುಸಿಲಿಂಪಂ ॥ 520

1 ಏಕ್ಷಿ. 2 ಪೋಷಮಣಿಂ, ವರ್ಷಮಣಿಂ.

ಸೂತ್ರಂ || 124 ||

ಇವು ನಿಯತಂ ದಕ್ಷಿಣದೇ ।
ಶವರ್ತ್ತಿಕವಿರಾಜಮಾರ್ಗ್ಗದೊಳ್ ನೆಗಳ್ದ್ದಂ ಮು ||
ತ್ತವಱ ವಿಪರ್ಯ್ಯಯವೃತ್ತಿಯಿ ।
ಬವರಿಸುಗುಮುದೀಚ್ಯಮಾರ್ಗ್ಗದೊಳ್ ಪ್ರಚುರತೆಯಿಂ || 521

ಸೂತ್ರಂ || 125 ||

ವೈದರ್ಭ್ಭಗೌಡಮಾರ್ಗ್ಗವಿ ।
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ ||
ಲ್ಪಾದರಿಪರ್ ಕೆಲಬರ್ ಸಂ ।
ವಾದದೊಳೆರಡುಂ ಸ[1]ಮರ್ತ್ಥ್ಥವಪ್ಪುದಱಿಂದಂ || 522

ಇದು ಗುಣವಿವೇಕದೊಳ್ ಮಾರ್ಗ್ಗವಿಭಾಗದರ್ಶನಪ್ರಕರಣಂ ಪ್ರಥಮಂ ||

ಶಬ್ದಾಲಂಕಾರನಿರ್ಣ್ಣಯಪ್ರಕರಣಂ.

ಸೂತ್ರಂ || 126 ||

ನಿಜದಿಂದಂ ಚೆಲ್ವಗೆ ವಿಬು ।
ಧಜನಪ್ರಿ[2]ಯೆಗ[3]ಖಿಳಲೋಕವಿನುತ ಪ್ರಮದಾ ||
ಗ್ರಜೆಗೆ ಕೃತಿಸ[4]ತಿಗೆ ಶಬ್ದಾ ।
ರ್ತ್ಥಜಾತಮುಂತೆರಡು ತೆಱದಲಂಕೃತಿಯಕ್ಕುಂ || 523

ಸೂತ್ರಂ || 127 ||

ಅವಱೊಳ್ ಶಬ್ದಾಲಂಕಾ ।
ರವಿಭಾಗಂ ಯಮಕಮೆಸೆವನುಪ್ರಾಸಂ ಚಿ ||
ತ್ರವಿಚಿತ್ರಭಿತ್ತಿ ವಕ್ರೋ ।
ಕ್ತಿವಿಶೇಷಮುಮೆನೆ ಚತುರ್ವ್ವಿಧಂ ತಾನಕ್ಕುಂ || 524

---

1 ಪರತ್ಥ್ಥ. 2 ಪ್ರಿತೆ. 3 ಗಭಿವಿನಮಿತಕೀರ್ತ್ತಿ. 4 ನಮಗ.

ಅವಱೊಳಗೆ ॥

ಸೂತ್ರಂ ॥ 128 ॥

ಪದವರ್ಣವ್ಯಾವೃತ್ತಿ ದ ।
ಲ[1]ದು ಯಮಕಂ ವ್ಯವಹಿತಾ[2]ವ್ಯಪೇತಾತ್ಮಂ ಮ ॥
ತ್ತದು ಪಾದದಾದಿಮಧ್ಯಾಂ ।
ತದೊಳಕ್ಕುಮನೇಕಭೇದನಿಯತಸ್ಥಿತಿಯಿಂ ॥ 525

ಉದಾಹರಣೆ ॥

ವ್ಯವಹಿತಕ್ಕೆ ॥

ಕಂ॥ ಮಾಣಿಕದಂತೊಪ್ಪಿದನೀ ।
ಮಾಣಿ ಕರಂ ಕ[3]ೞಿಯೆ ಚೆಲ್ವುವಡೆದೆಂಬಿನೆಗಂ ॥
ಕ್ಷೋಣಿಯನಳೆಯಲ್ ಮುನ್ನಂ ।
ಕ್ಷೋ[4]ಣಿಮನಂ ವಿಷ್ಣು ತಾನೆ ವಾಮನನಾದಂ ॥ 526

ತಿಂದುಕಪೀನಫಲಂಗಳ ।
ನೊಂದೊಂದೆಡೆಗಳೊಳಲಂಪು ಪೋಪನ್ನೆವರಂ ॥
ತಿಂದು ಕಪೀನಕುಳಂ ವೃತಿ ।
ಯಂದದಿನಿಪ್ಪುರ್ದು ನಿಯುಕ್ತವನ್ಯಾಕನದಿಂ ॥ 527

ಫಲಸಾರಸನಮವಂತೆ ।
ತ್ತಲುವೊದವಿರೆ ಕುಳಿರ್ವ ಪುೞಿಲೊಳಿರ್ದಗೊಳ್ವನೆಗಂ ॥
ಕಲರುತಿಯುಂ ಪಾಡಿದುದು ।
ತ್ಫಲಸಾರಸನಂ ಪುಳಿಂದಲಲನಾನಿಕರಂ ॥ 528

ಆಲೋಚಂ ಸಾಲದೆ ಶಿಶು ।
ಪಾಲನನುೞಿದಿಕ್ಕಿ ಮಿಕ್ಕ ಭುವನಸ್ಥಿತಿಯುಂ ॥
ಪಾಲಿಸು ನೀಂ ನಿನಗೆ ಜಗ ।
ತ್ಪಾಲನವಿಜ್ಞಾನಮಂ ಪೆಱರ್ ಪ್ರಕಟಿಪರೇ ॥ 529

ಸರಭಸದೆ ಕಾಲಯ[5]ಮುನಾ ।
ಲ್ವ[6]ರುಕ್ಮಿಬಾಣದ್ರುಮಾದಿಗಳ್ ವೆರಸಖಿಲಾ ॥
ಸುರಚಕ್ರಂ ನಿನ್ನ ವಿಭೂ ।
ಸುರಚಕ್ರದ ಬಾಯ್ಗೆ ಬಾರದಿರದು ಮುರಾರೀ ॥ 530

ತಱಿಸಂದಿಸೆ ಕರಿಘಟೆಯಂ ।
ತು[7]ಱುಗಿರೆ ಪಾಯ್ದುವು ಶಿಲೀಮುಖಂ ಪುಷ್ಕರದೊಳ್ ॥
[8]ಗಱಿ ಸಂದಿಸೆ ಮೊರೆದೊವ್ಕೊರ್ದ ।
ಲೆಱಗುವ ಱದಿಂ ಶಿಲೀಮುಖಂ ಪುಷ್ಕರದೊಳ್ ॥ 531

1 ಲದೆ. 2 ಕಷ್ಯ. 3 ಕಳೆಯ. 4 ಕ್ಷೋಣಿಮನಂ, ಕ್ಷೋಣಿಚರಂ. 5 ಯಮನಂ. 6 ಸುರಚರುಬಾಣ,
7 ಮಱುಗಿರ. 3 ಕಱಿ, ಕಱಿ.

ಕಂ ॥ ನೆಯ್ದಿಲೆಸಱುವಱ ಪೋಲ್ವೆಯ ।
ನೆಯ್ದಿಲೆ ದಲ್ ಪಡೆದುವಿಲ್ಲ ಲೋಕವಮನಲೆಯ ॥
ಲ್ಕೆಯ್ದುಮಲರ್ಗಣೆಗಳಿರ್ಕ್ಕೆಮ ।
ಕೆಯ್ದು ಮನೋಜಂಗೆನಿಪ್ಪುವಾಕೆಯ ಕಣ್ಗಳ್ ॥ 532

ಮಲರೆ ತಮದೊಡ್ಡು ಪಂಕಜ ।
ಮಲರೆ ವಿನೀಲೋತ್ಪಲಾಳಿ ಮುಗಿಯೆ ಖಲರ್ ಸಂ ॥
ಚಲಿಸುತ್ತುಮುಗಿಯೆ ಜಗತೀ ।
ವಿಲೋಚನಂ ಮೂಡಿದಂ ವಿಲೋಚನನಾಗಳ್ ॥ 533

ಅಮಳ್ಗಳ್ ನ[1]ಯವಿಕ್ರಮಗುಣ ।
ದಮಳ್ಗಳ್ ನೃಪಶಾಸ್ತ್ರಶಸ್ತ್ರಪರಿಣತರ[2]ವರಂ ॥
ಸಮರಥದೊಳುದಗ್ರಶೌರ್ಯ್ಯಂ ।
ಸಮರ[3]ಸಸಂಪನ್ನನಾವನುಱದಾಂಪನ್ನಂ ॥ 534

ಮಂತಣಕಂ ಚೆದುರರ್ ಗಡ ।
ಮಂತಣಕಂ ನೆಗೞೆ ಬಂದರೆನಿಸಿದ್ದರ್ಗಂ ತಾಂ[4] ॥
ಮಂತಣಮುಸಿರದೆ ಕೆ[5]ಲರಾ ।
ಮಂತಣಮುಂಡಂತೆ ಪೆಱರ ನಯದೊಳೆ ತಣಿವರ್ ॥ 535

ಈಧರೆಯ ಪೆಂಡಿರುದ್ಧೃಪ ।
ಯೋಧರೆಯ ಮನೋಜರಾಗರಸಪೂರಿತಬಿಂ ॥
ಬಾಧರೆಯ ಕಂಬುಕಮ್ರಶಿ ।
ರೋಧರೆಯ ಪೆಡಂಗನಾರುಮೋನೆಯ್ದುವರೇ ॥ 536

ವೃ ॥ ಪನ್ನಗಕನ್ಯೆಯೊರ್ವ್ವಳುಪದೇಶಮನಿತ್ತಳೊ ನಾಗಬಂ[6]ಧಮಂ ।
ಪನ್ನಗಕನ್ಯೆಯೋ ಜೆತೆಯೊ ಮೆಯ್ಯೆರಡಿಲ್ಲೆನಿಪಪ್ಪುಗಳ್ಗತ ॥
ತ್ಪನ್ನಗಕನ್ಯೆಯಪ್ಪುಗ[7]ಳೆ ಮುಪ್ಪುರಿಗೂಡಿದುವೆಂಬ ಮಾತು ಮೆ ।
ಲ್ಪನ್ನಗಕನ್ಯೆಗ[8]ಳ್ಪುಗುವಿವಕ್ಕೊರ್ವಜರ್ ನಿನಗಾರೊ ನಲ್ಲಳೇ ॥ 537

ಪಾದಾದಿಯಮಕಕ್ಕೆ ॥

ಕಂ ॥ ಉಪದಾತ್ತನುತೋನ್ನತಮಂ ।
ದ್ವಿಪಮದಪರಿಪೂರ್ಣ್ಣಗಿರಿಸರಿತ್ಸಂತತಿಯಂ ॥
ಉ[9]ಪದಾತ್ತನುತೋನ್ನತಮಂ ।
ತಪನಕರೋತ್ತಪನತಪ್ತತಪನೋಪಲಮಂ ॥ 538

1 ನಯಗುಣವಿಕ್ರಮ. 2 ರವರುಂ. 3 ರಠ. 4 ತಾ, । ಮಂತಣ. 5 ಕೆಲರುಂ. 6 ಬಂಧದ.
7 ಗಳ. 8 ಪಟ್ಟುಗು. 9 ಮಪ, ನುಪ,

ಮಧ್ಯಾಂತಯಮಕಕ್ಕೆ ॥

ಕಂ ॥ ನಾನಾಶಶವ್ಯ ಗಧ[1]ರಮಂ ।
ಸಾನುಜತರುಶಿಖರಲಗ್ನಶಶವ್ಯ ಗಧ[1]ರಮಂ ॥
ಪೀನಸರೋಜಾಲಯಮಂ ।
ವಾನೇಚರಯುವತಿಜಿತಸರೋಜಾಲಯಮಂ ॥ 539

ಅಂತ್ಯಯಮಕಕ್ಕೆ ॥

ಶ್ಲೋ ॥ ನಂದ ಸರ್ವ್ವಗ[2]ತಂ ಧರ್ಮ್ಮ ।
ನಂದನಾಧ್ವರತೋಷಿತಂ ॥
ನಿಂ[3]ದು ಯಾತ್ರೇಚ್ಛೆಯೊಳ್ ಧರ್ಮ್ಮ ।
ನಂದನಾಧ್ವರತೋಷಿತಂ ॥ 540

ಅವ್ಯಪೇತಕ್ಕೆ ॥

ವೃ ॥ ಸರಂ ಸರಂ ಕಂತುವ ಮನ್ಮಥಾಂಬುಜಾ ।
ಕರಂ ಕರಂ ನೋಡೆ ಮೊಗಂ ವಳಿತ್ರಯಾಂ ॥
ತರಂ ತರಂಗಂ ಸ್ಮರಸಿಂಧುಗಾಲತಾಂ ।
ಕುರಂ ಕುರಂಗಾಕ್ಷಿಯ ಕ[4]ಣ್ ಮನೋಜನಾ ॥ 541

ಕಂ ॥ ಸುರರಮಣೀರಮಣೀಯ ।
ಸ್ವರೂಪಮತಿತರಳತರಳವಿಲಸದ್ವಿದ್ಯುತ್ ॥
ಸ್ಫುರಿತಮೆನೆ ಪೋಲ್ತು ಕರಗಿದು ।
ದರಗಿದು ದಹನೋಪತಪ್ತಮೆನೆ ತತ್‌ಕ್ಷಣದೊಳ್ ॥ 542

ಶ್ಲೋ ॥ ನಿನ್ನ ವಾಕ್ಯಾರ್ತ್ಥಮೆಂಬೊಂದು ।
ರನ್ನಕಂ ಬೆಗಡಂಗಡಂ ॥
ತನ್ನುಕ್ತಿಯಾಗೆ ತದ್ವಿದ್ಯ[5] ।
ನನ್ನನಾದಂ ಬಲಂಬಲಂ ॥ 543

ವ್ಯಪೇತಾವ್ಯಪೇತಕ್ಕೆ ॥

ಕಂ ॥ ಸಬಳಿಕೆಯಿಂ ಪಾ[6]ಱಯನೊ ।
ಕ್ಕು ಬೇರನಂ[7]ತಾಕುಬೇರನಾಯಕನತಿವಿ ॥
ಕ್ಲಬಚಿತ್ತಂ ತೊಟ್ಟಗೆ ತಾ ।
ಗಿಬಾಗಿದಂ ತಾಗಿಬಾಗಿದಂ ನರನಡಿಯೊಳ್ ॥ 544

ವರ್ಣ್ಣಾವೃತ್ತಿಯಮಕಕ್ಕೆ ॥

ವೃ ॥ ಚಾರೂರೂರೂ[8] ಧ್ಧರೂರೂರುರುಭುಜಶಿಖರೋದ್ಭಾಸಮಾನಾವಲೋಕಂ ।
ಕ್ರೂರಾರಾರಾ[9]ತಿರಾ[10]ರಾಜಕಮುಪಡಿನುಡಿಯುತ್ತುಂ ಮುರಧ್ವಂಸಿಯೊಳ್ ಸ ॥
ದ್ಧಾರಾರಾರಾಜಿರಾರಾಜಿತಭುಜನೊಳವಷ್ಟಂಭದಿಂ ಚೆಲ್ವುಕೆಯ್ಮ್ ।
ಕ್ಕಾರಾರಾರಾಧ್ಯರಾರಾರವರವರವರ್ಗಂತೊಪ್ಪಿದಂ ನೀಲಕಂಠಂ ॥ 545

---

1 ಫರನಂ. 2 ರಕ್ಕ. 3 ನಿಂದಯಾದ್ಯಕ್ರೆಕ್ಷೆಯೊಳ್. 4 ಮಾಯು'. 5 ದ್ಯಾ. 6 ಕಾಳ. 7 ದಂತಾ.
8 ರುದ್ವರೋರೂ, 9 ರಾತ್ರಿ. 10 ರೇರೇಜಮುಖಿ, ಮೃಗಾನನಟು.

ಸೂತ್ರಂ ॥ 129 ॥

ಪರಿವೃತ್ತಂ ಸಂದಷ್ಟಂ ।
ನಿರಂತರಾವಳಿ ಸಮುದ್ಗಮೆಂಬಿವು ಮೊದಲಾ ॥
ಗಿರೆ ಯಮಕಭೇದಮನಿತುಂ ।
ಪರಿಭಾವಿಸೆ ತತ್ಪ್ರಪಂಚದೊಳ್ ಪೊಕ್ಕಿರ್ಕ್ಕುಂ ॥ 546

ಉದಾಹರಣೆ ॥

ಪರಿವೃತ್ತಕ್ಕೆ ॥

ವೃ ॥ ತಾರಾತಾರಾಮಳಿನಗುಳಿಕಾಹಾರನೀಹಾರನೀಕಾ ।
ಕೋರುಸ್ಫೂರ್ಜತ್ಪ್ರವಿತತಯಶೋರಂಜಿತಾಶೇಷಲೋಕಂ ॥
ಸಾರಾಸಾರಾದ್ಯನುಗತವಿಚಾರೋಚಿತಾತ್ಮೀಯಚಿತ್ತೋ ।
ದಾರಪ್ರಜ್ಞಂ ನೆಗೞ್ದನವನೀಭಾಗದೊಳ್ ನಾಗವರ್ಮ್ಮಂ ॥ 547

ಸಂದಷ್ಟಕ್ಕೆ ॥

ವೃ ॥ ಒರೆದೊರ್ವ್ವರ್ ಸೆಣಸಿ ತಗುಳ್ದನೇಕವಾರಂ ।
ವಾರಸ್ತ್ರೀಜನಮಿದಿರೊಳ್ ತುಳುಂಕೆ ನೀರಂ ॥
ನೀರಂಧ್ರಸ್ತನತಟದೊಳ್ ಕೃತೋಪಹಾರಂ ।
ಹಾರಶ್ರೀಗೆಣೆಯೆನಿಸಿತ್ತು ವಾಷ್ಕಣೌಘಂ ॥ 548

ಆವಳಿಗೆ ॥

ಕಂ ॥ ಶ್ರೀಯುಂ ಶ್ರೀಯುಂ ದ್ವಿ[2]ಷದವ ।
ಸಾಯಕಸಾಯಕಪರಂಪರಂ ಲಲಿತಯುವ ॥
ತ್ಯಾಯತನತ್ಯಾಯತನಂ ।
ಗೇಯೋದ್ಗಾಯತ್ಸಕಳಕಳಂ ಸಕಳಕಳಂ ॥ 549

ಸಮುದ್ಗಕ್ಕೆ ॥

ಶ್ಲೋ ॥ ಹರಿದಾಂ[3]ತಂ ಬಲಂಬಭ್ರೇ ।
ಸುರಾಸುರಸಭಾಜನಂ ॥
ಹರಿದಾಂ[3]ತಂ ಬಲಂ ಬಭ್ರೇ ।
ಸುರಾಸುರಸಭಾಜನಂ ॥ 550

ಸೂತ್ರಂ ॥ 130 ॥

ಬವಕಾರಂಗಳ್ ಪಹವ ।
ಣ್ಣರ್ವೆರಡುಮವಿಭೇದದಿಂದೆ ಸಲ್ಗುಂ ಸಾಯೋ ॥
ಗವಿಶಿಷ್ಟಮುಂ ಸ್ವ[4]ರೂಪಮು ।
ಮವಿಕಲ್ಪದೊಳೊಂದಿ ನೆ[5]ಗಳ್ಗುಮವು ದುಷ್ಕರದೊಳ್ ॥ 551

1 ಕಟಕ, 2 ದ್ವಿಪದವ. 3 ದಾಂತಬಲಂ. 4 ಸ್ವರೂಪಸ್ವವಿಕಲ್ಪ. 5 ನೆಗಳ್ತೆವು.

* ಲಕ್ಷ್ಯಂ ॥

ಕಂ ॥ ನವಲ[1]ಕ್ಷಂ ಕಟಕದೊಳ್ ।
ನ್ನವಲ[1]ಕ್ಷಂ ನಿ[2]ಜವೆ ಪಿ[3]ರಿದು ವಿಬುಧನಿಕಾಯಮ ॥
ಕ್ಕ[4]ವಳಂಬನಮಪ್ಪ . ।
ಕ್ಕವಳಂ ಬಚನೈಕಸಾರಮೆಂಬೀ ನುಡಿಯುಂ ॥ 552

ಪಿಂಗಿದ.ದಿಲ್ಲಿನ್ನುಂ ಮನ ।
ದಿಂ ಗೋವರ ಗಡಣದೊಳ್ ದನಂಗಾಹಿತನಂ ॥
ನೀಂಗಳದೆತ್ತಱಿವಿರ್ ಬ ।
ಮ್ಮಂಗಂ ಬಗೆದಱಿವುದರಿದನಂಗಾಹಿತನಂ ॥ 553

ಆ ಗಿರಿಯ ನಿತಂಬಂ ಶೋ ।
ಭಾಗುಣಮಂ ತಳೆದುದಪ್ಸರಃಕುಲಲಲಿತಂ ॥
ಮೇಗಣ ಶಿಖರಾಗ್ರಮು[5]ವಿಂ ।
ಬಾಗಿ ಮನಕ್ಕೆಸೆವುದಪ್ಸರಃಕುಲಲಲಿತಂ ॥ 554

ಸೂತ್ರಂ ॥ 131 ॥

ಸದೃಶಾಕ್ಷರವಿನ್ಯಾಸಂ ।
ಪದದೊಳ್ ಪಾದಂಗಳೊಳ್ ಪೊದೆಱ್ದೆಸೆದಿರೆ ಪೇ ॥
ೞ್ವುದನುಪ್ರಾಸಂ ನಿಯಮದಿ ।
ನದನಾದ್ಯಂತಂ ವಿಭಾಷೆಯಿಂ ವಿರಚಿಸುವರ್ ॥ 555

ಪ್ರಯೋಗಂ ॥

ಕಂ ॥ ಚಚ್ಚರ್ಗಲ್ ಶಶಿಶಿಲುವಂ ಕಱೆ ।
ಗಚ್ಚರ್ಗಲ್ ಘನಘಟೆಯನುಚ್ಚರ್ಗಲಮರದ್ರುಮಮಂ ॥
ಸಾಚ್ಚರ್ಗಲಿನನೆಂಬ ಸೊಡರನೊ ।
ಡಚ್ಚರ್ಗದುವೆನೆ ನೀಳ್ದುವಿ[6]ದಱ ಶಿಖರಕರಂಗಳ್ ॥ 556

ವೃ ॥ ಸೋಡಂಬಾಡಂ ಕರಿಯ ಮುಗಿಲಂ ದಂತಿಗಳ್ಗೆತ್ತು ಮಿಂಚಂ ।
ನೋಡಲ್ ನೀಡುಂ ಪೊಳೆವ ನಿಶಿತಾಸ್ತ್ರಾಳಿಗೆತ್ತೆತ್ತಮೆ[7]ತ್ತಂ ॥
ಕಾಡುಂ ಕೋಡುಂ ಹಯಮಯಮೆಗೆತ್ತುದ್ಘಗೇ[8]ಹಂಗಳೊಳ್ ಸಂ ।
ವ್ರೀಡಾಪೀಡಂ ವಿರಹಿಜನಮುಂದಳ್ಕಿ ಬೆಳ್ಕುತ್ತುದೆತ್ತಂ ॥ 557

ಕೆಳರೆ ವಿರಹಿವೃಂದಂ ಪುಷ್ಪಿತಾಶೋಕದಿಂದಂ ।
ತ[9]ಳರೆ ಕುಸುಮಜಾಳಂ ಬಾಳಚೂತಪ್ರವಾಳಂ ॥
ಪೊಳೆಯೆ ಪುಱಿಲ ತಣ್ಪಂ ನೊಳ್ದಿ ತೆಱ್ಕೈಸಿ ಬಿಣ್ಪಂ ।
ಬಳೆಯೆ ಮದನದಾಹಂ ಬೀಸುಗುಂ ಗಂಧವಾಹಂ ॥ 558

---

* ಲಕ್ಷ್ಯಂ ಎಂಬುದಕ್ಕೆ ಹಿಂದೆ 'ಈ ಕಾರಾರ್ಥವ್ಯವೃತ್ತಿಗ್ರಹಣಮದಕ್ಕಂ' ಎಂದೂ 'ಈ ಕಾರಿಕಾರ್ಥವ್ಯಾವೃತ್ತಿಗ್ರಹಣಮದಕ್ಕೆ' ಎಂದೂ ಪ್ರತಿಗಳಲ್ಲಿ ಇದೆ. 1 ಲಕ್ಷ್ಯಂ. 2 ಜನಮ. 3 ಹರಿದು. 4 ಕ್ಕವಳವ್ಯಮನಕ್ಕವಳಂ ಬವಚೆ, ಕ್ಕವಳಂಬನಮಪ್ಪದರಿಂತ್ತವಳಂವಚೆ. 5 ಮಿಂ. 6 ವದಱಿ. 7 ಲಿಪ್ತಂ. 8 ವಾಹಂಗಳಂ. 9 ಕಳಂ.

ವೃ॥ ಖಗತ[1]ತಿ ಸಾರೆ ಶಾ[2]ಕಿನಿಯುರಾರೆ ನಿಶಾಚರಕೋಟಿ ಪಾರೆ ಬ|
ಳ್ಗುಗಳೆಡೆಯಾಡೆ ಭೂತಗಣಮಾಡೆ ಮರುಳ್ವಡೆ ಪಾಡೆ ಸಾಹಸಂ॥
ನೆಗಳ್ದು ಮುಕುಂದನಸ್ತ್ರರಿಪುವೃಂದನ[3]ಗುರ್ವಿಸೆ ಕೊಂದನಾಜಿಗ|
ಱ್ತಗನೆನೆ ಚಕ್ರವರ್ತ್ತಿಯನನಿಂದಿತಕೀರ್ತ್ತಿಯಮನಿಂದ್ರಮೂರ್ತ್ತಿಯಂ॥ 559

ಸೂತ್ರಂ ॥ 132 ॥

ಬೆರಸಿರೆ ಶ[4]ಷಸಹವರ್ಣ್ಣಂ|
ಸರೇಫಸಂಯೋಗವೊಂದಿ ಕೂಡಿದ[5] ವರ್ಗ್ಗ॥
ಕ್ಷರಮಲ್ಲಿಗಲ್ಲಿಗೆಡೆಗೊಂ|
ಡಿರೆ ಪ[6]ರುಷಾನಾಮವೃತ್ತಿ ವರ್ತ್ತಿಕುಮದಱೊಳ್॥ 560

ಲಕ್ಷ್ಯಂ॥

ಕಂ॥ ಶಿಖಿಬರ್ಹಂ ಸರ್ಷಪಮಾ|
ಜಖುರಂ ರಾಮಠಮಹೀಂದ್ರನಿರ್ಮ್ಮೋಕಂ ಶ್ವೇ॥
ತಖರಾಂಗಲೋಮಮಿವು ದು|
ರ್ಮ್ಮುಖದುಷ್ಟಗ್ರಹವಿನಾಶ[7]ನಂ ಕಟುಧೂಪಂ॥ 561

ಸೂತ್ರಂ ॥ 133 ॥

ತಂತಮ್ಮ ವರ್ಗ್ಗದಂತ್ಯದೊ|
ಳಂತಾವರ್ಗ್ಗಂಗಳಮಳ್ಗ್ಗಳಾಗಿರೆ ವೇಣ್ಣ॥
ತ್ಯಂತ[8]ಸ್ವರೂಪಸಂಯೋ|
ಗಾಂತರಮನುದೋರ್ದವೆ ಮಧುರೆಯೆಂಬುದ[9]ದಕ್ಕುಂ॥ 562

ಉದಾಹರಣೆ॥

ಕಂ॥ ಬಸಗೆಮರುಳ್ಗೊಂಡಾಡುವ|
ವಸುಧಾಧಿಪನಂತವುರದ ಕಾಂತೆಯರ ಸಮು॥
ಲ್ಲಸಿತಪದಕಮಲದೊಳ್ ರಂ|
ಜಿಸಿದು[10]ದು ಸಿಂಜಾನಮಂಜುಮಂಜೀರರವಂ॥ 563

ಉಪನಾಗರಿಕೆಯೆಂದೊಡಮಿದುವೆ॥

ಸೂತ್ರಂ ॥ 134 ॥

ಅವಿಶೇಷವರ್ಣ್ಣರಚನಾ|
ವಿವಿಕ್ತಗತಿ ಮುಕ್ತಭೂರಿಸಂಯೋಗಂ ಸಾ॥
ಷ್ಠ್ವವೆಗುಣಸಮನ್ವಿತಂ ಲಲಿ|
ತವೃತ್ತಿಯಿಂ ಲ[11]ಲಿತೆಯೆಂಬ ವೃತ್ತಿಯುಮಕ್ಕುಂ॥ 564

---

1 ಯತಿ. 2 ಶಾಕಿನಿ. 3 ಮಗುರ್ವಿಸೆ. 4 ಶಷವರ್ಣ್ಣಂಗಳ್. 5 ದುವರ್ಗ್ಗ. 6 ಪರುಷಾ. 7 ಶನಂ.
8 ತಂಸರೇಫ. 9 ದುಮಧುರ್ಯಂ. 10 ದುದಿತ. 11 ಲಲಿತವೃತ್ತಿಯೆಂಬುದಕ್ಕುಂ.

ಪ್ರಯೋಗಂ ||

ಕಂ || ಮದನನೃಪಾದೇಶದಿನ |
ಲ್ಲದೆ ಬಿರಯಿಗಳುಂತೆ ಪೋ ಪುಗಲ್ ಪುಗಲೆಂಬಂ ||
ತೊದವಿದುದು ಬನದೊಳೆತ್ತಂ |
ಮದಕಳಕಳಕಂಠಕಳಕಳಪ್ರಧ್ವಾನಂ || 565

ಗ್ರಾಮೆಯೆಂಬುದುಮಿದುವೆ ||

ಸೂತ್ರಂ || 135 ||

ಸ್ಥಾ[1]ನಂ ಕ್ರಿಯೆಯೆಂಬಿವಱೊಳ್ |
ನೂನಸಮಾನಾಕ್ಷರಾದಿಪದಸಾನ್ನಿಧ್ಯಂ ||
ತಾನಕ್ಕುಂ ಮಾಧುರ್ಯ್ಯ |
ಧೀನಮನುಪ್ರಾಸಮೆಂದು ಪೇೞ್ವರ್ ಕೆಲಬರ್ || 566

ಲಕ್ಷ್ಯಂ ||

ಕಂ || ಎಳಲತೆಯ ಜೊಂಪದೊ[2]ಳ್ ತ |
ಳ್ತಳಿಸಿ ತಗುಳ್ದಿರ್ಪ್ಪ ವಿರಹಕಾತರರದಿಂ ಕ ||
ಣ್ಗೊಳಿಸುಗುಮಾಪುರವರಮುಂ |
ಬಳಸಿದ ನಂದನವನಂಗಳೆನಿತೊಳವನಿತುಂ || 567

ಸೂತ್ರಂ || 136 ||

ಏನಾನುಮನೊಂದಂ ಸಂ |
ಸ್ಥಾನದಿನನುಕರಿಸುಮಂತು ಭಂಗ್ಯಂತರದಿಂ ||
ಪೀನಮೊಡಂಬಡೆ ವಿರಚಿಸೆ |
ನಾನಾವಿಚ್ಛಿತ್ತಿ ಚಿತ್ರಮೆನಿಕುಂ ಪೆಸರಿಂ || 568

ಸೂತ್ರಂ || 137 ||

* ಶರಶೂಲಚಾಪಚಕ್ರಾ |
ಸಿರೂಪಮಿಭರಥತುರಂಗಪದಗತಪಾದಂ ||
ಮುರಜಂ ಗೋಮೂತ್ರಿಕೆ ಪು |
ಷ್ಕರಮರ್ಧ್ಧಭ್ರಮಣಸರ್ವ್ವತೋಭದ್ರಂಗಳ್ || 569

1 ಸ್ಥಾನಕ್ರಿಯ. 2 ದೊಳಗು | ಳ್ಳಿಳಿ. * ಈ ಬಂಧಗಳಿಗೆ ಉದಾಹರಣವಾಗಿ ಕೊಟ್ಟಿರುವ ಪದ್ಯಗಳಲ್ಲಿ ಹಲವು ಈವಾಗ ದೊರೆತಿರುವ ನ್ಯಾಸಗಳಿಗೆ ಹೊಂದಿಕೆಯಾಗಿಲ್ಲ. ನ್ಯಾಸಗಳಲ್ಲಿಯೂ ಮತಭೇದವಿರಬಹುದೆಂದು ತೋರುತ್ತದೆ.

ಸೂತ್ರಂ ॥ 138 ॥

ಅಕ್ಷರಬಿಂದುಚ್ಯುತಕಂ[1]।
ದ್ವ್ಯಕ್ಷರಿಯೇಕಾಕ್ಷರಂ ನಿರೋಷ್ಠ್ಯಮತಾಳ ॥
ವ್ಯಾಕ್ಷರಮೆನೆ ನಿಜನಾಮು ।
ಸದೃಷ್ಟಂ ಲಕ್ಷಣಮದಾಗೆ ನೆಗೞ್ಗುಂ ಪಲವುಂ ॥ 570

ಅವರ್ಕ್ಕನುಕ್ರಮಃಪ್ರಯೋಗಂ ॥

ಕರಂ ॥

ಶ್ಲೋ॥ ಸುಂದರಾಕಾರಸಂಪನ್ನ ।
ನೆಂದುವಿಾನೃಪನಂದನಂ ॥
ನಂದನಂ ಬುಧಕೀರಾಳಿ ।
ವೃಂದಕ್ಕೆ ಸಕಲತುಷ್ಟಿಕಂ ॥ 571

ಕೂಲಂ ॥

ಶ್ಲೋ॥ ವೀರಶ್ರೀಕಾಂತೆಯಂ ತಾ[2]ಳ್ ।
ಚರಾಚರಜನಸ್ತುತಾ ॥
ತಾರತಾತಾರತಾರೇಶ ।
ಕ[3]ರೇತಾರಾಜಿತಾಜಿರಾ ॥ 572

ಚಾಪಂ ॥

ಕಂ॥ ಸಂಸಾರವಿಷಮವಾರಿಧಿ ।
ಸಂಸರ್ಪ್ಪಣದುಃಖವೀಚಿಯೊ[ಂದು]ಲ್ಲಾಸಂ ॥
ಸಂಸಕ್ತಮಾಗದಂತು ಜೆ । 573
ನಂ ಸುವ್ರತನಾ[4]ಮನೆಮಗೆ ಕರುಣಿಸುಗಿ[5]ನಿಸಂ ॥

ಚಕ್ರಂ ॥

ಶ್ಲೋ॥ ತನ್ನಸಂತತಿ ಮುನ್ನೀಶಃ ।
ತ[6]ನ್ನೀಶಂ ಮುನಿಸನ್ನುತಂ ॥
ತನ್ನನುಕಿರ್ನ್ನೊಳಿನ್ನಾತಂ । 574
ತನ್ನೊಳಿಂದಿನಿಸ[7]ನ್ನತಂ ॥

ಖಡ್ಗಂ ॥

ಶ್ಲೋ॥ ಕಂಸಾಸುರಹರಂ ದೈತ್ಯ ।
ಧ್ವಂಸಿ ಬಾಣಮದಾಪಹಂ ॥
ಹಂಸಾಸನಸಮಾರಬ್ಧಾ ।
ಶಂಸನಂ ನರಕಾಂತಕಂ ॥ 575

1 ಸಂ । ಧ್ವಕ್ಷರವೇಕಾಕ್ಷರಂ. 2 ನಾಳ್. 3 ಕರೇರಾಜಿತರಾಜಿತಾ, ಕರತಾರಾಜಿರಾಜಿತಾ. 4 ನಾಥ. 5 ಗನಸಂ. 6 ಮುನ್ನೀಶಂ, 7 ಸನ್ನುತಂ.

ಶ್ಲೋ॥ ಕಂಜನಾಭಂ ಸುರದ್ರೋ[1]ಹಿ ।
ಭಂಜನಂ ಲೋಕಪಾಲಕಂ ॥
ಕಂಜಾಕ್ಷಂ ಕಂಟಕಾಕಂಪಂ ।
ಮುಂಜಕೇಶಿ ಧರಾಧರಂ ॥ 576

ಗಜರಥತುರಂಗಪದಗತಪಾದಂಗಳ್ಗಂ ಲಕ್ಷ್ಯಮಂ ನೋಡಿಕೊಳ್ವುದು ॥

ಮುರಜಂ ॥

ಶ್ಲೋ॥ ಅಜಾತಶಂಖಂ ತಾನಾಪ್ತ ।
ನಜಂಗಮನಸೂಯನಂ ॥
ಗಜಾಂಕುಶಂ ಗತಾಪ್ರಾಪ್ತ ।
ವಿಜಯಂ ಮಧುಸೂದನಂ ॥ 577

ಮುರಜಂ ಅರ್ಧಪ್ರಸ್ತಾರದಿಂ ಗೋಮೂತ್ರಿಕೆಯಕ್ಕುಂ ॥

ಗೋಮೂತ್ರಿಕೆ ॥

ಕಂ॥ ಉರುತರಸಿತಕೀರ್ತಿಗುಣಾ ।
ಕರಂ ಪದಾನತವಿರೋಧಿವರ್ಗ್ಗಂ ನೆಗಳ್ದಂ ॥
ಸುರುಚಿರನುತಮೂರ್ತಿ ಧನ್ಯಾ ।
ಪರಂ ಸದಾಹಿತಕರೋಕ್ತಿ ದುರ್ಗ್ಗಂ ಜಗದೊಳ್ ॥ 578

ಪದ್ಮಂ ॥

ಶ್ಲೋ॥ ಮಂ[2]ದರಾಗಂ ಗುಣೋದ್ದಾಮಂ ।
ವಂದಿತಂ ಸ[3]ದಯಾದಮಂ ॥
ಮಂದರಾದ್ರಿನಿಭಂ ಭೀಮಂ ।
ಮಂ[4]ದಿಯೊಳ್ ಪೇಳ್ಗುಮಾಯುಮಂ ॥ 579

ಅರ್ಧಭ್ರಮಣಂ ॥

ಶ್ಲೋ॥ ಶ್ರೀರಾಮಾಧಾಮನಾಮಂ ತಾ[5] ।
ರಾರಾರಾಃಸಮಾಸಮಂ ॥
ಮಾರಾರಿ ನಿನ್ನೊಳ್ ಸಮಾನಾ ।
ಧಾರಾ ನಿ[6]ನ್ನೊತನೊಳ್ ಸಮಂ ॥ 580

* ಸರ್ವತೋಭದ್ರಕಂ ಲಕ್ಷ್ಯಮನಱಿದುಕೊಳ್ವುದು ॥

---

1 ದ್ರೋಹ. 2 ಮಂದಾರಾಗಂ, ಮಂದಾರಾಂಗಂ, ಮಂದಾರಗಂ. 3 ಸ್ಕಂದಯಾದವಂ, ಸ್ಕಂದಯಾದಮಂ, ಸಂದಯಾದಮಂ. 4 ಮಂದಿ. 5 ತಾಂ. 6 ನಿನ್ನೋತ. * ಇದಕ್ಕೆ ಹಿಂದೆ—ಕುಸುಮಮನೋಹರಂ । ಕುಸುಮಮನೋಹರಂ । ಕುಸುಮಮನೋಹರಂ । ಕುಸುಮಮನೋಹರಂ ॥—ಎಂದು ಎರಡು ಪ್ರತಿಗಳಲ್ಲಿ ಬರೆದಿದೆ.

ಅಕ್ಷರಚ್ಯುತಕಂ ॥

ಕಂ ॥ ಕುಲಜನಭಿಮಾನಿ ತಕ್ಕಂ ।
ಚಲವುಱಿವಂ ನೆಗೞಿನಾತನಿಂತಿದನೆಂತುಂ ॥
ಜಲಜಾಯುತಾಕ್ಷಿ ಕೆಲನುಂ ।
ನೆಲನುಂ ನಗುವಂತು ಪೊ[1]ಲ್ಲಕೆಯ್ದುದೆ ಚೋರಂ ॥ 581

ಬಿಂದುಚ್ಯುತಕಂ ॥

ಶ್ಲೋ ॥ ಇಂದು ನೋಡಿದು ಬೇೞಿಂದ ।
ಮೆಂದಿನಂದದುದಲ್ತಣಂ ॥
ಮಂದಮಂದಂ ಕರಸ್ಪರ್ಶಂ ।
ತಂದಪ್ಪುದುಪತಾಪಮಂ ॥ 582

ದ್ವ್ಯಕ್ಷರಿ ॥

ಶ್ಲೋ ॥ ನಿಂದಾನಂದದದೊಂದೂನಂ ।
ನಿಂದಂದೇನಿಂದಿನಂದದಿಂ ॥
ನಂದನಂದನ ನಿನ್ನಿಂದಂ ।
ನಂ[2]ದನುಂ ದನುನಂದನಂ ॥ 583

ಏಕಾಕ್ಷರಂ ॥

ಶ್ಲೋ ॥ ನಿನ್ನಿನೇನಿನ್ನನಾನನ್ನ ।
ನಿನ್ನನೆನ್ನನನೂನನಂ ॥
ನುನ್ನನ್ನೈನನ್ನನ್ನೈನೇನೇ ।
ನೆ[3]ನ್ನಿನ್ನಂನಿನ್ನೆನಾನುನಂ ॥ 584

*ನಿರೋಷ್ಠ್ಯಂ ॥

ಕಂ ॥ ನೆಗಟಿರೆ ಯು[4]ತಿಸ್ಥಿತಿ ಚಿತ್ತದಿ ।
ನಗಲೆ ಕರಂ ನಿಜದೆ ತನ್ನ ತ[5]ರಳತೆ ಕೆಲದಿಂ ॥
ದಗಲದೆ ನಾಳೀಜಂಘೆಂ ।
ನಗಿಸಿತ್ತಾನಗದ ನಗದ ಋಷಿಸಂ[6]ಹತಿಯಂ ॥ 585

ಅತಾಲವ್ಯಂ ॥

ಶ್ಲೋ ॥ ರೂಪುಂ ಸೊಬಗುಮುಣ್ಮಂ ನಾ ।
ಣ್ಣಾ ಪುಮೂಪ್ಪು‌ರ್ವಂ ಪ್ರಭುತ್ವಮುಂ ॥
[7]ಕೋಪಮುಂ ಮಾಱ್ಪುದುಂ ತನ್ನೊಳ್ ।
ಭೂಪಂ ತಾಂ ಕೊಲ್ದು ಮಾತನಂ ॥ 586

1 ಪೊಲ್ಲಗೆಯ್ದುದೇ ಚೋರಂ. 2 ನಂದನಂ, ನ ದನಂ. 3 ನೇನಿನ್ನಂ. * ಇದಕ್ಕೆ ಹಿಂದೆ ಒಂದು ಪ್ರತಿಯಲ್ಲಿ ಮಾತ್ರ '' ನೀನಾ ನುನಿನ್ನನಾನೆಂ । ನಾನಿಂನನ್ನಿನ್ನ ನಿನ್ನನಾನಾನೂನಂ ॥ ನೂನಂನನ್ನನನೇನೇನ್ನೈ । ನೀನೇನ್ನೈನಾನಾನೀನೇನಾನೇನೇನೇನ್ನೈ '' ಎಂಬ ಕಂದಪದ್ಯವು ದೊರೆಯುತ್ತದೆ. 4 ಯುತಿ 5 ಸರಳತೆ. 6 ಸಂತತಿ. 7 ಕೋಪಮುಂ ಮಾಲ್ಪುದುಂ.

ಸೂತ್ರಂ ॥ 139 ॥

ಚ್ಯುತದತ್ತಾಕ್ಷರಮುಂ ಗೋ ।
ಪಿತಕ್ರಿಯಾಕಾರಕಂ ನಿಗೂಢಚತುರ್ತ್ಥಂ ॥
ಪ್ರತಿನಿಯತಗತಪ್ರತ್ಯಾ ।
ಗತಂ ದಲೆಂದಿಂತು ಪೆಱವುಮಕ್ಕುಂ ಚಿತ್ರಂ ॥ 587

ಪ್ರಯೋಗಂ ॥

ಚ್ಯುತದತ್ತಾಕ್ಷರಂ ॥

ಶ್ಲೋ ॥ ಸೀತಾರಾಮಸಮೀಪಸ್ಥಂ ।
ಧೌತಕೀ[1]ಲಸಿತಪ್ರಭಂ ॥
ವೀತತ್ರಾಸಂ ಮನಂಗೊಳ್ಗುಂ ।
ಪ್ರೀತಿಯಿಂದೊಂದಿ ಲ[2]ಕ್ಷಣಂ ॥ 588

ಕ್ರಿಯಾಕಾರಕಗೋಪಂಗಳ್ ॥

ಕಂ ॥ ಪರಿವರ್ಜ್ಜಿತದೋಷನನಾ ।
ದರದಿಂ ದೇವಾದಿದೇವನೆಂದಿ[3]ರದರೆಬರ ॥
ದುರಘಾವಿಲಿಪ್ತರಂ ದೇ ।
ವರೆಂದು ಬಗೆ ಬೆದಱೆ ದೆಸೆಗೆ ದಿಙ್ಮೂಢತೆಯಿಂ ॥ 589

ಶ್ಲೋ ॥ ಏನನೇನಂ ಮಹಾಘೋರಂ ।
ನಾನಾಜನ್ಮಾಂತರಂಗಳೊಳ್ ॥
ತಾನಾಗಿಸದು ಸಂಸಾರಿ ।
ಗಾನಿರ್ವ್ವಾಣಪದಂಬರಂ ॥ 590

ಗೂಢಚತುರ್ತ್ಥಂ ॥

ಶ್ಲೋ ॥ ಆತನಲ್ಲದನಂ ಮೆಚ್ಚಿಂ ।
ಮಾತೇಂ ತಾಂ ಮಾರನಾದೊಡಂ ॥
ಕೇತನಂ ರತಿರಾಗಕ್ಕೆ ।
ಕೇತನಂ ತಾರ ನಲ್ಲನಂ ॥ 591

ಗತಪ್ರತ್ಯಾಗತಂ ॥

ಶ್ಲೋ ॥ *ತಾರವೀವೀರತಾಸಾರ ।
ನೀರಸಾಕಾರನಾರಕಾ ॥
ತಾರನಾನಾರತಾಕಾರ ।
ಕಾರತಾತಾರಕಾ ·· ॥ 592

1 ಕೀಲಂ ಕತ. 2 ಲಕ್ಷ್ಮಣಂ. 3 ದಿಂದರೆಬರ. * ಈ ಶ್ಲೋಕದಲ್ಲಿ ತಪ್ಪು ಬಿದ್ದಿರುವಹಾಗೆ ತೋರುತ್ತದೆ.

ಸೂತ್ರಂ ॥ 140 ॥

ಸುಕವಿಪ್ರಕರಕ್ಕೆ ವಿನೋ ।
ದಕೇಳಿಗುಪಯೋಗಹೇತುಗಳ್ ಪ್ರಚ್ಛನ್ನ ॥
ಪ್ರಕಟಾರ್ತ್ಥಂಗಳನೇಕ ।
ಪ್ರಕಾರದಿಂದೊಂದಿ ವರ್ತ್ತಿಕುಂ ಪೇಳಿಕೆಗಳ್ ॥ 593

ಸೂತ್ರಂ ॥ 141 ॥

ನುಸುಳೊರ್ನ್ನಡಿ ಭಾ[1]ವೆ ಮನ।
ಕ್ಕೆಸೆವಸ್ಪಷ್ಟಾರ್ತ್ಥಮುಮಿವು ನಾಮಾಂತರಿತಂ ॥
ಕು[2]ಸುರಿಯು ನುಡಿಯೆಂಬಿವು ಭಾ।
ವಿಸೆ ಪೇಳಿಕೆಗಳೊಳ್ ಪೇೞ್ವ ಭೇದಮುಮಕ್ಕುಂ ॥ 594

ಲಕ್ಷ್ಯಂ ॥

ನುಸುಳ್ಗೆ ॥

ಕಂ॥ ತಿಱಿವುದು [illegible]ಕಂಗೊಳ್ಳದು ।
ಪೊರವುದು ಮಱಿದುಂಬಿಯುಲ್ತು ಕ[3]ರ್ತ್ತರಿಗೞಂ ॥
ಬ[4]ರಸಿ ತ[5]ನುಗೊಂದಿ ದೊರೆಕೊಂ ।
ಡಿರೆಯುಂ ಕೆಸಱಂಕಮಲ್ಲಿದಾವುದೊ ಪೇೞಿಂ ॥ 595

ಒರ್ನ್ನಡಿಗೆ ॥

ಕಂ॥ ಒಂ[6]ದು ಗೞಿಗೆಯೊಳ್ ಸಂಪುಟ ॥
ದಂದದೆ ಮಡಿದಿರ್ಪ್ಪರಹಿತರರೆದ ನರರ್ಕ್ಕೊಂ ॥
ಡೊಂದಱೊಳ್ ಮೆಱೆದು ಗಣಪತಿ ।
ಯುಂದದಿನೊಸೆದಿರ್ಪ್ಪರಿದರ್ಗೆ ವಂ[7]ದಿಂದರನಾ ॥ 596

ಭಾವೆಗೆ ॥

ಶ್ಲೋ॥ ಈನವೀನಸಿ[8]ತಾಂಭೋಜಾ ।
ನೂನಪೀತಾವತಂಸಕಂ ॥
ತಾನದೇವುದೊ ಕ[9]ರ್ಣ್ಣಾಂತ ।
ವ್ಯಾನತಾಯುತಲೋಚನೇ ॥ 597

ಅಸ್ಪಷ್ಟಾರ್ತ್ಥಕ್ಕೆ ॥

ವೃ॥ ದಂಡಿತಾರಾತಿಭೂಭೃ ।
ತ್ಕಾಂಡಂ ಮೆಚ್ಚಿದಂ ಕ[10]ರಂ ॥
ಗಾಂಡೀವಧ[11]ನ್ವಂ ಮುಂದೆ ।
ಕಂಡಂ ಭಯಾಕರವಂ ॥ 598

---

1 ಭಾವ್ಯಮನ. 2 ಕುಸುರಿ. 3 ಕರ್ತ್ತರಿಘಾಯುಂ. 4 ಬರಸು. 5 ತನಗೊಂದಿ, ತನುಗೊಂದಿ. 6 ಒಂದೆ. 7 ವಂದಿಂದಿರನೊಳ್. 8 ರಸಾಂಭೋಜಾ. 9 ಕರ್ಣ್ಣಾಂತ। ವ್ಯಾನತಾ. 10 ಪರಂ. 11 ಧನ್ವನಂ, ಧನ್ವಂಜ, ಧನ್ವಕಂ, ಧನ್ವಂಜಾ.

ಉಟಿವಿಂಗೆ ॥

ಕಂ ॥ ಉಮೆಗೆ ಮಹೀಜೆಗೆ ಸು[1]ಮನೋ ।
ರಮಣಿ[ಮಣಿ] ನಚ್ಚಿನಾತಿಳೋತ್ತಮೆಗೊಳ್ಪಂ ॥
ಸಮನೆನಿಸುವ ಮಂದಾಕಿನಿ ।
ಯಮುನಾನದಿಸಿಂಧುಸಂಕರಂ ಕಣ್ಗೆಸಗುಂ ॥ 599

ನಾಮಾಂತರಕ್ಕೆ ॥

ಕಂ ॥ ಮೊದಲೊಳ್ ವಿಕಾರಿ ನಾಕಾ ।
ರದರ್ಶನೀಯಂ ವಿರಾಮದೊಳ್ ನಾಯಕಮಂ ॥
ತದು ತಾಂ ವಿನಿಂದ್ಯಮಲ್ತಾ ।
ದಿದೇವಪುತ್ರಂ ಸದಾನವಾರಿಪ್ರಮುಖಂ ॥ 600

ಕು[2]ಸುಮ ಮೊದಲಾದ ಪ್ರಶ್ನೋತ್ತರಪ್ರಕಾರಂಗಳ್ಗಮಿಲ್ಲಿ ಪ್ರಯೋಗಮಂ ಕಂಡುಕೊಳ್ವುದು॥

ಸೂತ್ರಂ ॥ 142 ॥

ನು[3]ಡಿದುದದೆ ಪದವಿ[4]ಭಂಗತೆ ।
ಗೊಡಂಬಡಂ ಪಡೆಯೆ ಮಗುಟ್ದಿಮತ್ತರ್ಥಾಂತರದೊಳ್ ॥
ತೊಡರ್ದು ನಿಲೆ ನುಡಿವ ನುಡಿ ಚೆ ।
ಲ್ವೊಡರಿಪ ವಕ್ರೋಕ್ತಿ ನಿಯತಕಾಕುಶ್ಲೇಷಂ ॥ 601

ಪ್ರಯೋಗಂ ॥

ಕಂ ॥ ಮು[5]ತ್ತ್ಯೆ ಚದುರಿಂದೇನೆನೆ ।
ಮುತ್ತಲ್ಲದುದುಂಟೆ ವಸ್ತು ಪೆಱತೆನೆ ಸತಿ ನೀ[6] ॥
ಮಿತ್ತ್ರಿನೆ ಕರಮೊಳ್ಳಿ ।
ತ್ತಿತ್ತಾಗಡೆ ನಿಮ್ಮೊಳಿರ್ಪೆವೆನೆ ವೃದ್ಧವಿಟಂ ॥ 602
ಮುನ್ನಿನ ಕಡನಂ ನೀಂ ಕುಡು ।
ಮುನ್ನಿಲ್ಲದ ಕಡನನೆಂತು ಪಿಡಿಯೆಂದೀವೆಂ ॥
ನಿ[7]ನ್ನಿಂಪಿಡಿಯೆನೆ ಕುಡುಕಡ ।
ನೆನ್ನಂ ಪಿಡಿಯುಳ್ಳೊಡಾನೆಯಿಾಯೆನೆ ಕೆನ್ನಂ ॥ 603

ಕಾಕುವಕ್ರೋಕ್ತಿಗೆ॥

ಕಂ ॥ ದಾರುಣಮಂ ಕರಕಲ್ಕಮು ।
ನೋರಂತಿರೆ ಪುಣ್ಣೊಳು[8]ಡಿದು ಬಿಡದುಳ್ಕುವು[9]ದಂ॥
ಸ್ವೈರಿಸುವರುಮೊಳರೆ ಕೇಲರ್ ।
ಸ್ವೈರಿಸುವರುಮೊಳರೆ ಖಳರ ಕಟುಕೋಕ್ತಿಗಳಂ ॥ 604

ಇದು ಗುಣವಿವೇಕದೊಳ್ ಶಬ್ದಾಲಂಕಾರನಿರ್ಣಯಪ್ರಕರಣಂ
ದ್ವಿತೀಯಂ.

---

1 ಮಣಿಯೆಗೆ । ರಮಣಿನಚ್ಚಿನಾ. 2 ಕಲ್ಪಂ ॥ ಕುಸುಮ. 3 ನುಡಿದುದನೆ, ನುಡಿದುದನೆ. 4 ವಿಭಂಗದಿ। ನೊಡಂಬಡಂ. 5 ಮುತ್ತ್ಯರೇವುದು ಚದುರೆಗೆ. 6 ಕಂ ॥ ತ್ರಿಶರಿಯನೆ. 7 ನಿನ್ನೆಂಬಾ. 8 ಕಡಿದು. 9 ವೃದಂ.

ಅರ್ತ್ಥಾಲಂಕಾರಪ್ರಕರಣಂ.

ಸೂತ್ರಂ ॥ 143 ॥

ಪ್ರವರಾರ್ತ್ಥಾಲಂಕಾರಂ ।
ಅರ್ತ್ಥಾಲಂಕಾರ ವಿವಿಧವಿಕಲ್ಪಪ್ರಪಂಚಿತಂ ಕ್ರಮದಿಂ ವಾ ॥
ಭಾಗಂಗಳ್. ಸ್ತವಮುಪಮೆಯುಮತಿಶಯಮುಂ ಶ್ಲೇ[1] ।
ಷಮೆಂದು ನಾಲ್ಕುಂ ಪ್ರಕಾರದಿಂ ನೆಱೆದಿರ್ಕ್ಕುಂ ॥ 605

ವೃತ್ತಮಲ್ಲಿ ॥

ಸೂತ್ರಂ ॥ 144 ॥

ವಸ್ತುಸ್ವಭಾವಕಥನಂ ।
ವಾಸ್ತವಮುಪಮಾದ್ಯಶೇಷವಕ್ರೋಕ್ತಿವಿಪ ॥
ವಾಸ್ತವಂ. ರ್ಯ್ಯಸ್ತಂ ಸಮಸ್ತಲೋಕಮ ।
ನಸ್ತೋಭನಕಾರಿ ಚಾರುತರಪುರುಷಾರ್ತ್ಥಂ ॥ 606

ಸೂತ್ರಂ ॥ 145 ॥

ವೃ ॥ ಜಾತಿಸಹೋಕ್ತಿಭಾವಪರಿವೃತ್ತಿಯಥಾಕ್ರಮಪರ್ಯ್ಯಾಯಾವಳೀ ।
ವಾಸ್ತವ ಹೇತುಸಮುಚ್ಚಯಾನುಮಿತಿಸೂಕ್ಷ್ಮಲವವ್ಯತಿರೇಕದೀಪಕಾ ॥
ಭೇದಂಗಳ್. ಖ್ಯಾತಿಸಮಾಹಿತಾವೃತಿಪರಸ್ಪರಸಾರನಿಮೀಲನಂಗಳಿಂ ।
ದೀ[2]ತೆಱದಿಂದಮೊಂ[3]ದಿ ನೆಗೞ್ಗುಂ ನೆ[4]ಱೆ ವಾಸ್ತವಭೇದವೃತ್ತಿಗಳ್ ॥ 607

ಸೂತ್ರಂ ॥ 146 ॥

ಜಾತಿಯೆನಿಕುಂ ಸ್ವಭಾವಾ ।
ಖ್ಯಾತಿ ಯಥಾವಸ್ಥಿತಾರ್ತ್ಥವಿಷಯಾರ್ತ್ಥಕೃತೋ ॥
ಜಾತಿ. ದ್ಯೋತನಮವೈಪರೀತ್ಯಂ ।
ಜಾತಿದ್ರವ್ಯಕ್ರಿಯಾಗುಣಪ್ರತಿಬ[6]ದ್ಧಂ ॥ 608

ಲಕ್ಷ್ಯಂ ॥

ಜಾತಿಸ್ವಭಾವಾಖ್ಯಾನಕ್ಕೆ ॥

ವೃ ॥ ಸೊಗಯಿಸಿ ತೋರ್ಪ್ಪ ಸೋಗೆ ಕೊರಲೊಳ್ ಪೊಗರ್ವೆಟ್ಟೆಸೆದಿರ್ಪ್ಪ ಕಪ್ಪು ಕೆ ।
ಯ್ಮೆಗೆ ಕಡೆಗಣ್ಗಳೊಳ್ ಪೊಳೆವ ಪೆಳ್ಪು ಶಿಖಾಗ್ರದೊಳೊಂದಿದೊಳ್ಪು ಮೆ॥
ಲ್ಪೊಗದಿರೆ ಕೇಗುವಿಂಚರದ ನುಣ್ಪು ಮನಂಗೊಳೆ ಚೆಲ್ವನಾಳ್ದುದೀ ।
ನಗವನರಾಜಿಯೊಳ್ ಸುೞಿಯುತಿರ್ಪ್ಪ ವಿಚಿತ್ರಶಿಖಂಡಿಮಂಡಲಂ ॥ 609

---

1 ಕ್ಲಿ । ಪ್ಪ. 2 ಬೀಕಿಬಿ. 3 ಮಿಂತು. 4 ಸಲೆ. 5 ಯೊಳ್. 6 ಬಂಧಂ.

ದ್ರವ್ಯಸ್ವಭಾವಾಖ್ಯಾನಕ್ಕೆ ॥

ಕಂ॥ ಕಱೆ ಕೊರಲೊಳ್ ಕಣ್ ನೊಸಲೊಳ್ ।
ಪೆಱೆ ಮಕುಟದೊಳಹಿವಿಭೂಷಣಾ[1]ವಳಿ ತೋಳ್ಗಳೊಳ್ ॥
ನೆಱೆದಿರೆ ಕರಮೆಸೆದಂ ಪಲ ।
ತೆಱದ ಮರುಳ್ವಡೆಯ ನಡುವುಮಾಪತಿರುದ್ರಂ ॥ 610

ಕ್ರಿಯಾಸ್ವಭಾವಾಖ್ಯಾನಕ್ಕೆ ॥

ವೃ॥ ವೞಿಗಳಱಿಯೆ ಬಿಂಕಂಪೆತ್ತು ವೃತ್ತಸ್ತನಂ ಕ ।
ಣ್ಗೊೞಿಸೆ ತೊಳಗೆ ಬಾಹಾಮೂಲಮೂರುದ್ವಯಂ ಸಂ॥
ಚಱಿಸೆ ನಿಜಪದಾಂಗುಷ್ಠಾಗ್ರದಿಂ ನಿಂದು ಕಣ್ಗಳ್ ।
ಪೊಳೆಯೆ ಮಿೞಿರ್ವ ಕೊಂಬಂ ನಿೞ್ಕಿ ಪೂಗೊಯ್ದಳೊರ್ವ್ವಳ್ ॥ 611

ಗುಣಸ್ವಭಾವಾಖ್ಯಾನಕ್ಕೆ ॥

ಕಂ ॥ ಮನದೊಳ್ ಮುದಮಂ ಕೋಮಳ ।
ತನುವಿನೊಳ್[2]ತ್ಯಂತರೋಮಹರ್ಷಣಮಂ ಕ ॥
ಣ್ಗಿನಿಸಿನಿಸಾ[3]ಮೀಳನಮಂ ।
ಜನಿಯಿಸುತುಂ ಪ್ರಿ[4]ಯೆಯಸೊಂಕು ಪಡೆದುದಲಂಪಂ ॥ 612

ಸೂತ್ರಂ ॥ 147 ॥

ಸಮಕಾಲಮಪ್ಪವೆರಡ ।
ಸಹೋಕ್ತಿ. ರ್ಥಮನೊಡನೆಯೆ ಪೇ[5]ೞ್ವುದದು ಸಹೋಕ್ತಿ ವಿತರ್ಕ್ಕ ॥
ಭಾವಂ. ಕ್ರಮದಿಂದರ್ಥಾಂತರಮಂ ।
ಸಮನಿಸುವೊಂದುಕ್ತಿ ಭಾವಮೆನೆ ಪೆಸರ್ವಡೆಗುಂ ॥ 613

ಲಕ್ಷ್ಯಂ ॥

ಸಹೋಕ್ತಿಗೆ ॥

ಕಂ ॥ ಅಲರ್ದುವೊಡನೊಡನೆ ಕುವಲಯ ।
ಕುಲಮುಂ ಕುಲಟಾಮುಖಂಗಳುಂ ಮುಗಿದುವು ನಿ ॥
ಶ್ಚಲಯೋಗನಿರತಸಂಧ್ಯಾಂ ।
ಜಲಿಯುಂ ಸರಸಿರುಹವನಮುಮೊಡನೊಡನಾಗಳ್ ॥ 614

ಬಿರಯಿಗಳ ಸುಯ್ಗಳೊಡನೆಯೆ ।
ಪಿರಿಯವು ದೆವಸಂಗಳಾದುವವಱವಱ ಪರಿ ॥
ಸ್ಫುರಿತಂಗಳೊಡನೆ ಕುಂದಿದು ।
ವಿರುಳ್ಗಳುಂ ಮುಂ[6]ಚೆ ಬಂದ ಜಳದಾಗಮದೊಳ್ ॥ 615

---

1 ಗಂ ನಳಿತೋಳ್ಗಳೊಳ್. 2 ಳಂತಂತೆ. 3 ಸುಮ್ಮೀಳನಮಂ. 4 ಪ್ರಿಯನ. 5 ಪೇಳ್ವುದದು. 6 ಮುಂಚೆ.

ಭಾವಕ್ಕೆ ॥

ವೃ ॥ ಪಡುವಳ್ ಕೀೞಲೊಳಿವ್ಮ ತೊೞ್ತು ಪಡುವಳ್ ಮತ್ತಬ್ಬೆಯಾಕೋಣೆಯೊಳ್ ।
ಪಡುವಂ ಶಕ್ತಿವಿಹೀನನಂಧಬಧಿರಂ ಕೇಳಜ್ಜನೀಬಾಗಿಲೊಳ್ ॥
ಪಡುವೆಂ ಬಾ[1]ಲೆಯನೊರ್ವ್ವಳಿಲ್ಲಿ ಮನೆಯಾಣ್ಮಂ ಪೋದನಿಂದೂರ್ಗ್ಗೆ ನೀಂ ।
ಪಡಲೆಂದೆಂತೆಡೆವೇಡುವಯ್ ಪಥಿಕ ಮತ್ತೀ ಪೊೞ್ತುಱೊಳ್ ಗಾಂ[2]ಪನೇ ॥ 616

ಸೂತ್ರಂ ॥ 148 ॥

ಒಂದಂ ಕೊಟ್ಟೊಂದಂ ಕೊ ।
ಪರಿವೃತ್ತಿ. ಳ್ವಂ[3]ದಂ ಪರಿವೃತ್ತಿಯೆಂಬುದಕ್ಕುಂ ತರದಿಂ ॥
ಯಥಾಕ್ರಮಂ. ದೊಂದಿರೆ ನಿರ್ದ್ದೇಶಸ್ಥಿತಿ ।
ಯಿಂದಂ ಪೇೞ್ವುದು ಯಥಾಕ್ರಮಂ ಮುನಿಮತದಿಂ ॥ 617

ಲಕ್ಷ್ಯಂ ॥

ಪರಿವೃತ್ತಿಗೆ ॥

ಕಂ ॥ ಬಿಳಿಯಲರ್ಗಣ್ಗಳ ಬೆಳ್ಪಂ ।
ಲಲನಾಜನದಧರಮ[4]ಣಿಗೆ ಕೊಟ್ಟದಱ ಪುದುಂ ॥
ಗೊಳಿಸಿದ ಕೆಂಪಂ ನೀವರ್ಪ್ಪೀ ।
ಕುಳಿಯೊಳ್ ಮಾಱಾಡಿ ಕೊಂಡ ತೆಱದಿಂ ತೋರ್ಕ್ಕುಂ ॥ 618

ಯಥಾಕ್ರಮಕ್ಕೆ ॥

ವೃ ॥ ಇದು ನಿ[5]ನ್ನಚ್ಚೆಸಿದಿಕ್ಷುಚಾಪವಿದು ನಿನ್ನೀಲೋಕಮಂ ಕೆಯ್ಗೆ ಮಾ ।
ಡಿದ ಪುಷ್ಪಾಸ್ತ್ರವಿದಲ್ತೆ ನಿನ್ನ ವಿಜಯಪ್ರಾರಂಭದೊಳ್ ತೋರ್ಕ್ಕೆಗೆ ॥
ತ್ತಿದ ಜೈ[6]ತ್ರಧ್ವಜವೆಂದು ತೋರ್ಪ್ಪ ತೆಱದಿಂ ಭ್ರೂಲಾಸ್ಯಮಂ ನೀಳ್ದಪಾಂ ।
ಗದ ಬೆಳ್ದಿಂಗಳನೆಡ್ಡಮಪ್ಪ ಕಬರೀವಿಸ್ತಾರಮಂ ತೋಱಿದಳ್ ॥ 619

* ಅವಿಹಿತವೇ[7]ಗಮೇಱೆಗ್ಗೆಯಜಮಂ ವ್ರಣಮಕ್ಷತಕಾಯಮೆತ್ತಿಕ ।
ಟ್ಟುವ ಮದಮುಣ್ಮೆ ಸೋರ್ವ್ವ ಸೊನೆ ಬೀೞ್ವ ಗಜಧ್ವಜಮಂಬರಕ್ಕೆ ನಿ ॥
ಳ್ಕುವ ಜಯಕೇತು ಸಂದೆಯದ ದಂದುಗಮಂ ಕಿ[8]ಡಿಸಿತ್ತು ಮುಂದಣೋ ।
ಡುವ ರಿಪುದಂತಿಗಂ ಪೆಱಗಣಟ್ಟುವ ಜ[9]ಟ್ಟರ ಮೇರುದಂತಿಗಂ ॥ 620

ಇಲ್ಲಿ ಕೆಲರ್ ವ್ಯುತ್ಕ್ರಮಗಣನೆಯಿಂದೆ ನಿಂದಿತಕ್ರಮಮೆಂದು ಪೇೞ್ವರ್ ॥

ಸೂತ್ರಂ ॥ 149 ॥

ನುಡಿಯುದೆ ಮನದರ್ತ್ಥಮನನು ।
ಪರ್ಯ್ಯಾಯಂ. ನು[10]ಡಿದಂತಿರೆ ಸುೞಿದ ನುಡಿಯೆ ಪರ್ಯ್ಯಾಯಂ ಮ ॥
ಆವಳಿ. ತ್ತಡಕಿಲ್ಗೊಳೆ ಪಲವುಮನೊಂ ।
ದೆಡೆಯೊಳ್ ಸಮಗೊಳಿಸಿ ಪೇೞ್ವುದಾವಳಿ ಪೆಸರಿಂ ॥ 621

---

1 ಬಾಲಕಯೊರ್ವ್ವ. 2 ಗಾಂಪನಂ. 3 ಕ್ವಂದದು. 4 ರುಚಿಗೆ. 5 ನಿನ್ನ. 6 ವಿಜಾನ. * ಈ ಪದ್ಯಕ್ಕೆ ಹಿಂದೆ " ಎರಡುಮಳ್ಳಂ ಬಹುಳಾಬಂಧನಮಯಿಕ್ಕೆ, ಎರಡುಮಳ್ಳೊಳ್ ಬಹುಳವಿಕ್ಕೆ ಯುಗಬ್ಬ ಮಾಡಕ್ಕೆ ಲಕ್ಷ್ಯಂ " ಎಂದು ಕೆಲವು ಪ್ರತಿಗಳಲ್ಲಿ ಇದೆ. 7 ಪಳ, ಶೀಳ. 8 ಬಿಡಿಸಿತ್ತು. 9 ಉಚ್ಚರ. 10 ನುಡಿದ.

ಲಕ್ಷ್ಯಂ ॥

ಪರ್ಯಾಯಕ್ಕೆ ॥

ಕಂ ॥ ಬನದೊಳಗೆ ನೋ[1]ಡಿ ಪೊಸವೂ[2] ।
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ ॥
ನಿನಿತೊಂದು ಬೇ[3]ಗಮಂ ನಿ ।
ನ್ನಿನಿಯನ ಪಕ್ಕದೊಳಿರೆಂದು ಸಖಿ ತೊಲಗುವುದುಂ ॥ 622

ಆವಳಿಗೆ ॥

ಕೊಳಗಳ ದಳಿತಾಬ್ಜಂಗಳ ।
ದಳಿತಾಬ್ಜಂಗಳ ಸಮೃದ್ಧಮಧುಗಳ ಮಧುಗಳ ॥
ಚಳದಳಿಕುಳಾಕುಳಂಗಳ ।
ವಿಳಸದಳಿಪ್ರ[4]ಕರಮಧುರವಿರುತಿಯು ಬನದೊಳ್ ॥ 623

ಆವಳ್ಯಪೋಹಕ್ಕೆ ॥

ಕಂ ॥ ಕಳರುತಿಯಿಲ್ಲದ ಮಧುಪಾ ।
ವಳಿ ಮಧುಕರನಿಕರಮಿಲ್ಲದಂಬುರುಹವನಂ ॥
ಜಳರುಹಮಿಲ್ಲದ ತಿಳಿಗೊಳ ।
ನಲರ್ದ ಸರಃಪ್ರ[5]ಸರಮಿಲ್ಲದೂರಿಲ್ಲದಱೊಳ್ ॥ 624

ಸೂತ್ರಂ ॥ 150 ॥

ಹೇತುಸಮುದಾಖ್ಯಾನಂ ಸಹ ।
ಹೇತು. ಹೇತುಕಮದು ಹೇತುವೆಂಬಲಂಕೃತಿಯಕ್ಕುಂ ॥
ಸಮುಚ್ಚಯಂ. ಮಾತೇಂ ಬಹುಸಂಕಥನಂ ।
ಜಾತಿದ್ರವ್ಯಾದಿಕಂ ಸಮುಚ್ಚಯಮ[6]ಕ್ಕುಂ ॥ 625

ಲಕ್ಷ್ಯಂ ॥

ಜ್ಞಾಪಕಹೇತುಗೆ ॥

ವೃ ॥ ತಿಮಿರೆಯೊಳ್ ಮಿಡುಕಾಱದ ಮಣ್ಣಿಂದಿಕ್ಕಿದ ಲಂಡದ ಬೆಂಕೆಯಿಂ ।
ಕಮಿವ ಕೀಟ್ಕದದೊಳ್ಪೊನಲೊಳ್ ಸುಯ್ಯಾಱದ ಪೆ[7]ನ್ನೊರೆಯಿಂ ತಗು ॥
ಳ್ದವಿಹತಾಂಬುವ ಬಲ್ಪೊನಲಿಂದಿಪ್ಪರ್ಱದ ಬಟ್ಟೆಯೊಳೊಕ್ಕ ಪ ।
ಲ್ಲವನಿಕಾಯದಿನಂದಱಿದಂ ಕಾಡಾನೆಗಳಾಗಡೆ ಪೋದುದಂ ॥ 626

ಕಾರಕಹೇತುಗೆ ॥

ವೃ ॥ ಪಂದಿಯಿಂ ಕೆದಱಿದು[8]ತ್ಪಳಮುಂ ವನದಂತಿಯಿಂ ।
ನೊಂದು ಸೂಸಿದ ಸರೋಜಮುಮೊಯ್ಯನೆ ನೀರುಣಲ್ ॥
ಬಂದು ಪೋದ ಮೃಗದಗ್ರಖುರಚ್ಯುತವಾರಿಯಿಂ ।
ನಾಂದೆರಟ್ಟಿಡಿಯುಮಿಂಬು ತದಗ್ರಿಮಭಾಗದೊಳ್ ॥ 627

1 ಪೋಗಿ. 2 ವಾ । ಏನ. 3 ಬೇಗದಿಂ. 4 ಪ್ರಕಾ. 5 ಪ್ರಕರ. 6 ಮಾಡಿಕುಂ. 7 ಪೊನ್ನೊರ. 8 ದ್ದುಳ್.

ಪರಂಪರಿತಹೇತುಗೆ ॥

ವೃ ॥ ವಿನಯಮನಿತ್ತುದಿಂದ್ರಿಯಜಯಂ ವಿನಯಂ ಗುಣಸಂಪದಂಗಳಂ ।
ಜನಿಯಿಸಿದತ್ತು ಸದ್ಗುಣಗಣಂ ಪಡೆದತ್ತು ಜನಾನುರಾಗಮಂ ॥
ಜನದನುರಾಗಮಾಗಿಸಿದುದಾವಗಮಿ[1]ದ್ಧ ವಿಶುದ್ಧ ಕೀರ್ತಿಯಂ ।
ತನಗೆನೆ ರಾಜ್ಯಲಕ್ಷ್ಮಿಯನನುಷ್ಠಿಸಿದಂ ನಯದಿಂ ಯುಧಿಷ್ಠಿರಂ ॥ 628

ಅಭಾವಹೇತುಗೆ ॥

ಕಂ ॥ ಅವಿನಯದಿನನಿಂದ್ರಿಯವ ।
ಗರ್ಗವಿಜಯದಿ[2]ನಬುಧವಿಶಿಷ್ಟಸಂಭಾವನೆಯಿಂ ॥
ವಿವಿಧವ್ಯಸನಂಗಳ ಸಂ ।
ಭವಿಸುಗುವಮಾರ್ಗ್ಗರಂ ವಿಶಿಷ್ಟವಿದ್ವಿಷ್ಟಂಗಳ ॥ 629

ಸಮುಚ್ಚಯಕ್ಕೆ ॥

ವೃ ॥ ನೃಪನ ದಯೆಯುಂ ನಚ್ಚುಂ ತನ್ನಣ್ಮಮಾ[3]ರ್ಪ್ಪದುಮಾಂತ ಭೂ ।
ಮಿಪನ ಮನದೊಂದುಕ್ಕುಂ ಸೊಕ್ಕುಂ ಬಿಗುತ್ತಿರವುಂ ನಿಜ ॥
ದ್ವಿಪಹಯರಥಾನೀಕಾನೇಕಪ್ರಧಾನರ ಸಾವುಮಾ ।
ತಪನತನಯಂಗಾಗಳ ಕಾಯ್ಪಂ ನಿಮಿರ್ಚ್ಚಿದುವಾಜಿಯೊಳ ॥ 630

ಕಂ ॥ ಕೃತಮಣಿವಿಭೂಷಣಂಗಳ ।
ನತಿಕಯಿಸಿದುವವರ ಕೊರಲೊಳಂ ತೋಳೊಳಮು[4] ॥
ತ್ಥಿತಮಾಗಿ ಭೂಷಣಂಗಳ ।
ನಿತಂಬಮಂಡಳದೊಳಂ ಕುಚಾಭೋಗದೊಳಂ ॥ 631

ವೃ ॥ ಕೊಡೆ ಗುಡಿ ತೋರಣಂ ದ[5]ಧಿ ಮಧುದ್ರವಮುಚ್ಚಗಟುಂಕೆ ಲಾ[6]ಜೆ ಸಂ।
ಗ[7]ಡಮಲರಕ್ಷತಂ ಬೆಳೆಯ ಸಾಸವೆ ಪೊಂಗೊಡವಷ್ಟಶೋಭೆ ಕ ॥
ನ್ನಡಿ ಕಡೆ ವರ್ಧಮಾನಪ[8]ಟಹಂ ತಿಚೆ ಮಂಗಳಗೀತನಾದಮೆ ।
ಲ್ಲೆಡೆಗ[9]ಳೊಳಲ್ಲಿಗಲ್ಲಿಗಧಿಕಂ ಪಡೆದತ್ತು ಜನಾನುರಾಗಮಂ ॥ 632

ಆಟಂ ಬಾಜನೆ ಗಾಡಿಗಳ ಪಸದನಂ ಬೆಳ್ದಿಂಗಳೊಳ್ವಾತು ಕೊಂ ।
ಡಾಟಂ ಕತ್ತುರಿ ಕಪ್ಪುರಂ ನಗೆ ತೆಗಟ್ ಪಾಟಂ ಬಿಯಂ ಜವ್ವನಂ ॥
ನೋಟಂ ತಂಬುಲಮಿಂಪು ಕಂಪು ವಿಭವಂ ಮೆಯ್ಮೆಳಮೆಂ[10]ದಿಂತಿವಂ ।
ಬೇಟಕ್ಕಾಗರಮೆಂಬನಣ್ಣ ಸುಸಿಲೇಂ ವೇ[11]ಳ್ಪುಗದೊಳ ತೀರದೇ ॥ 633

ಸೂತ್ರಂ ॥ 151 ॥

ಸಾಧನಮಂ ಸಾಧ್ಯಕ್ಕವಿ ।
ಅನುಮಿತಿ. ರೋಧಿಯನಱಿದೂಹೆಗೆಯ್ವುದನುಮಿತಿಯೆನಿಕುಂ ॥
ಸೂಕ್ಷ್ಮಂ. ಸಾಧುಸವಾಧಿಪರೇಂಗಿತ ।
ಬೋಧಂ ನಿ[12]ರ್ವ್ವಾದಮಪ್ಪುದಂತದು ಸೂಕ್ಷ್ಮಂ ॥ 634

1 ಮಿಂಚು. 2 ದಿಂಬುಧವಿಶಿಷ್ಟ. 3 ಮಾರ್ಪ್ಪದು, ಮಾಳ್ಪುದು. 4 ಮು । ದ್ಧಿತ. 5 ಧವ. 6 ಸತ್ತಿ. 7 ಗದಿಯುಲ, ಗುಮಾಲ. 8 ಪಟಹಾಂಡ. 9 ಯೊಳಗಲ್ಲಿ. 10 ಮೆಯ್ಯುಂತಿವಂ. 11 ವೇಳ್ಪಾಗ. 12 ನಿಬ್ಬಾರ್ಥ.

ಲಕ್ಷ್ಯಂ ||
ಅನುಮಿತಿಗೆ ||

ವೃ || ಎಳಮಿಂಚಿಲ್ಲಕ್ಕುಮಾಖಂಡಲಲಲಿತಧನುರ್ದ್ದಂಡಮಿಲ್ಲಕ್ಕುಮಭ್ರಾ |
ವಳಿಯಿಲ್ಲಕ್ಕುಂ ಕದಂಬಾನಿಲನ[1] ಸುಳಿವದಿಲ್ಲಕ್ಕುಮುದ್ಯನ್ಮಯೂರೀ ||
ಕುಳಲೀಲಾತಾಂಡವಾಡಂಬರವಿಳಸನಮಿಲ್ಲಕ್ಕುಮಿಂ[2]ತಾಮಹೀವಂ |
ಡಳದತ್ತಲ್ ನಲ್ಲನಂತಲ್ಲದೊಡೆ ತಡೆದದೇಕಿರ್ಪ್ಪನಿಂದಲ್ತೆ ಬರ್ಪ್ಪಂ || 635

ಅದಲ್ಲದೆಯುಂ ||

ಕಂ || ಬೆಸೆದಿರೆ ನಿನ್ನೊಳೆಸಳ ಕಾ |
ಲ್ಗಸವಸದಿಂದೆಱಗಿ ತಿಳಿಪಿದಯ್ ನಿರ್ವ್ಯಾಜಂ ||
ನೊಸಲೊಳ್ ನಿಸದಮಲಕ್ತಕ |
ರಸತಿಲಕಮು[3]ದಿಲ್ಲದಂದದೇಕಿಂತಕ್ಕುಂ || 636

ಸೂಕ್ಷ್ಮಕ್ಕೆ ||

ಕಂ || ಏಗಳ್ ನಮಗಕ್ಕುಂ ಸಂ |
ಯೋಗಮೆನಲ್ ಬಗೆವ ನಲ್ಲನಂ ಕುಱಿತು ಮನೋ ||
ರಾಗದಿನೊಡರಿಸಿದಳ್ ಚೆ |
ಲ್ವಾಗಿರೆ ಪೆಱಳೊರ್ವ್ವಳಬ್ಜದಳಮುಕುಳನಮಂ || 637

ಅಂತುಮಲ್ಲದೆಯುಂ ||

ಕಂ || ವಿನಯೋಪಚಾರವಚನಮು |
ಮನುಕೂಲಾಚರಣಮುಂ ವಿಭಿಸ್ನಾಸನಮುಂ ||
ಮನದೊಳಗೆ ಪುದಿದು ಪೊಣ್ಮಿದ |
ಮುನಿಸಂ ಕನ್ನಡಿಪುವಾ[4]ಗೆ ಬಗೆವೆಂ ಪ್ರಿಯೆಯೊಳ್ || 638

ಸೂತ್ರಂ || 152 ||

ಲೇಶಂ ಅಥವಾ ಲವಂ.

ಗುಣಮನೆ ತರ್ಪ್ಪದು ದೋಷದ |
ಗಣನೆಗೆ ದೋಷಮುಮನಿನಿಸು ಗುಣಗಣನೆಗೆ ತಂ ||
ದೊಣರ್ಪ್ಪುದು ಲೇಶಂ ವಿಬುಧಾ |
ಗ್ರಣಿಗಳ್ ಕೆಲಬರ್ ನಿಗೂಹನಂ[5] ಲವಮೆಂಬರ್ || 639

ಲಕ್ಷ್ಯಂ ||

ಕಂ || ಒಡನಿರ್ದ್ದಗಲ್ಕೆಯಾದೊಂ |
ದೆಡೆಯೊಳ್ ದುಃಖಮನಸಹ್ಯಮಂ ಮಾಳ್ಪುದಱಿಂ ||
ಸುಡು ಸುಡು ಸಜ್ಜನರಪ್ಪವ |
ರೊಡಗೂಟಮನ[6]ಕ್ಕೆ ಖಳರ ಕೂಟಮೆ ಸುಖದಂ || 640

1 ನೆಸಗುವ್ವು. 2 ಮಱಂ. 3 ಮದಲ್ಲ. 4 ವಾಗಿ. 5 ಮಂ. 6 ನಕ್ಕೆ.

ನಿಗೂಹನಕ್ಕೆ ॥

ವೃ ॥ ಪರಿವಿಡಿಗೆಯ್ಯೆ ಸೊಂದಿಗಿರೆ ತಂದೆಯು ತಾಯು ಸಮೀಪದೊಳ್ ತನೂ ।
ದರಿಯು ರತೋಪಯುಕ್ತರುತಿಯುಂ ವಿನತಾನನೆ ನಾಣ್ಚಿ ತೋ[1]ಳ. ॥
ಳ್ತುರುಶಿಖಿನರ್ತ್ತನಪ್ರಹತಕಂಕಣಝುಂಕೃತಹಸ್ತತೂರ್ಯ್ಯನಿ ।
ರ್ಝರರವದಿಂದದಂ ಮಱಸಿದಳ್ ಗಡ ಮುಗ್ಧೆಯದೇಂ ವಿದಗ್ಧೆಯೋ ॥ 641

ಸೂತ್ರಂ ॥ 153 ॥

ವ್ಯತಿರೇಕವಮುಭಯಸಾಮ್ಯ ।
ವ್ಯತಿರೇಕಂ. ಪ್ರತೀತಿಯುಂ ತೋಱಿ ಭೇದಮಂ ಮೂಱುವುದು ಸಂ ॥
ದೀಪಕಂ. ಗ[2]ತಿಯಿಂದಂ ಮಧ್ಯಾಂತ ।
ಸ್ಥಿತಮಾಗಿ ಬೆಳಪ್ಪುದಱಿಗೆ ದೀಪಕಮಕ್ಕುಂ ॥ 642

ಲಕ್ಷ್ಯಂ ॥

ವ್ಯತಿರೇಕಕ್ಕೆ ॥

ಕಂ ॥ ಗಂಭೀರಮುಮಳಲಕ್ಷ್ಮೀ ।
ಸಂಭವಪದಮಧಿಕಸತ್ವಮಾಗಿಯುಮೆಯ್ದು ॥
ಲ್ಕಂಭೋಧಿ ನೆಱೆಬುದಿ[3]ಲ್ಲವ ।
ನಂ ಭಾಸುರನಿಶಿತಮತಿಯನತಿಕಲುಷಜಡಂ ॥ 643

ವೃ ॥ ವಸುಧೆಗೆ ಸಂದಹೀನರಿಪುವರ್ಗ್ಗಮನೋಡಿಸಿ ಚಕ್ರಿ ಮೆಚ್ಚೆ ಬ ।
ಣ್ಣಿಸೆ ಪತಿಭಕ್ತಿಯಂ ಮೆಱೆದು ಮಂತ್ರಪದಕ್ಕಧಿನಾಥನಾಗಿ ಪೆಂ ॥
ಪೆಸೆವಿನಮಾರೊಳಂ ವಿಮುಖವೃತ್ತಿಯೊಳೊಂದದ ಪಕ್ಷಪಾತದಿಂ ।
ದೆಸಗದ ವೈನತೇಯನಿವನೆಂಬುದು ಸಾಹಸವೈನತೇಯನಂ ॥ 644

ಕಂ ॥ ವಾರಿಜಗಂಧಿ ವಿಭಾತಸ ।
ವೀರಂ ನಿಜಸುರಭಿ ನಿನ್ನ ಸು[4]ಯ್ಯಿವಱೊಳದಂ ॥
ತೋರಗೆಯಕ್ಕುಮೆ ಪರಗುಣ ।
ಹಾರಿಗೆ ನಿಜಗುಣಮು[5]ದೇಕೆ ಸಮನಿಸಿವಪುದೋ ॥ 645

ಕಾರಕದೀಪಕಕ್ಕೆ ॥

ಕಂ ॥ ನವಜಳದಾಗಮಮಿಂತೀ ।
ಭುವನಜನಕ್ಕೆಲ್ಲಮೆಯ್ದೆ ಮಾಡಿದುದಧಿಕೋ ॥
ತ್ಸವಮಂ ಚಿತ್ತಂತದೆ ತಾಂ ।
ಪ್ರವಾಸಿಗಳ್ಗೆರ್ದೆಯೊಳೊದವಿಸಿತ್ತದವಱಿಲಂ ॥ 646

1 ಕಾಮುಕ ॥ ಕ್ಷರ, ಕೋಳಕ ॥ ಕ್ಷರ. 2 ಗತಿಯಂದಮಧ್ಯಾಂತ. 3 ವಿಶ್ವ. 4 ಸುಯ್ಯಲ್ಜತೆಗಳಗಂ.
5 ನೋಳ್ಪ್, ದೋಳಕ.

ಕಂ॥ ಓಸರಿಸಿದ ಜವನಿಕೆಯೊಡ ।
ನೋಸರಿಸಿದನಿನಲೆ ಕಂತು ಕು[1]ಸುಮಾಂಜಲಿಯುಂ ॥
ಸೂಸಿದ ಪದದೊಳ್ ಸಭೆಗಂ ।
ಸೂಸಿದನೊ[2]ಡನೊಡನೆ ನನೆಯ ಮೊನೆಯಂಬುಗಳಂ ॥ 647

ಆವರಿಸಿತ್ತೊ ನಭೋಂತ ।
ರ್ಭೂವಿವರಮನಮರ್ದಿನೆಸಕಮೆನೆ ಬಿತಯಿಗಳೋ ॥
ಪೋವಿದು ಮದನನ ಸೋದನ ।
ದೀವಿಗೆಯೆನ ತೊಳಗಿ ಬೆಳಗಿದಂ ತುಹಿನಕರಂ ॥ 648

ಕ್ರಿಯಾದೀಪಕಕ್ಕೆ ॥

ಕಂ॥ ಸೊಗಯಿಸಿದುದು ಕಾರ್ಗಾಲದ ।
ಪುಗಿಲೊಳ್ ಜಲಜಲನೆ ಪರಿಯುತಿರ್ಪ್ಪೆಳ್ವೊನಲುಂ ॥
ಮುಗಿಲ ಪೊರೆವೊರೆಗಳೊಳ್ ಪೊಳೆ ।
ದೊಗೆವ ಚಳಚ್ಚಟುಳತರತಟಿದ್ವಿಳಸನಮುಂ ॥ 649

ಧರೆಯುಂ ಮೆಚ್ಚದೆ ಮೆಚ್ಚುವ ।
ಸುರಲಲನಾನೃತ್ಯಮಿತ್ತಲಭವನ ಸಭೆಯೊಳ್ ॥
ಕರಮೆಸೆದುದು ವಾ[3]ರಸ್ತ್ರೀ ।
ಪರಿನರ್ತ್ತನಮತ್ತಲಾಮಹೀಶನ ಸಭೆಯೊಳ್ ॥ 650

ಕುಳಿರ್ವೆಲರುಮಾಲಿನೀರುಂ ।
ತಳಿರ್ವಾಸುಂ ಚಂದ್ರಕಾಂತಮುಂ ಚಂದನಮುಂ ॥
ಕೊಳನುಂ ನಂದನವನಮುಂ ।
ಕ[4]ಳೆಯವೆ ಬೇಸಗೆಯೊಳೆ[5]ನ್ನ ಬೇಟದ ಸೂಡಂ ॥ 651

ಸೂತ್ರಂ ॥ 154 ॥

ಸಮನಿಸಿ ಬಿದಿವಸದಿಂದಂ ।
ಸಮಾಹಿತಂ. ಸಮಾಹಿತಂ ಬರ್ಪ್ಪೊಡದು ಸಮಾಹಿತಮೆನಿಕುಂ ॥
ಆವೃತ್ತಿ. ಸ[6]ಮಗೊಂಡರ್ತ್ಥಪದಾವೃ ।
ತ್ತಿ ಮತ್ತದಾವೃತ್ತಿಯೆಂಬ ಪೆಸರಂ ಪಡೆಗುಂ ॥ 652

ಲಕ್ಷ್ಯಂ ॥
ಸಮಾಹಿತಕ್ಕೆ ॥

ಕಂ॥ ಕಡುಗತ್ತಲೆಯೊಳ್ ಪ್ರಿಯನಿ ।
ರ್ದ್ದೆಡೆಗಾ[7]ಗಿಯೆ ಪೋಗಲೆಂದು ಮನೆಯುಂ ಪೊಱಮ ॥
ಟ್ಟಡಿಯಿಡಲಱಿಯದೆ ಮಱುಗುವ ।
ಮಡದಿಗೆ ಬಗೆ ತೀರೆ ಮಿಂಚು ಮಿಂಚಿದುದಾಗಳ್ ॥ 653

1 ಪುಷ್ಪಾಂ. 2 ನೊಮೆರ್ಮ್ಮದಲೆ. 3 ದೇವ. 4 ಕಳೆಯುವು. 5 ಳೆನಗ. 6 ಸಮಕೊಂಡ. 7 ಗಾಗಿರ.

ಕಂ॥ ಮುೞಿದಿರೆ ನಿಜವಲ್ಲಭೆಯಂ ।
ತಿೞಿಪಲ್ ಕಾಲ್ಗೆಱಗಲಿನಿಯನಿರ್ಪವಸರದೊಳ್ ॥
ಜಳಧರನಿನದಂ ನೆ[1]ಗೆದುದು ।
ತಳಮಳಗು[2]ತ್ತಾಕೆ ತಾನೆ ಬಿಗಿಯಪ್ಪುವಿನಂ ॥ 654

ಆವೃತ್ತಿಗೆ॥

ವೃ ॥ ಅಲರ್ದುವು ಕುಟಜಂಗಳ್ ಪೂತುವಿಂಬಪ್ಪಿನಂ ಕಂ[3] ।
ದಲಿ ಕುಸುಮಿಸಿದತ್ತುದ್ದಾಮನೀಪಾವನೀಜಾ ॥
ವಲಿ ಬಿರಿದುವೆ ಜಾತೀಯೂಥಿಕಾಕೇತಕೀಸಂ ।
ಕುಲಮವಿರಲಗಂಧಾಮೋದಿತಾಶಾಂತರಾಲಂ ॥ 655

ಕಂ ॥ ಪಡೆಗುಂ ಮಹಿಮೋನ್ನತಿಯಂ ।
ಪಡೆಗುಂ ಸ[4]ನ್ಮಾರ್ಗದೆಸಕಮಂ ಗುಣದೊಳ್ಪಂ ॥
ಪಡೆಗುಂ ನಿರ್ಮ್ಮಳಯಶಮಂ ।
ಪಡೆಗುಂ ಪಡೆಗುಂ ವಿಭುತ್ವಮಂ ಬುಧಸಂಗಂ ॥ 656

ವೃ ॥ ಕಲಿ ಪಾರ್ತ್ಥಂ ಪಾರ್ತ್ಥನಿಂದಂ ಕಲಿ ರವಿತನಯಂ ಪಾರ್ತ್ಥನಿಂ ಕರ್ಣ್ಣನಿಂದಂ ।
ಕಲಿ ಭೀಮಂ ಪಾರ್ತ್ಥನಿಂ ಕರ್ಣ್ಣನಿನನಿಲಜನಿಂ ರಾಘವಾಧೀಶಭೃತ್ಯಂ ॥
ಕಲಿ ಶಕ್ರಾಪತ್ಯನಿಂ ಕರ್ಣ್ಣನಿನನಿಲಜನಿಂದಂಜನಾಪುತ್ರನಿಂದಂ ।
ಕಲಿ ಧಾತ್ರೀಚಕ್ರದೊಳ್ ವಿಕ್ರಮಗುಣನಿಳಯಂ ವೀರಮಾರ್ತ್ತಾಂಡದೇವಂ ॥ 657

ಸೂತ್ರಂ ॥155॥

ಇತರೇತರಕಾರಕಸಂ ।
ಪರಸ್ಪರಂ. ಪ್ರತಿಪತ್ತಿ ಪರಸ್ಪರಂ ಸಮೂಹದೊಳೆಸೆವೊಂ ॥
ಸಾರಂ. ದತಿಶಯಗುಣದಿಂ ನಿರ್ಧಾ ।
ರಿತಮಪ್ಪುದು ಸಾರಮೆಂಬ ಸದಲಂಕಾರಂ ॥ 658

ಲಕ್ಷ್ಯಂ॥

ಪರಸ್ಪರಕ್ಕೆ ॥

ಕಂ ॥ ಸರಿಗೆಗೆ ಕೊರಲ್ ಕೊರಲ್ಗಂ ।
ಸರಿಗೆಯ[5]ಲಂಕರಿಸೆ ಸರಿಗೆ ವಂದುದು ಮುಯ್ಮ್ಮ ॥
ಟ್ಸೈರಡಱ ಪಡಂಗುಮೆಂಬಂ ।
ತಿರೆ ಕರಮೊ[6]ಪ್ಪಿದುದು ಕೊರಲಗೇಂದ್ರಾತ್ಮಜೆಯಾ ॥ 659

---

1 ನೆಗಳ್ದುದು. 2 ಗಾಡಾಳ್, ಗಾಗಾಳ್. 3 ಕಂಟಲಿ, ಕಂಡಲಿ. 4 ಪದ್ಮನ. 5 ಪಲಂಪಿಗೆ, 6 ಪೊಪ್ಪವುದು.

ಸಾರಕ್ಕೆ ॥

ಕಂ॥ ಸಾರಂ ಸಂಸಾರದೊಳಬ ।
ಲಾರತ್ನಂ ಸಾರಮಲ್ಲಿ ಜವ್ವನಮದಜಿೞ್ ॥
ಸಾರಂ ಮಧುರಾಕಾರಂ ।
ಸಾರಂ ಮತ್ತಂತವ[1]ಕ್ಕು ಮನುಕೂಲರಸಂ ॥ 660

ಸೂತ್ರಂ ॥ 156 ॥

ನಿಮೀಳನಂ.

ಪ್ರಕೃತಿಯಿನಲ್ಲದೊಡಾಗಂ ।
ತುಕಹೇತುವಿನಿಂ ಪ್ರಕೋಪರಾಗಾದಿಮನೋ ॥
ವಿಕೃತಿಯನುಪಲಕ್ಷಿಸಿ ತಿಳಿ ।
ಯೆ ಕಾ[2]ಣದಿರಲದು ನಿಮೀಳನಂ ಪೆಸರಿಂದಂ ॥ 661

ಲಕ್ಷ್ಯಂ ॥

ಕಂ॥ ಸರಳತರಧವಳಸುಸ್ನಿ ।
ಗ್ಧರೂಪಮನ್ನ[3]ಪನ ದೃಷ್ಟಿ ಸಾಜದೊಳದಱಿಂ ॥
ದೊರೆಕೊಂಡುದೊಂದು ಚೇತೋ ।
ನುರಾಗಮುಱಿಯಲ್ಕೆ ಬರ್ಪ್ಪದಲ್ತಣಮಾರ್ಗ್ಗಂ ॥ 662
ಮದಿರಾಮದಭರಪಾಟಲ ।
ವದನೆಯ ಮನದೊಳ್ ಪೊದೞ್ದ ಕೋಪಂ ತಾನಂ ॥
ತದು ಲಕ್ಷಿಸಲ್ಕೆ ಬಂದಿ ।
ರ್ದ್ದುದಿಲ್ಲ ಕೃತದೋಷನಾ[4]ಗಿಯುಂ ಕಾಮುಕನಿಂ ॥ 663

ಇವು ವಾಸ್ತವಭೇದಂಗಳ ॥

ಸೂತ್ರಂ ॥ 157 ॥

ಔಪಮ್ಯಂ.

ಏನಾನುಮೊಂದು ತೆಱದಿಂ ।
ನಾನಾವಿಧವಸ್ತುರೂಪದೊಳ್ ಸಾದೃಶ್ಯಂ ॥
ತಾನೆನಿಸಿ ತೋರ್ಪ್ಪುದದು ಬುಧ ।
ಮಾನಿತಮೌಪಮ್ಯಮೆಂಬಲಂಕೃತಿಯಕ್ಕುಂ ॥ 664

ಸೂತ್ರಂ ॥ 158 ॥

ಉಪಮಾ ಭೇದಂಗಳ್.

ವೃ ॥ ಉಪಮಾನಪ್ರತಿವಸ್ತುರೂಪಕಸಮಾಸೋಕ್ತಿಕ್ರಮಾಕ್ಷೇಪಸಾ ।
ವ್ಯಪರಾಖ್ಯಾನನಿದರ್ಶನೋತ್ತರಸಸಂದೇಹಭ್ರಮಾಪಹ್ನುತಿ ॥
ವ್ಯಪದೇಶಸ್ಮರಣಪ್ರತೀಪಸಮಯೋಗಾಪ್ರಸ್ತುತಸ್ತೋತ್ರಮೆಂ ।
ದುಪಮಾಭೇದಮಿವಕ್ಕುಮಂತೆ ದೊರೆವೆತ್ತರ್ತ್ಥಾಂತರನ್ಯಾಸಮುಂ ॥ 665

1 ದಕ್ಕೆಯನು, ದಕ್ಕೆವನು. 2 ಕಾಣಲಾದುದು. 3 ನ್ನಪರ. 4 ನಾಗಿ.

ಅದಱೊಳಗೆ ॥

ಸೂತ್ರಂ ॥ 159 ॥

ಉಪಮೆ.

ಉಪಮೇಯಂ ಗುಣಲೇಶದಿ ।
ನುಪಮಾನಕ್ಕೆಣೆಗೆ ವರ್ಪೊಡುಪಮೆಯೆನಿಕ್ಕುಂ ॥
ವ್ಯು[1]ಪಸರ್ಗವಿಷಯರೂಪ ।
ಪ್ರ[2]ಪಂಚಿತಮನೇಕಭೇದಮದು ತಾನಕ್ಕುಂ ॥ 666

ಲಕ್ಷ್ಯಂ ॥

ಧರ್ಮೋಪಮೆಗೆ ॥

ಕಂ ॥ ಜಲನಿಧಿವೋಲ್ ಗಂಭೀರಂ ।
ಬಲವೈರಿಯವೋಲ್ ಸಮಗ್ರವಿಭವಸನಾಥಂ ।
ಕುಲಗಿರಿವೋಲ್ ನಿಷ್ಕಂಪಂ ।
ಬಲಿಯಂತೆವೊಲಧಿಕದಾನಿ ದಾನವಿನೋದಂ ॥ 667

ಹೇತೂಪಮೆಗೆ ॥

ಕಂ ॥ ಪರಿವೃತ್ತತೆಯಿಂ ನುಣ್ಪಿಂ ।
ಶ[3]ರಕಾಂಡಪ್ರತಿಮಚಾರುಗೌರಚ್ಛವಿಯಿಂ ॥
ಪರಿಪಕ್ವತಾಳಫಳದೊಳ್ ।
ದೊರೆಯೆನಿಸುಗುಮವಳ ಘನಪಯೋಧರಯುಗಳಂ ॥ 668

ವಸ್ತೂಪಮೆಗೆ ॥

ಕಂ ॥ ಅಳಿಕುಳದಂತಳಕಚಯಂ ।
ದಳಿತಾಂಬುಜದಂತೆ ನಗೆಮೊಗಂ ಲಲಿತಾಂಗಂ ॥
ಮಿಳಿರ್ವ ಲತೆಯಂತೆ ತಳಮುಂ ।
ತಳಿರಂತೆ ಬೆಡಂಗುವೆತ್ತು ತೋರ್ಕ್ಕುಂ ಸತಿಯಾ ॥ 669

ಶ್ಲೇಷೋಪಮೆಗೆ ॥

ಕಂ ॥ ಸಮವೃ[4]ತ್ತಸಂಧಿಲಕ್ಷಣ ।
ಸಮನ್ವಿತಂ ಜಾತ್ಯಲಂಕೃತಿಭ್ರಾಜಿತಮು ॥
ತ್ತಮಕಾವ್ಯಬಂಧದಂ[5]ತಾ ।
ದಮಿತಾರಿಗೆ ಸಾಜಮೊಪ್ಪುಗುಂ ಕಿ[6]ಱುದೊಡೆಗಳ್ ॥ 670

ಅನ್ಯೋನ್ಯೋಪಮೆಗೆ ॥

ವೃ ॥ ತಳಮುಂ ಕೆಂದಳಿರುಂ ಕುಚದ್ವಿತಯಮುಂ ಪೂಗೊಂಚಲುಂ ತೋಳ್ಗಳುಂ ।
ಸೆಳೆಗೊಂಬುಂ ಕುರುಳೋಳಿಯುಂ ಚಳದಳಿವ್ರಾತಂಗಳುಂ ಕೋಮಳಾಂ ॥
ಗುಳಿಯುಂ ತತ್ಕಳಿಕಾವಳೀರುಚಿಯುಮಂತೊಂದೊಂದಱೊಳ್ ಪೋಲ್ವೆಯಾ ।
ಗೆ ಲತಾಕೋಮಳೆ ಸಾರ್ದ್ರಶೋಕಲತೆಯುಂ ಪೂಗೊಯ್ದಳಂ[7]ತೞ್ತಯಿಂ ॥ 671

---

1 ವ್ಯಪಸರ್ಗ. 2 ಪ್ರಪಂಚಿತಂ ತಾನನೇಕಭೇದಮನಿಕ್ಕುಂ. 3 ಶರಸ್ತಂಭ, ಸ್ಮರಕಾಂಡ. 4 ವೃತ್ತಿ. 5 ದಂದಂ.
6 ಕಿಱುದೊಡೆಯೊಳ್. 7 ಳಂದ.

ವಿಪರ್ಯಾಸೋಪಮೆಗೆ ||

ವೃ || ಮೊಗಮಂ ತಾವರೆ ಕಣ್ಣನುತ್ಪಲದಳಂ ಧಮ್ಮಿಲ್ಲಮಂ ಸೋಗೆ ಸೆ |
ಳ್ಳುಗುರಂ ಕೇದಗೆ ಪುರ್ಬ್ಬನಂಗಜನ ಬಿಲ್ ಪಂತಾಳಿಯಂ ಮುತ್ತು ಕೆ ||
ಯ್ಮುಗಿದಾರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿನಿಸ್ಸಾರವ |
ಸ್ತುಗ[1]ಳೊಳ್ ಪೋ[2]ಲಿಪರಂತದೇಂ ಮರುಳರೋ ರೂಪಂ ವಿಚಿತ್ರಾಂಗಿಯಾ 672

ಬಹೂಪಮೆಗೆ ||

ಕಂ || ಶರದಂಬುದಮಂ ಗಂಗಾ |
ತರಂಗಮಂ ಸಿಂಧುವಾರಕುಸುಮಶ್ರೀಯಂ ||
ಹರಹಾಸವಿಳಾಸಮನನು |
ಕರಿಸುವುದತಿವಿಶದಕೀರ್ತ್ತಿ ತೋಳ್ಗೊಪ್ಪುವನಾ || 673

ಮಾಲೋಪಮೆಗೆ ||

ವೃ || ಎಂತು ಬಸಂತಮುದರ್ಕ್ಕ ತೆಂಬೆಲರೆಂತದ |
ರ್ಕ್ಕೆಂತು ತಳಿರ್ ತಳಿರ್ಗ್ಗೆಂತಲರ್ ಕುಸುಮೋತ್ಕರ ||
ಕ್ಕೆಂತಳಿ ಮು[3]ತ್ತ ಮದಾಳಿಗೆಂತು ನಿನಾದಮಂ |
ತಂತೆ ತರಂತರಮೊಪ್ಪಿ ತೋಱಿದಳಗ್ಗಳಂ || 674

ಕಲ್ಪಿತೋಪಮೆಗೆ ||

ವೃ || ಮೃಗಮದಕಲ್ಪಿತಪತ್ರಭಂಗರಮ್ಯಂ |
ನಗೆಮೊಗಮುಜ್ವಳಕಾಂತಿ ನಾಡೆ ಸಾಮ್ಯಂ ||
ಸೊಗಯಿಸುಗುಂ ಮೃಗಲಾಂಛನಾಭಿರಾಮಂ |
ಮೃಗಧರಬಿಂಬಮಿದೆಂಬಿನಂ ನಿಕಾಮಂ || 675

ವಾಕ್ಯೋಪಮೆಗೆ ||

ಕಂ || ಪರಮನೊಳಗೊಳಗದೊಂದಂ |
ಪರಿಜ[4]ನನಂಗೆಯ್ಯೆ ನೆಗೞ್ದ ಸೂ[5]ಕ್ತ್ಯವ್ಯಕ್ತಾ ||
ಕ್ಷರದಿಂ ನಿಗೂಢತರನಿ |
ರ್ಜ್ಝರರವಗುಂಜದ್ಗುಹಾಚಳಕ್ಕೆಣೆಯಾದಂ || 676

ಪ್ರತ್ಯಯೋಪಮೆಗೆ ||

ಕಂ || ಜಲಜಾಯಮಾನಮಲರ್ಗ್ಗಣ್ |
ಪುಲಿನಂಮನ್ಯಂ ನಿತಂಬಮಳಿದೇಶೀಯಂ ||
ಚಲದಳಕಪ್ರತತಿ ಮೃಣಾ |
ಳಲತಾಕಲ್ಪಂಗಳಾಲ[6]ತಾಂಗಿಯ ತೋಳ್ಗಳ್ || 677

1 ಗಳಂ. 2 ಪೋಲಿಸುವಂತ. ದೇಂ, ಪೋಲಿಸುವಂತದೇಂ. 3 ಮತ್ತ. 4 ಜಪಮಂ. 5 ಸೂಕ್ತ್ಯವ್ಯಕ್ತಾ.
6 ನತಾಂಸೆಯ.

ಸಮಾಸೋಪಮೆಗೆ ॥

ವೃ ॥ ಕಮಲನಯನಂ ಕಂಬುಗ್ರೀವಂ ಘನಸ್ತನಮಂಡಳಂ ।
ಭ್ರಮರರುಚಿಮತ್ಕೇಶಂ ಬಿಂಬಾಧರಂ ನಳಿತೋಳ ಜೆಡಂ ।
ಗ[1]ಮರ್ದುದು ಮೊಗಂ ರಂಭಾಸ್ತಂಭೋರು ತೆಳ್ವಸಿಱುಪ್ಪೆ ವಿ[2] ।
ಭ್ರಮದ ಕಣಿಯುಂ ಪೋಲ್ತರ ನಿಲ್ತಲ್ಲಿ ಬೇಡಿತಿಯರ್ ಕೆಲರ್ ॥ 678

ಸೂತ್ರಂ ॥ 160 ॥

ಲಿಂಗವಚೋವಿಹಿತವಿಭೇ ।
ಉಪಮಾ ದಂಗಳ್ ನ್ಯೂನಾಧಿಕಂಗ[3]ಳುಂ ಸದೃಶತೆಯಿಂ ॥
ದೋಷಂಗಳ್. ಸಂ ಗತಮಲ್ಲದುವುಂ ದೋ ।
ಷಂಗಳವುಪಮೆಗೆ ಯಥಾಕ್ರಮೋದ್ವೇಜನದಿಂ[5] ॥ 679

ಲಕ್ಷ್ಯಂ ॥

ಲಿಂಗವಚನಭೇದಂಗಳ್ಗೆ ॥

ಕಂ ॥ ನಿರವದ್ಯಂ ಗತದುರಿತಂ ।
ಪರಿಪೂತಂ ಜಗದೊಳಿಂತಿವಂ ಗಂಗೆಯವೋಲ್ ॥
ಸುರುಚಿರತೇಜಂ ಭಾಸುರ ।
ತರಸ್ವರಂ ಶಿಖಿಶಿಖಾಕಲಾಪಂಗಳವೋಲ್ ॥ 680

ಹೀನೋಪಮೆಗೆ ॥

ಕಂ ॥ ಎರಲೆಯ ಪಿಂಡುಗಳಂ ದೆಸೆ ।
ವರಿವರಿವಿನಮಳಱೆ ತಗುಳ್ವ ನಾಯಂತೆ ರಣಾ ॥
ಜಿರದೊಳ್ ದಿಚ್ಚಿಗದ ಬಲವ ।
ದ್ವಿರೋಧಿಸೈನಿಕಮನಾನೃಪಂ ಪೆಂಕೊಂಡಂ ॥ 681

ಅಧಿಕೋಪಮೆಗೆ ॥

ಕಂ ॥ ಮುಂ ಬಿಟ್ಟು ಪರೆದ ಕಟ್ಟಲೆ ।
ಯಂ ಪೆದಱೆ ತೆರಳ್ಚಿ ಪಳಪ ಪಳಗಿಂದೆಸದಿ ॥
ಷ್ಪರ್ಗಂಬುಜಸಖನಂತಿರೆ ವಿಾ ।
ನಂಬುಱು ಪೆಳಗಿದಪುದಖಿಳಗಗನಾಂತರಮಂ ॥ 682

ಅಸಾದೃಶ್ಯಕ್ಕೆ ॥

*ವೃ ॥ ದಾನಾಂಬುಚುಂಬಿತಕಪೋಲತಲಂ ಮದೇಭಂ ।
ತಾನೊಪ್ಪುವಂತೆ ಸೊಗಯಿಪ್ಪುದು ನೋಡೆ ಪೀನಂ ॥
ನಾನಾರುಚಿಪ್ರಚುರಚಾರುಕಳಾಪಕಾಂತಂ ।
ಸಾನುಪ್ರದೇಶದೊಳುಪಾಗತವಿಾಮಯೂರಂ ॥ 683

1 ಗಮರ್ದುಗದಿ, ಗಮರ್ಗದಿ, ಗಮರ್ದಗದ. 2 ಏ । ಭ್ರಮದ ಕಣಿಯುಂ. 3 ಗಳವು. 4 ಸಂಗತಮಲ್ಲದುವು. 5 ದೋಷ. * ಈ ಪದ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ.

* ಕಂ॥ ಲತೆಯೊಳ್ ನಳಿತೋಳ್ ಪಲ್ಲವ ।
ತತಿಗಳೊಳಧರಂ ಕಱುಂಕೆಯೊಳ್ ಮೆಯ್ವಣ್ಣಂ ॥
ವಿತತಾಂಶುವಪ್ಪ ಹಿಮದೀ ।
ಧಿತಿಯೊಳ್ ಮೊಗಮುಪಮೆವೆ[1]ತ್ತು ತೊಳಗುವುದವಳಾ ॥ 684

ಸೂತ್ರಂ ॥ 161 ॥

ಪ್ರತಿವಸ್ತೂಪಮೆ ಸಾಮ್ಯ ।
ಪ್ರತಿವಸ್ತೂಪಮೆ ಪ್ರತೀತಿಯಿಂದಂ ಸಮಾನವಸ್ತುನ್ಯಸನಂ ॥
ರೂಪಕಂ ಪ್ರತಿಪಾದಿಸುವುದಭೇದಾ ।
ತ್ಮತೆಯಿಂದುಪಮೆಯನದಱ್ತೆ ರೂಪಕಮು[2]ಕ್ಕುಂ ॥ 685

ಲಕ್ಷ್ಯಂ ॥
ಪ್ರತಿವಸ್ತೂಪಮೆಗೆ ॥

ಕಂ ॥ ನಿ[3]ನ್ನನ್ನನೊರ್ವನುಂ ಸಂ ।
ಪನ್ನಗುಣಂ ಪುಷ್ಪಲರಿಯನಿನ್ನುಂ ಮು[4]ನ್ನುಂ ॥
ಸನ್ನುತನಮೇರುಭೂರುಹ ।
ದನ್ನವು ಪೆಱತಾ[5]ವ ಮರನುಮೇಂ ಪುಟ್ಟುಗುಮೇ ॥ 686

ಅಸಮಸ್ತರೂಪಕಕ್ಕೆ ॥

ವೃ॥ ನೆಲೆಮೊಲೆ ಪೊನ್ನ ಸೊ[6]ನ್ನಲಿಗೆಯಾಗೆ ಮೊಗಂ ಸರಸಿಜಮಾಗೆ ಕ ।
ಣ್ಮಲರಲರಾಗೆ ಕೆಂದಳಮೆ ಕೆಂದಳಿರಾಗೆ ಕನತ್ಕಪೋಳಮು ॥
ಜ್ವಲಮುಕುರಂಗಳಾಗೆ ದರಹಾಸಮೆ ಸೂಸುವ ಲಾಜೆಯಾಗೆ ಕೋ ।
ಮಲಲಲಿತಾಂಗಿಯರ್ ನೆರೆದು ನೋಡಿದರಂದಿದಿರ್ಗೊಳ್ವ ಮಾಟ್ಕೆಯಿಂ ॥ 687

ಸಮಸ್ತರೂಪಕಕ್ಕೆ ॥

ವೃ॥ ವದನಾಬ್ಜಂ ಕರಪಲ್ಲವೋಪನಿ[7]ಹಿತಂ ಬಾಷ್ಪಾಂಬುವಿ[8]ಪ್ಲಾವಿತಂ ।
ವಿದಳನ್ನೇತ್ರವಿನೀಲನೀರರುಹಮುಷ್ಣೋಚ್ಛ್ವಾಸದಿಂದಂ ಕಱಿಂ ॥
ಗಿದ ವೃತ್ತಾಧರವಿದ್ರುಮಪ್ರತತಿ ಚಿಂತಾಂಭೋಧಿಮಗ್ನಂ ಕರಂ ।
ಕುದಿಯುತ್ತಿರ್ಪ್ಪುದರ್ ಸೂಚಿಕುಂ ವಿರಹದುಃಖಾಕ್ರಾಂತಿಯುಂ ಕಾಂತೆಯೊಳ್ ॥ 688

ವಿಭಕ್ತರೂಪಕಕ್ಕೆ ॥

ವೃ॥ ಅಂಬುಜಸೂತ್ರಮೆಂಬ ಪೆ[9]ಣೆದಾವಣೆಯುಂ ಪಱಿದಾವಲೆಂಬ ಬಾ ।
ಳ್ಗಂಬಮನೊತ್ತಿ ಕಿತ್ತು ಲತೆಯೆಂಬ ತುರಂಗಮುಮಂ ಪೊರಳ್ಚಿ ಧಾ ॥
ತಾಂಬುತರಂಗಮೆಂಬ ಪರಿಕಾಱನನಟ್ಟಿ ಮದಾಳಿಯೆಂಬ ಗುಂ[10] ।
ಡಂ ಬೞಿಯಟ್ಟೆ ಸೋ[11]ವುದು ಸಮೀರಣವಾರಣಮಾಪ್ರದೇಶದೊಳ್ ॥ 689

* ಈ ಪದ್ಯಕ್ಕೆ ಹಿಂದೆ ಒಂದು ಪ್ರತಿಯಲ್ಲಿ "ಅಲ್ಲಿಯಮಾನುದ್ಯಯಕ್ಕೆ" ಎಂದಿದೆ. 1 ಗತ್ತ್ಕಳೀಱುವುದವಳಾ. 2 ಭೇದಂ. 3 ನಿನ್ನಮೊಲಿನೊರ್ವ್ವಗಂ. 4 ಮನ್ನಂ. 5 ಱದ. 6 ಸೊನ್ನರಿಗೆ, ಸೂನಶಿಗೆ. 7 ವಿಹಿತಂ. 8 ಲಿಪ್ತಾವಿಲಂ. 9 ಪೆಂಡಾಗಗೆಯುಂ. 10 ನಾಗಡಂ. 11 ಪಾಯ್ದುದು.

ಸಾವಯವರೂಪಕಕ್ಕೆ ॥

ಕಂ ॥ ಪರಿಲುಳಿತಘರ್ಮಜಲಮಂ ।
ಪರಿವಿಕಟಿದಭ್ರೂಪ[1]ತಾಕಮತಿತರಳತರ ॥
ಸ್ಫುರಿತಾಧರಪಲ್ಲವಮಿವ ।
ಳ ರೋಷವಮಂ ವಕ್ತ್ರಮಿದೆ ವಲಂ ಕನ್ನಡಿಕುಂ ॥ 690

ನಿರವಯವರೂಪಕಕ್ಕೆ ॥

ಕಂ ॥ ಆರಕ್ತಕಪೋಲಂ ಮಧು ।
ರಾರಸಕೃತಸುರಭಿ ಘೂರ್ಣಿತೇಕ್ಷಣಮುದ್ಯ ॥
ದ್ಭ್ರೂರಮ್ಯಲಾಸ್ಯಮಾಸ್ಯಂ ।
ಭೋರುಹವಿಲಾಸುದತಿಗಿಂತಿದೇನೊಪ್ಪಿದುದೋ ॥ 691

ಸಕಲರೂಪಕಕ್ಕೆ ॥

ವೃ ॥ ವಾರಿಜಂ ವದನಂ ಬೃಹತ್ಪುಲಿನಂ ನಿತಂಬತಲಂ ಚಲ ।
ಚ್ಚಾರುಲೋಚನಕಾಂತಿ ಬಾಳೆಗಳೋಳಿ ಹಾರಮು ಫೇನಮಿ ।
ಸ್ತಾರಮುಂಚಿತಕುಂಚಿತಾಳಕಮುನ್ಮದಾಳಿಗಳಾಗೆ ಶೃಂ ।
ಗಾರದೇವನದೀಪ್ರವಾಹಮಿದೊಂದ[2] ದಲ್ ಪೊಸತೆಂಬಿನಂ ॥ 692

ಹೇತುರೂಪಕಕ್ಕೆ ॥

ಕಂ ॥ ಮೃಗರಾಜಂ ವಿಕ್ರಮದಿಂ ।
ಖಗರಾಜಂ ಸ್ವಾಮಿಭಕ್ತಿಯಿಂ ನಗರಾಜಂ ॥
ಮಿಗಿಲಾದ ಪೆಂಪಿನಿಂ ಪ ।
ನ್ನಗರಾಜಂ ನೃಪತಿಗಾಯನಾಹವಸಿಂಹಂ ॥ 693

ರೂಪಕರೂಪಕಕ್ಕೆ ॥

ಕಂ ॥ ತರುಣಿಯ ಮುಖೇಂದುಕಮಲಾ ।
ಕರದೊಳ್ ಭೃಗ್ಗಳಕಾಂಕನೀಲಬ್ದುಮಳಂ ॥
ಕರಿಸೆ ವಿಟವಾಕಪ್ರಂಗಂ ।
ಬರೆ ಓದ್ದರ್ಶಿತ್ವವರಚಿತ್ರಕಾಪಲಮಳವಂ ॥ 694

ಮಾಲಾರೂಪಕಕ್ಕೆ ॥

ವೃ ॥ ಸಂಸಾರಕ್ಕೇಕಸಾರಂ ಬಿಡಿಯ ಕುಲಧನಂ ಲೋಕದಾಲೋಕಮಾರ್ಗ ।
ರಂ ಸಮ್ಯಂಗಕ್ಷಿಗಳ್ಗಗ್ಗತ್ವಮಪವರ್ಗಮೃತಂ ಕಾಮಸಾಮ್ರಾಜ್ಯಸರ್ವ ।
ಸ್ವಂ ಸೌಂದರ್ಯಕ್ಕೆ ಗೇಹಂ ಮಹಿತಳತಿಳಕಂ ಜಾಣ ಮೆಯ್ ಸಾಣ ಜೇವಂ ।
ಮಾನಸಾಬ್ಜಿ ನಿಸ್ಸರಿಂತಪ್ಪಳೆಯಳನಿಜುದಾಲ್ಕಂತು ನೀನೆತ್ತಿ ಕೊಂಡಯ್ ॥ 695

1 ಲತಾ. 2 ನಾಲ್. 3 [illegible] 4 [illegible] 5 ಪ. 6 [illegible]
7 [illegible], [illegible], 8 [illegible].

ವಿಶೇಷಗುಣರೂಪಕಕ್ಕೆ ||

ವೃ || ಜಗದಾಲೋಕನದರ್ಪಣಂ ಪ್ರಥಮದಿಕ್ಕಾಂತಾನನಂ ಕಂತುರಾ |
ಜಗಜೋದ್ದೀಪನಪಿಂಡಮಂಬರಗರಸ್ಯ[1]ತ್ತಂಸಹಂಸಂ ವಿಯೋ ||
ಗಗನಾಕೂತಕುರಂಗಪೋತಭಯಕೃ[2]ತ್ಕಂಠೀರವಂ ಚೆಲ್ವಿನೆ |
ತ್ತೊಗೆದತ್ತಂಬುಧಿವೀಚಿನ[3]ರ್ತ್ತನನಟಂ ಬಿಂಬಂ ಸುಧಾಸೂತಿಯಾ || 696

ಸೂತ್ರಂ || 162 ||

ಉಪಮಾನಕಥನಮೊಂದಱಿ |
ಸಮಾಸೋಕ್ತಿ. ನುಪಮೇಯಮನಱಿಪುದದು ಸಮಾಸೋಕ್ತಿ ವಿಷೇ ||
ಆಕ್ಷೇಪಂ. ಧಪದಂ ತಾನೆಂಬಂತಾ |
ಗೆ ಸೇಱ್ದಾಕ್ಷೇಪಮಕ್ಕುಮದು ಬಹುರೂಪಂ || 697

ಲಕ್ಷ್ಯಂ ||

ಸಮಾಸೋಕ್ತಿಗೆ |

ಕಂ || ಫಳತರುಗಳ್ ಪಲವುಂ ಬನ |
ದೊಳಗೆ ಸು[4]ರೋದ್ವೀರುಹಪ್ರಕಾಶಂಗಳ್ ತಾ |
ಮೊಳವಾದೊಡಮೆಂತುಂ ಬಗೆ |
ಗೊಳಿಸಿದಪುದಿದೊಂದೆ ನೂತಚೂತಕುಜಾತಂ || 698

ಆಕ್ಷೇಪಕ್ಕೆ ||

ಕಂ || ಒಡನಮೃತಂ ಜನಿಯಿಸಿ ನೆಪಾ |
ಲ್ಗಡಲೊಳ್ ವಿಧು ಪುಟ್ಟಿದಂ ಕಳಾಮಯನೆಂಬೀ ||
ನುಡಿ ಪುಸಿ ಜಡಾತ್ಮಕಂ ವಿಷ |
ದೊಡನೆ ವಿಷಾಕರದೊಳೊಗೆದನೆಂ[5]ಬುದೆ ತಥ್ಯಂ || 699

ಅಂತುಮಲ್ಲದೆಯುಂ ||

ಕಂ || ಪೊಗೞಲ್ಕೆ ನೃಪನಂ ನಾ |
ಲಗೆಯೊಂದಜ ಮನುಜರಿಕ್ಕೆ ನೆಱೆಯದಣಂ ನಾ ||
ಸುಗಿಮುಂ ಪವನಾಧ್ವಮನಾ |
ನಗವನಂ ವ್ಯಾಸದಿಂದಮುಳಿಯುಳ್ ನೆಱೆವಂ || 700

ಸೂತ್ರಂ || 163 ||

ಪೊಸಯಿಸುವರ್ತ್ಥಂ ಕ್ರಿ[6]ಯೆಯಿಂ |
ಸಾಮ್ಯಂ. ಪ್ರಸಿದ್ಧವಸ್ತುವಿನ ದೊರಗೆ ವರೆ ಸಾಮ್ಯಂ ಮ ||
ಪರಾಖ್ಯಾನಂ. ತ್ತೆ ಸಮಾನವಿಶೇಷಣಗುಣಾ |
ಲಸಿತಂ ಸಮುವೃತ್ತಮಪ್ಪುದು ಪರಾಖ್ಯಾನಂ || 701

1 ಸ್ಯೋತ್ತಂಗಹಂಸಂ. 2 ಘ್ರು. 3 ನರ್ತ್ತಕ. 4 ಸುರಭಿವನರುಹಪ್ರಕಾಶಂಗಳ್. 5 ನೆಂಬುದೆ. 6 ಕ್ರಿಯೆಯುಂ, ಕ್ರಿಯೆಯುಂ.

ಲಕ್ಷ್ಯಂ ॥

ಸಾಮ್ಯಕ್ಕೆ ॥

ಕಂ ॥ ಸಕಲಾರ್ತ್ಥಿಮನೋರಥದಾ ।
ಯಕಂ ಮಹೋದಾತ್ತಮೂರ್ತ್ತಿ ಸಾಂದ್ರಚ್ಛಾಯಂ ॥
ಸು[1]ಕರಾಭಿಗಮಂ ನರಪಾ ।
ಲಕನಿರೆ ಕಲ್ಪವನೀಜಮೇಗೆಯ್ದುವುದೋ ॥ 702

ಪರಾಖ್ಯಾನಕ್ಕೆ ॥

ಕಂ ॥ ವಿಕಚಸರಸೀರುಹಂ ಕೋ ।
ಕಕುಳವ್ಯಾಭಾಸಿ ಘೂಗೊಳಂ ತಾನಿರೆಯುಂ ॥
ಬಕನಿಕರಲುಳಿತಕಲುಷೋ ।
ದಕವಿರಳದೊಳಂಚೆ ಪಂಚೆಯೊಳ್ ವಸಿಯಿಕುಮೇ ॥ 703

ಸೂತ್ರಂ ॥ 164 ॥

ಎಂತುಟು ಮುನ್ನಂ ಪೇೞ್ದ ।
ದೃಷ್ಟಾಂತಂ. ತರ್ತ್ಥಾಂತರಮುಂತುಟನೆ ಬೞಕೆ ತೋಱುವುದದು ದೃ ॥
ಉತ್ತರಂ. ಷ್ಟಾಂತಂ ಪ್ರಶ್ನಾರ್ತ್ಥದೊಳೋ ।
ರಂತನುಗುಣಮಾಗೆ ಪೇೞ್ವುದುತ್ತರಮೆನಿಕುಂ ॥ 704

ಲಕ್ಷ್ಯಂ ॥

ದೃಷ್ಟಾಂತಕ್ಕೆ ॥

ಕಂ ॥ ಭವದಾಲೋಕನದಿಂದಾ ।
ಯ್ತುವಳ್ಗೆ ಪಿರಿದುಂ ಮನೋವಿ[2]ಕಾಸಮದೀಗಳ್ ॥
ಕುವಲಯಬಂಧುವಿನಾಲೋ ।
ಕ[3]ವೆ ಮಾಡುವುದಲ್ತೆ ಕುಮುದವನವಿಕಸನಮಂ ॥ 705

ವೃ ॥ ಪತಿಯಿಂ ಪಿಂಬಡಿನೊಳ್ ಪತಿವ್ರತೆಗೆ ಪೇೞೊಂದುಂಟೆ ಕೃತ್ಯಂ ಪಿರಾ ।
ಗ[4]ತೆಯುಂ ಮೇಣ್ ತದನುಪ್ರಯಾಣವಿ[5]ಧಿಯುಂ ತಾವಲ್ಲದೆಂದಿಂತಿದಂ ॥
ಕ್ಷಿತಿಗೆಲ್ಲಂ ತಿಳಿಮಾಗೆ ತೋರ್ಪ್ಪ ತೆಱದಿಂ ರಾಗೋದಯಂ ಪಿಂಗೆ ಸ[6] ।
ಗತೆ ಸಂಧ್ಯಾಂಗನೆ ಪೋದಳ[7]ದೊಲವಿನಿಂ ಪೆನ್ನೊಳ್ ದಿನಾಧೀಶನಾ ॥ 706

ಉತ್ತರಕ್ಕೆ ॥

ವೃ ॥ ಮರಣಮೆನಿಪ್ಪುದಾವುದು ದರಿದ್ರತೆ ಪತ್ತಿದ ಕುತ್ತಮಾವುದಂ ।
ತರಿಸದೆ ನಿಂದ ಚಿಂತೆ ಸುಖಮಾವುದು ಪುತ್ರಮುಖಾವಲೋಕನಂ ।
ನರಕದ ದುಃಖಮಾವುದವಿನೀತಕಲತ್ರಮುದಾತ್ತಮಪ್ಪಲಂ ।
ಕರಣಮುದಾವುದಗ್ಗ[8]ಳಿಕೆವೆತ್ತ ಗು[9]ಣಂಗಳ ಭೂತಳಾಗ್ರದೊಳ್ ॥ 707

---

1 ಸುಕರಾಭಿಗಮಂ. 2 ವಿಕಾರವುದಾಗಳ್. 3 ಕವಲ್ ಮಾಡುವುದು. 4 ಗತಿಯುಂ. 5 ವಿಧಿಯುಂ ತಾವಾವದೆಂ.
6 ಸಂ । ಗತಿ. 7 ಳೊಂದೊಲವಿನಿಂ. 8 ಲಕ್ಷ್ಯದಾವ. 9 ಗುಣಂ ಸುಜನ್ಮಬಾಂಧವಾ.

ಸೂತ್ರಂ ॥ 165 ॥

ಸಂಶಯಂ. ಭ್ರಮಂ. ಅಪಹ್ನುತಿ.

ಮಾತೇನೊ ಸಂಶಯಂ ಸಂ[1] ।
ಶ್ರಿತಿಪರಂ ಚಿತ್ತಮೋಹನಂ ಭ್ರಮಮಕ್ಕುಂ ॥
ಭೂತಾರ್ತ್ಥಾಪಹ್ನವಸಂ[2] ।
ಭೂತಮದನ್ಯತ್ರಾರ್ತ್ಥದೃಷ್ಟ್ಯಪಹ್ನುತಿನಾಮಂ ॥ 708

ಲಕ್ಷ್ಯಂ ॥

ಸಂಶಯಕ್ಕೆ ॥

ವೃ ॥ ಅಳಿಗಳೊ ನೀಳ್ದ ಕರ್ಬ್ಬೂಗೆಯೊ ಕೆಂದಳಿರೋಳಿಯೊ ಸುತ್ತುಗೊಂಡು ತ ।
ಳ್ತಳುವುರಿಮಾಲೆಯೋ ಸರಸಪಕ್ವಫಲಂಗಳೊ ವಿಸ್ಫುಲಿಂಗಸಂ ॥
ಕುಳಮೊ ಮನಕ್ಕೆ ಸಂದೆಯಮಾಗುಂದಲೆಯಾಗಿರೆ ನೋಡಿನೋಡಿ ಕಂ ।
ಟಳಿಸುವುದೆನ್ನ ಮೆಯ್ ಕಳವಿ ಪೇ[3]ೞಿದು ಮಾಮರನೋ ದವಾಗ್ನಿಯೋ ॥ 709

ಭ್ರಮಕ್ಕೆ ॥

ಕಂ ॥ ಮಣಿಭವನಂಗಳ ರುಚಿಗಳ್ ।
ಪೆಣೆದು ನಭೋಂಗಣದೊಳಿಂ[4]ದ್ರಚಾಪವಿಳಾಸ ॥
ಕ್ಕೆಣೆಯಾಗಿರೆ ಬಹುವಿಧದಿಂ ।
ಕುಣಿವುವು ಕಾರ್ಗ್ಗತ್ತು ಕೇಗಿ ಸೋಗೆನವಿಲ್ಗಳ್ ॥ 710

ವೃ ॥ ಕವಿವ ಕುಬೇರಧೂಪದ ಕವಿಲ್ವೊಗೆಯಂ ನವಮೇಘಮಾಲಿಕಾ ।
ನಿವಹಮೆಗೆತ್ತು ತೋರ್ಪ್ಪ ಮಣಿದೀಧಿತಿಯಂ ಕುಡುಮಿಂ[5]ಚೆಗೆತ್ತು ಪೊ ॥
ಣ್ಮುವ ಪಟಹಪ್ರಣಾದಮನೆ ಮೇಘನಿನಾದಮಗೆತ್ತ ಕಾಲತಾಂ ।
ಡವಮನೊಡರ್ಚ್ಚುಗಂ ಶಿಖಿಕುಳಂ ಕನಕಾಯತಕೂಟಕೋಟಿಯೊಳ್ ॥ 711

ಅಪಹ್ನುತಿಗೆ ॥

ಕಂ ॥ ಉನ್ಮದಮಧುಕರಕುಳರವ ।
ವ[6]ನ್ಮಥದುರ್ಝುಂಕಾರನಿನದಮಲ್ತಿದು ಪೀನಂ ॥
ಮನ್ಮಥಚಾಪವಿಮುಕ್ತೋ ।
ದ್ಯನ್ಮಾರ್ಗ್ಗಣಝೀಂಕೃತಿಸ್ವನಂ ತಾನಕ್ಕುಂ ॥ 712

---

1 ಸಂ। ಭೀತಿ, ಸಂ। ಭೀತ. 2. ಸಂ। ಪೂತ, ಸಂ। ಧೀತ. 3 ಕೞಿದು. 4 ಶಮದಚಾಪ. 5 ಮಿಂಚು
6 ಮನ್ಮಥ.

ಸೂತ್ರಂ || 166 ||

ಉ[1]ಪಮೇಯಮನ್ಯಗ್ರಾಹ್ಯವೋ |
ವ್ಯಪದೇಶಂ. ಪ[2]ಪನ್ನಮುಪಮಾನಮಾಗೆ ಮುಖ್ಯಮದಕ್ಕಂ ||
ಸ್ಮರಣಂ. ವ್ಯಪದೇಶಂ ಮುಂ ಪೋದುದ |
ನಪೂರ್ವ್ವಮಂ ಕಂಡು ನೆನೆವುದದು ತಾಂ ಸ್ಮರಣಂ || 713

ಲಕ್ಷ್ಯಂ ||

ವ್ಯಪದೇಶಕ್ಕೆ ||

ಕಂ || ಕುಚಯುಗಳಚ್ಛಲದಿಂದೊಂ |
ದಿ ಚಕ್ರವಾಕದ್ವಯಂ ಭುಜವ್ಯಾಜಲತಾ ||
ರುಚಿಗಳೊಳಿರ್ದ್ದಪ್ಪುವು ನಾ |
ಡೆ ಚೆಲ್ವವೆತ್ತಾಸ್ಯಮಿಷಸರಃಪಂಸರದೊಳ್ || 714

ಸ್ಮರಣಕ್ಕೆ ||

ಕಂ || ಮನಕಂ ಪಕ್ಕಲ್ಲದೆ ನೆ[3]ಲ |
ನಿನಿಸಾನುಂ ಮೆಚ್ಚೆ ಕಣ್ಣನಂ ನೋಡಿ ನರಂ ||
ನೆನೆದಂ ತನ್ನೊಳ್ ತಾಗಿದ |
ಪಿನಾಕಪಾಣಿಯ ಕಿರಾತತನುಸಾಪ್ರವಮಂ || 715

ವೃ || ವಿಶಾಳಮಳಿನೋಗ್ರತುಂಗಗಿರಿಕುಂಜಸಂಜಾತಮ |
ಪ್ರಕೋಕವನದಲ್ಲಿ ಧಾತುಜಳನಿರ್ಝ್ಝರಂ ಪಾಯೆ ಪಾಂ ||
ಸಶೋಣಿತಮಯಂಪೊಲಾಗಿ ಕಿಱಿದಂತರಂ ತೋಱೆ ಕಂ |
ಡು ಶಾರ್ಙ್ಗ ನೆನೆದಂ ಹಿರಣ್ಯಕನದೊಂದುಬ್ಬಿಂದಮಂ || 716

ಸೂತ್ರಂ || 167 ||

ಅ[4]ನುಕಂಪೆಯಕ್ಕೆ ವೇಱ್ ಕು |
ಪ್ರತೀಪಂ ತ್ಸನಮುಪಮೇಯಸ್ಥಿತಂ ಪ್ರತೀಪಂ ಗಡೆಗೊಂ ||
ಸಮಯೋಗಂ ಡ[5]ನುಗತಮಾಗಿರೆ ಗುಣದೋ |
ಷನಿರೂಪಣದಿಂ ವಿಭಾಗಮದು ಸಮಯೋಗಂ || 717

ಲಕ್ಷ್ಯಂ ||

ಪ್ರತೀಪಕ್ಕೆ ||

ಕಂ || ಅಮಲಿನಮಾಗಿಯುಮಿವಾನಿ |
ನ್ನ ಮೊಗಂ ಮೃಗಲಕ್ಷ್ಮನೆಣೆಗೆ ವಂದಪುದಿನಿಸಂ ||
ಕಮಲಾಯತಾಕ್ಷಿ ಕಜ್ಜಲ |
ವಿವಿಶ್ರಿತಾಶ್ರುದಬಿಂದುಮಲಿನಕಪೋಲಂ || 718

1 ಉಪಮೇಯಮನ್ಯದ್ರವ್ಯೋ. 2 ಪ್ರಪನ್ನ. 3 ನೆಲಗಿನಿನಾನುಂಪೆಚ್ಚೆ. 4 ಅನುಕಂಪೆಯಕ್ಕೆ. 5 ಅನುವಾಗ.

ಕಂ॥ ಅಸಿತೋತ್ಪಳದಳಶೋಭೆಯ ।
ನೆ[1]ಸೆಯೆ ಕಟಾಕ್ಷದೊಳ್ ತೊ[2]ಳೆದ ಮದಬಿಂದಾಲೋ ॥
ಕಿಸದರು ಮುಯ್ಯಂ ಮಾನಿಸಿ ।
ದೆಸೆದೆಸೆಗಳೊಳೊಳವು ಕುವಲಯಾಕರಮೆನಿತುಂ ॥ 719

ಸಮಯೋಗಕ್ಕೆ ॥

ಕಂ॥ ಮೃಗನಯನೆಯರೊಲವುಂ ಬ ।
ಳ್ಳಿಗೊಂಡು ತಳ್ತಡರೆ ಪೊಳೆದು ಮಿಂಚುವ ಮಿಂಚುಂ ॥
ಬಗೆವಾಗಳ್ ನಿಲ್ಲವದೊಂ ।
ದು ಗೞಿಗೆಯುಂ ಘನನಿಬದ್ಧಮೆನೆ ಸಂದಿರ್ದ್ದಂ ॥ 720

ಸೂತ್ರಂ ॥ 168 ॥

ಬಗೆದಿರ್ದ್ದ ಬೇಱದೊಂದಂ ।
ಅಪ್ರಸ್ತುತಪ್ರಶಂಸೆ. ಪೊಗೞ್ವಂದಪ್ರಸ್ತುತಪ್ರಶಂಸೆಯೆನಿಕ್ಕುಂ ॥
ಅರ್ತ್ಥಾಂತರನ್ಯಾಸಂ. ನೆಗೞ್ದ ನುಡಿವುದನೆ ಸಾಧಿಸಿ ।
ನಿಗದಿಸುವುದರ್ತ್ಥಾಂತರಂ ಪ್ರಸಂಗನ್ಯಾಸಂ ॥ 721

ಲಕ್ಷ್ಯಂ ॥

ಅಪ್ರಸ್ತುತಪ್ರಶಂಸೆಗೆ ॥

ವೃ॥ ಮೃದುಹರಿತಪ್ರವಾಳನವಶಾಡ್ವಲರಾಜಿಯನಾಯ್ದು ಮೇದು ತ ।
ಣ್ಪೊವಡೆದ ನಿರ್ಝ್ಝರಾಂಬುಗಳನೀಯ್ಯನೆ ಪೀರ್ದ್ದು ನಿಜಾಂತರಂಗದೊಳ್ ॥
ಪುದಿದನುರಾಗದಿಂದಳಸಿ ಪುಲ್ಲಗಳಿರೊಳವೆಂದು ದೈನ್ಯಮಿ ।
ಲ್ಲದೆ ಸುಖಮಿರ್ಪ್ಪ ವೀವನನಿಕುಂಜವಿಭಾಗದೊಳೇಣಸಂಕುಳಂ ॥ 722

ಅರ್ತ್ಥಾಂತರನ್ಯಾಸಕ್ಕೆ ॥

ವೃ॥ ಜಗದೊಳಗುಳ್ಳ ನದೀಪ್ರವಾಹಜಲಂಗಳನೊಟ್ಟಿ ಕುಡಿದುಮಾವಗಂ ।
ಪುಗೆಯುಮೊತ್ತದು ಮೇರೆಯುಂ ಬಡಬಾನಳಂ ಬಿಡದಾಗಳುಂ ॥
ತಗುಳೆ ಪೀರೆಯುಮಂತದೆಯ್ದಿಸಿತಪ್ಪೊಡಂ ತವದಂತೆವೋಲ್ ।
ಬಗೆದು ನೋಡೆ ಮಹಾತ್ಮರಪ್ಪವರೇಕರೂಪರದೆಲ್ಲಿಯುಂ ॥ 723

ಕಂ॥ ರೂಪರ್ದ್ಧನಾರಿಯಾಯ್ತು ವಿ ।
ರೂಪಾಕ್ಷಂಗೆಂತು ಶಾಂತರೌದ್ರಾತ್ಮಕಮೀ ॥
ರೂಪು ನಿನಗಾದುದಂ[4]ತೆ ಮ ।
ಹಾಪುರುಷರ ಚರಿತಮಪರತಂತ್ರಮಚಿಂತ್ಯಂ ॥ 724

ಇವು ಉಪಮಾಭೇದಂಗಳ್ ॥

1 ನೆಸೆ. 2 ತಳು. 3 ಗಳ್ಪ್ರವಿ. 4 ದಂತು.

ಸೂತ್ರಂ ॥ 169 ॥

ನಾಡಾಡಿಗಳಱಿವಿನಂ ಕೆ ।
ಯ್ಗೂಡಿದ ವಸ್ತುಪವರ್ಣ್ಣನಂ ವಿಸ್ಮಯಮಂ ॥
ಅತಿಶಯಂ. ಮಾಡುವುದತಿಶಯಮಕ್ಕುಂ ।
ನಾಡೆಯುಮಿದಱಿಂದಮಾವುದುಂ ಬಗೆಗೊಳಿಕುಂ ॥ 725

ಸೂತ್ರಂ ॥ 170 ॥

ವಿರೋಧಮುತ್ಪ್ರೇಕ್ಷೆ ವಿಭಾವನಾಹ್ವಯಂ ।
ಅತಿಶಯ ತಿರೋಹಿತಂ ಪೂರ್ವ್ವಮಹೇತು ತದ್ಗುಣಂ ॥
ಭೇದಂಗಳ್. ಪರಸ್ಪರಾಸಂಗತಿಕಂ ವಿ[1]ಶೇಷಮುಂ ।
ನಿರೂಪ್ಯಮಾಣಾತಿಶಯಪ್ರಭೇದಮುಂ ॥ 726

ಅಲ್ಲಿ ॥

ಸೂತ್ರಂ ॥ 171 ॥

ಅನ್ಯೋನ್ಯವಿರುದ್ಧಪದಾ ।
ವಿರೋಧಂ. ರ್ತ್ಥನ್ಯಾಸಮೆ ತಾಂ ವಿರೋಧಮವಿವಕ್ಷಿತಸಾ ॥
ಉತ್ಪ್ರೇಕ್ಷೆ ಮಾನ್ಯಮೆ ತದ್ಗುಣಯೋಗದಿ ।
ನನ್ಯತ್ವಾರೋಪಮಪ್ಪುದುತ್ಪ್ರೇಕ್ಷೆ ವಲಂ ॥ 727

ಲಕ್ಷ್ಯಂ ॥

ವಿರೋಧಕ್ಕೆ ॥

ಕಂ ॥ ಮರದುಱುಗಲ ಕಟ್ಟಿಲೆಯುಂ ।
ಪರಿಕಲಿಸಿ ಪೊದಳ್ದ ಕೋಣಮಣಿದೀಧಿತಿಯುಂ ॥
ನೆರೆದಿರ್ದ್ದುವೊಂದನೊಂದೆ ।
ತ್ತರಿಸಲ್ ನೆಱೆ ನೆಱೆಯುವೀಮಹೀಧರತಟದೊಳ್ ॥ 728

ಘನಜಘನಂ ತನುತನು ನಿ ।
ಮ್ನನಾಭಿ ತುಂಗಸ್ತನಂ ವಿನೀಲಿಮಕೇಶಂ ॥
ಕನದರುಣದ[2]ಶನವಸನಂ ।
ಮಾ[3]ನದೊಳ್ ಭಾವಿಸೆ ವಿರುದ್ಧಮಿವಳಾಕಾರಂ ॥ 729

1 ವಿಶೇಷ್ಯಮಾ, ವಿಶೇಷ್ಯಮುಂ. 2 ದಂಶ. 3 ಮಾನಸ್ಯ.

ವೃ ॥ ದಶರಥನಾಗಿಯುಂ ದಶಸಹಸ್ರರಥಂ ರವಿವಂಶನಾಗಿಯುಂ ।
ಶಶಧರಕೀರ್ತ್ತಿರೂಪನಿನನಾಗಿಯುಮುಸ್ತ್ರಮಯೂಪವರ್ಜ್ಜಿತ ಕ ॥
ರ್ಕ್ಕಶಬಲನಾಗಿಯುಂ ಮೃದುವಪುಃಪ್ರಸರಂ ಮತಿತೀವ್ರನಾಗಿಯುಂ ।
ಪ್ರಶಮಿತಚಿತ್ತನೆಂತುಮವಿರುದ್ಧಗುಣಂ ಗುಣವಜ್ಜನಸ್ತುತಂ ॥ 730

ಅತಿಸೂಕ್ಷ್ಮೇಕ್ಷಣನೆಂತುಮಂಧನಸತೀಸೌಂದರ್ಯ್ಯದೊಳ್ ಸ[1]ತ್ಕ್ರಮಾ ।
ನ್ವಿತನೆಂತುಂ ಪೞವಂ ಮಹಾಜಿಮುಖದೊಳ್ ನಿ[2]ರ್ಣ್ನಿಕ್ತಸವ್ಯಗ್ರಹು ॥
ಶ್ರುತನೆಂತುಂ ಬಧಿರಂ ಕರಂ ಪರಪರೀವಾದಂಗಳೊಳ್ ನೋೞ್ಪೊಡ ।
ದ್ಭುತಮಾಶ್ಚರ್ಯ್ಯಮಭೂತಪೂರ್ವ್ವಮೆಸಕಂ ಶ್ರೀಗಂಡಮಾರ್ತ್ತಂಡನಾ ॥ 731

ಉತ್ಪ್ರೇಕ್ಷೆಗೆ ॥

ವೃ ॥ ಇರದೆ ನಿತಂಬಮೆಂಬಹಿನಿವಾಸದಿ[3]ನೀಕೆಯ ರೋಮರಾಜಿಯಿಂ ।
ಬುರಗನಳುರ್ಕ್ಕೆಯಿಂ ಪೊಗಮನೊಪ್ಪುವ ಚಂದ್ರನೆಗೆತ್ತು ಕೋಪದಿಂ ॥
ಬರೆ ಬರಲೀಯದತ್ತ ಪೊಲೆಗಳ್ ತಡೆದಿರ್ದ್ದಪುವೆಂದು ಪರ್ಚ್ಚುವಂ ।
ತಿರೆ ಕಿವಿಯೊಳ್ ಪೆಡಂಗಿಡಿದು ತೋರ್ಕ್ಕುಮಪಾಂಗದ ನೋಟಮಾಕೆಯಾ ॥ 732

ಕಂ ॥ ಎಳೆಯಳ ಪೊಗರ ನೆಱಲ್ ತ ।
ಪ್ಪೊಳಗಿರೆ ಸಂತಸದೆ ಬೀಗಿದಂತಿರ್ದ್ದು ಕುಚಂ ॥
ಗಳ ಮಱೆಯೊಳ್ ಕಾಣದೆ ಪೊಗ ।
ದಳವಂ ನಡು ನೆನೆದು ಬಡಬಡಾದಂತಿರ್ಕ್ಕುಂ ॥ 733

ವಾಸರಪತಿ ಬಿಸುಗದಿರಿಂ ।
ಪೇಸದೆ ತವೆ ಪೀರ್ಗ್ಗುಮೆಂಬ ಮಱುಕದಿನಂಭೋ ॥
ಜಾಸನನಂಬುಜವನಮಂ ।
ಬಾಸಣಿಸಿದನೆನಿಪುವೆಸೆವ ತಾವರೆಯೆಲೆಗಳ್ ॥ 734

ನೀಲಿಯ ರ[4]ಸದೊಳ್ ಕರಡಿಯ ।
ತೋಲಂ ತೊ[5]ಯ್ದುಟ್ಟು ಮಸಿಯೊಳದಱೊಳ್ ಪುದಿದ ॥
ತ್ರೈಲೋಕಮುಕ್ಕು ಮೆನಿಸಿ ।
ತ್ತಾಲೋಕವಿರೋಧಿ ಬಹಳತಮಸಂತಮಸಂ ॥ 735

ಸೂತ್ರಂ ॥ 172 ॥

ಕ್ರಿಯೆಯುಂ ಪ್ರತಿಷೇಧಂಗೆಯೆ ।
ವಿಭಾವನೆ. ನಿಯತಫ[6]ಳವ್ಯಕ್ತಿಯುದು ವಿಭಾವನೆಯೇಕಾ ॥
ತಿರೋಹಿತಂ. ಶ್ರಯಮನದೊಂದಂ ಗುಣದತಿ ।
ಶಯಂ ತಿರೋಹಿಸೆ ತಿರೋಹಿತಂ ತಾನಕ್ಕುಂ ॥ 736

1 ವಿಶ್ರುವಾ. 2 ನಿರ್ನ್ನಿಕ್ತ. 3 ದೊಳೀಕೆಯ. 4 ರಸದಿಂ. 5 ತೊಯ್ದುಟ್ಟು. 6 ಪದವ್ಯಕ್ತಿಯುದ.

ಲಕ್ಷ್ಯಂ ॥

ವಿಭಾವನೆಗೆ ॥

ವೃ ॥ ಸಮುಱದೆ ಕೊಂಕಿ ನೀಳ್ದಸಿಯ ಪುರ್ವ್ವುಗಳೆಚ್ಚದೆ ನಾಡೆಯುಂ ಬೆಡಂ ।
ಗಮರ್ದಸಿತಾಕ್ಷಿಯುಗ್ಮಮಡಿಯೂಡದೆ ಕೆಂಪೆಸದಿರ್ದ್ದ ಕೆಂದಳಂ ॥
ಭ್ರಮರಕುಳಪ್ರಭಾ[1]ಸಿ ಕುಟಿಲಾಲಕಮೊತ್ತದೆಯುಂ ನಿಸರ್ಗ್ಗದಿಂ ।
ತಮಗೆನೆ ಗಾಡಿ ಕೆಯ್ಗ್ಗೆಱೆಯೆ ಬರ್ಪ್ಪ ಲತಾಂಗಿಯರಾದಮೊಪ್ಪಿದರ್ ॥ 737

ಕಂ ॥ ಅ[2]ಕುಪಿತಕಲುಷಿ ಜಲಮುಪಾ ।
ನಕಪ್ರಮತ್ತಂ ಶಿಖಂಡಿಸಂತಾನಮಹೇ ॥
ತುಕಸುರಭಿ ನೀಪವಿಪಿನಂ ।
ಸಕಳಮಹೀತಳಮೊಳಾದುದಂದೊರ್ವ್ವಿದಲೊಳ್ ॥ 738

ತಿರೋಹಿತಕ್ಕೆ ॥

ಕಂ ॥ ಇನಿಯನ ವಿಯೋಗದಿಂದಾ ।
ದ ನಿನ್ನ ಬಡತನಮನಱಿಯಲಾಗದದಿ[3]ನಿಸುಂ ॥
ಘನತರಚಂದ್ರಕಲಾಭಿಷ ।
ವನಿಕಾಕಸ್ವತನುಕಾಂತಿಯಿಂ ತರಲಾಕ್ಷೀ ॥ 739

ಕಾಲಿಂದಿಯಸಿ[4]ತಜಲದೊಳ ।
ಗೋಲಾಡುವ ಕೃಷ್ಣನಂ ಸವರ್ಣ್ನತೆಯಿಂ ಗೋ ॥
ಪಾಲಕುಮಾರರ್ ನೋಡಿಯು ।
ಮಾಲೋಲಮನಸ್ಕರಱಿಯದಾ[5]ಕುಲಮುತ್ತರ್ ॥ 740

ಸೂತ್ರಂ ॥ 173 ॥

ಜನಿಯಿಸೆ ಮುನ್ನಂ ಜನ್ಯಂ ।
ಪೂರ್ವ್ವಂ. ಜನಕದಿನದು ಪೂರ್ವ್ವಮೆಂಬುದಕ್ಕಂ ಮತ್ತಂ ॥
ಅಹೇತುಕಂ. ಸ್ವನಿಮಿತ್ತದೊಳಂ ಕಾರ್ಯ್ಯಂ ।
ಜನಿಯಿಸದಿರ್ಪ್ಪಿರವಹೇತುಕಂ ಪೆಸರಕ್ಕುಂ ॥ 741

ಲಕ್ಷ್ಯಂ ॥

ಪೂರ್ವ್ವಕ್ಕೆ ॥

ಕಂ ॥ ಸಂದಿಸೆ ಗಱಿ ಸಂದಿಸೆ ರಘು ।
ನಂದನನೆಡೆಗಿಱಿದು ಕವಿವ ಕಣೆಯಿಂ ಮುನ್ನಂ ॥
ಬಂದುದು ನೆಲಕ್ಕೆ ರಿಪುಭಟ ।
ವೃಂದಂ ಬೞಿಯಮುಂ ನಿಶಾತವಿಶಿಖಪ್ರ[6]ಸರಂ ॥ 742

---

1 ಹಾಸಿ, 2 ಆಕುಲಿತಕಲುಷ, ಗಕಲುಷ. 3 ದಿನಸಂ. 4 ಯಮುನೆಯೊಳ್. 5 ರಾಕುಲ. 6 ಪ್ರಕರಂ,

ಕಂ ॥ ಸ್ಮರನ ಶರಂಗಳೆವೆನೆ ತರ ।
ತರದಿಂ ಪೊರೆನೆಗೆದು ಮೆಲ್ಲಮೆಲ್ಲನೆ ಬಱಿಯಂ ॥
ಬಿರಿದುವು ಮಲ್ಲಿಗೆ ಮು[1]ನ್ನಮೆ ।
ಬಿರಿದುವು ಬಿಬ್ಬರನೆ ಬಿರಯಿಜನದಳ್ಳರ್ದೆಗಳ ॥ 743

ಅಹೇತುಕಕ್ಕೆ ॥

ಕಂ ॥ ಪೆತ್ತುಂ ತೆಳ್ಪಱಿಯುದ ನಡು ।
ಮುತ್ತುಂ ಬೀಱದ ಪಯೋಧರಂ ಮುನಿದುಂ ಚೆ ॥
ಲ್ವೊತ್ತರಿಪ ನಗೆಮೊಗಂ ಮೆ ।
ಯ್ವೆತ್ತಿರೆ ಕರಮೊಪ್ಪಿದಪ್ಪರಲ್ಲಿಮ ಪೆಂಡಿರ್ ॥ 744

ಸಕಲುಷವಿಕೃತಾಶಯರೊಳ ।
ಮಕೋಪನಂ ಕುಟಿಲವೃತ್ತರೊಳಮತಿಋಜು ದೂ ॥
ಷಕರೊಳಮರೂಕ್ಷವಚನಂ ।
ಸಕಲಮಹೀವಳಯತಿಳಕನೀಬುಧತಿಳಕಂ ॥ 745

ಸೂತ್ರಂ ॥ 174 ॥

ಅತಿಬಹಲಸ್ಥಿತಿಯಿಂ ಸಂ ।
ತದ್ಗುಣಂ. ಗತಗುಣಮವಿಭೇದಿಯಾಗೆ ತದ್ಗುಣಮೆನಿಕುಂ ॥
ಪರಸ್ಪರಾ ಕೃತಕಾರ್ಯ್ಯಕಾರಣಂ ವಿ ।
ಸಂಗತಿಕಂ. ಪ್ರತಿಷಿದ್ಧಮದೆನೆ ಪರಸ್ಪರಾಸಂಗತಿಕಂ ॥ 746

ಲಕ್ಷ್ಯಂ ॥

ತದ್ಗುಣಕ್ಕೆ ॥

ಕಂ ॥ ಯಮುನಾಪಗೆ ಸುರನದಿಯುಂ ।
ಕಮಳೋದರನಿಂದುಮೌಳಿಯುಂ ನೀಲನಗಂ ॥
ಹಿಮಗಿರಿಯುಂ ಪೋಲ್ತಿಪ್ಪಿನ ।
ಮಮಲಯಶೋರುಚಿ ಪೊದಱ್ದಿದೆಳೆಗಿಂದ[2]ರನಾ ॥ 747

ಇದು ಕಿಱಿದಿದು ಪಿರಿದಿದು ಕುಱಿ ।
ಯಿದು ತೆಮರಿದು ಬಕ್ಕಬಯಲಿದಾಶ್ರಯಮಿದು ಗಂ ॥
ಟಿದು ಸಾರೆಯೆಂಬ ನಿರ್ಣ್ಣಯ ।
ಮವಾದುದಿಲ್ಲೊದವಿ ಪುದಿದ ಮಬ್ಬಿನೊಳಾಗ್ಗಂ ॥ 748

---

1 ಮುನ್ನಂ. 2 ದಿರನಾ.

ಪರಸ್ಪರಾಸಂಗತಿಕಕ್ಕೆ ||

ಕಂ || ಹಿಮಕುಮುದಕುಂದಶಶಿಧವ |
ಲವೆನಿಪ ನಿಜಕೀರ್ತ್ತಿಯೆಸಕದಿಂದಮಿಳಾಲೋ ||
ಕಮನೆಯ್ದೆ ರಕ್ತಮಪ್ಪಂ |
ತು ಮಾಡಿದಂ ಕೃಷ್ಣನಿಂತಿದೇನಚ್ಚರಿಯೋ || 749

ಸೂತ್ರಂ || 175 ||

ಒದವಿದ ಸಾಮಗ್ರಿಯೊಳೇ |
ಕದೇಶವೈಕಲ್ಯಮಾ[1]ಗೆಯುಂ ಮತ್ತಂ ತ ||
ವಿಶೇಷೋಕ್ತಿ. ತ್ಸದೃಶಫಲಸಿದ್ಧಿಯುಂ ತೋ |
ರ್ಪುದದು ವಿಶೇಷೋಕ್ತಿಯೆಂಬಲಂಕೃತಿಯಕ್ಕುಂ || 750

ಲಕ್ಷ್ಯಂ ||

ಕಂ || ರಥವೊಂ[2]ದೆಗಾಲಿಯದು ಸಾ |
ರಥಿಯುಪ್ಪೊಡೆ ಪೞವನಸಮಮಶ್ವಮುಮೇೞುಂ ||
ಪ್ರಥಿತಪ್ರತಾಪದಿಂದಂ |
ಮಥಿತಪ್ರತಿಪಕ್ಷನು[3]ದಯಿಯಾದಂ ದಿನಪಂ || 751

ವೃ || ಧನುವುಂ ಕಬ್ಬಿನ ಬಿಲ್ ಗಡಂ ಗೊ[4]ಣೆಯುಮುಂ ನೀರೇಜಸೂತ್ರಂ ಗಡಂ |
ನನೆಗಳ್ ಬಾಣಚಯಂ ಗಡಂತತನು ತಾಂ ಮತ್ತಂ ಮನಂನೊಂ[5]ದು ನಿ ||
ರ್ಬನಿಪಂತಾರ್ದಿಸುತಿರ್ಪನುಚ್ಚೆರ್ದೆರ್ದೆಯೊಳ್ ಪು[6]ಷ್ಪೈತ್ರರೆಂದಿಂತಿದಿ |
ಲ್ಲನಿಸುಂ ಮನ್ಮಥಶಸ್ತ್ರಕಲ್ಪಮಿದು ದಲ್ ಪೇೞೊಂದು ಶಿಕ್ಷಾಕ್ರಮಂ || 752

ಇವು ಅತಿಶಯಭೇದಂಗಳ್ ||

ಸೂತ್ರಂ || 176 ||

ಎರಡರ್ತ್ಥವೊಂದೆ ಶಬ್ದಾಂ |
ಅರ್ತ್ಥಶ್ಲೇಷಂ. ತರದೊಳ್ ನೆಗೞ್ವಂತು ಪೇ[7]ೞ್ವುದರ್ತ್ಥಶ್ಲೇಷಂ ||
ಶಬ್ದಶ್ಲೇಷಂ. ದೊರೆಕೊಳೆ ಶಬ್ದಾವಯವದೊ |
ಳೆರಡಭಿಮತಶಬ್ದಮಱಿಗೆ ಶಬ್ದಶ್ಲೇಷಂ || 753

1 ಮಾಗಿಯುಂ. 2 ದೊಂದು. 3 ನುದಯವಾದಂ. 4 ಗೊನೆ, ಗೊಲೆ. 5 ದೊಂದುನಿ || ರ್ಬನಿ.
6 ಪುಷ್ಪೈತ್ರರೆಂದಿಂತಿವೆ | ಲ್ಲನಿಸುಂ. 7 ಪೇಲ್ವುದರ್ತ್ಥ.

ಸೂತ್ರಂ ॥ 177 ॥

ವೃ॥ ತತ್ವಂ ವ್ಯಾಜಸ್ತುತಿಯುವಯುವ[1]ಸ್ಥಂ ವಿ[2]ರೋಧಾವಭಾಸಾ।
ಶ್ಲೇಷ ಭೇದಂಗಳ್. ತ್ಥಾರ್ಥತ್ವಂ ಮಿಕ್ಕಿರ್ದ್ದರ್ಧಿಕವುವಿಶೇಷಾತ್ಮಕಂ ವ[3]ಸ್ತ್ವಸಂಭಾ ॥
ವೃತ್ತ್ವಂ ವಕ್ರೋಕ್ತ್ಯನುಗತಮುಮೆಂದಿಂತು ತಾತ್ಪರ್ಯ್ಯದಿಂದಂ।
ತತ್ವಜ್ಞರ್ ವಿಸ್ತರಿಸೆ ನೆಗಳ್ಗುಂ ಶ್ಲೇಷಭಾ[4]ಗಪ್ರಭೇದಂ ॥ 754

ಅಲ್ಲಿ ॥

ಸೂತ್ರಂ ॥ 178 ॥

ಬ[5]ಗೆಗೆ ಪೆಱತರ್ತ್ಥವೊಂದಂ ।
ತತ್ವಂ. ನೆಗೞ್ತುಂ ನೆಗೞ್ವ ತತ್ವವರ್ಣ್ಣನೆ ತತ್ವಂ ॥
ವ್ಯಾಜಸ್ತುತಿ. ತಗುಳೆ ಪೆಱವಂ[6]ತೆ ಕೆಯ್ಮಿಗೆ ।
ಪೊಗೞ್ವುದು ತಾಂ ವ್ಯಾಜಸಂಸ್ತವಾಖ್ಯಮೆನಿಕ್ಕುಂ ॥ 755

ಲಕ್ಷ್ಯಂ ॥

ತತ್ವಕ್ಕೆ ॥

ವೃ ॥ ವರಗೋಮೇದಕವಿಸ್ಫುರದ್ವ[7]ಸನನುವೃತ್ತಪದ್ಮರಾಗೋಲ್ಲಸ ।
ಚ್ಚರಣಂ ನೀಲರುಚಿಪ್ರವಾಲಸಿತನೀಷಲ್ಲೋಹಿತಾಕ್ಷಂ ಮನೋ ॥
ಹರಮುಕ್ತಾಮಯುವಜ್ರಸಂಹನನನೀಮೂರ್ತೀಮಹಾತ್ಮಂ ನೃಪೇ ।
ಶ್ವರರತ್ನಂ ವಿಲಸತ್ಸುವರ್ಣ್ಣದೊರೆವೆತ್ತಿರ್ಕ್ಕುಂ ಭವತ್ಸಂಗದಿಂ ॥ 756

ವ್ಯಾಜಸ್ತುತಿಗೆ ।

ಕಂ ॥ ವಾತಿ ವರವೆ[8] ಕರಜು ।
ಯಾ[9]ತಂಗಸುರಂ ಬ[10]ಯುಕ್ಕೆ ಗುಪ್ತಂ ರಿಪು ಸಂ ॥
ಘಾತಕ್ಕೆ ಪರಾಕ್ರಮನ[11]ನ ।
ಭೂತಲಮೇನೆಂದು ಕೇಳಿಯುಂ ಬಣ್ಣಿಪುದೋ ॥ 757

ಜೋಡೆ ಕರವು[12]ಡಿಯುಳಾರೂಢ ।
ಗೂಡಿಯುಮವರ್ಗಲ್ಲಳೆನಿಪ ವಸುಧಾಂಗನೆಯುಂ ॥
ಕೋಡೊಳೆ ತಳೆದುಂ ಸೊಬಗಿನ ।
ಗಾಡಿಗೆ ಮು[13]ಯ್ಯಾಂತ ಸೊಬಗಿದಾವು[14]ದು ಗಜೆಗಾ ॥ 758

---

1 ವಿಸ್ತಂ. 2 ವಿರುದ್ಧಾ. 3 ವಸ್ತುಸಂಭಾ. 4 ಭೇದ. 5 ಬಗೆಪೆಱತುಱದ್ಧವೊಂದುಂ. 6 ವನಿತೆ. 7 ದ್ವಕವ. 8 ಮಣಿ. 9 ಯಾತಕ್ಕಸುರಂ. 10 ಪೃಯುಕ್ಕೆ. 11 ಮನೆ. 12 ಮುಡಿಯೊಳ್. 13 ಮುಯ್ಯಾಂತ. 14 ಪುದೊ.

ಸೂತ್ರಂ ॥ 179 ॥

ಅವಯುವಮುಖದಿಂ ಸಮುದಾ ।
ಅವಯುವಂ. ಯವಿಶೇಷಣಮನ್ಯವಸ್ತುಗಮಕಮು[1]ದಾದಂ ॥
ವಿರೋಧಾಭಾಸಂ. ದವಯುವಮವಿರುದ್ಧಂ ನೋ ।
ಡೆ ವಿರುದ್ಧಸ್ಥಿತಿಯೊಳಿರೆ ವಿರುದ್ಧಾಭಾಸಂ ॥ 759

ಲಕ್ಷ್ಯಂ ॥

ಅವಯುವಕ್ಕೆ ॥

ಕಂ॥ ಬಳಭದ್ರಂ ಭುಜದೊಳುರ ।
ಸ್ಥಳದೊಳ್ ಪೃಥು ವಿತತಯಶದೊಳರ್ಜ್ಜುನಸೇತಂ ॥
ಕಳಿಕಾಲದೊಳಂ ತನ್ನೊಳ್ ।
ತಳದಿರ್ದ್ದಂ ಪೂರ್ವ್ವಭೂಮಿಪಾಲಸ್ಥಿತಿಯಂ ॥ 760

ವಿರೋಧಾಭಾಸಕ್ಕೆ ॥

ಕಂ॥ ಅನುಗತಕರ್ಣ್ಣಂ ಕೃಷ್ಣಾ ।
ರ್ಜ್ಜುನಾನುರಕ್ತಂ ವಿಲೋಚನಂ ದೋರ್ದ್ದಂಡಂ ।
ಘನದೃಢಬಲಂ ಪ್ರಲಂಬಂ ।
ತನಗೆನೆ ಪಿಂದುಂ ವಿರುದ್ಧಮಿನ್ನೃಪನಂದಂ ॥ 761

ಸೂತ್ರಂ ॥ 180 ॥

ಆರಬ್ಧಕ್ಕಧಿಕಮುಸಾ ।
ಅಧಿಕಂ. ಧಾರಣಗುಣಮಧಿಕಮೆಂಬುದಕ್ಕುಂ ಸದೃಶಾ ॥
ಅವಿಶೇಷಂ. ಕಾರವಿಶೇಷಣಮರ್ತ್ಥಮು ।
ದಾರಂ ಬೇಱೊಂದು ತೋಱುರ್ಪ್ಪಡವಿಶೇಷಾಖ್ಯಂ ॥ 762

ಲಕ್ಷ್ಯಂ ॥

ಅಧಿಕಕ್ಕೆ ॥

ಕಂ॥ ಅಂಗುಳೊಳಡಸಿದ ವಿಷಮುಂ ।
ಭಂಗುರತರವಿಷಮದೃಷ್ಟಿಯುಂ ವ್ಯಾಳಸಮಾ ॥
ಸಂಗಮುಮುಮರ್ದಿರೆ ಮದನಹ ।
ರಂಗೆಣೆಯೆನಿಪುದಱಿನೆಮಗೆ ಖಳರಭಿವಂದ್ಯರ್ ॥ 763

---

1 ದಾಳಮುದಂ.

ಅವಿಶೇಷಕ್ಕೆ ॥

ಕಂ॥ ಗುರುಪರಿಣಾಹಂಗಳ್ ಪೀ ।
ವರಂಗಳುನ್ನತಿಯುತಂಗಳುರ್ವ್ವರೆಗೆ ಮನೋ ॥
ಹರಕುಚಮಂಡಳದಂತಿರೆ ।
ಕರಮೆಸೆವುವು ವಿಮಳದರ್ದ್ದುರಾದ್ರಿಗಳೆರಡುಂ ॥ 764

ಸೂತ್ರಂ ॥ 181 ॥

ಪೆಸರೊಳಸಂಭವಮೆನಿಸುಗು ।
ಅಸಂಭವಂ. ಮಸಂಭವಂ ತದ್ವಿಶೇಷಣಂ ಪೃಥಗರ್ತ್ಥಂ ॥
ವಕ್ರೋಕ್ತಿ. ಪೊಸಯಿಸೆ ಭಿನ್ನರಸಂ ಸು ।
ಪ್ರಸಿದ್ಧವಾಕ್ಯದೊಳದಲ್ತೆ ವಕ್ರೋಕ್ತಿ ಕರಂ ॥ 765

ಲಕ್ಷ್ಯಂ ॥

ಅಸಂಭವಕ್ಕೆ ॥

ಕಂ॥ ಅನ್ವಯಚ್ಛೇದನನತಿಧವ ।
ಳವರ್ಣ್ಣನುತ್ಸಾರಿತಾರಿ ಬೇಱೊರ್ವ್ವಂ ದಾ ॥
ನವಮಥನನೀತನೆನಿಸಿದ ।
ನವನಿಗೆ ಪುರುಷೋತ್ತಮಾನುಭಾವಂ ಕೃಷ್ಣಂ ॥ 766

ವಕ್ರೋಕ್ತಿಗೆ ॥

ಕಂ॥ ವೀರರಸಪ್ರ[1]ದಚಾರಣ ।
ಮಾರಣಸಂಪ್ರಾಪ್ತಕೌಶಲಂ ಭಾವಿಸೆ ರಂ ॥
ಭೋರು ನರೇಂದ್ರತೆಯುಂ ವಿ ।
ಸ್ತಾರಿಸಿದಪನಂಗನಂಗಸಿದ್ಧಿಯೊಳೀತಂ ॥ 767

ಸೂತ್ರಂ ॥ 182 ॥

ಪದವರ್ಣ್ಣವಿಭಕ್ತಿವಿಭಾ ।
ಭಂಗಶ್ಲೇಷಂ. ಗದಿಂ ದ್ವಿಧಾರೂಪಮಿಷ್ಟಮು[2]ಶ್ಲಿಷ್ಟಂ ಶ ॥
ಬ್ದದೊಳಾಗಿ ತೋ[3]ಱುವಂದಂ ।
ತದು ಭಂಗಶ್ಲೇಷಮೆಂದು ಪೇೞಲ್ಪಡೆಗುಂ ॥ 768

ಲಕ್ಷ್ಯಂ ॥

ಕಂ॥ ಸ್ವಗತಾನಲಸನ್ಮಣಿರ ।
ಶ್ಮಿಗಾಢಮಗಣಿತಜ[4]ಲದ್ವಿಪಾವಳಿ ಕಡಲಂ ॥
ಮಿಗೆ ವಂದಮರಗಜೇಂದ್ರಂ ।
ಸೊಗಯಿಸುವು[5]ದು ದಾನವಾರಿಲೇಖಾನುಗತಂ ॥ 769

1 ಪ್ರವಿಚಾರಣ. 2 ಮಾಶ್ಲಿಷ್ಟಂ. 3 ತೋಱ್ಪ್ಪಕಱಿನಾ. 4 ಜಗದ್ವಿ. 5 ಗುಂ.

ಸೂತ್ರಂ ॥ 183 ॥

ಯೋಗಂ ಪಲವುಮಲಂಕೃತಿ ।
ಸಂಶ್ಲೇಷಂ. ಗಾಗಿರೆ ಸಂಶ್ಲೇಷವೆಂಬುದನ್ವರ್ತ್ಥಗತಂ ॥
ಯೋಗಮುಮಂಗಾಂಗಿಪ್ರವಿ ।
ಭಾಗಂ ಸಮಕಕ್ಷಮೆಂದೆರಟ್ಟುಜನಕ್ಕಂ ॥ 770

ಲಕ್ಷ್ಯಂ ॥

ವೃ ॥ ಸ್ವಭಾವಗಂಭೀರನಲಂಘ್ಯವೈಭವಂ ।
ಪ್ರಭೂತರತ್ನಂ ನೃಪನಂಬುರಾಶಿವೋಲ್ ॥
ವಿಭೀಷಣಗ್ರಾಹಮವೃಷ್ಯಮರ್ಣ್ಣವಂ ।
ಪ್ರಭೂತಸಾರಂ ಸುಖಸೇವ್ಯನೀನೃಪಂ ॥ 771

ಸೂತ್ರಂ ॥ 184 ॥

ಪ್ರೇಯಂ ಪ್ರಿಯತರವಚನಾ ।
ಪ್ರೇಯಂ. ಖ್ಯೇಯಮಹಂಕಾರಗರಿಮಮೂರ್ಜ್ಜಸ್ವಿ ಶುಭ ॥
ಊರ್ಜ್ಜಸ್ವಿ. ಪ್ರಾ[1]ಯಾತ್ಥ್ಯಶಂಸಾಭಿ ।
ಆಶಿ. ಪ್ರಾಯಮಲಂಕಾರಮಾಶಿಯೆಂಬರ್ ಕೆಲಬರ್ ॥ 772

ಲಕ್ಷ್ಯಂ ॥

ಪ್ರೇಯಕ್ಕೆ ॥

ಕಂ ॥ ನೆಲನನವಯವವದೆ ತಳರದೆ ।
ನಿಲೆ ತಾಳ್ದಿದ ಮೆಯ್ಯ್ಮೊಲ್ಲಮಾನಲ್ಕಿರದಾ ॥
ಯ್ತಲಘುಪ್ರಸಾದದಿಂ ನೀ ।
ನೊಲಿದೆಟ್ಟಿರೆ ಮ[2]ನೆಗೆ ಮನದೊಳಾದನುರಾಗಂ ॥ 773

ಊರ್ಜ್ಜಸ್ವಿಗೆ ॥

ಕಂ ॥ ಕೆ[3]ಳದೀ ಬಿಲ್ಲುಮನಂಬುಮು ।
ನ್ನೇಕಭಟವಿಕಟವೇಷಮುಂ ಬಿಸುಟ್ಟಿಗಳ್ ॥
ಮುಳಿಯಿಸದೆನ್ನಂ ಮಗುಳ್ದುಂ ।
ಬಳಿದೊಟ್ಟೊಡೆ ಗೆಲ್ವಯಂಬುದೊಟ್ಟೊಡೆ ಗೆ[4]ಲ್ಲಮೆ ॥ 774

ಆಶಿಗೆ ॥

ಕಂ ॥ ನೆಲೆಗೊಳ್ಗೆ ನಿಜಭುಜಾಸಿಯೊ ।
ಳೊಲಿದು ಜಯಾಂಗನೆ ವಿರೋಧಿವೆಂಪಾವಳಿಯಾಂ ॥
ನೆಲೆಗಿಡಿಸಿ ನಿನ್ನ ತೇಜೋ ।
ಜ್ವಲನಂ ತಳ್ತುರ್ಕ್ಕೆಗೊಳ್ಗೆ ವಿಕ್ರಮತುಂಗಾ ॥ 775

---

1 ಪ್ರಿಯಾತ್ಮಗಂಶು ಪಾಳಿ. 2 ಮನಕೆ. 3 ಕಳಲದೆ. 4 ಗೆಲ್ವದು.

ಸೂತ್ರಂ ॥ 185 ॥

ಭಾವಿಕಂ.

ಭಾವಿಕಮೆಂದರೆಬರ್ ಕವಿ ।
ಭಾವಗತಾರ್ತ್ಥಮನ[1] ತಾಮಲಂಕೃತಿಗ[2]ಳೊಳು ॥
ದ್ಭಾವಿಸಿ ಪೇೞ್ವರ್ ಶಕ್ತಿಸ ।
ಮಾವಿರ್ಭೂತಪ್ರಬಂಧವಿಷಯಮದಕ್ಕುಂ ॥ 776

ಸೂತ್ರಂ ॥ 186 ॥

ಸ್ಥಾನೋಪವರ್ಣ್ನನಂ ಚ ।
ಬ್ದಾನಾಕುಳಭಾವಮುದ್ಭೂತಾರ್ತ್ಥತ್ವಂ ಸ್ಯಾ ॥
ಧೀನರಸವೃತ್ತಿ ಸಂಬಂ ।
ಧಾನುಗಮಂ ಭಾವಿಕಕ್ಕೆ ಭಾನಮಿವಕ್ಕುಂ ॥ 777

ಇದು ಗುಣವಿವೇಕದೊಳ್ ಅರ್ತ್ಥಾಲಂಕಾರಪ್ರಕರಣಂ
ತೃತೀಯಂ.

ಗೀತಿಕೆ॥ ಈತೆಱದಿಂದರ್ತ್ಥಾಲಂಕೃತಿ ।
ಯೋ[3]ತು ವಿಭೇದಮನಾದಮೆಲ್ಲಮಂ ॥
ನೂತನಮಾರ್ಗ್ಗಮೆಸೆಯೆ ಪೇ[4]ೞ್ದಂ ।
ಖ್ಯಾತಯಶಂ ಕವಿತಾಗುಣೋದಯಂ ॥ 778

ವೃ॥ ಶ್ರುತದೇವೀಮಕರಂದಕಲ್ಪಲಪನಂ ವಾಕ್ಶ್ರೀನಿವಾಸಾಂಬುಜಾ ।
ಯಿ[5]ತವಕ್ತ್ರಂ ರಸಭಾವಭಾಸುರಸಮುದ್ಯದ್ಭಾರತೀನರ್ತ್ತನೋ ॥
ಚಿತರಂಗಪ್ರತಿಮಾನನಂ ಪ್ರವಿಲಸದ್ವಾಕ್ಸುಂದರೀಕುಂಕುಮಾಂ ।
ಕಿತಕೇಳೀಭವನಾಜಿರೋಪಮಮುಖಂ ಭೂಭಾಗದೊಳ್ ನಾಕಿಗಂ ॥ 779

ಇದು ಸಕಲಸುಕವಿಜನಮನಸ್ಸರೋಜಿನೀರಾಜಹಂಸಾ
ಯಮಾನಾನೂನಕವಿತಾಗುಣೋದಯಂ ಶ್ರೀನಾ
ಗವರ್ಮ್ಮವಿರಚಿತಮಪ್ಪ ಕಾವ್ಯಾವಲೋ
ಕನದೊಳ್ ಗುಣವಿವೇಕಮೆಂಬುದು
ತೃತೀಯಾಧಿಕರಣಂ.

---

1 ಮನೆ. 2 ಯೊಳಗು. 3 ಯಾಂಕಪಾದವಿಚ್ಛೇದಮನಾನುವೆಲ್ಲಮಂ, ಯಂಕಪಾಕವಿಭೇದಮನಾದವೆಲ್ಲಂ.
4 ಪೇೞ್ದಂ. 5 ಯಿತ.

4. ರೀತಿಕ್ರಮರಸನಿರೂಪಣಾಧಿಕರಣಂ.

ರೀ ತಿ ಪ್ರ ಕ ರ ಣಂ.

ಸೂತ್ರಂ ॥ 187 ॥

ವೃ॥ ರೀತಿ ವಿನೂತನಪ್ರಕೃತಿಗೊಪ್ಪುವ ಮೆಯ್ ರಸಭಾವವೃತ್ತಿ ನಿ।
ಶ್ಚಿರ್ರೀತಿಯ ಜೀವಮನ್ತದಱನನ್ವಿತನ[1]ಪ್ಪ ಕವೀಶ್ವರಂ ಬುಧ॥
ವ್ರಾತವೆಱಲ್ದು ಬಿ[2]ಚ್ಚಳಿಸಿ ನಚ್ಚುವಳಂಕೃತಿ ಕೂಡಿದಿರ್ದ್ದವಂ।
ರೀತಿಯೊಳೊಂ[3]ದೆ ಪೇೞ್ವುದು ರಸಂಬಿಡೆ ಬಂಧುರಕಾವ್ಯಬಂಧಮಂ॥ 780

ಸೂತ್ರಂ ॥ 188 ॥

ರೀತಿ.

ಪದರಚನಾತಿಶಯಂ ರೀ।
ತಿ ದಲದುವುಂ ನಿಯತವರ್ಣ್ಣಗುಂಫನಗುಣದೊಂ॥
ದೊ[1]ದವಿಂ ಮೂಱೆಱನಕ್ಕುಂ।
ವಿದರ್ಭಪಾಂಚಾಲಗೌಡವಿಷಯನಿಬದ್ಧಂ॥ 781

ಸೂತ್ರಂ ॥ 189 ॥

ವೈದರ್ಭರೀತಿ.

ಅಸಮಾಸಪದನ್ಯಾಸಂ।
ಪ್ರಸಾದಮಾಧುರ್ಯ್ಯಗುಣಸಮಗ್ರಮುದಾರಂ॥
ರಸಭಾವಭಾವಿತೋಕ್ತಿ।
ಪ್ರಸರಂ ವೈದರ್ಭರೀತಿಯೆನೆ ಪೆಸರ್ವಡೆಗುಂ॥ 782

ಲಕ್ಷ್ಯಂ॥

ವೃ॥ ಮನವೊಲ್ದತನ ಗಾಡಿಯುಂ ಪರಪುರಂಗಳಾಕಗೆ ಸ್ಥಾಪಿಸು।
ಬಿನ ಕೋೞ್ಗಂ ಕುಳಿರ್ಪಾಲಿನೀರ್ಗ್ಗಮಬಲಾಸಿಂಗಂ ಕುಳಿರ್ಕೊಳ್ಗಱ್ವನಂ॥
ದನಕಂ ಚಂಪಕಂ ಪಸುರ್ಪ್ಪಸವ [illegible] ಪೋದೂಂವ ತ।
ಣ್ಬನಿಯೊಳ್ ಕೋಡಿಸುತಿರ್ಪ್ಪ ಬಿಜ್ಜಣಿಗಗಂ ಪಕ್ಕಾಗದೇಂ ಪೋಪರೇ॥ 783

ಸೂತ್ರಂ ॥ 190 ॥

ಪಾಂಚಾಲರೀತಿ.

ದ್ವಿತ್ರಪದರಚಿತವೃತ್ತ್ಯು ಪ।
ಚಿತ್ರಾಸಮಸ್ತವ್ಯಂಕ್ತ್ಯಯಾಸಮುಪೇತಂ॥
ಶ್ರೋತ್ರಸುಲಲಿತವ್ಯದುಪದ।
ಪಾತ್ರಂ ಪಾಂಚಾಲರೀತಿಯೆ[4]ನೆ ಪೆಸರ್ವಡೆಗುಂ॥ 784

---

1 ಇದು 2 [illegible] 3 [illegible] 4 [illegible] 5 [illegible] [illegible].

ಲಕ್ಷ್ಯಂ ॥

ವೃ ॥ ಇನಿಯನ ಕೆಂದಳಂ ತಳವನೊಯ್ಯನೆ ಸೋಂಕೆ ಪೊದಱ್ದಿ ನಾಣ ಪೆಂ।
ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜ ಬ ॥
ಚ್ಚನೆ ಬಸಿಯುತ್ತುಮಿಂದುಕರಸಂಕುಳಮೊಯ್ಯನವುಂಕಿ ಸೋಂಕೆ ಸೋಂ ।
ಕಿನೊಳೊಸರ್ವಿಂದುಕಾಂತಮಣಿಪುತ್ರಿಕೆಯಂದದಿನಾ[1]ದವೊಪ್ಪಿದಳ್ ॥ 785

ಸೂತ್ರಂ ॥ 191 ॥

ಗೌಡರೀತಿ.

ಅತಿದೀರ್ಘಸಮಾಸಾಂಚಿತ।
ಗತಿ ಶಬ್ದಾಡಂಬರಾನುವಿದ್ಧಂ ಕ್ರೋ[2]ಧಾ ॥
ದ್ಭುತರೌದ್ರವೀರರಸಸಂ ।
ಗತಮಂತದು ಗೌಡರೀತಿ ಪೌ[3]ರುಷಪ್ರಾಯಂ ॥ 786

ಲಕ್ಷ್ಯಂ ॥

ವೃ ॥ ವಂ[4]ಗಾಂಗಾಂಧ್ರಕಳಿಂಗಕೊಂಗವಿ[5]ಸರತ್ಪಾದಾತಸಂಲೀನಮು ।
ದ್ಯಂಗತ್ತುಂಗತುರಂಗಭಂಗುರತರಂಗಾಕೀರ್ಣಮುಚ್ಛೃಂಖಳೋ ॥
ತ್ತುಂಗೋನ್ಮತ್ತಮತಂಗಜಪ್ರಕರಮಾದಸ್ಸಂಕುಳಂ ಕೂಡೆ ನೋ ।
ಟ್ಟಿಂಗಂದದ್ಭುತಮಾಗಿ ತೋಱಿ ಮಸಗಿತ್ತುರ್ವೀಶಸೈನ್ಯಾರ್ಣವಂ ॥ 787

ಸೂತ್ರಂ ॥ 192 ॥

ಕಾರುಣ್ಯಂ ಹಾಸ್ಯಂ ಶೃಂ ।
ಗಾರಮಿವಿನಿತಱೊಳ್[6]ಮಕ್ಕೆ ವೈದರ್ಭ ಮನೋ ॥
ಹಾರಿಪ್ರಳಯಾದ್ಭುತರಸ ।
ವೀ[7]ರರಸಂಗಳ್ಗೆ ಪೇೞ್ಗೆ ಪಾಂಚಾಳಿಕೆಯಂ ॥ 788

ಸೂತ್ರಂ ॥ 193 ॥

ಎಸೆಗುಂ ರೌದ್ರಭಯಾನಕ।
ರಸಬೀಭತ್ಸೋಕ್ತಿ ಗೌಡರೀತಿಯಿನದಱೊಳ್ ॥
ಪೊಸಯಿಸುಗುಂ ಮೇಣ್ ನಿಸದಂ ।
ರಸವತ್ವಮತಿಪ್ರತೀತಿ ವೃ[8]ತ್ತ್ಯಾಶ್ರಯದಿಂ ॥ 789

1 ನೊಪ್ಪಿತೋಱುರ್ದಳ್. 2 ಕ್ರೋಧೋತ್ಕಟ. 3 ಪರುಷ 4 ವಂಗಾಂಗಕಳಿಂಗ. 5 ವಿಳಸ.
6 ಳಮಕ್ಕೆ ವೈದರ್ಭ ಮನೋ. 7 ವೀರಾದ್ಯಂಗಳ್ಗೆ. 8 ನೃತ್ಯ.

ಸೂತ್ರಂ ॥ 194 ॥

ಅರೆಬರ್ ದೀರ್ಘಸಮಾಸಂ ।
ಬೆರಸಿರೆ ಶೃಂಗಾರರಸಮುಮಂ ಪೇೞ್ವರ್ ಬಿ ॥
ತ್ತರಿಸುವರಸಮಾಸಪದಂ ।
ತರಂಗಳೊಳಗುಚಿತಮಾಗಿ ರೌದ್ರಾದಿಯುಮಂ ॥ 790

ಲಕ್ಷ್ಯಂ ॥

ಶೃಂಗಾರರಸಕ್ಕೆ ॥

ವೃ ॥ ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ ।
ರವಝುಂಕಾರಿತಚಾರುವಾಮಚರಣಾಘಾತಂ ಚಳದ್ಭ್ರೂಲತಾ ॥
ಗ್ರವಿಭಾಗೋತ್ಕಟತರ್ಜನಂ ತರಳತಾತಾಮ್ರಾಧರಂ ಚಕ್ರಿಗಿ ।
ತ್ತುವಲಂಪಂ ಪ್ರಣಯಪ್ರಕೋಪಸುರತಪ್ರಾರಂಭದೊಳ್ ಕಾಂತೆಯಾ ॥ 791

ರೌದ್ರಾದಿಗೆ ॥

ಇಱಿದೆಂಟುಂ ದಿಗ್ಗಜಂಗಳ್ ನೆರೆದಿರದಿದಿರಂ ತಾಗೆಯುಂ ಮಂದರಕ್ಷ್ಮಾ ।
ಧರದೊಳ್ ಕೆಯ್ಯೊಡ್ಡಿ ಗೋತ್ರಾದ್ರಿಗಳ್ ಗಜಘಟಾರೂಪದಿಂ ತಾಗೆಯುಂ ಮು ॥
ತ್ತರಿ ತಾಂಗಲ್ ತಾನೆ ಸಾಲ್ಗುಂ ಪೆಱಪೆಱವು ಘಟಾಬಂಧಮೇಂ ಭಂಡಮೆಂದೂಂ ।
ದು ರಣೋತ್ಸಾಹಂ ಮನಕ್ಕುಬ್ಬರಿಸಿರೆ ಸಮರಾಟೋಪಮಂ ತಾಳ್ದಿ ನಿಂದಂ ॥ 792

ಇದು ರೀತಿಕ್ರಮರಸನಿರೂಪಣದೊಳ್ ರೀತಿಪ್ರಕರಣಂ ಪ್ರಥಮಂ ॥

ರಸಪ್ರಕರಣಂ.

ಸೂತ್ರಂ ॥ 195 ॥

ಶೃಂಗಾರಾದಿಗಳಪ್ಪ ರ ।
ಸಂಗಳ್ ವರ್ತಿಸುಗುಮಂ[1]ತವೆಂಟೆ ವಲಂ ಕಾ ॥
ವ್ಯಾಂಗಕ್ಕೆ ಸತ್ಕ್ರಿಯಾರೂ ।
ಪಂಗಳ್ ರತ್ಯಾದಿಭಾವಸಂಪನ್ನಂಗಳ್ ॥ 793

ಸೂತ್ರಂ ॥ 196 ॥

ಸ್ಥಾಯಿಭಾವಂ.

ರತಿ ಪರಿಹಾಸಂ ಶೋಕೋ ।
ದ್ಧತಮುತ್ಸಾಹಂ ಭಯಂ ಪ್ರಕೋಪಂ ವಿಜುಗು ॥
ಪ್ಸತೆ ವಿಸ್ಮಯಾಶಯತ್ವಂ ।
ಪ್ರತಿನಿಯತಸ್ಥಾಯಿಭಾವಮಿವು ತಾಮಕ್ಕುಂ ॥ 794

---

1 ವೆತ್ತಮೆಂಟುವಲು

ಸೂತ್ರಂ ॥ 197 ॥

ವೃ॥ ಮತಿನಿರ್ವೇದಾವಹಿತ್ಥಶ್ರಮಮದಜಡತಾಗ್ಲಾನಿಚಿಂತೋಗ್ರತೇರ್ಷ್ಯಾ।
ಸಂಚಾರಿ ಧೃತಿನಿದ್ರಾವೇ[1]ಗಶಂಕಾತ್ರಸನಚಪಲತಾಲಸ್ಯಸು[2]ಪ್ತಾವಬೋಧ॥
ಭಾವಂ. ಸ್ಮೃತಿಗರ್ವಾಮರ್ಷದೈನ್ಯೋತ್ಸುಕರತಿಮುದಪಸ್ಮಾರಲಜ್ಜಾವಿಷಾದ।
ಸ್ಥಿತಿಚಿತ್ತಭ್ರಂಶಮೋಹಾಮಯಮೃತಿಗಳಿವಿಂತೆಯ್ದೆ ಸಂಚಾರಿಭಾವಂ॥ 795

ಸೂತ್ರಂ ॥ 198 ॥

ಸಾತ್ವಿಕಭಾವಂ.
ಸ್ವೇದಂ ವೈವರ್ಣ್ಯಂ ಸ್ವರ।
ಭೇದಂ ರೋಮಾಂಚನಂ ಪ್ರಕಂಪನಮಶ್ರು॥
ದ್ಭೇದಂ ಸ್ತಂಭಂ ಲಯಮೆಂ।
ದಾಮವಿವೆಂಟುಂ ರಸಕ್ಕೆ ಸಾತ್ವಿಕಭಾವಂ॥ 796

ಸೂತ್ರಂ ॥ 199 ॥

ಭಾವಂ ಬಹಿರರ್ತ್ಥಸಮು।
ದ್ಭಾವಿತಮನುಭವಭವಂ ವಿಭಾವಂ ರಸಸ॥
ದ್ಭಾವವಿಹಿತಾಭಿನಯಮನು।
ಭಾವಂ ಸಂಚಾರಿಭಾವಮನವಸ್ಥಿ[3]ತಿಕಂ॥ 797

ಸೂತ್ರಂ ॥ 200 ॥

ಭಾವಂ ವಿಭಾವಮೆಸೆವನು।
ಭಾವಂ ಸಂಚಾರಿಭಾವಮೆಂದಿಂತಿವಱಿಂ॥
ದಾವಿಷ್ಕೃತಮಕ್ಕುಂ ರಸ।
ಮಾವುದುಮೆಂದಱಿಗೆ ಭರತಶಾಸ್ತ್ರಕ್ರಮದಿಂ॥ 798

ಸೂತ್ರಂ ॥ 201 ॥

ಶೃಂಗಾರಂ.
ಸ್ತ್ರೀಪುಂಸರತಿಸಮುತ್ಥ।
ವ್ಯಾಪಾರಂ ತಾನದಲ್ತೆ ಶೃಂಗಾರಂ ಮೇ॥
ಳಾಪದಿನಗಲ್ಕೆಯಿಂ ಸುನಿ।
ರೂಪಿತಸಂಭೋಗವಿಪ್ರಲಂಭಸಮಾಖ್ಯಂ॥ 799

1 ವೇಶ. 2 ಸುಪ್ತೋವಬೋಧ, ಸುಪ್ತೋಹಬೋಧ. 3 ಸ್ಥಿತ.

ಲಕ್ಷ್ಯಂ ॥

ಸಂಭೋಗಶೃಂಗಾರಕ್ಕೆ ॥

ವೃ ॥ ಪದೆಯಿಸೆ ಸೊಂಕಿ ಸಂ[1]ಕೆಗಿಡೆ ಮೇಳಿಸಿ ಮೆಯ್ವಿಡೆ ತಳ್ತು ತೋಳ ತ ।
ಳ್ಪಿದಿರ್ಗೊಳೆ ಮೆಲ್ಲನಪ್ಪೆ ಮೊಗಮಿ[2]ತ್ತಿರೆ ಚುಂಬಿಸಿ ಸೋಲ್ತು ನಾಣನೊ ॥
ಕ್ಕುದನುಱಿದಿಕ್ಕೆ ಕಾರ್ತ್ತನದ ಲಲ್ಲೆಗಳಂ ನುಡಿದಂತಲಂಪಿನು ।
ಬ್ಬಿದಿಗಮನಾಲತಾಂಗಿಗೆ ನೃಪಂ ಪಡೆದಂ ನವಸಂಪ್ರಯೋಗದೊಳ್ ॥ 800

ಇದು ಮು[3]ಗ್ಧಸಮಾಗಮಂ ॥

ವೃ ॥ ಬಗೆಯೊಳ್ ಪೊಣ್ಮುವಲಂಪು ಕಾ[4]ತರತೆಯುಂ ತಂದೀಯೆ ಮೆಯ್ಮೆಯ್ಸಂ ।
ದುಗಳೇನಪ್ಪೊಡಮಿಲ್ಲದಂತಮರ್ದಿನಂ ತಳ್ತಪ್ಪಿ ಬಾಯೂರ್ಗಟದೊಳ್ ॥
ಮಿಗೆ ಪೀರ್ವಂತೆ ಮ[5]ನೋಜರಾಗರಸಮಂ ಮೆಯ್ವೆರ್ಚೆ ಕಾದಲ್ಮೆ ಕೆ ।
ಯ್ಮಿಗುವನ್ನಂ ನೆರೆದರ್ ಮ[6]ನಂ ತಣಿವಿನಂ ನಾನಾರತಪ್ರಾ[7]ಢಿಯಿಂ ॥ 801

ಇದು ಮಧ್ಯಸಮಾಗಮಂ ॥

ವೃ ॥ ಕುಟಿಲಾನೀಲಾಳಕಂಗಳ್ ನಿಮಿರ್ದಿರೆ ಬೆಳರ್ವಾಯ್ಮೆನಾಡೆಯುಂ ಬೀಗೆ ರೋ[8]ಷೋ ।
ತ್ಕಟದೇಹಂ ರಾಗದಿಂ ಪಿಳ್ಳನೆ ಪೆಱದಪ್ಪೊಲಿಂಬಾಗೆ ನೀಳ್ದೊ[9]ಳವಾಳಂ ॥
ವಿಟವೃತ್ತಂ ಮೆಯ್ಯೊಳೆತ್ತಂ ಪಸರಿಸಿರೆ ವಿಟಂ ಬೀಸೆ ಸಿಂದಿರ್ದ್ದಳೊರ್ವ್ವಳ್ ।
ಸ್ಫುಟತೋರೋಮಧ್ಯೆ ಭಿನ್ನಾವಟುತಟವಿಘಟದ್ಗ್ರಂಥಿನಿರ್ಗ್ರಂಥದಿಂದಂ ॥ 802

ಇದು ಪ್ರೌಢಸಮಾಗಮಂ ॥

ವೃ ॥ ಕಡೆಗಣ್ಣಿಂ ಕಡೆಗೋಡಿಪ್ರೋಗೆ ಪಿರಿದುಂ ಚಲ್ಲಂ ಕುಚದ್ವಂದ್ವದಿ ।
ಟ್ಟಿಡೆಯಿಂ ಸ್ವೇದಜಲಂ ತುಳುಂಕೆ ಜಘನಾಂತರ್ದ್ದೇಶದಿಂದಾವಗಂ ॥
ಬಿಡದುಣ್ಮುತ್ತಿರೆ ಮನ್ಮಥದ್ರವಮನಂಗಾವೇಶದಿಂ ಕಾಲ್ಪಡಂ ।
ಬಡೆ ಬಂದಾಟಿಸಿ ನೋಡಿದಳ್ ಪದಪಿನಿಂ ಶ್ರೀ[10]ವಿಪ್ರಮಾರ್ತ್ತಂಡನಂ ॥ 803

ಇದು ಅಭಿಲಾಷೆ ॥

ವೃ ॥ ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮ್ಮಜಲಂಗಳಾ ।
ಪಾಂಗು ಗಂಗೆಯ ಶೀಕರಮೆಂಬಂತಾಗಿರೆ ಕಂಡುಮೆ ಶಂಭುವಂ ॥
ಗಂಗೆ ದಲ್ ಬಿಗಿದಪ್ಪಿದಳೆಂ[11]ದಾಶಂಕೆಗೆ ಭೋಂಕನೆ ಮೋದೆ ಮು ।
ದ್ದಿಂಗೊಱಲ್ದುಮದರ್ಪ್ಪಿದನೀಶಂ ನಲ್ಲಳನಲ್ಲಿ ರತಾಂತದೊಳ್ ॥ 804

ಇದು ಈರ್ಷ್ಯೆ ॥

ವಿಪ್ರಲಂಭಶೃಂಗಾರಕ್ಕೆ ॥

ವೃ ॥ ಪದವೆತ್ತಿರ್ಪ್ಪರ ಜೀವಮೊಂದೊಡಲೆ ಬೇ[12]ಱೆಂಬಂತುಟಂ ಮಾಡಿದಂ ।
ಮದನಂಗಾವುದು ದೋಷಮುಂ[13]ತೆ ನುಡಿಯುಲ್ಕೇಂ ಬಕ್ಕರ್ವೊ ಪಾಪಮಂ ॥
ಬಿದಿಯೆಂಬಾಱಡಿಗ[14]ಳನಿಂದಮುಱಿವಾಯ್ತುರ್ವ್ವಗ್ಗಮಿನ್ನೊರ್ಮೆ ದೈ ।
ವದಿನೆತ್ತಾನುಮದಿಂದುಬಿಂಬಮುಖಿಯುಂ ಕಾಣ್ಬೊಂದು ಸಯ್ಪಕ್ಕುಮೋ ॥ 805

ಇದು ಪೂರ್ವಾನುರಾಗಂ ॥

1 ಸಂಕಿಸದೆ. 2 ಮಿತ್ತಿದೆ, ಮುತ್ತಿರೆ, ಮಿತ್ತಿರೆ. 3 ಮುಗ್ಧ. 4 ಕಾತರಿಕೆ. 5 ಮನೋಜರಾಜರಸಮುಮಂ, ಮನೋನುರಾಗರಸಮಂ. 6 ಮನಃಪ್ರಿಯತಮರ್. 7 ಪ್ರೀತಿಯಿಂ. 8 ರಾಗೋ. 9 ನೀಲಂಳ. 10 ಶ್ರೀ... 11 ಳೆಂಬು. 12 ದೇಹವಿಷ್ಟಂತುಟು. 13 ಮುಂಟೆ. 14 ಗಳ್ಕು.

ವೃ ॥ ಅಱಿಯಡೆ ಗೆಯ್ದೆನಜ್ಞಮುಖಿ ನೀನಿದನೊರ್ಮ್ಮೆಗೆ ಸೈರಿಸೆಂದು ಕಾ ।
ಲ್ಗೆಱಗಿರೆಯುಂ ಪ್ರಿಯಂ ಸುಡುಸುಡೇಂ ಗಡ ಸೈರಿಪುದೆಂದು ಕೋಪದಿಂ ॥
ಪಱಿಪಡೆ ಪೋಗೆ ನೂಂಕೆ ಕಳೆದಂದಿನ ದುಷ್ಕೃತಮೆನ್ನನಾವಗಂ ।
ಮಱುಗಿಸಿ ಮುಚ್ಚಿ ಸುಟ್ಟಪುವು ನೋಡಿರೆ ಶೀತಮರೀಚಿಮಾಲೆಗಳ್ ॥ 806

ಇದು ಮಾನಾಖ್ಯಂ ॥

ವೃ ॥ ಇನಿಯನಗಲ್ದು ಪೋಗಿ ಪರದೇಶದೊಳಿರ್ದ್ದಪನಾನುಮಿಲ್ಲಿ ಮಾ ।
ವಿನ ತಳಿರ್ವಾಸಿನೊಳ್ ಪೊರಳುತಿರ್ದ್ದಪೆನೀಗಳುಮಿಂತೆ ನೀನುಮೆ ॥
ನ್ನನೆ ನಡೆ ನೋಡುತುಂ ನಭದೊಳಿರ್ದ್ದಪಯುಪ್ಪುದಱಿಂದೆ ನಿನ್ನನಾ ।
ನ[1]ನುವಿಪೆನೆನ್ನ ಮೆಯ್ಯ ಬಡವೊ ನಲ್ಲನ ಮೆಯ್ಯ ಬಡವೋ ನಿಶಾಕರಾ ॥ 807

ಇದು ಪ್ರವಾಸಂ ॥

ವೃ ॥ ವ್ರತಕೆಂ[2]ತಾಯಿತ್ತಗಳಂತೀತನು ತನುಲತೆಯಿನಾವಾಗಿಯುಂದೀಪಿದರಾಸೀ ।
ಪತನಕ್ಕೆಂತಾ[3]ರ್ತ್ತೆ ಮೆಯ್ಯುಂ ವನಜವದನೆ ಕೇಳ್ ಗ್ರೀಷ್ಮದೊಳ್ ಸಿಚ್ಛಮೆಂತುಂ ॥
ಸತಿ ತ[4]ಟ್ಟುತ್ತಿರ್ಪ್ಪೆ ಕಾಯ್ಪಿಂದುರಿವ ಬಿಸಿಲೊಳಾಮೋಘವಿಸ್ಫೂರ್ಜ್ಜಿತಾರ್ಣ್ಣಃ ।
ಪ[5]ತಧಾರಾಭೀಕರಾಡಂಬರಜಳಸಮಯಂ ಬಂದೊಡೆಂತಕ್ಕದಿರ್ಪ್ಪೆಯ್ ॥ 808

ಇದು ಕರುಣಾತ್ಮಕವಿಪ್ರಲಂಭಂ ॥

ಸೂತ್ರಂ ॥ 202 ॥

ವಿಕೃತಾಂಗವೇಷಭಾಷಾ ।
ಹಾಸ್ಯಂ. ಪ್ರಕಾರಕೃತಹಾಸಹೇತುಕಂ ಹಾಸ್ಯಮತಿ ॥
ಕರುಣಂ ಪ್ರಕಟತರಶೋಕಭಾವ ।
ಪ್ರಕೃತಿಪರಂ ಕರುಣಮಾರ್ತ್ತಜನತಾವಿಷಯಂ ॥ 809

ಲಕ್ಷ್ಯಂ ॥

ಹಾಸ್ಯಕ್ಕೆ ॥

ವೃ ॥ ಶ್ರೀ ತ[6]ನ್ನಂದಿನ ರೂಪೆ ಕೌಸ್ತುಭದೊಳಚ್ಚೊತ್ತಿರ್ದ್ದಪ್ಪೋಲ್ ತೋಱಿದೆ ಕಂ[7] ।
ಡೇತಕ್ಕೀಕೆ ಮದೀಯವಾಸಗೃಹಮಂ ತಾಂ[8] ಪೊಕ್ಕಳೆಂದೇವದಿಂ ॥
ದಾತಾ[9]ಮ್ರಾಕ್ಷಿಯನೀಕ್ಷಿಸುತ್ತುಮಿರೆ ತನ್ಮುಗ್ಧತ್ವಮಂ ಕಂಡು ಸಂ ।
ಜಾತಾಂತಸ್ಸ್ಮಿತನಾದ ಕೃಷ್ಣನೆಮಗೀಗಾನಂದಸಂದೋಹಮಂ ॥ 810

ಇದು ಉತ್ತಮಪಾತ್ರಂ ॥

ವೃ ॥ ಸೊಗಯಿಪ್ಪೊಳ್ದೊಡೆ ನೋಯೆ ನೇ[10]ತ್ರದೆಱೆಪ್ಪೋಲ್ ನೀಳ್ದಿರ್ದ್ದ ಬಾರಂತೆ ತೋ[11] ।
ಪುರ್ಗಿಯುಂ ಪುಣ್ಮೆಯುಮಾಗಿ ಮಾಡಿ ಬಿದಿ ಮುಂ ಜಂಘಾಪ್ರಮಾಣಕ್ಕೆ ನೂ ॥
ಲ್ದಿಗೆದಂತಿರ್ಪ್ಪ ನಖವ್ರಣಾವಳಿಗಳಂ ನಲ್ಲಂಗೆ ಕಣ್ಗೆತ್ತುತುಂ ।
ನಗುತುಂ ಸಾ[12]ರ್ದ್ದ ಸಮಂಗಮಂ ಕಳೆಯಿಸುತ್ತಿರ್ಪ್ಪಕೆ ಕಣ್ಗೊಪ್ಪಿದಳ್ ॥ 811

ಇದು ಮಧ್ಯಮಪಾತ್ರಂ ॥

---

1 ನನುಮಿಸೆ. 2 ಕೇನಾ. 3 ತಾರ್ತ್ಥ, ತಾರ್ಪ್ಪ. 4 ಕಟ್ಟುತಿರ್ಪ್ಪೆ. 5 ಪತಿತಾರಾಭೀರಾಜಳದಸಮಯಂ.
6 ತನ್ನಂದದರೂಪು. 7 ದೇ । ಟಿದೇ. 8 ಪೊಕ್ಕರ್ದ್ದ. 9 ತಾಮ್ರಾಕ್ಷಿನೀಕ್ಷಿಸುತ್ತುಮಿರ. 10 ಸೂತ್ರ.
11 ತೇ. 12 ಕೋೞಱಿವಸಮಾಗಮಕ್ಕೆಳ.

ವೃ ॥ ಪ್ಲವಂಗಮಾಕುಳಂಗಳಲ್ಲಿ ಕಿಸುಗಲ್ಲ ಶೃಂಗಂಗಳಂ ।
ದವಾಗ್ನಿಶಿಖೆಗೆತ್ತು ಬೆರ್ಚ್ಚಿದ ಮದದಂತಿಯುಂ ನಿರ್ಝ್ಝರ ॥
ಪ್ರವಾಹನಗವೆಂದೆಗೆ[1]ತ್ತದಱ ಬೆಂಗೆ ವಂದಾಗಳಾ ।
ದವಸ್ಥೆ ತೆ[2]ಱಿಸಲ್ವಿನಂ ನಗಿಕುಮಪ್ಸರೋಬೃಂದಮುಂ ॥ 812

ಕಂ ॥ ಕುಳ್ಳಿರ್ದ್ದ ಕು[3]ಳಿರ್ವ ಮಳೆಯೊಳ್ ।
ಪಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ ॥
ಮುಳ್ಳುರ್ಚ್ಚೆ ತೆಱೆದು ಪಲ್ಲಂ ।
ಘೊ[4]ಳನೆ ನಗಿಸಿದುದು ಕಟಕಮಂ ಮರ್ಕ್ಕಟಕಂ ॥ 813

ಇದು ಜಘನ್ಯಪಾತ್ರಂ ॥

ಕರುಣಕ್ಕೆ ॥

ವೃ ॥ ಬಗೆಗೀಗಳ್ ನಿಶ್ಚಯಂ ಪುಟ್ಟಿದುದಮಿದೆನಿದಂ ಪನ್ನಗಂ ಶಂಖಚೂಳಂ ।
ಮಗನಿಂತೀವೃದ್ಧೆಗೀತಂ ತಡೆವರದೊಡಗೊಂಡುಯ್ವಂ ಕಿಂಕರಂ ಪ ॥
ನ್ನಗರಾಜಂಗೀತನಂ ವಾಸುಗಿ ಗರುಡನ ತೀಂಗೊಡ್ಡಿದಂ ತಪ್ಪದಾಹಾ ।
ವಿಗಳದ್ಬಾಷ್ಪಾಂಬುದೀನಾನನೆ ಜನನಿ ಮಗಂ ಪೋಗೆ ಪುಯ್ಯಲ್ಚಿದಪ್ಪಳ್ ॥ 814

ಅಂತಲ್ಲದೆಯುಂ ॥

ವೃ ॥ ಅಱಿಲನೆರ್ದೆಯೊಳ್ ತಿಣ್ಣಂ ತಱಿಕ್ಕೈಸಿ ಪುತ್ರವಿಮೋಹದಿಂ ।
ದೆಱವಿ ತನುವಂ ಹಾಹಾ ಹಾವತ್ಸಯೆಂದಮರ್ದಪ್ಪಿಕೊಂ ॥
ಡಱಿತುಮುಱಿತುಂ ನಟ್ಟಗ್ಗಂಬಂ ಮುನೀಶನಿಳೇಶನಿಂ ।
ಕಿಱಿಸೆ ಸರಲಿಂ ಮುನ್ನಂ ತದ್ದ್ವಾರದಿಂದಸು ಪೋಪುದುಂ ॥ 815

ಸೂತ್ರಂ ॥ 203 ॥

ವೀರರಸಂ ಬವರಿಸುಗುಮು ।
ವೀರಂ. ದಾರೋತ್ಸಾಹಪ್ರ[5]ವೃತ್ತಿಕಾರಣಕಾರ್ಯ್ಯಂ ॥
ರೌದ್ರಂ. ದಾರುಣರೋಷಾವೇಶ ವಿ ।
ಕಾರಭವಂ ರೌದ್ರಮೆಂಬ ರಸಮದು ನೆಗೞ್ಗುಂ ॥ 816

ಲಕ್ಷ್ಯಂ ॥

ವೀರಕ್ಕೆ ॥

ವೃ ॥ ತ್ರಿದಶೇಂದ್ರಾರ್ಜ್ಜಿತ ಶೌರ್ಯ್ಯನೊರ್ಮ್ಮೆ ಕಿಱಿದು ಪೋಯತ್ತಾಭೀಳದಿಕ್ಪಾಲರೊ ।
ಡ್ಡಿದ ಸೈನ್ಯೋದ್ಧತಿ ಮತ್ತಮೊರ್ಮ್ಮೆ ಕಿಱಿದು ಕೇಳ್ ನಿರ್ಮ್ಮೂಲನಮಾಯ್ತಿನ್ನುಮೊ ॥
ರ್ಮ್ಮೆ ದಲೆನ್ನೊಳ್ ಸಮನಪ್ಪವಂ ಪೊಣರೆ ಕೀರ್ತ್ಯಂದೊಪ್ಪಗುಂ ಪೆ[6]ಂಗಿಯೇ ।
ಮುದುವರ್ದ್ದೇ ನಿನಗೆಂತು ಕೀಱ್ಪಿನ[7]ತುಳತ್ರ್ಯಚಂದ್ರಹಾಸಾಸಿಯುಂ ॥ 817

1 ವತ್ತದಱಿ. 2 ತಱಿಸಲ್ಕಿನಂ. 3 ಕಮರಿಬೂಳಕುಳು । ಸ್ಖ. 4 ಕೆಸ್ಕೆನೆ. 5 ಪ್ರವೃತ್ತಿ.
6 ಬೆಂಗಿಯುಂ, ಲೆಂಗಿಯುಂ. 7 ನಮಳ.

ಅಂತುಮಲ್ಲದೆಯುಂ ॥

ವೃ ॥ ಕ್ಷಿತಿಯೊಳರಾತಿಭೂಪತಿಗಳಂ ತವೆ ಕೊಂದು ಸಮಂತು ವಿಪ್ರಸಂ ।
ತತಿಗಖಿಳಾವನೀತಳಮನಿತ್ತು ನೆಗೞ್ದನಲ್ತೆ ವಿಕ್ರಮೋ ॥
ನ್ನತಿಯೊಡನೊಂದು ದಾನಗುಣದುನ್ನತಿಯುಂ ಭುವನಕ್ಕೆ ಭಸ್ಮಸಾ ।
ತ್ಕೃತರಿಪು ಪಾತ್ರಸಾತ್ಕೃತಜಗದ್ವಲಯಂ ಜಮದಗ್ನಿನಂದನಂ ॥ 818

ರೌದ್ರಕ್ಕೆ ॥

ವೃ ॥ ಕುಡಿವೆಂ ದುಶ್ಶಾಸನೋರಸ್ಥಳಮನಗಲೆ ಪೋೞ್ದುರ್ಬ್ಬ ಕ[1]ನ್ನೆತ್ತರಂ ಪೊ ।
ಕ್ಕುಡಿವೆಂ ಪಿಂಗಾಕ್ಷನೂರುದ್ವಯಮನುರುಗದಾಘಾತದಿಂ ನುಚ್ಚುನೂಱು ॥
ಗೊಡೆವೆಂ ತದ್ರತ್ನರಶ್ಮಿಪ್ರಕಟಮಕುಟಮಂ ನಂಬು ನಂಬೆನ್ನ ಕಣ್ಣಿಂ ।
ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ ॥ 819

ಕಂ ॥ ಅಱಿಪಿದುದು ರೌದ್ರರಸಮಂ ।
ಕಿ[2]ಱಿಪಿದ ಕುಡುವುರ್ಬ್ಬ ಕರ್ಚ್ಚಿದೌಡುಚ್ಚಿದ ಬಾ ॥
ಳೆಱಿಯಲನುಗೆಯ್ದ ಕೆಯ್ ಬೆ ।
ಳ್ಕುಱೆ ಪೆ[3]ಚ್ಚನೆ ಬಿಟ್ಟ ಕಣ್ ಹಯಾರೋಹಕರಾ ॥ 820

ಸೂತ್ರಂ ॥ 204 ॥

ಭಯಾನಕಂ. ಬೀಭತ್ಸಂ. ಅದ್ಭುತಂ.

ಭಯಹೇತುಸಮುದ್ಭೂತಂ ।
ಭಯಾನಕಂ ಕೃತಜುಗುಪ್ಸನಂ ಬೀಭತ್ಸಂ ॥
ನಿಯತಂ ವಿಸ್ಮಯಭಾ[4]ವಾ ।
ಶ್ರಯಮದ್ಭುತರಸಮೆನಿಪ್ಪ[5] ಪೆಸರಂ ಪಡೆಗುಂ ॥ 821

ಲಕ್ಷ್ಯಂ ॥

ಭಯಾನಕಕ್ಕೆ ॥

ವೃ ॥ ಮಕರಂ ಬಾಯ್ದೆಱೆದಂದದಿಂ ತೆ[6]ಱೆದ ಬಾಯ್ ಪೇ[7]ಱಿರ್ದ್ದ ಕೋಡೊರ್ವ್ವಡೆ ನೆ ।
ಕ್ಕ ಕದಂಪೆತ್ತಿದ ಪುರ್ವ್ವ ಪತ್ತಿದ ಬಸಿಱುರ್ ಪೋತಂದ ಕಣ್ ಮೇಘಘೋ ॥
ಷ[8]ಕಠೋರಧ್ವನಿ ನೀಳ್ದ ಕೇಸುಗಿವೋಲಿ[9]ರ್ಪ್ಪ ಭೀಳಕೇಶಾಳಿ ನ[10] ।
ರ್ಪ್ಪಕನದ್ಭೂಷಣಭೀಷಣಂ ಭಯದಮಾಯ್ತಾರಾಕ್ಷಸೀರೂಪಕಂ ॥ 822

ವೃ ॥ ನೋಮ್ಮರ್ಡಿ ನೋ[11]ರ್ದ್ದ ಪಿಂದಲೆಯೊ ಪ[12]ಚ್ಚಳಮಂ ನಿಜಮಾರ್ಗ್ಗಮಂ ಬಿಸು ।
ಟ್ಟೊರ್ಮ್ಮೆಯೆ ಕೞ್ತೆ ಚಮ್ಮಟಿಗೆ ಮುಟ್ಟಿದವೋಲ್ ನಸುಪೆರ್ಚ್ಚಿ ತಾನದ ॥
ಕ್ಕಿರ್ಮ್ಮಡಿ ಪೆರ್ಚ್ಚಿ ಪೆರ್ಚ್ಚಿ ನಡುಕಂ ಪೆಱಗೇಱಿದಳೂರ್ವ್ವಳೀಪನಂ ।
ಪೆರ್ಮ್ಮಲೆ ಬೆನ್ನನರ್ಚ್ಚಿದಪುನೆಂಬಿನಮುಪ್ಪಿದಳಾ[13]ಗಮಾಪ್ಪಿದಳ್ ॥ 823

1 ಕನ್ನೆತ್ತರಂ. 2 ಕಿಱಿಪಿದ. 3 ಬೆಚ್ಚನೆ. 4 ಭಾರಾ. 5 ಪ್ರುವಕ್ಕಾ ಪೆಸರಿಂ. 6 ತೆಗೆದ. 7 ಪೇಱಿರ್ದ್ದ. 8 ಷಕಘೋರ. 9 ಲಪ್ಪ. 10 ಸ । ಪ್ಪಕವದ್ಭೀಷಣಭೂಷಣಂ. 11 ಜೋಲ್ದ. 12 ಪಕ್ಕಮ. 13 ಅಂಗ ಳಿಕ್ಕಿರದಿಂ.

ಕಂ॥ ಬೆರಲಂ ಕಚ್ಚುರ್ವ ಪುತ್ತ್ರಂ।
ಪರಿದೇಱುವ ಕೆಯ್ದುಪಿಕ್ಕಿ ಪೊಕವಾಡುವ ಭಯ॥
ಜ್ವರದಿಂ ನಡುಗುವ ಭೀರುಗ।
ಳೆರೆಬರ್ ಕನ್ನಡಿಸಿದರ್ ಭಯಾನಕರಸಮಂ॥ 824

ಬೀಭತ್ಸಕ್ಕೆ॥

ವೃ॥ ನೆತ್ತರಂ ಕುಡಿದು ಸೀನೆಣದೊ[1]ಳ್ಪಡಿಖಂಡಮಂ।
ಪತ್ತಿ ತೊ[2]ಯ್ದು ನೆಣದೊಟ್ಟದ ಪಾರೆಯುಮಿರೆಯುಮಂ॥
ತುತ್ತಿ ನುಂಗಿ ಮಿ[3]ದುಳಂ ತಣಿವಿಂ ಪುಳಿದೇಗುದೇ।
ಗುತ್ತುಮಿರ್ಪುರ್ವ[4]ಬಜಿಯೊಳ್ ರಜನೀಚರಕೋಟಿಗಳ್॥ 825

ಅದ್ಭುತಕ್ಕೆ॥

ವೃ॥ ಪಯಃಪುಲಿಗಳ್ ಮೊಲೆಯೂಡಿದುವಾಹರಿಣಂಗಳಂ .... ।
ನಮುದೊಳ್ ಸೋಡಿದುವಾನೆಗಳಂ ಹರಿಗಳ್ ನಿಜೋಜ್ವಲಕೇಸರಾ॥
ಳಿಯನ್[5]ಗಿಯುತ್ತಿರೆಯುಂ ಕುಟಿಲಾಹಿಗಳುಂ ನವಿಲ್ಗಳನೆತ್ತವಾ।
ಶ್ರಯಿಸಿದುವಿಂತಿನಿತದ್ಭುತಮಾಯ್ತು ತಪೋಮಹತ್ವದಿನಾಕೆಯಾ॥ 826

ಕಂ॥ ತನಗಿಲ್ಲದ ಭಯಮಂ ತೈ।
ಲನಾಂತ ರಿಪುನೃಪರ್ಗೆ ಕುಡುವನವರ್ಗಿಲ್ಲದುದಂ॥
ವಿನುತಜ[6]ಯಶ್ಲಾಘ್ಯಯಶೋ।
ಧನಮಂ ತಾನೀಱ್ದುಕೊಳ್ವನೇನಚ್ಚರಿಯೋ॥ 827

ಸೂತ್ರಂ॥ 205॥

ಸಮಭಾವಪ್ರಭವಂ ಶಾಂ।
ಶಾಂತಂ. ತಮಕ್ಕುಮಂತಾಸಮತ್ವಮುಂ ವರ್ತ್ತಿಸುಗುಂ॥
ಸಮನಿಸಿ ಸ[7]ಮ್ಯಗ್ಜ್ಞಾನಂ।
ತಮಮಂ ರಾಗಮುಮನಲೆದು ತೊಲಗಿಸೆ ಮನದಿಂ॥ 828

ಲಕ್ಷ್ಯಂ॥

ವೃ॥ ಬಗೆಯಂ ತಾರದೆ ತಾಪಸಾಶ್ರಮಪದಕ್ಕಜ್ಞಾನದಿಂ ಮೂರ್ಕ್ಕರೇ।
ಕೆಗಡಂ ಮೂಣ್ಪರೊ ಮುಪ್ಪಬಿಲ್ ಬಡತನಂ ರೋಗಂ ವಿಯೋಗಂಗಳ್[8]॥
ಸ್ನಿಗಮಿಕ್ಕಿರ್ದೊರ್ಡಲಂ ಬಿಸುಟ್ಟು ಪೆ[9]ಱದಂ ಕೆಯ್ಕೊಂಡು ಸಂಸಾರದೊಳ್।
ಮು[10]ಗಿಬ್ಬಂ ಪುಟ್ಟುವರೆಂಬ ಗಾಂಪಿನೆ ಪಲಂ ಧೀ[11]ರಂಗೆ ಲಜ್ಜಾಕರಂ॥ 829

1 ದೊಪ್ಪಿರಾ. 2 ಕೊಮಮ್ಮನೆಗೆದೊಟ್ಟಿದ, ತೊಯು. 3 ಮಿದುಳ. 4 ವಜೆಯೊಳ್. 5 ನಾಗಿ. 6 ನಯ. 7 ದಿವ್ಯಜ್ಞಾನಂ. 8 ಳಿಂ। ನೆಗವಿಕ್ಕಿದೊರ್ಡಲ(...). 9 ಪೆಱದಿಂ, ಪೆಱದಂ, ಪರಮಂ. 10 ತನುವಾಪ್ಯಂ. 11 ಧೀರಂಗ.

ವೃ॥ ಧರೆಯೊಳ್ ಧರ್ಮ್ಮಪಥಕ್ರಮಂಗಳೆಸೆಗುಂ ಮತ್ಕೀರ್ತ್ತನಂಗಳ್ ಜಯೋ ।
ದ್ಧುರಮುಂ[1]ಟರ್ತ್ಥಫಲೋಪಮಾನಮೆಮಗೀಹಸ್ತ್ಯಶ್ವತಂತ್ರಂ ಕುಳಾ॥
ಭ[2]ರಣಂ ಕಾಮಫಲೋಪಮಂ ಬಳೆದಪಂ ಮನ್ನಂದನಂ ಸಾಲ್ವುದಿ[3] ।
ನ್ನಿರವೇಂ ಮೋಕ್ಷಮಹಾಮಹೀರುಹಫಲೈಕಾ[4]ಸ್ವಾದಮಂ ನೋಡುವೆಂ॥ 830

ಸೂತ್ರಂ ॥ 206 ॥

ಕರುಣಾರಸಕ್ಕೆ ಮಿಗೆ ಹಾ ।
ಸ್ಯರಸಂ ಶೃಂಗಾರರಸಕೆ ಬೀಭತ್ಸಂ ರೌ ॥
ದ್ರರ[5]ಸಕ್ಕಮದ್ಭುತಂ ವೀ ।
ರರಸಕ್ಕೆ ಭಯಾನಕಂ ವಿ[6]ರೋಧಕಮಕ್ಕುಂ ॥ 831

ಲಕ್ಷ್ಯಂ ॥

ಕಂ ॥ ಕರಜಕ್ಷತಗಳಿತಾ[7]ಸ್ಥ ।
ನುರಕ್ತಕರ್ದ್ದಮಿತವಿಗ್ರಹಂ ಸು[8]ವ್ರಣಿತಾ ॥
ಧರಜಾತಿಪೂತಿಗಂಧಂ ।
ತರುಣೀಮುಖಮೆನಗೆ ಪಡೆದುದೊದವಿದಲಂಪಂ ॥ 832

ಸೂತ್ರಂ ॥ 207 ॥

ಎರಡುಂ ವಿರುದ್ಧರಸಮೊಡ ।
ವೆರಸಿರೆ ತದವಾಂತರಸ್ಥಮೊಂದನ್ಯರಸಂ ॥
ಪರಿಪುಷ್ಟಮಾಗೆಯುಂ ವ್ಯತಿ ।
ಕರಣಂ ಮೇಣ್ ತಾಮವಾಗೆಯುಂ ನಿರ್ದ್ದೋಷಂ ॥ 833

ಲಕ್ಷ್ಯಂ ॥

ವೃ ॥ ಅರುಣಜಳಾವಲಿ[9]ಪ್ತಿ ಪೊಸಗುಂಕುಮದಂತಿರೆ ಕರ್ಣ್ನಲಗ್ನತೋ ।
ಮರಮವತಂಸದಂತಿರೆ ನವವ್ರಣರಾಜಿ ವಿಭೂಷಣಾಳಿಯಂ ।
ತಿರೆ ಮಿದುಳುಣ್ಮೆ ಪುಷ್ಪಕೃತಶೇಖರದಂತಿರೆ ಕೋಡು ಪೋದರ ।
ಚ್ಚರಸೆಯರಣ್ಕೆ ಬಿಟ್ಟ ಭಟರಂ ಕೊನೆವಿಾಸೆಯ ಚೆನ್ನಪೊಂಗರಂ॥ 834

ಭಯದಿಂ ಕಚ್ಚಿರ್ದು[10]ದೊಂದು ಪುಲ್ ಮುಗಿದ ಕೆಯ್ ಬಿಟ್ಟಿರ್ದ್ದ ಕೇಶಂಗಳುಂ ।
ನಯನಾಂಭಃಪ್ಲವಮೋಡುವಲ್ಲಿ ಪಿರಿದುಂ ಕಾರುಣ್ಯಮಂ ಮಾಡೆ ವೈ ॥
ರಿಯನಾಗಳ್ ನಗುವಂತಿರಿರ್ದ್ದುದು ಕನತ್ಸ್ಫಿಗ್ಗಿಂ ವಿನಿಬ್ಭಿನ್ನಕುಂ ।
ಭಯುಗೋದ್ಯದ್ದ್ವಿಪಮೌಕ್ತಿಕಾಳಿಕಳಿತಂ ಶ್ರೀವಿಪ್ರಮಾರ್ತ್ತಂಡನಾ ॥ 835

1 ಮುಂಟಾರ್ತ್ಥ. 2 ಪರಂ. 3 ದಿನ್ನುದವಿಂ, ದಿನ್ನುದವೆಂ, ದಿನ್ನುದೆಂ. 4 ಕಾವಾರವಂ, ಕಾಸ್ವಾದನಂ. 5 ರಸೋತ್ಕರ್ಷದದ್ಭುತಂ. 6 ವಿರೋಧಿಗಳಕ್ಕುಂ. 7 ತನು, ತನೂವರಳ್. 8 ಸವ್ರಣಿತಾ. 9 ಲಿಪ್ತನವಕರ್ದ್ದಮ, ಲಿಪ್ತನರ. 10 ದರೊಂದು.

ಸೂತ್ರಂ ॥ 208 ॥

ವೀರಂ ಗೌರಂ ರೌದ್ರಮ |
ದಾರಕ್ತಂ ಪೀತಮದ್ಭುತಂ ಶ್ಯಾ[1]ಮಂ ಶೃಂ ||
ಗಾರಂ ಶ್ವೇತಂ ಹಾಸ್ಯಂ |
ಕಾರುಣ್ಯಂ ಧೂಮ್ರಮಸಿತಮುೞಿದುವವೆರಡುಂ || 836

ಸೂತ್ರಂ ॥ 209 ॥

ಭಾರತಿಯು ಕೌಂಕು ಸತ್ತ್ವೋ |
ದಾರತೆ ಸರಸಾರ್ಥಮು[2]ದ್ಧತಸ್ಥಿತಿಯಿವಱಿಂ ||
ವೃತ್ತಿಭೇದಂಗಳ್. ಭಾರತಿ ಸಾತ್ವತಿ ಕೈಶಿಕಿ |
ಯಾರಭಟಿಯೆನಿಪ್ಪ ವೃತ್ತಿಗಳ್ ನಾಲ್ಕಕ್ಕುಂ || 837

ಸೂತ್ರಂ ॥ 210 ॥

ವಿದ್ವಜ್ಜನಹೃದಯಂಗಮ |
ಸ[3]ದ್ವಕ್ರೋಕ್ತಿಪ್ರಕಾಶಮುದ್ಭುತಹಾಸ್ಯೋ ||
ದ್ಯ[4]ದ್ವಸ್ತುವೃತ್ತಿ ಸಲೆ ರಸ |
ವದ್ವಚನದೊಳೆಸೆಯೆ ಪೇಳ್ಗೆ ಭಾರತಿಯಿಂದಂ || 838

ಸೂತ್ರಂ ॥ 211 ॥

ಬಾಗಂ ಬೀರಂ ಸೊಬಗೆಂ |
ಬೀಗುಣಮುಂ ಶಾಂತವೃತ್ತಿಯುಂ ಸಾಹಸದು ||
ದ್ಯೋಗಮುಮತಿಲಲಿತಸದಾ |
ಭೋ[5]ಗದೊಳಂಬಾಗೆ ರಂಜಿಕುಂ ಸಾತ್ವತಿಯೊಳ್ || 839

ಸೂತ್ರಂ ॥ 212 ॥

ನಗರಾದಿವರ್ಣನಂ ನೃ |
ತ್ಯಗೀತವಾದ್ಯಪ್ರಯೋಗಮಬಳಾವಿಷಯೋ ||
ಪಗಮವ್ಯವಹೃತಿಯೆಂಬಿವು |
ನೆಗಳ್ಗುಂ ಮೃದುಮಧುರರಚನೆಯಿಂ ಕೈಶಿಕಿಯೊಳ್ || 840

---

1 ಶಾಂತಂ. 2 ಮುದ್ಧುರ. 3 ಸದ್ವಕ್ರೋಕ್ತಿ, ಸದ್ವಗೋರೋಕ್ತಿ. 4 ಸದ್ವಸ್ತು. 5 ಭಾಗ.

ಸೂತ್ರಂ ॥ 213 ॥

ಕ್ರೂರಾಸ್ತ್ರಪಾತಚಿತ್ರಮು ।
ದಾರಣಮಾಹೇಂದ್ರಜಾಲರೌದ್ರಾದಿರಸಂ ॥
ಚಾರುತರಸ್ಫುಟಬಂಧದೊ ।
ಳಾರಭಟೀವೃತ್ತಿಯಿಂದಭಿವ್ಯಂಜಿಸುಗುಂ ॥ 841

ಇದು ರೀತಿಕ್ರಮರಸನಿರೂಪಣದೊಳ್ ರಸಪ್ರಕರಣಂ ದ್ವಿತೀಯಂ॥

ಗೀತಿಕೆ॥ *ರೀತಿಯುಂ ರಸವಿಭಾಗಮುಮಂ ವಿ ।
ಖ್ಯಾತಿಯನಾಂತ ವೃತ್ತಿಗಳಂ ಪ್ರಾ ॥
ತೀತಿಕಮಾಗೆ ತಿಳಿಯೆ ಪೇಳ್ದನಿಂತೀ ।
ಭೂತಳದೊಳ್ ಸಲೆ ನಾಗವರ್ಮ್ಮಂ ॥ 842

ವೃ॥ ಧರೆಯೆಂತಂತೆ ರಸಾಶ್ರಯಂ ಜಲಧಿಯೆಂತಂತಾ[1]ತ್ತಗಾಂಭೀರ್ಯ್ಯಮಂ ।
ಬರಮೆಂತಂತೆ ಸದಾವೃತಂ ದೆಸೆಗಳೆಂತಂತೂರ್ಜ್ಜಿತಂ ಸಂದ ಮಂ ॥
ದರಮೆಂತಂತೆ ಸುವರ್ಣ್ಣಭಾಸಿ ಶ[2]ಶಿಯೆಂತಂತುಜ್ವಳೋದ್ವೃತ್ತಕಳಾ ।
ಸ್ಫುರಿತಂ ಭಾವಿಸೆ ನಾಗವರ್ಮ್ಮರಚಿತೋದಾತ್ತಪ್ರಬಂಧಾನ್ವಯಂ ॥ 843

ಗದ್ಯ ॥ ಇದುಸಕಳಸುಕವಿಜನಮನಸ್ಸರೋಜಿನೀರಾಜಹಂಸಾಯ
ಮಾನಾನೂನಕವಿತಾಗುಣೋದಯಂ ಶ್ರೀ ನಾಗವರ್ಮ್ಮ
ವಿರಚಿತಮಪ್ಪ ಕಾವ್ಯಾವಲೋಕನದೊಳ್
ರೀತಿಕ್ರಮರಸನಿರೂಪಣಮೆಂಬುದು
ಚತುರ್ತ್ಥಾಧಿಕರಣಂ.

---

* ಈ ಪದ್ಯವು ಮೂರು ಪ್ರತಿಗಳಲ್ಲಿ ಈ ರೀತಿಯಾಗಿಯೇ ದೊರೆಯುತ್ತದೆ. ಒಂದು ಪ್ರತಿಯಲ್ಲಿ ಪಾಠ ಕೆಳಗೆ ಬರೆದಿರುವಂತೆ ಭಿನ್ನರೂಪವಾಗಿ ದೊರೆಯುತ್ತದೆ :—

ರೀತಿರಸಭಾಗಮುಮಂ ವಿ । ಖ್ಯಾತಿಯನಾಂತಮುಳ ವೃತ್ತಿ ವ್ಯಕ್ತಂಗಳುಮಂ ॥
ಪ್ರೀತಿಕವಾಗಿರೆ ಪೇಳ್ದಂ । ಭೂತಳದೊಳಗೆಸೆಯೆ ನಾಗವರ್ಮ್ಮಕವೀಂದ್ರಂ ॥

1 ತಾಕ್ಷ್ಯ. 2 ರವಿ,

5. ಕವಿಸಮಯಾಧಿಕರಣಂ.

ಸೂತ್ರಂ ॥ 214 ॥

ಆವುದಶೇಷಲೋಕವಿಷಯಸ್ಥಿತಿಯುಳ್ಳಖಿಳಾಗಮಾರ್ಥಮುಂ ।
ಭಾವಿಪೊಡಲ್ತು ಸತ್ಕವಿಸರಂಪರೆಯಿಂ ಪರಿಗೀ[1]ತಮಾಗಿ ನಿ ॥
ಷ್ಕೇವಳಮಾ[2]ದ ರೂಢಿವಶದಿಂ ಸಲೆ ಸಲ್ವುದಿ[3]ದಲ್ತೆ ಶಿಷ್ಟಸಂ ।
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ ॥ 844

ಸೂತ್ರಂ ॥ 215 ॥

ಆತತಸತ್ಕವಿಸಮಯಂ ।
ಜಾತಿದ್ರವ್ಯಕ್ರಿಯಾಗುಣಾಶ್ರಯಮಸದಾ ॥
ಖ್ಯಾತಿ ಸದಕೀರ್ತ್ತನಂ ನಿ ।
ರ್ಣೀತಂ ನಿಯಮಾರ್ತ್ಥಮೈಕ್ಯಮೆನೆ ನಾಲ್ಕು ತೆಱಂ ॥ 845

ಅಸದಾಖ್ಯಾತಿಪ್ರಕರಣಂ.

ಸೂತ್ರಂ ॥ 216 ॥

ಸಲಿಲಾಶ್ರಯಮಾತ್ರದೊಳಂ ।
ಕಲಹಂಸಪ್ರಭೃತಿ ನದಿಗಳೊಳ್ ಕಮಲಸಿತೋ ॥
ತ್ಪಲಕುವಲಯಾದಿ ಶೈಲಾ ।
ವಲಿಯೊಳ್ ರ[4]ತ್ನಾದಿಯುಂ ಪ್ರಯೋಗಿಸೆಪ[5]ಡೆಗುಂ ॥ 846

ಲಕ್ಷ್ಯಂ ॥

ಜಲಾಶ್ರಯಮಾತ್ರದೊಳ್ ಹಂಸಾದಿಗಳ್ಗೆ ॥

ವೃ ॥ ಜಕ್ಕವ[6]ಕ್ಕಿಗಳಿಂ ಕಳಹಂಸೆಯಿಂ ।
ಮಿ[7]ಕ್ಕ ಸಾರಸದಿಂ ಕುರರಂಗಳಿಂ ॥
ಮೊಕ್ಕಳಂ ಸೊಗಯಿಪ್ಪುದು ನೋಡ ನೋ ।
ಟಕ್ಕೆ ಚೆಲ್ವೆಸೆದಿಲ್ಲಿಯ ಪೂಗೊಳಂ ॥ 847

---

1 ವಿತ. 2 ವಾಗಿ. 3 ದದಲ್ತೆ. 4 ರತ್ನಾಳಿಯುಂ, ರತ್ನಾದಿಕಂ. 5 ಪಡುಗುಂ. 6 ಕ. ಕ್ರೌಂಚಗಳಿಂದೆಪವಾರ ಸಂಗಳಿಂ. 7 ನಾಡೆ.

ನದಿಯೊಳ್ ಕಮಲಾದಿಗಳ್ಗೆ ॥

ವೃ ॥ ಸರಯೂನದ್ಯರವಿಂದಮಂದಮಕರಂದಸ್ಯಂದಿ ಗಂಗಾಂಬುಶೀ ।
ಕರಸಂಸಂಗಿ ಲತಾಭಿರಾಮಲಲನಾಲಾ[1]ಸ್ಯೈಕಶೈಲೂಷನ ॥
ದ್ವಿರುಹಕ್ರೋಡನಿಪಾತಿ ಮಾ[2]ಲ್ಯವದನುಪ್ರಸ್ಫೋತ್ಥಿತಂ ಯಾಮುನೋ ॥
ದರಕುಂಜಸ್ಥಿತಿ ಮೆಲ್ಲನಲ್ಲಿ ಸುಳಿಗುಂ ಬಂದೊಂದು ಮಂದಾನಿಳಂ ॥ 848

ಕಂ ॥ ಕುವಲಯವನರುಚಿಯಿಂ ಜಾ ।
ಹ್ನವಿಯ ಜಳಂ ಕರಮೆ ಕಱ್ಗಿ ತೋಱುಇದುದಂತಾ ॥
ಪ್ಲವಗಧ್ವಜಂಗೆ ಯಮುನಾ ।
ಪ್ರವಾಹಸಂಭೇದಮಾದ ತೆಱದಿಂದಾಗಳ್ ॥ 849

ಶೈಲದೊಳ್ ರತ್ನಾದಿಗಳ್ಗೆ ॥

ವೃ ॥ ಕಳಧೌತೋಚ್ಚಶಿಲೋದ್ಗತಾಂಶುವಿಲಸತ್ಪಾದಂ ಸ್ಫುಟಸ್ಫಾಟಿಕೋ ।
ಪಳಧಾ[3]ಮೋಜ್ವಳಮಧ್ಯಮಂಬುರುಹರಾಗೋದಗ್ರಪಾಷಾಣಭಾ ॥
ವಳಯೋದ್ಭಾಸಿನಿಜೋಪಕಂಠಮ[4]ಸಿತಚ್ಛಾಯಾಂತರತ್ನಪ್ರಭಾ ।
ವಿಳಮೂರ್ಧ್ವಂ ನಡೆ ನೋಡೆ ಪೋಲ್ತುದು ನಗಾಧೀಶಂ ಖಗಾಧೀಶನಂ ॥ 850

ಕಂ ॥ ಮರಕತದ ಕಲ್ಲ ಕ[5]ವಿಗಳೊ ।
ಳ್[6]ರಡಬಿಯದೆ ಕೂರ್ತ್ತ ಧೂರ್ತ್ತಸುರಮಿಥುನಂಗಳ್ ॥
ನೆರೆದಳಸುಗಲಿಸೆ ಗಿಳಿಯುಂ ।
ಪುರುಳಿಯುಮುಳಸುವುವು ದೇವಭಾಷೆಗಳಳಸಂ ॥ 851

ಅಂತಲ್ಲದೆಯುಂ ಧನದನ ।
ಗಂ ತನಗಟ್ಟದೊಡೆ ರಾಯಭಾರಿತನಂ ಬಂ ॥
ದಂತಿಪ್ಪುವಿದಱ ಕುಂಜೋ ।
ಪಾಂತದ ತ[7]ಱತಱಿಸಿ ಪೊಳೆವ ಕು[8]ಳಿಶಾಶ್ಮಂಗಳ್ ॥ 852
ಇದು ಜಾತಿ ॥

ಸೂತ್ರಂ ॥ **217** ॥

ತಮದೊತ್ತು ಮುಷ್ಟಿಸಂಗ್ರಾ ।
ಹ್ಯಮಭೇದ್ಯಂ ಸೂಜಿಗಪ್ಪೊಡಂ ತಾನೆನೆಯುಂ ॥
ಕುಮುದಪ್ರಿಯೊತಪಂ ನಾ ।
ವ್ಯಮುಜಳಗ್ರಾಹ್ಯಮೆನೆಯುಮಿಷ್ಟಮಿವಕ್ಕುಂ ॥ 853

1 ಲಾಸ ವ್ರೇಪ, ಳಸ್ವ್ಯಳ್. 2 ಮಾಳವವಧೂ. 3 ವಲ್ಗೋಜ್ವಳ. 4 ಮಿಹಿತ. 5 ಕಣಿ. 6 ಳರಬಲ್ಲದ ಕೂಡಿ ಕಾಡ್ವರ. 7 ತಳದಳಸಿ. 8 ಕುಳಿಶಾಸ್ತ್ರಂಗಳ್.

ಲಕ್ಷ್ಯಂ ॥

ತಮಕ್ಕೆ ॥

ವೃ ॥ ಪೊದೆದ ಮದವನ್ಮಾತಂಗೇಂದ್ರಾಜಿನಾಂಬರಮಂ ನಿಮಿ ।
ರ್ಚಿದಪನಭವಂ ತಾನೆಂಬಂತಾಗೆ ಪೆರ್ಚಿದಗುರ್ವಿನೊಳ್ ॥
ಪುದಿದೊದವಿನಿಂ ಸೂಚೀನಿರ್ಭೇದ್ಯಮುರ್ಪಿನಮೆಯ್ದೆ ಪ ।
ರ್ವಿದುದಸದಳಂ ಮುಷ್ಟಿಗ್ರಾಹ್ಯಂ ತಮಂ ಭುವನಾಂತಮಂ ॥ 854

ಚಂದ್ರಾತಪಕ್ಕೆ ॥

ವೃ ॥ ಜೆ[1]ಲಗಸೆದೀವಿಕೊಂಡು ಕುಡಿಯಲ್ ಮೊಗೆಯಲ್ ಕೊಡಗೊಂಡು ತಿರ್ದಿ ಬ ।
ಚ್ಚಲನೆ[2]ಳದೋಂಟದೊಳ್ ಪರಿಯಿಸಲ್ ಪಱಗೋಲ್ಗಳನಿಕ್ಕಿ ಪಾಯಿಸಲ್ ॥
ನೆಲೆಯಿನಿಸೆಂದು ನೋಡಲೊಳಪೊಕ್ಕು ಮುಳುಂಪಿಱಿದಾಡಲೀಸಲ ।
ಗ್ಗಲಿಸಿದಲಂಪಿನಿಂ ಬ[3]ಗೆದುದಂದು ಜನಂ ಘನಚಂದ್ರಿಕಾಂಬುವಂ ॥ 855

ಇದು ದ್ರವ್ಯಂ ॥

ಸೂತ್ರಂ ॥ 218 ॥

ಇರುಳೊಳ್ ಚಕ್ರಾಹ್ವ[4]ಯಯುಗ ।
ವಿರಹಾರ್ತ್ತಿ ಚಕೋರಚಂದ್ರಿಕಾಪಾನಮಿಮಿಂ ॥
ತೆರಡುಂ ಕ್ರಿಯಾತ್ಮಕಂಗಳ್ ।
ವಿರಚಿಸೆಪ[5]ಡೆಗುಂ ಪ್ರಯೋಗಗತಿಲಕ್ಷ್ಯಂಗಳ್ ॥ 856

ಲಕ್ಷ್ಯಂ ॥

ಪ್ರಥಮಕ್ಕೆ ॥

ವೃ ॥ ನೆರೆವನ್ನಂ ರವಿ ನಿಲ್ಲದ[6]ಸ್ತಗಿರಿಯುಂ ಸಾರ್ದಂ ಪ್ರಿಯಂ ಪೋಗಲಾ ।
ತುರನಾಗಿರ್ದನೆನುತ್ತು ಮತ್ತಿನನನಿ[7]ತ್ತಾತ್ಮೇಶನಂ ನೋಡಿ ಕೋ ॥
ಪರಸಾವೇ[8]ಶಮನೊಂದು ಶೋಕರಸಮುಂ ಮತ್ತೊಂದು ಕಣ್ ಕೆಯ್ಕೊಳು ।
ತ್ತಿರೆ ಕೆ[9]ಯ್ಕೊಂಡುದು ಚಕ್ರವಾಕವಧು ಕಣ್ಗೆತ್ತಂ ನದೀಲೀಲೆಯಂ[10] ॥ 857

ಬಿಸರುಹಸಖನಸ್ತಾದ್ರೀಂದ್ರಮಂ ಪೊರ್ದೆ ಪೋದಮೆ ।
ಬಿಸುಟನಿಯುನೆ ನೀನುಂ ನಿನ್ನ ಬೆಂಪನ್ನೊಳನ್ನೀ ॥
ಯುಸುವುಮಿರದೆ ಪೋಗಲ್ಕಿರ್ದುದೆಂದಿಂತೊನಲ್ಗಂ ।
ಕುಸುಮಶರಶಲಾಕಾಕೀಲಿತಾಂಗಂ ರಥಾಂಗಂ ॥ 858

1 ಜಲಗಸೆ ತೀವಿ, ಬೆಲಸಗೆ. 2 ನೆಳ್, ನೆಲ. 3 ಗಳಿಸಿದ ಘನಚಂದ್ರಿಕೆಯುಂ ಬೆಳಗಿಂಗಿದುದು. 4 ದ್ವಂದ್ವಮು. 5 ಪತುಗುಂ. 6 ನಸ್ತ. 7 ನಿಂತಾ. 8 ಶೋಕದುರಿತಾದು. 9 ಕಡೆಸ್ಪಂದುಗೆಯಚಕ್ರವಾಕವದು. 10 ಯಿಂ.

ಕಂ ॥ ಸರಸಿಜಷಂಡದ ತೆರೆಗಳ್ ।
ತೆರಳ್ವಿನಂ ಕಮಳಪತ್ರಚಯಮೆನಿತನಿತುಂ ॥
ಕೊರಗುವಿನಂ ಬಿಸುಸುಯ್ದಿಂ ।
ಬಿರಯಿಸಿದುದೊ ಚಕ್ರವಾಕಮಿಥುನಮುಮಿರುಳೊಳ್ ॥ 859

ದ್ವಿತೀಯುಕ್ತಿ ॥

ವೃ ॥ ಮನಮುನೊ[1]ನಲ್ಲುವಂ ಕಿರಣಜಾಲದಿನಂತವು ಪೋಗೆ ಮುಂ[2]ದುಗೆ ।
ಟ್ಟನಿತಜಿೊಳಟ್ಟಿಡಂಗಿದ[3]ಪನಂತದಜಿಂದೆರೆದಪ್ಪನೇಣಲಾಂ ॥
ಧನನ ಕರಂಗಳುಳ್ಳನಿತುಮಂ ತವೆ ಪೀರೆನುತುಂ ಚಕೋರಲೋ ।
ಟನೆ ಪಿರಿದ[4]ಪ್ಪ ನಲ್ಮೆವೆರಸಳ್ಕಜಿೊಳಂದೆರೆದಳ್ ಚಕೋರವಂ ॥ 860

ಇದು ಕ್ರಿಯೆ ॥

ಸೂತ್ರಂ ॥ 219 ॥

ಹಸಿತಯಶಃಪ್ರ[5]ಭೃತಿಯೊಳು ।
ಲ್ಲಸಿತಂ ಸಿತಭಾವಮಯಶದೊಳ್ ಪಾಪದೊಳಂ[6] ॥
ತಸಿತರುಚಿ ಕೋಪರಾಗ ।
ಪ್ರಸರದೊಳಾರಕ್ತವರ್ಣ್ಣಮ[7]ಭಿವರ್ಣ್ಣಸುಗುಂ ॥ 861

ಲಕ್ಷ್ಯಂ ॥

ಹಸಿತಯಶಃಪ್ರಭೃತಿಗೆ ॥

ಕಂ ॥ ಬೆಳಪ ಮುಖಚಂದ್ರನೊಳ್ ತಳ ।
ತಳಿಸುತ್ತುಂ ತೊಳಗಿ ಪೊ[8]ಳೆವ ಪಲ್ದಿಂಗ[9]ಳದೊಂ ॥
ದಳವನಳವಡಿಸಿ ಕರಮು ।
ಜ್ಜಳಿಪ ಮುಗುಳ್ನಗೆ ಪೆಡಂಗು ನೃಪನಂದನೆಯಾ ॥ 862

ವೃ ॥ ಹರಹಾಸದ್ಯುತಿಯಂ ನಿರಾಕರಿಸಿ ಗಂಗಾಸಿಂಧುಕಲ್ಲೋಲಶೀ ।
ಕರಮಂ ನಿಂದಿಸಿ ಸಿಂಧುವಾರಕುಸುಮಶ್ರೀಯಂ ಪ[10]ಳಂಚಾಡಿ ಭಾ ॥
ಸುರಚಂದ್ರಾಂಶುವಿ[11]ಕಾಸಮಂ ತೆಗಟ್ಟಿ ಮುಕ್ತಾಹಾರವಿಸ್ತಾರದಂ ।
ಬರಮಂ ಮಿಕ್ಕು ಪಳಪ್ಪುದುಜ್ವಳಯಶಂ ಶ್ರೀಗಂಡಮಾರ್ತ್ತಂಡನಾ ॥ 863

ಕಂ ॥ ನಂದನನೊಸಗೆಯುಮಾಮು[12]ಕ ।
ರಂದಕನೆಳಸಿರದೆ ಬಿ[13]ಟ್ಟು ಪೋದೊಂದಱಲಿಂ ॥
ಕುಂದದೊಡನ[14]ಲೆಯೆ ಸತಿ ಕಾ ।
ಳಿಂದಿಯು ಸುರನದಿಯು ಕೂಡಲಂ ಪೋಲ್ತಿರ್ದ್ದಳ್ ॥ 864

---

1 ನೊಜಿಲ್ಲುವಾ. 2 ಮುಟ್ಟು. 3 ಪವನಂತ, ಪನುಮಾಂಗ. 4 ದೊರಿಯುಪಲ್ಗ. 5 ಪ್ರಸರ. 6 ಳ । ಕುಟಿತ.
7 ಮಾದುವರ್ಣ್ಣೀಕಯಂ, ಮದುವರ್ಣ್ಣಕಯಶಂ, ಮದುವರ್ಣ್ಣೀಕಶಂ. 8 ಬೆಳಪ. 9 ಗಳಗೊಂ. 10 ಪಳಂಚಲವಿಭಾ.
11 ವಿಳಾಸ. 12 ಮರ ! ಕಂದಕ. 13 ಬಿಸುಟುಪೋದೊಡೆಯಱಲಿಂ. 14 ವಳಯಿ.

ಅಯಶಃಪಾಪಂಗಳ್ ॥

ಕಂ ॥ ವಿಳಸದಮೃತಾಂಶುಮಂಡಲ ।
ದೊ[1]ಳ್ ಕಱೆಯಂತಂತೆ ನೆಗೞೆ ದುರ್ಯ್ಯಶದಿಂದಂ ॥
ಖಳನಾನೃಪಾತ್ಮಜಂ ನಿ ।
ರ್ಮ್ಮಳನಿಜವಂಶಕ್ಕೆ ಮಾಡಿದಂ ಮಳಿನತೆಯಂ ॥ 865

ದೊರೆಕೊಂ[2]ಡ ಪಾಪಲೇಶ್ಯಾ ।
ಪರಿಣಾಮಮೆ ಕೃ[3]ಷ್ಣವರ್ಣ್ಣಮಂ ಪುಟ್ಟಿಸಿದಂ ॥
ತಿರೆ ಕಡುಗಲಿಮುರವಂದಿರ ।
ಪ[4]ರುಷಸ್ವರಪ[4]ರುಷನಯನಪ[5]ರುಷಶರೀರರ ॥ 866

ಕೋಪರಾಗಂಗಳ್ ॥

ಕಂ ॥ ಅವತಂಸಾಶೋಕನ[6]ವ ।
ಪ್ರವಾಳರುಚಿ ಮುಳಿಸೆ ರೂಪುಗೊಂಡವೊ[7]ಲೆರಡುಂ ॥
ಕಿವಿಗಳೊಳಮಾ[8]ಯುಮಂ ಪ ।
ರ್ಚ್ಚುವ ಕ[9]ಲ್ಪಿಯ ತೇಜದಿನೆಸದುದಾಸ್ಥಾಯಿಕೆಯೊಳ್ ॥ 867

ಕುಂಕುಮದ ಕ[10]ದಡುನೀರಂ ।
ಭೋಂಕನೆ ಮೇಲೊತ್ತೆ ನೃ[11]ಪತಿ ಮೆಯ್ಯಿಂ ರಾಗಂ ॥
ತಾಂ ಕರಮೆ ತೀವಿ ಪೊಱಗೆ ತು ।
ಳುಂಕುವವೋಲ್ ತೋಱೆ ನೀಱೆ ಕಣ್ಗೆಸೆದಿರ್ದ್ದಳ್ ॥ 868
ಇದು ಗುಣಂ ॥

ಇದು ಕವಿಸಮಯದೊಳ್ ಅಸದಾಖ್ಯಾತಿಪ್ರಕರಣಂ ಪ್ರಥಮಂ ॥

ಪದಕೀರ್ತ್ತನಪ್ರಕರಣಂ.

ಸೂತ್ರಂ ॥ 220 ॥

ಅಸುಕೆಯ ಕುಜದೊಳ್ ಫಳಮಂ ।
ವಸಂತದೊಳ್ ಜಾತಿಕುಸುಮಮಂ ಚಂದನದೊಳ್ ॥
ಕುಸುಮಫಲಮೆಂಬಿವಂ ಬ[12] ।
ಣ್ಣಿಸದಿರ್ಪ್ಪುದು ತಾಮವಲ್ಲಿ ಸಂಭವಿಸುವೊಡಂ ॥ 869

---

1 [illegible]. 2 ಕೊಂಡು ಪಾಪಲೇಶ್ಯ. 3 [illegible]. 4 ಪುರುಷ. 5 ಪಕ್ಷ, ಪುರುಷ. 6 [illegible]. 7 [illegible]. 8 [illegible]. 9 ಕಲ್ಪಿಪ. 10 [illegible]. 11 ನೃಪನ. 12 ಪ.

ಲಕ್ಷ್ಯಂ ॥

ಕಂ ॥ ಕುಸುಮಂಕಿಸಲಯಮೆ ಲೋಕ।
ಕ್ಕೆಸೆವುತ್ತಂಸಾವತಂಸಮೆನೆ ಸಾಲದೆ ಸಂ ॥
ದಸುಕೆಗೆ ನಿಸ್ಸಾರಫಲ ।
ಪ್ರಸೂತಿ ಮತ್ತಂತದಾದೊಡೇನಾಗದೊಡೇಂ ॥ 870

ಎನಿತು ಸುಮನಸ್ಸಮುನ್ನತಿ ।
ತನಗಾದೊಡಮಭಿವಿನೂತಜಾತಿವಿಕಾಸ ॥
ಕ್ಕೆನಿತೆಡೆಗುಡದುದಱಿಂ ಕುಲ ।
ಜನದ ವಿಭೂತಿಯನೆ ಸುರಭಿಗಮಯಂ ಪೋಲ್ಕುಂ ॥ 871

ಬಿದಿವಸದೆ ಕುಸುಮಫಲಮಿ ।
ಲ್ಲದಿರ್ದ್ದೊಡಂ ತನ್ನದೊಂದು ಮೆಯ್ಯಿಂದಂ ಲೋ ॥
ಕ[1]ದ ನೇದೆಯೆಲ್ಲಮಂ ಕಿಡಿ ।
ಸಿದಪುದು ಚಂದನಮೆ ವಂದ್ಯಜನ್ಮಂ ಕುಜದೊಳ್ ॥ 872
ಇದು ಜಾತಿ ॥

ಸೂತ್ರಂ ॥ 221 ॥

ಸಿತಪಕ್ಷದೊಳುಳ್ಳೊಡಮಂ ।
ಧೃತಮಸಮಂ ಕೃಷ್ಣಪಕ್ಷದೊಳ್ ಚಂದ್ರಿಕೆಯಂ ॥
ಕೃತಮತಿಗಳ್ ಕವಿಮಾರ್ಗ್ಗ ।
ಶ್ರಿತಗತಿಗಳ್ ಪೇೞದಿರ್ಕ್ಕದೆಂ[2]ತುಂ ಕೃತಿಯೊಳ್ ॥ 873

ಲಕ್ಷ್ಯಂ ॥

ಕಂ ॥ ಇಡಿದಿರೆ ಗುಹಾಂಧಕಾರಂ ।
ಪೊಡರ್ವೆಸೆದಿರೆ ಚಂದ್ರಕಾಂತರುಚಿ ನಗದೋೞೊಂ ॥
ದೆಡೆಗಳ್ ಪೋಲ್ತಪ್ಪುವದೊಂ ।
ದೆಡೆಯೊಳ್ ನೆಲಸಿರ್ದ್ದ ಕಾಳಮಂ ಜೊನ್ನಮುಮಂ ॥ 874
ಇದು ದ್ರವ್ಯಂ ॥

ಸೂತ್ರಂ ॥ 222 ॥

ದಿವಸದೊಳಸಿತಾಬ್ಜವಿಕಾ ।
ಸವುಮಂ ಶೇಫಾಳಿಕಾಶ್ರುಬಿಂದುಪರಿಭ್ರಂ ॥
ಶವುಮಂ ಪೇೞಲ್ಕಾಗದು ।
ಸವಮಾಯಂ ಸಮನಿಸಿರ್ಪ್ಪೊಡಂ ಸತ್ಕೃತಿಯೊಳ್ ॥ 875

1 ಕದಳಿಗಾದ ಪ್ರದೆಯುಂ. 2 ರಂಗಂ.

ಲಕ್ಷ್ಯಂ ॥

ವೃ ॥ ಪಗಲ್ ರತಾರಂಭದೊಳ್ದಿರ್ಗಿರುಳ್ ಕನ ।
ಲ್ಪಗಲ್ವ ಚಕ್ರಾಹ್ವಯುಗಂಗಳೆಳ್ಚಿಱಂ ॥
ವೊಗಕ್ಕೆ ತಪ್ಪರ್ಗಂತ[ಲ]ರಲ್ ತಗುಳ್ದುವೆ ।
ಲ್ಲಿಗಂ ರಜಂ ಪೊಣ್ಮೆ ಮಹೋತ್ಪಳಾದಿಗಳ್ ॥ 876

ಕಂ ॥ ಸಸಿಯೆಱ್ತರವಂ ಕಂ[1]ಡೊಂ ।
ದೊಸಗೆ ಮನಕ್ಕಧಿಕವಾಗೆ ಕೇಘಾಳಿಕೆ ಸಂ ॥
ತಸದಿಂದಿಕ್ಕಿದ ಬಾಷ್ಪ ।
ಪ್ರಸರಮನೀಱಿಸಿದುವು ನಿ[2]ಶಿಯೊಳಲರ್ಗ್ಗಕ್ಕಲರ್ಗಳ್* ॥ 877

ಇದು ಕ್ರಿಯೆ ॥

ಸೂತ್ರಂ ॥ 223 ॥

ತತದಶನದ್ಯುತಿಯೊಳರ ।
ಕ್ತತೆಯುನೆ ವಿಕಸತ್ಪ್ರಿಯಂಗುಸು[3]ಮನಸದೊಳಪೀ ॥
ತತೆಯುನೆ ಪಂಕಜಮುಕುಳ ।
ಪ್ರತತಿಯೊಳ್[4]ಹರಿತ್ತ್ವವೃತ್ತಿಯುನೆ ಪೇಱ್ಗೆ ಬುಧರ್ ॥ 878

ಲಕ್ಷ್ಯಂ ॥

ದಶನಾರಕ್ತತೆಗೆ ॥

ವೃ ॥ ತೊಳಪ ದಂತಮರೀಚಿಸಂತತಿ ಪರ್ವಿ ಬಳ್ವಳನೀಳ್ದು ಗೊಂ ।
ದಳಿಸಿ ಬಾಳಮೃಗಾಂಕದೀಧಿತಿಜಾಳಮಂಜರಿಗಳ್ ಜಗ ॥
ದ್ವಳಯಮಂ ಬೆಳಪಂತೆ ಬಂದು ಸಭಾಂತರಾಳಮನೆಲ್ಲಮಂ ।
ಬೆಳಗೆ ಭೂವಳಯಾಧಿಪಂ ನುಡಿಗುಂ ಸ್ವಚಿತ್ತಗತಾರ್ಥಮಂ ॥ 879

ಕಂ ॥ ಕುಂದದಳಧವಳನೃಪದಶ ।
ನೇಂದುಜ್ಯೋತ್ಸ್ನಾಮೃತಾಚ್ಛಜಲಪರಿಷೇಕಂ ॥
ಮಾಂದಿಸುವಂತಾದುದು ನೃಪ ।
ನಂದನೆಯೆರ್ದೆಯೊಳಗೆ ಬಳೆದ ಶೋಕಾನಳನಂ ॥ 880

---

1 ಕಂಡೊಗೆ. 2 ನಿಶಿ. * ಈ ಪದ್ಯವಾದಮೇಲೆ ಒಂದು ಪ್ರತಿಯಲ್ಲಿ ಮಾತ್ರ ಕೆಳಗೆ ಬರೆದಿರುವ ಸೂತ್ರವು ಸೇರಿಯುತ್ತದೆ;—

ಆನೆ ಬಿದಿರ್ ಪಂದಿ ಮುಗಿಲ್ । ಪಿಣ್ಣಂಬುಧಿ ಪಾವು ಶಂಖವೆಂಬೀಯೆಂಟುಂ ॥
ಸ್ಥಾನಂಗಳಲ್ಲಿ ಪುಟ್ಟುಗು । ಮೀನಕ್ಷಿ ಕೇಳದು ಸೂಕ್ತ ಮೌಕ್ತಿಕರತ್ನಂ ॥

ಇದು ಪರಕ್ರಿತ್ರನ ಪ್ರಕರಣಕ್ಕೆ ಸಂಬಂಧಿಸುವುದಿಲ್ಲವಾದುದರಿಂದ ಇಲ್ಲಿ ಬರೆದಿದೆ. 3 ಕುಸುಮದೊಳಪಿಂ. 4 ಹರಿತ್ವಾಯುವೃತ್ತಿ ಪೇಳ್ಗೆ ಬುಧರ್ಕ್ಕಳ್, ಆಹರಿತ.

ಪ್ರಿಯಂಗುಕುಸುಮಾಪೀತತ್ವಕ್ಕೆ ||

ಕಂ || ಇವಳೀಪ್ರಿಯಂಗುಕುಸುಮ |
ಚ್ಛವಿಲಸಿತಶ್ಯಾಮಕುಚತಟಾಂತದೊಳೊಪ್ಪಿ ||
ರ್ಪ್ಪವು ತಾರಹಾರರುಚಿ ನೀ |
ಳವೇದಿಕಾಂತರದೊಳೆಸೆವ ಪೂವಲಿಗಳವೊಲ್ || 881

ಪದ್ಮಕುಟ್ಮಳಾಹರಿತತ್ವಕ್ಕೆ ||

ವೃ || ತೆರೆಯ ಪೊಯ್ಲೊಳೆ ತೆರಳ್ದು ಬರ್ಪ್ಪವಿ |
ಸ್ಫುರಿತಸಂಬನಿವಹಂ ಪಯೋಧಿಯೊಳ್ ||
ಕರಮೆ ಚೆಲ್ವೆಸೆದು ಕಣ್ಗೆ ತೋರ್ಕ್ಕುವಂ |
ಬುರುಹಕುಟ್ಮಳಕುಳಂಗಳಂತೆವೊಲ್ || 882
ಇದು ಗುಣಂ ||

ಇದು ಕವಿಸಮಯದೊಳ್ ಸದಕೀರ್ತ್ತನಪ್ರಕರಣಂ ದ್ವಿತೀಯಂ ||

ನಿಯಮಾರ್ತ್ಥಪ್ರಕರಣಂ.

ಸೂತ್ರಂ || 224 ||

ಜಳಧಿಯೊಳ್ ತಿಮಿತಿಮಿಂಗಿಳ |
ಗಿಳಮಕರಪ್ರಕರಶಂಖಸಂಭವಮುಕ್ಕುಂ ||
ಮಳರಹಿತತಾಮ್ರಪರ್ಣ್ಣಿಗೆ |
ಜಳದೊಳ್ ಶುಕ್ತಿಜಮಣಿಪ್ರಕಾಂಡಪ್ರಭವಂ || 883

ಲಕ್ಷ್ಯಂ ||

ತಿಮಿತಿಮಿಂಗಿಳಾದಿಗಳ್ಗೆ ||

ವೃ || ಮಿಸುವರುಣಧ್ವಜಂಗಳ ನೆಱಲ್ಗಳನೊಂದೆರೆಗೆತ್ತು ವಾರ್ದ್ಧಿಯೊಳ್ |
ಪೊಳೆವೆಳವಾಳಗಳ್ ಕರ್ದುಕೆ ಬಾಳೆಗಳಂ ತಿಮಿ ನುಂಗೆ ನುಂಗಿದಾ ||
ಗಳೆ ತಿಮಿಯಂ ತಿಮಿಂಗಿಳನಡಂಗುವಿನಂ ತವೆ ನುಂಗೆ ತತ್ತಿಮಿಂ |
ಗಿಳಮುಮನಾತಿಮಿಂಗಿಳಗಿಳಂ ತವೆ ನುಂಗಿದುದೊಂದು ತಾಣದೊಳ್ || 884

ಕರಿಮಕರಂಗಳುಚ್ಚಳಿತಭಂಗುರತುಂಗತರಂಗಮಾಲೆಯುಂ |
ಕರರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ ||
ಕರದೊಳೆ ನಾಂದು ನೇಡುಗೊಳುತುಂ ಸುೞಿದೂದುವ ಗಾಳಿ ಬರ್ಪ್ಪ ದೇ
ವರ ವರಕಾಂತೆಯರ್ಕ್ಕಳ ಪರಿಶ್ರಮಮುಮಂ ಕಳೆದತ್ತು ವಾರ್ದ್ಧಿಯೊಳ್ || 885

ವೃ ॥ ನೊರೆಯಿವಲ್ಲವು ತಳ್ತ ಶಂಖದ ಬಳ್ಳಿಗಳ್ ಬಡಬಾನಲಂ ।
ಕುರವಿವಲ್ಲವು ರತ್ನದೀಧಿತಿಗಳ್ ತರಂಗಮಿವಲ್ಲವು ॥
ಸ್ಫುರಕುಳಾಚಳಪಙ್ಕ್ತಿಗಳ್ ಜಳಶೀಕರಂಗಳಿವಲ್ಲವು ।
ಪರೆದ ಮುತ್ತುಗಳೆಂಬ ಶಂಕೆಯನಾಗಿಕುಂ ಮಕರಾಕರಂ ॥ 886

ತಾಮ್ರಪರ್ಣಿಯೊಳ್ ಶುಕ್ತಿಜಕ್ಕೆ ॥

ಕಂ ॥ ಜಿನರಾಜಶಿಶುಗೆ ಧರೆಯೊಳ್ ।
ಜನಿಯಿಸಲಂತಾನರೇಂದ್ರಪ[1]ತ್ನಿಯ ದೊರೆ ನೋ ॥
ತನಶುಕ್ತಿಜಕ್ಕೆ ತಾಯ್ವನೆ ।
ಯೆನಿಸಲ್ ದೊರೆ ತಾಮ್ರಪರ್ಣಿ ತಾನೊಂದೆ ವಲಂ ॥ 887

ಇದು ಜಾತಿ ॥

ಸೂತ್ರಂ ॥ 225 ॥

ಹಿಮವದಗೇಂದ್ರಮೆ ಭೂರ್ಜ್ಜ ।
ದ್ರುಮರಾಜಿಗೆ ಜನ್ಮಭೂಮಿ ಮಲಯಾದ್ರಿಯೆ ಬಂ ॥
ಹಿಮವಚ್ಚಂದನಮಹಿರುಹ ।
ಸಮಿತಿಗೆ ಕುಲಗೇಹಮಿತರದೊಳ್ ಪುಟ್ಟುವೊಡಂ ॥ 888

ಲಕ್ಷ್ಯಂ ॥

ಪ್ರಥಮಕ್ಕೆ ॥

ಕಂ ॥ ಪೆರಸುಲಿವ ಹಿಮವದವನೀ ।
ಧರಮೆಂಬುರಗಾಧಿಪತಿಯ ನಿರ್ಮೋಕದೊಳೇಂ ॥
ದೊರೆಯಾದುವೊ ವಿ[2]ದ್ರುತಜ ।
ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್ ॥ (ಶ. ಮ. ದ. 119).

ಆಮಂತ್ರಣೈಕವಚನದಲ್ಲಿ 'ಮರ' ಎಂಬ ಲಿಂಗದ ಮುಂದೆ ಆಮಂತ್ರಣಾರ್ಥದ ಏಕವಚನದ 'ಮ್' ಇರೆ, ಆಮಂತ್ರಣೇ ಪ್ರಥಮೈಕವಚನಸ್ಯ ಲೋಪಃ (70)—ಸಂಬೋಧನೆಯಲ್ಲಿ ಪ್ರಥಮೈಕವಚನದ ಮಕಾರಕ್ಕೆ ಲೋಪಮಕ್ಕುಂ—'ಮರ' ಎಂದಾಯ್ತು. ಏತ್ವಂ ವಾ ತದಂತಸ್ಯ (71)—ಆಮಂತ್ರಣಾರ್ಥದಲ್ಲಿ ವರ್ತಿಸುವ ಪ್ರಥಮಾವಿಭಕ್ತಿಯ ಏಕವಚನದ ಮಕಾರಕ್ಕೆ ವಿಕಲ್ಪದಿಂ ಏಕಾರಮಕ್ಕುಂ— 'ಮರಮೇ' ಎಂದಾಯ್ತು. ಅನುಸ್ವಾರಸ್ಯ ಚ (53)—ನಪುಂಸಕಲಿಂಗದಲ್ಲಿ ಪ್ರಥಮೈಕವಚನದ ಮಕಾರಕ್ಕೆ ಅನುಸ್ವಾರಮಾಗೆ, ಆಮಂತ್ರಣಾರ್ಥದಲ್ಲಿ ವರ್ತಿಸುವ ಏತ್ವಂ ವಿಕಲ್ಪದಿಂ ಆ ಸೊನ್ನೆಗೆ ಪರಮಾಗೆ, ಆ ಸೊನ್ನೆಗಂ ಮಕಾರನಕಾರಂಗಳಪ್ಪುವು—'ಮರನೇ' ಎಂದುಮಾಯ್ತು. ಸೂತ್ರದಲ್ಲಿಯ ಚ ಶಬ್ದದಿಂ ವಕಾರಮುಮಪ್ಪುದು. ಇವಕ್ಕೆ ಪೂರ್ವಶಿಷ್ಟಕವಿಪ್ರಯೋಗಂ—

ನಂ[1]ದನಮೇ ಲತಾಭವನಮೇ ಕೊಳನೇ ತಳಿರೇ ಮದಾಳಿಯೇ ।
ಚಂದನವೃಕ್ಷಮೇ ಕುಳಿರ್ವ ತಣ್ಬುೞಿಲೇ ಗಿಳಿಯೇ ವಸಂತನೇ ॥
ನೊಂದಪನಾರ್ದ್ರಱಿಲ್ದಪೆನಡರ್ದ್ದಱಿಬಿ ನಟ್ಟಲರಂಬ ಗಾಯದಿಂ ।
ಬೆಂದಪೆನಿಂದು ತಂದು ಕುಡು ನಾಡೆಯುಮಾಕಮಲಾಯತಾಕ್ಷಿಯಂ ॥

ದೀರ್ಘೋಕ್ತಿರ್ನಯಸೇನಸ್ಯ (73)—ನಯಸೇನಾಚಾರ್ಯನ ಮತದಿಂ ಸಂಬೋಧನೆಯೊಳ್ ದೀರ್ಘಾದೇಶಮಕ್ಕುಂ.

ಉ॥ ಎ[2]ಲೆ ಗಣಪ, ಸುಖಸಂಪದಮಂ ಮಾೞ್ಪುದೆಮಗೆ ಪರಮಜಿನೇಂದ್ರಾ.

ಈ ಸಂಬೋಧನೆಗೆ ಅನ್ಯವ್ಯಾಕರಣಲಕ್ಷಣಸೂತ್ರಂ—

ಎಲ್ಲಯುಮಾಮಂತ್ರಣದೊಳ್ ।
ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್ ॥
ನಿಲ್ಲದೆ ವಿಕಲ್ಪಮುಖದಿಂ ।
ಸೊಲ್ಲಿಸುವರ್ ಪ್ರಸ್ವದೀರ್ಘಕಾಕುಗಳೆರಡಂ ॥ (ಶ. ಮ. ದ. 123).

---

1 ಶ. ಮ. ದ. ಪುಟ 152. 2 ಅದೇ ಪುಟ 151.

ಈ ಕರ್ಣಾಟಕವ್ಯಾಕರಣದೊಳ್ ವಿಕಲ್ಪವಾಗಿ ಸಪ್ತವಿಭಕ್ತಿಗಳ ಪ್ರಥಮೈಕವಚನಾದಿಗಳ್ಗೆ ತೋಱಿಸಿದನಿತಕ್ಕಂ ಉದಾಹರಣಂ :—

ಮರಂ ;
ಮರಮಂ, ಮರನಂ ;
ಮರದಿಂ, ಮರದಿಂದಂ, ಮರದಿಂದೆ, ಮರದೆ ;
ಮರಕೆ, ಮರಕ್ಕೆ ;
ಮರದತ್ತಣಿಂ, ಮರದತ್ತಣಿಂದಂ, ಮರದತ್ತಣಿಂದೆ ;
ಮರದ, ಮರದಾ ;
ಮರದೊಳ್, ಮರದಲ್ಲಿ ;
ಮರ, ಮರಮೇ, ಮರನೇ, ಮರವೇ.

ಮತ್ತಮಯುಂ ವಿಭಕ್ತಿಗಳ ಸಹಜ [ರೂಪವ] ನಿತಕ್ಕಂ ಉದಾಹರಣಂ—
ಮರಂ, ಮರಮಂ, ಮರದಿಂ, ಮರಕ್ಕೆ, ಮರದತ್ತಣಿಂ, ಮರದ, ಮರದೊಳ್.

ಈ ವಿಭಕ್ತಿಗಳ ಲಕ್ಷಣದ ಕಂದಂ—

ಮ[1]ರನಿರ್ದುದು ಮರನಂ ಕಡಿ ।
ಮರದಿಂ ಮಾಡಾನೆಯಂ ಮರಕ್ಕೆಱೆ ನೀರಂ ॥
ಮರದತ್ತಣಿನೆಲೆಯುದಿರ್ದುದು ।
ಮರದದು ಪಣ್ ಮರದೊಳಿರು ತಳಿತ್ತಿರು ಮರನೇ ॥

'ಹರಿ' ಎಂಬ ಲಿಂಗದ ಮುಂದೆ ಪ್ರಥಮೈಕವಚನದ ವಿಭಕ್ತಿಯು 'ಮ್' ಇರೆ, ಅನ್ಯಸ್ಮಾಲ್ಲೋಪಃ (46)—ಅಕಾರಾಂತಮಲ್ಲದುೞಿದ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರಮಾದ ಪ್ರಥಮೈಕವಚನದ ಮಕಾರಕ್ಕೆ ಲೋಪಮಕ್ಕುಂ—'ಹರಿ' ಎಂದಾಯ್ತು. 'ಹರಿ + ಅಮ್' ಎಂದಿರ್ದಲ್ಲಿ, ಆದಿವರ್ಣೈಕಾರೇಭ್ಯೋ ಯಃ (22) ಎಂಬ ಸೂತ್ರದಿಂ ಯತ್ವಮಾಗಿ—ಹರಿಯಂ, ಹರಿಯಿಂ. ಚತುರ್ಥಿಯಲ್ಲಿ 'ಹರಿ+ಕೆ' ಎಂದಿರ್ದಲ್ಲಿ, ಶೇಷಾತ್ತೃತೀಯತ್ವಂ (64)—ಅಕಾರಾಂತಮಲ್ಲದುೞಿದ ಲಿಂಗದತ್ತಣಿಂ ಪರಮಾದ ಚತುರ್ಥೀವಿಭಕ್ತಿಯ ಕೆಕಾರಕ್ಕೆ ಅಕವರ್ಗದ ತೃತೀಯಾಕ್ಷರಮಪ್ಪ ಗಕಾರಮಕ್ಕುಂ—ಹರಿಗೆ, ಹರಿಯತ್ತಣಿಂ, ಹರಿಯ, ಹರಿಯೊಳ್. ಇದಱಂತೆ ಕರಿ, ಬಿದಿ, ನದಿ, ಮೊದಲಾದ ಶಬ್ದಂಗಳ ಸಿದ್ಧಮಪ್ಪುವು.

'ವಿಧು' ಎಂಬ ಲಿಂಗದ ಮುಂದೆ ಪ್ರಥಮೈಕವಚನದ ವಿಭಕ್ತಿಯು 'ಮ್' ಇರೆ, ಅನ್ಯಸ್ಮಾಲ್ಲೋಪಃ (46) ಎಂಬ ಸೂತ್ರದಿಂ ಮಕಾರಕ್ಕೆ ಲೋಪಮಾಗಿ 'ವಿಧು' ಎಂದಾಯ್ತು. 'ವಿಧು + ಅಮ್' ಎಂದಿರೆ, ವ್ರೋ ವ್ಯವರ್ಣಾಭ್ಯಾಂ (24) ಎಂಬ ಸೂತ್ರದಿಂ ವಕಾರಾಗಮಮಾಗಿ—ವಿಧುವಂ. ಉದಂತಾತ್ತೃತೀಯಾದಿಷ್ವನಾಗಮೋ ಬಹುಳಂ

[1] ಕ. ಮ. ದ. ಸೂ 115.

(54)—ಉಕಾರಾಂತವಪ್ಪ ಲಿಂಗದತ್ತಣಿಂ ತೃತೀಯೆ ಮೊದಲಾದ ವಿಭಕ್ತಿಗಳ್ ಪರವಾಗೆ ವಿಕಲ್ಪದಿಂದೆ ಇನಾಗಮಮಕ್ಕುಂ—ವಿಧುವಿನಿಂ, ವಿಧುವಿಂಗೆ, ವಿಧುವಿನತ್ತಣಿಂ, ವಿಧುವಿನ, ವಿಧುವಿನೊಳ್. ಈ ಪ್ರಕಾರದಿಂ ಮಧು, ವಧು, ಮಡು, ಗಿಡು, ಮೊದಲಾದುವು ಸಿದ್ಧಮಪ್ಪುವು.

ಭ್ರಾತೃ, ಮಾತೃ, ಸವಿತೃ; ಕೆಱೆ, ಪೆಱೆ, ತೊಱೆ, ಬಾಲೆ, ಮಾಲೆ; ತೋಳ್, ಬಾಳ್, ಕೋಳ್; ಎಂಬೀಸ್ವರಾಂತವ್ಯಂಜನಾಂತಂಗಳಪ್ಪ ಲಿಂಗಂಗಳತ್ತಣಿಂ ಪರವಾದ ವಿಭಕ್ತಿಗಳಂ ಪೂರ್ವಾಪರಲಕ್ಷಣಸೂತ್ರಂಗಳಿಂ ಪ್ರಕೃತಿಪ್ರತ್ಯಯಂಗಳಂ ನಿಱಿಸಿ ಸಿದ್ಧಂಮಾೞ್ಕೆ.

ಸೂ ॥ ದಿತ್ವಬಹುತ್ವಯೋರ್ಗಳಾದೌ ॥ 40 ॥

ವೃ ॥ ತಾಸಾಂ ವಿಭಕ್ತೀನಾಮಾದೌ ದಿತ್ವಬಹುತ್ವವಿಷಯೋ ವಿವಕ್ಷಿತೇ ಗಳಾಗಮೋ ಭವತಿ ॥

ಉ ॥ ದ್ವಿತ್ವೇ—ಕಣ್ಗಳ್, ಕಣ್ಗಳಂ, ಕಣ್ಗಳಿಂ, ಕಣ್ಗಳ್ಗೆ, ಕಣ್ಗಳತ್ತಣಿಂ, ಕಣ್ಗಳ, ಕಣ್ಗಳೊಳ್.

ಬಹುತ್ವೇ—ಕುರುಳ್ಗಳ್, ಕುರುಳ್ಗಳಂ, ಕುರುಳ್ಗಳಿಂ, ಕುರುಳ್ಗಳ್ಗೆ, ಕುರುಳ್ಗಳತ್ತಣಿಂ, ಕುರುಳ್ಗಳ, ಕುರುಳ್ಗಳೊಳ್.

ಟೀ ॥ ಈ ಕರ್ಣಾಟಕಭಾಷೆಯೊಳ್, ದ್ವಿತ್ವಬಹುತ್ವಯೋಃ=ದ್ವಿವಚನಬಹುವಚನಂಗಳೊಳ್. ಆದೌ=ವಿಭಕ್ತಿಯ ಮೊದಲಲ್ಲಿ. ಗಳ್=ಗಳಾಗಮಮಕ್ಕುಂ.

'ತೊಡೆ' ಎಂಬ ಲಿಂಗದ ಮುಂದೆ ಗಳಾಗಮಮಾಗಿ 'ತೊಡೆ+ಗಳ್' ಎಂದಿರೆ, ಅನ್ಯಸ್ಮಾಲ್ಲೋಪಃ (46) ಎಂಬ ಸೂತ್ರದಿಂ ಮಕಾರಕ್ಕೆ ಲೋಪಮಾಗಿ—ತೊಡೆಗಳ್, ತೊಡೆಗಳಂ, ತೊಡೆಗಳಿಂ. ಶೇಷಾತ್ತೃತೀಯತ್ವಂ (64) ಎಂಬ ಸೂತ್ರದಿಂ ಕಕಾರಕ್ಕೆ ಗಕಾರಮಾಗಿ—ತೊಡೆಗಳ್ಗೆ. ತೊಡೆಗಳತ್ತಣಿಂ, ತೊಡೆಗಳ, ತೊಡೆಗಳೊಳ್. ಈ ತೆಱದಿಂದೆಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು. ದ್ವಿವಚನದ ಗಳಾಗಮಕ್ಕೆ ಪ್ರಯೋಗಂ—

ತೊ[1]ಡೆಗಳ್ ರಂಭಾಸ್ತಂಭದ ।
ಗಿಡುಗಳ್ ಕಣ್ಗಳ್ ಮನೋಜವೀರನ ನೇಣ್ಗಳ್ ॥
ನಿಡುದೋಳ್ಗಳ್ ದಿಕ್ಕರಿಕರ ।
ಮೊಡನಾಡಿಗಳನಿಸಿ ಮೆಱೆವುದಾತನ ರೂಪಂ ॥

ಬಹುವಚನಕ್ಕೆ—ಕೊಳಗಳ್, ಕೊಳಗಳಂ, ಕೊಳಗಳಿಂ, ಕೊಳಗಳ್ಗೆ, ಕೊಳಗಳತ್ತಣಿಂ, ಕೊಳಗಳ, ಕೊಳಗಳೊಳ್.

ಕೊ[2]ಳಗಳ್ ದಳಿತಾಬ್ಜಂಗಳ್ ।
ದಳಿತಾಬ್ಜಂಗಳ್ ಸಮೃದ್ಧಮಧುಗಳ್ ಮಧುಗಳ್ ॥
ಚಳದಳಿಕುಳಾಕುಳಂಗಳ್ ।
ವಿಳಸದಳಿಪ್ರತತಿ ಮಧುರವಿರುತಿಯೆ ಬನದೊಳ್ ॥

1 ಕ. ಮ., ದ. ಪುಟ 117. 2 ಕಾವ್ಯಾವಲೋಕನ, ಪದ್ಯ 623.

ಸೂ ॥ ಸರ್ವನಾಮಗುಣವಚನಾನಾಮವು ತದಂತೇ ॥ 41 ॥

ವೃ ॥ ಸರ್ವನಾಮ್ನಾಂ ಗುಣವಚನಾನಾಂ ಚ ದ್ವಿತ್ವಬಹುತ್ವವಿಷಯೇ ವಿವಕ್ಷಿತೇ ತೇಷಾಮಂತೇ ವಿಭಕ್ತಿಷು ಪರಭೂತಾಸು ಅವು ಭವತಿ ॥

ಉ ॥ ಸರ್ವನಾಮ್ನಿ—ಎಲ್ಲವು, ಎಲ್ಲವಂ, ಎಲ್ಲವಱಿಂ, ಎಲ್ಲವರ್ಕ್ಕೆ, ಎಲ್ಲವಱತ್ತಣಿಂ, ಎಲ್ಲವಱ, ಎಲ್ಲವಱೊಳ್.

ಗುಣವಚನೇ—ಇನಿಯುವು, ಇನಿಯುವಂ, ಇನಿಯುವಱಿಂ, ಇನಿಯುವರ್ಕ್ಕೆ ಇತ್ಯಾದಿ. ಪಿರಿಯವು, ಪಿರಿಯುವಂ, ಪಿರಿಯುವಱಿಂ ಇತ್ಯಾದಿ.

ಪ್ರ[1]ಕೃತತ್ವಾತ್ ಕ್ವಚಿನ್ನ ಳಪಿ. ಉ ॥ ನೀಂಗಳ್.

ಟೀ ॥ ಸರ್ವನಾಮಗುಣವಚನಾನಾಂ = ಸರ್ವನಾಮಗುಣವಚನಂಗಳ್ಗೆ. ದಿತ್ವಬಹುತ್ವಂ ನುಡಿಯಲ್ವೇಡಿದೊಡೆ, ತದಂತೇ = ಅವಱ ಅಂತದೊಳ್. ಅವು = ಅವು ಪ್ರತ್ಯಯಮಕ್ಕುಂ.

ಸರ್ವನಾಮಗುಣವಚನಂಗಳಾವುವು ಎಂದೊಡೆ—

ಅದುವಿದುವುದುವಾವುದುವೆ ।
ಲ್ಲದು ಪೆಱತೇಱ ಪೆಱದೆನಿಪ್ಪ ಶಬ್ದಂಗಳ್ ತ ॥
ಪ್ಪದೆ ಸರ್ವನಾಮಮಕ್ಕುಂ ।
ವಿದಗ್ಧರಿದನಱಿದು ನಿಲಿಕೆ ಲಿಂಗಸ್ಥಳದೊಳ್ ॥ (ಶ. ಮ. ದ. 78).

ಒಳ್ಳಿತು ಮೆಲ್ಲಿತು ಬೆಟ್ಟಿತು ।
ತೆಳ್ಳಿತು ಬಸಿದಸಿದು ಕಡಿದು ನಿಡಿದಿನಿದೆಂಬಂ ॥
ತುಳ್ಳುವು ತು ದು ಕಡೆಯೊನೆ ಕೆ ।
ಯ್ಕೊಳ್ಳಂ ಗುಣವಾಚಿ ಮೇಣ್ ತುಕಾರಂ ದ್ವಿತ್ವಂ ॥ (ಶ. ಮ. ದ. 77).

ಸರ್ವನಾಮದಲ್ಲಿ ರೂಪಸಿದ್ಧಿಯಪ್ಪ ಕ್ರಮಂ—

'ಎಲ್ಲದು' ಎಂಬ ಲಿಂಗದ ಅಂತಕ್ಕೆ, ಸರ್ವನಾಮಗುಣವಚನಾನಾಮವು ತದಂತೇ (41) ಎಂಬ ಸೂತ್ರದಿಂ ಅವುಪ್ರತ್ಯಯಮಾಗಿ 'ಎಲ್ಲದು + ಅವು' ಎಂದಿರೆ,

ಸಂಗಡಿಸಿ ಸರ್ವನಾಮದ ।
ಲಿಂಗಾಂತ್ಯಾಕ್ಷರಕಮವುವಿನಾದ್ಯಕ್ಷರಕಂ ॥
ಪಿಂಗದೆ ಲೋಪಂ ಗುಣವಚ ।
ನಂಗಳೊಳಂತ್ಯಂ ದುಕಾರಮಾದೊಡೆ ಲೋಪಂ ॥ (ಶ. ಮ. ದ. 96).

ಎಂಬ ಸೂತ್ರದಿಂ ದುಕಾರಕ್ಕಂ ಅವುವಿನ ಅಕಾರಕ್ಕಂ ಲೋಪಮಾಗಿ 'ಎಲ್ಲವು' ಎಂದಿರೆ, ಈ ಲಿಂಗದ ಮುಂದೆ ಪ್ರಥಮೈಕವಚನದ 'ಮ್' ಎಂಬ ವಿಭಕ್ತಿಯಂ ನಿಱಿಸೆ 'ಎಲ್ಲವು + ಮ್'

---

1 ಅತ್ರ ಪ್ರಕೃತಿತ್ವಾತ್.

ಎಂದಿರೆ, ಅನ್ಯಸ್ಮಾಲ್ಲೋಪಃ (46) ಎಂಬ ಸೂತ್ರದಿಂ ಮಕಾರಕ್ಕೆ ಲೋಪವಾಗಿ 'ಎಲ್ಲವು' ಎಂದಾಯ್ತು. ಎಲ್ಲವಂ. ತೃತೀಯಾವಿಭಕ್ತಿಗೆ, ಅಱುಕಾರಸ್ಯ ಸಂಖ್ಯಾಸರ್ವನಾಮಗುಣವಚನೇಷು (55)—ಸಂಖ್ಯಾಸರ್ವನಾಮಗುಣವಚನಂಗಳ ಕಡೆಯಲ್ಲಿರ್ದ ಉಕಾರಕ್ಕೆ ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ ಪರವಾಗೆ ಅಱಾದೇಶಮಕ್ಕುಂ—ಎಲ್ಲವಱಿಂ, ಎಲ್ಲವರ್ಕ್ಕೆ, ಎಲ್ಲವಱತ್ತಣಿಂ, ಎಲ್ಲವಱ, ಎಲ್ಲವಱೊಳ್.

ಗುಣವಚನಂಗಳ ರೂಪಸಿದ್ಧಿಯುಂ ಪೂರ್ವದಕ್ರಮಪ್ಪುದು.

'ನಿಡಿದು' ಎಂಬ ಶಬ್ದಕ್ಕೆ ಅವುಪ್ರತ್ಯಯವಾಗಿ, ದುಕಾರಂ ಲೋಪವಾಗಿ, 'ನಿಡಿ + ಅವು' ಎಂದಿರೆ, ಆದಿವರ್ಣೈಕಾರೇಭ್ಯೋ ಯಃ (22) ಎಂಬ ಸೂತ್ರದಿಂ ಯಕಾರವಾಗಿ—'ನಿಡಿಯವು' ಎಂದಾಯ್ತು. ನಿಡಿಯವಂ, ನಿಡಿಯವಱಿಂ, ನಿಡಿಯವರ್ಕ್ಕೆ, ನಿಡಿಯವಱತ್ತಣಿಂ, ನಿಡಿಯವಱ, ನಿಡಿಯವಱೊಳ್.

ಸೂ ॥ ಸ್ತ್ರೀಪುರುಷವಾ[1]ಚಕೇಷ್ವಿರರ್ ದಿರ್ ವಿರ್ ಕ್ವಚಿತ್ ॥42॥

ವೃ ॥ ಸ್ತ್ರೀಪುರುಷವಾಚಕೇಷು ಶಬ್ದೇಷು ವರ್ತಮಾನಾನಾಂ ವಿಭಕ್ತೀನಾಮಾದೌ ಕ್ವಚಿತ್ ಇರ್, ಅರ್, ದಿರ್, ವಿರ್, ಇತ್ಯೇತೇ ಗಳಪವಾದಾ ವಿ[3]ಧೀಯಂತೇ ॥

ಉ ॥ ಪೆಂಡಿರ್, ತೊೞ್ತಿರ್; ನಂಟರ್, ನಲ್ಲರ್; ಮಗಳ್ದಿರ್, ತಮ್ಮಂದಿರ್; ತಾಯ್ವಿರ್, ತಂದೆವಿರ್.

ಗ[4]ಳಪಿ ಕ್ವಚಿತ್—ಅಯ್ಯಂಗಳ್, ಅಬ್ಬೆಗಳ್. ಕ್ವ[5]ಚಿದುಭಯಂ—ಮಾವಂದಿರ್, ಮಾವಂಗಳ್; ಅತ್ತೆವಿರ್, ಅತ್ತೆಗಳ್.

ಟೀ ॥ ಸ್ತ್ರೀಪುರುಷವಾಚಕೇಷು=ಸ್ತ್ರೀಪುರುಷವಾಚಕಂಗಳಲ್ಲಿ. ದ್ವಿತ್ವಬಹುತ್ವಂ ನುಡಿಯಲ್ಪಡಿದೊಡೆ, ಕ್ವಚಿತ್=ಕೆಲವೆಡೆಯಲ್ಲಿ. ವಿಭಕ್ತಿಯ ಮೊದಲೊಳ್, ಇರರ್ ದಿರ್ ವಿರ್=ಇರ್, ಅರ್, ದಿರ್, ವಿರ್, ಎಂಬ ಪ್ರತ್ಯಯಂಗಳ್ ಪಿಂದೆ ಪೇೞ್ದ ದ್ವಿತ್ವಬಹುತ್ವಂಗಳ ಗಳ ಪ್ರತ್ಯಯಮುಮಂ ನಿಷೇಧಿಸಿ ಅಪ್ಪುವು. ಉ ॥ (ವೃ. ನೋ.) ಇಲ್ಲಿ ಕೆಲವೆಡೆಯೊಳ್ ಗಳಪ್ರತ್ಯಯಮಕ್ಕುಂ. ಉ ॥ (ವೃ. ನೋ.) ಕೆಲವೆಡೆಯೊಳ್ ಗಳ್ಪ್ರತ್ಯಯಮುಂ ದಿರ್ ವಿರ್ ಪ್ರತ್ಯಯಂಗಳುಮಪ್ಪುವು. ಉ ॥ (ವೃ. ನೋ).

ಆ[6]ರಾರ್ಗೆ ಪೆಂಡಿರೊಡವುಟ್ಟಿದರೆಂಬರಾರಾ ।
ರ್ಗಾರಾರ್ಗೆ ತಂದೆವಿರತಿಪ್ರಿಯಪುತ್ರರಾರಾ ।
ರ್ಗಾರಾರ್ಗೆ ತಾಯ್ವಿರೆರಡಿಲ್ಲದೆ ಕೂರ್ಪರಾರಾ ।
ರ್ಗಾರಯ್ಯ ತಾನೆ ತನಗಂ ನೆರವಲ್ಲರಾರುಂ ॥

ಮಿಱುಗುವ ತಮ್ಮ ನುಣ್ಗೊಡೆಯ ಕಾಂತಿ ಕವಲ್ತುದೆನಿಪ್ಪ ಪೀಲಿಯೊ ।
ಳ್ನೆಱೆ ನವವಿದ್ರುಮಾಧರದೆ ಸೂಸಿದ ಕಾಂತಿಯ ಕಣ್ಗೆಲೆಂಬಿನಂ ॥
ತುಱುಗಿದ ಗುಂಜೆಯಾಭರಣಮುಣ್ಮುವಪಾಂಗಮರೀಚಿಮಾಲೆ ಸು ।
ತ್ತಿಱಿದುದೆನಿಪ್ಪ ಕೇದಗೆಯ ಬೆಳ್ಸುೞಿಯೋಲೆ ಪೆಡಂಗವಳ್ದಿರಾ ॥

1 ವಾಚಕೇಷ್ವಿರರ್. 2 ವಿಭಕ್ತೀನಾಂ. 3 ಸ್ವನ್ಯಾದೇಶ್ಯೇತೇ ಭವಂತಿ. 4 ಗಳ್ ಕ್ವಚಿತ್, ಕ್ವಚಿಚ್ಛಬ್ದೇನ ಅಯ್ಯಂಗಳ್. 5 ಇದಕ್ಕೆ ಹಿಂದೆ ಒಂದು ಪ್ರತಿಯಲ್ಲಿ—ಗಳ್ಸಂಬಂಧೋಪಲಕ್ಷಣಾತ್ ಎಂದಿದೆ. 6 ಕಾವ್ಯಾವಲೋಕನ, ಪದ್ಯ 93.

ಇವಱೊಳ್ ಮುಂಪೇೞ್ದ ಪ್ರಯೋಗಮಂ ನೋಡಿಕೊಳ್ವುದು.

ಸೂ ॥ ಸ್ವಾರ್ಥೇ ಽತಃ ಕಳ್ ॥ 43 ॥

ವೃ ॥ ಅತ ಏ[1]ತೇಭ್ಯಃ ಸ್ವಾರ್ಥೇ ಕಳ್ ಭವತಿ ॥

ಉ ॥ ಪಂಡಿತರ್ಕಳ್, ಸುತರ್ಕಳ್, ವಿಚಾರಪರರ್ಕಳ್; ತಾ[2]ಯ್ವಿರ್ಕಳ್.

ಕೇ[3]ವಲಾದಪಿ ಕ್ವಚಿದ್ಭವತಿ. ಉ ॥ ಮಕ್ಕಳ್, ನಾೞ್ಕಳ್, ಕೋೞ್ಕಳ್.

ಟೀ ॥ ಅತಃ—ಮುಂಪೇೞ್ದ ಪ್ರತ್ಯಯಂಗಳತ್ತಣಿಂ ಪರಮಾಗಿ. ಸ್ವಾರ್ಥೇ—ಸ್ವಾರ್ಥದಲ್ಲಿ. ಕಳ್—ಕಳ್ ಪ್ರತ್ಯಯಮಕ್ಕುಂ.

ಉ ॥ (ವೃ. ನೋ.) ಬಱಿಯ ಶಬ್ದಮಾತ್ರದೊಳಂ ಕಳ್ ಪ್ರತ್ಯಯಮಕ್ಕುಂ. ಉ ॥ (ವೃ. ನೊ.).

ಸೂ ॥ ಸಂಖ್ಯಾಯಾಂ ವಃ ॥ 44 ॥

ವೃ ॥ ಸಂಖ್ಯಾವಾಚಿನಃ ಶಬ್ದಾತ್ಪರಾಸಾಂ ವಿಭಕ್ತೀನಾಮಾದೌ ವಕಾರಾಗಮೋ ಭವತಿ ॥

ಉ ॥ ಒರ್ವರ್, ಇರ್ವರ್, ಮೂವರ್.

ಟೀ ॥ ಸಂಖ್ಯಾಯಾಂ—ಸಂಖ್ಯೆಯಂ ಪೇೞ್ವ ಶಬ್ದಂಗಳಲ್ಲಿ. ಅರ್ ಪ್ರತ್ಯಯಂ ಪರಮಾಗುತ್ತಿರೆ ನಡುವೆ, ವಃ—ವಕಾರಮಕ್ಕುಂ.

ಒರ್ವರ್, ಇರ್ವರ್, ಮೂವರ್, ನಾಲ್ವರ್, ಅಯ್ವರ್, ಆಱುವರ್, ಎಂಬಂತೆ ಲಕ್ಷ್ಯಾನುರೂಪಮಾಗಿ ಅಱಿವುದು.

ಸೂ ॥ ಅತೋಽನುಸ್ವಾರಃ ಪ್ರಥಮೈಕವಚನಸ್ಯ ॥ 45 ॥

ವೃ ॥ ಅಕಾರಾಂತಾತ್ ಲಿಂಗಾತ್ ಪರಸ್ಯ ಪ್ರಥಮೈಕವಚನಸ್ಯ ಅ[4]ನುಸ್ವಾರಾದೇಶೋ ಭವತಿ ॥

ಉ ॥ ಮರಂ, ನರಂ, ಧರ್ಮಂ, ದಾನಂ.

ಟೀ ॥ ಅತಃ—ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ. ಪ್ರಥಮೈಕವಚನಸ್ಯ—ಪ್ರಥಮೈಕವಚನದ ವಿಭಕ್ತಿಯ ಮಕಾರಕ್ಕೆ. ಅನುಸ್ವಾರಃ—ಸೊನ್ನೆಯಕ್ಕುಂ. ಉ ॥ (ವೃ. ನೋ.).

ಸೂ ॥ ಅನ್ಯಸ್ಮಾಲ್ಲೋಪಃ ॥ 46 ॥

ವೃ ॥ ಅನಕಾರಾಂತಾತ್ ಲಿಂಗಾತ್ ಉತ್ತರಸ್ಯ ಪ್ರ[5]ಥಮೈಕವಚನಸ್ಯ ಲೋಪೋ ಭವತಿ ॥

ಉ ॥ ಹರಿ, ಕರಿ, ಬಿದಿ, ನದಿ; ಮಧು, ವಧು, ವಿಧು, ಸಿಸು; ಪಿತೃ, ಸವಿತೃ; ಕೆಱೆ, ತೊಱೆ; ತೋಳ್, ಬಾಳ್.

---

1 ಏಭ್ಯಃ ಪರಂ. 2 ಇದು ಕೆಲವು ಪ್ರತಿಗಳಲ್ಲಿಲ್ಲ. 3 ಪೃಥಗ್ಯೋಗಕರಣಾತ್ ಪೃಥಗಪಿ. 4 ಮೋಽನುಸ್ವಾರೋ ಭವತಿ.
5 ಪ್ರಥಮಾವಿಭಕ್ತೇ ರೇಕವಚನಸ್ಯ.

ಟೀ ॥ ಅನ್ಯಸ್ಮಾತ್—ಅಕಾರಾಂತಮಲ್ಲದುೞಿದ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರವಾದ ಪ್ರಥಮೈಕವಚನದ ಮಕಾರಕ್ಕೆ. ಲೋಪಃ=ಲೋಪಮಕ್ಕುಂ. ಉ॥ (ವೃ. ನೋ).

ಸೂ ॥ ಗುಣೋಕ್ತೇರವಾವುಪಾಂತ್ಯಾವಧೇಃ ॥ 47 ॥

ವೃ ॥ ಗುಣವಚನಸ್ಯ ಶಬ್ದಸ್ಯ ಅವೌ ಪರೇ ಉಪಾಂತ್ಯಾವಧೇರವಯವಸ್ಯ ಲೋಪೋ ಭವತಿ॥

ಉ ॥ ಕಿಱಿಯವು, ಪಿರಿಯವು, ಅಸಿಯವು.[1]

ಟೀ ॥ ಗುಣೋಕ್ತೇಃ=ಗುಣವಚನಕ್ಕೆ. ಅವೌ=ಸರ್ವನಾಮಗುಣವಚನನಾಮವು ತದಂತೇ (41) ಎಂಬ ಸೂತ್ರದಿಂ ದ್ವಿತ್ವಬಹುತ್ವಕ್ಕೆ ಉಕ್ತಮಾದ 'ಅವು' ಪರಮಾಗೆ. ಉಪಾಂತ್ಯಾವಧೇಃ=ಕಡೆಯ ಅವಯವಕ್ಕೆ ಲೋಪಮಕ್ಕುಂ.

'ಕರಿದು' ಎಂಬ ಗುಣವಚನದ ಮುಂದೆ 'ಅವು' ಪರಮಾಗೆ, 'ಕರಿದು' ಎಂಬುದಱ ದುಕಾರಂ ಲೋಪಮಾಗಿ 'ಕರಿ+ಅವು' ಎಂದಿರೆ, ಯತ್ವಮಾಗಿ 'ಕರಿಯವು' ಎಂದಾಯ್ತು. ಕರಿಯವಂ, ಕರಿಯವಱಿಂ, ಕರಿಯವರ್ಕ್ಗೆ, ಕರಿಯವಱತ್ತಣಿಂ, ಕರಿಯವಱ, ಕರಿಯವಱೊಳ್. ಪಿರಿಯವು, ಕಿಱಿಯವು, ಅಸಿಯವು, ಮೊದಲಾದ ಗುಣವಚನಂಗಳ್ ಪಿಂದಣಂತೆ ಸಿದ್ಧಮಪ್ಪುವು.

ಸೂ ॥ ಸರ್ವನಾಮ್ನಸ್ತದಾದೇರಪಿ ॥ 48 ॥

ವೃ ॥ ಸರ್ವನಾಮಸಂಜ್ಞಾನಾಂ[2] ಅವೌ ಪರೇ ಉಪಾಂತ್ಯಾವಧೇರವುಶಬ್ದಾದೇಶ್ಚ ಲೋಪೋ ಭವತಿ ॥

ಉ ॥ ಅವು, ಅವಂ, ಅವಱಿಂ, ಇತ್ಯಾದಿ. ಇವು ಇತ್ಯಾದಿ. ಉವು ಇತ್ಯಾದಿ.

ಟೀ ॥ ಸರ್ವನಾಮ್ನಃ=ಸರ್ವನಾಮಕ್ಕೆ ಅವು ಪರಮಾಗೆ. ತದಾದೇರಪಿ=ಅವು ಎಂಬುದಱ ಆದಿಗಂ ಲೋಪಮಕ್ಕುಂ. ಉ ॥ (ವೃ. ನೋ).

ಸೂ ॥ ಅದಂತಾನ್ನಾಗಮಃ ಪೂರ್ವಸ್ಮಿನ್ ಗಳಃ ॥ 49 ॥

ವೃ ॥ ಅಕಾರಾಂತಾತ್ ಶಬ್ದರೂಪಾತ್ ಗಳಃ ಪೂರ್ವಸ್ಮಿನ್ ನಕಾರಾಗಮೋ ಭವತಿ ॥

ಉ ॥ ಗಜಂಗಳ್, ಹಯಂಗಳ್.

ಬಹುಳಾಧಿಕಾರಾತ್ ಕ್ವಚಿದ್ವಿಕಲ್ಪಃ—ಮರಂಗಳ್, ಮರಗಳ್ ; ಕೊಳಂಗಳ್, ಕೊಳಗಳ್. ಅಕಾರಾಂತಾದಿತಿ ಕಿಂ ? ಮಡಿಗಳ್, ಮಡುಗಳ್, ಮನೆಗಳ್, ಊರ್ಗಳ್, ಸಾಲ್ಗಳ್.

ಟೀ ॥ ಅದಂತಾತ್=ಅಕಾರಾಂತಮಪ್ಪ ಶಬ್ದದತ್ತಣಿಂ ಪರಮಾಗಿ, ದ್ವಿತ್ವಬಹುತ್ವಕ್ಕೆ ಉಕ್ತಮಾದ, ಗಳಃ=ಗಳ್ ಪ್ರತ್ಯಯದ. ಪೂರ್ವಸ್ಮಿನ್=ಮೊದಲಲ್ಲಿ. ಪ್ರಕೃತಿಯ ಪರದಲ್ಲಿ, ನಾಗಮಃ=ನಕಾರಾಗಮಮಕ್ಕುಂ. ಉ ॥ (ವೃ. ನೋ).

---

1 ಇದಾದಮೇಲೆ, ಇರಂದಾವಪಿ—ಇರಂದಾವಪಿ ಕ್ವಚಿಲ್ಲೋಪೋ ಭವತಿ. ಸಂ೨೨. ಪ್ರೇಷರುಷ್ವಾಪಕೇಷ್ವಿರಾದಯೋ ಭವಂತ್ಯೇವ ॥ ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 2 ಇದಾದಮೇಲೆ ಅದು ಇದು ಉದೆನಾಂ ಎಂಬು ಕೆಲವು ಪ್ರತಿಗಳಲ್ಲಿ ಇದೆ.

ಬಹುಳಶಬ್ದಾಧಿಕಾರದಿಂ ಕೆಲವೆಡೆಯೊಳ್ ವಿಕಲ್ಪದಿಂ ನಕಾರಾಗಮಮುಮಕ್ಕುಂ. ಉ॥ (ವೃ. ನೋ.)

ಅಕಾರಾಂತಮಲ್ಲದೆ ಉಳಿದ ಸ್ವರಾಂತವ್ಯಂಜನಾಂತಂಗಳತ್ತಣಿಂ ಪರಮಾಗಿ ಗಳ್ ಪ್ರತ್ಯಯಮಾದೊಡಂ ನಡುವೆ ನಕಾರಾಗಮಮಾಗದು. ಉ॥ (ವೃ. ನೋ.)

ಸೂ ॥ ಸ್ವರಾದೌ ನಾಗಮಃ ಪುಂಸಿ ॥ 50 ॥

ವೃ ॥ ಅಕಾರಾಂತಾತ್ ಶಬ್ದಾತ್[1] ಸ್ವರಾದೌ ವಿಭಕ್ತಿಗಣೇ ಪರೇ ಪುಲ್ಲಿಂಗವಿವಕ್ಷಾಯಾಂ ನಕಾರಾಗಮೋ ಭವತಿ ॥

ಉ ॥ ದೇವನಂ, ದೇವನಿಂ, ದೇವನತ್ತಣಿಂ, ದೇವನ, ದೇವನೊಳ್; ಅ[2]ರಸನಂ ಕಂಡರ್, ಸಚಿವನಿಂ ಮುಂಚೆ, ಕೆಳೆಯನ ಬಲದೊಳ್.

ಟೀ ॥ ಅಕಾರಾಂತಮಪ್ಪ, ಪುಂಸಿ = ಪುಲ್ಲಿಂಗಮಪ್ಪ ಶಬ್ದದಲ್ಲಿ. ಸ್ವರಾದೌ = ಸ್ವರಮನಾದಿಯಾಗುಳ್ಳ ವಿಭಕ್ತಿಗಳ್ ಪರಮಾಗುತ್ತಿರೆ ಆವಿಭಕ್ತಿಗಳ ಸ್ವರದ ಮೊದಲೊಳ್. ನಾಗಮಃ = ನಕಾರಾಗಮಮುಮಕ್ಕುಂ.

'ಅರಸ + ಅಮ್' ಎಂದಿರೆ, ಪ್ರಕೃತಿಯ ಪರದಲ್ಲಿ ವಿಭಕ್ತಿಯ ಸ್ವರದ ಆದಿಯಲ್ಲಿ ನಕಾರಾಗಮಮಾಗಿ—ಅರಸನಂ. ಅರಸನಿಂ. ಅತಶ್ಚತುರ್ಥ್ಯಾಸ್ತೃತೀಯೋऽನುಸ್ವಾರಪೂರ್ವಃ ಪುಂಸಿ (62)—ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ ಚತುರ್ಥೀವಿಭಕ್ತಿಗೆ ಪುಲ್ಲಿಂಗದಲ್ಲಿ ಸೊನ್ನೆಯುಂ ಮೊದಲೊಳುಳ್ಳುದಾಗಿ ತನ್ನ ತೃತೀಯಾಕ್ಷರಮಕ್ಕುಂ—'ಅರಸಂಗೆ' ಎಂದಾಯ್ತು. ಅರಸನತ್ತಣಿಂ, ಅರಸನ, ಅರಸನೊಳ್.

ಸೂ ॥ ನಪುಂಸಕಲಿಂಗೇ ದಃ ॥ 51 ॥

ವೃ ॥ ಅಕಾರಾಂತಾತ್ ಶ[3]ಬ್ದಾತ್ ನಪುಂಸಕಲಿಂಗೇ ವಿವಕ್ಷಿತೇ ಸ್ವರಾದೌ ವಿಭಕ್ತಿಗಣೇ ಪರೇ ದಕಾರಾಗಮೋ ಭವತಿ ॥

ಉ ॥ ಮನದಿಂ ಪೇಗಂ, ವನದತ್ತಣಿಂ ಬಂದಂ, ಜಗದೊಳ್ ಸಂದಂ.

ಟೀ ॥ ನಪುಂಸಕಲಿಂಗೇ = ಅಕಾರಾಂತಮಪ್ಪ ನಪುಂಸಕಲಿಂಗದಲ್ಲಿ, ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ ಸ್ವರದ ಆದಿಯೊಳ್, ದಃ = ದಕಾರಾಗಮಮುಮಕ್ಕುಂ.
ಉ ॥ (ವೃ. ನೋ.)

ಸೂ ॥ ವಿಭಾಷಯಾಮಿ ಮ್ನೌ ॥ 52 ॥

ವೃ ॥ ಅಮಿ ದ್ವಿತೀಯೈಕವಚನೇ ಪರೇ ನಪುಂಸಕಲಿಂಗಾದಕಾರಾಂತಾತ್ ವಿಭಾಷಯಾ ಮ್ನೌ ಮಕಾರನಕಾರೌ ಭವತಃ ॥ ಸಂ[4]ಸ್ಕೃತೇ ಮಕಾರ ಏವ ॥

---

1 ಪುಲ್ಲಿಂಗಾತ್, ಪುಲ್ಲಿಂಗವಿವಕ್ಷಾಯಾಂ ಎಂಬುದಿಲ್ಲ. 2 ಇದರಿಂದ ಮುಂದೆ ಇರುವ ಉದಾಹರಣೆಗಳು ಒಂದು ಪ್ರತಿಯಲ್ಲಿಲ್ಲ. 3 ಸ್ವರಾದಿವಿಭಕ್ತಿಗಣೇ ಪರೇ ನಪುಂಸಕಲಿಂಗವಿಷಯೇ ದಕಾರಾಗಮೋ ಭವತಿ. 4 ಒಂದು ಪ್ರತಿಯಲ್ಲಿ ಈ ಭಾಗವಿಲ್ಲ.

ಉ ॥ ಪೊಲಮುಂ, ಪೊಲನಂ ; ನೆಲಮುಂ, ನೆಲನಂ ;- ಕುಲಮುಂ, ಬಲಮುಂ.

ಟೀ ॥ ಅಮಿ=ಅಕಾರಾಂತಮಪ್ಪ ನಪುಂಸಕಲಿಂಗದಮುಂದೆ ದ್ವಿತೀಯೈಕವಚನದ 'ಅಮ್' ಇರೆ. ವಿಭಾಷಯಾ=ವಿಕಲ್ಪದಿಂ. ಮ್ನೌ=ಆ ಅಮ್ ವಚನದ ಆದಿಯಲ್ಲಿ ಮಕಾರನಕಾರಂಗಳಪ್ಪುವು. ಉ ॥ (ವೃ. ನೋ.)

ಸೂ ॥ ಅ[1]ನುಸ್ವಾರಸ್ಯ ಚ ॥ 53 ॥

ವೃ ॥ ಪ[2]ದಾಂತೇ ವರ್ತಮಾನಸ್ಯಾಪ್ಯನುಸ್ವಾರಸ್ಯ ಸ್ವರೇ ಪರೇ ಮಕಾರನಕಾರೌ ಭವತಃ ॥

ಉ ॥ ಇವನಧಿಕಬಲಂ, ಹರನಗನಿಂತಿದು.

ಟೀ ॥ ಅನುಸ್ವಾರಸ್ಯ ಚ=ಪದದ ಕಡೆಯೊಳುಳ್ಳ ಸೊನ್ನೆಗಂ ಸ್ವರಂ ಪರಮಾಗೆ ಮಕಾರನಕಾರಂಗಳಪ್ಪುವು. ಉ ॥ (ವೃ. ನೋ.). ಸೂತ್ರದಲ್ಲಿಯ ಚಶಬ್ದದಿಂ ವಕಾರಮುಮಪ್ಪುದು.

ಸೂ ॥ ಉ[3]ದಂತಾತ್ತೃತೀಯಾದಿಷ್ವಿನಾಗಮೋ ಬಹುಳಂ ॥ 54 ॥

ವೃ ॥ ಉಕಾರಾಂತಾಲ್ಲಿಂಗಾತ್ ತೃತೀಯಾದಿವಿಭಕ್ತಿಗಣೇ ಪರೇ ಬಹುಳಂ ಇನಾಗಮೋ ಭವತಿ ॥

ಉ ॥ ಗುರುವಿನಿಂ ನೀತಿಜ್ಞಂ, ಮನುವಿನಿಂ ಮಿಗಿಲ್, ಪೆಂ[4]ಪಿನೊಳ್ ಸುರನಗಂ, ಗುರುವಿನ ಮ[5]ತಂ, ಮನುವಿನ ಕುಲಂ.

ಬಹುಳಗ್ರಹಣಾತ್ ಕ್ವಚಿನ್ನ ಭವತಿ.—ಗುರುವ ಮತಂ, ಮನುವ ಕುಲಂ.

ಬಹುಳಗ್ರಹಣಾತ್ ಕ್ವಚಿನ್ನಿತ್ಯಂ.– ಮನುವಿನೊಳ್, ಗುರುವಿನೊಳ್, ಮಡುವಿನೊಳ್.

ಟೀ ॥ ಉದಂತಾತ್=ಉಕಾರಾಂತಮಪ್ಪ ಲಿಂಗದತ್ತಣಿಂ. ತೃತೀಯಾದಿಷು=ತೃತೀಯೆ ಮೊದಲಾದ ವಿಭಕ್ತಿಗಳ್ ಪರಮಾಗೆ. ಬಹುಳಂ=ವಿಕಲ್ಪದಿಂದೆ. ಇನಾಗಮಃ=ಇನಾಗಮಮಕ್ಕುಂ. ಉ ॥ (ವೃ. ನೋ.)

ಸೂ ॥ ಅಜು[6]ಕಾರಸ್ಯ ಸಂಖ್ಯಾಸರ್ವನಾಮಗುಣವಚನೇಷು ॥ 55 ॥

ವೃ ॥ ಸಂಖ್ಯಾಸರ್ವನಾಮಗುಣವಚನವಿಷಯೇ ವರ್ತಮಾನಸ್ಯ ಉದಂತಸ್ಯ ಶಬ್ದಸ್ಯ ತೃತೀಯಾದಿವಿಭಕ್ತಿಗಣೇ ಪರೇ ಅಜಾದೇಶೋ ಭವತಿ ॥

ಉ ॥ ಒಂದಱಿಂ, ಎರಡಱಿಂ, ಮೂರಱಿಂ, ಮೂಱರ್ಕೆ, ನಾಲ್ಕರ್ಕೆ ; ಅದಱಿಂ, ಅವಱಿಂ, ಅವರ್ಕೆ, ಇದಱಿಂ, ಇವಱಿಂ, ಇವರ್ಕೆ ; ಇನಿಯವಱಿಂ, ಇನಿಯವರ್ಕೆ, ಇನಿಯವಱತ್ತಣಿಂ.

---

1 ಅನುಸ್ವಾರಸ್ಯಾಪಿ ಸ್ವರೇ ಚ. 2 ಅನುಸ್ವಾರಸ್ಯಾಪಿ ಸ್ವರೇ ಪರೇ ಮನೌ ಭವತಃ । ಚಕಾರೇಣ ವಕಾರಃ. 3 ಉಕಾರಾಂತಾತ್. 4 ಪೆಂಪಿನಿಂ. 5 ಮತಂ. 6 ಅಕಾರಸ್ಯ.

ಟೀ ॥ ಸಂಖ್ಯಾಸರ್ವನಾಮಗುಣವಚನೇಷು=ಸಂಖ್ಯಾಸರ್ವನಾಮಗುಣವಚನಂಗಳ ಕಡೆಯುಲ್ಲಿರ್ದ. ಉಕಾರಸ್ಯ=ಉಕಾರಕ್ಕೆ. ತೃತೀಯಾವಿಭಕ್ತಿ ಮೊದಲಾದ ವಿಭಕ್ತಿಗಳ ಪರಮಾಗೆ, ಅಙ್=ಅಙಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ದಿಗ್ವಾಚಿಭ್ಯೋಽಣ್ ॥ 56 ॥

ವೃ ॥ ದಿಗ್ವಾಚಿಭ್ಯಃ ಶಬ್ದೇಭ್ಯಃ ತೃತೀಯಾದಿವಿಭಕ್ತಿಗಣೇ ಪರೇ ಅಂ[1]ತ್ಯಸ್ಯ ಅಣ್ ಭವತಿ ॥

ಉ ॥ ಮೂಡಣಿಂ, ಮೂಡಣ್ಗೆ; ಪಡುವಣಿಂ, ಪಡುವಣ್ಗೆ; ಬಡಗಣಿಂ, ಬಡಗಣ್ಗೆ; ತೆಂಕಣಿಂ, ತೆಂಕಣ್ಗೆ; ತೆಂಕಣ ದೆಸೆಯಿಂ, ಬಡಗಣ ಮೇರೆಯಿಂ.

ಟೀ ॥ ದಿಗ್ವಾಚಿಭ್ಯಃ=ದಿಕ್ಕಂ ನುಡಿವ ಶಬ್ದದತ್ತಣಿಂ ಪರಮಾದ ತೃತೀಯೆ ಮೊದಲಾದ ವಿಭಕ್ತಿಗಳ ಆದಿಯಲ್ಲಿ. ಅಣ್=ಅಣ್ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ವಾಽಲತಃ ಪ್ರಥಮಾದ್ವಿತೀಯಯೋಃ ॥ 57 ॥

ವೃ ॥ ಅತಃ ಅಕಾರಾಂತಾದ್ದಿಗ್ವಾಚಿನಃ ಶಬ್ದಾತ್ ಪ[2]ರಯೋಃ ಪ್ರಥಮಾದ್ವಿತೀಯಯೋಃ ಅ[3]ಲ್ ವಾ ಭವತಿ ॥

ಉ ॥ ಮೂಡಲ್, ಮೂಡ; ತೆಂಕಲ್, ತೆಂಕ; ಪಡುವಲ್, ಪಡುವ; ಬಡಗಲ್, ಬಡಗ.

ಟೀ ॥ ಅತಃ=ಅಕಾರಾಂತಮಪ್ಪ ದಿಕ್ಕಂ ಪೇಳ್ವ ಶಬ್ದದತ್ತಣಿಂ ಪರಮಾದ. ಪ್ರಥಮಾದ್ವಿತೀಯಯೋಃ=ಪ್ರಥಮೆದ್ವಿತೀಯೆಗಳ್ಗೆ. ವಾ=ವಿಕಲ್ಪದಿಂ. ಅಲ್=ಅಲ್ ಪ್ರತ್ಯಯಮಕ್ಕುಂ. ಉ ॥ (ವೃ. ನೋ.)[4]

ಅತ್ತ, ಇತ್ತ, ಎಂಬ ಶಬ್ದಂಗಳ್ಗಂ ಪ್ರಥಮೆದ್ವಿತೀಯೆಗಳ್ಗೆ ಅಲ್ ಪ್ರತ್ಯಯಂ ವಿಕಲ್ಪದಿಂದಕ್ಕುಂ. ಉ ॥ ಅತ್ತ, ಅತ್ತಲ್; ಇತ್ತ, ಇತ್ತಲ್. ತೃತೀಯಾವಿಭಕ್ತಿ ಮೊದಲಾದುವರ್ಕೆ ಮೊದಲಂತೆ ಸಿದ್ಧಂ.

ಸೂ ॥ ಸಪ್ತಮ್ಯಾಂ ಚ ॥ 58 ॥

ವೃ ॥ ಅಕಾರಾಂತಾದ್ದಿಗ್ವಾಚಿನಃ ಶಬ್ದಾತ್ ಪ[5]ರಭೂತಾಯಾಃ ಸಪ್ತಮ್ಯಾಃ ಸ್ಥಾನೇ ತ[6]ದಲ್ ವಾ ಭವತಿ ॥ ಅ[7]ಲಭಾವಪಕ್ಷೇ ಪ್ರಥಮಾದ್ವಿತೀಯಯೋರಭಾವಾತ್—ದಿಗ್ವಾಚಿಭ್ಯೋಽಣ್—ಇತಿ ಅಣ್ ನ ಸ್ಯಾತ್ ॥

ಉ ॥ ಮೂಡಲಿರ್ದಂ, ಮೂಡಿರ್ದಂ; ತೆಂಕಲಿರ್ದಂ, ತೆಂಕಿರ್ದಂ; ಅತ್ತಲಿರ್ದಂ, ಅತ್ತಿರ್ದಂ; ಇತ್ತಲಿರ್ದಂ, ಇತ್ತಿರ್ದಂ.

---

1 ಅಣಾದೇಶೋ ಭವತಿ. 2 ಕೆಲವು ಪ್ರತಿಗಳಲ್ಲಿ ಈ ಪದವಿಲ್ಲ. 3 ವಿಕಲ್ಪೇನ ಅಲ್ ಭವತಿ. 4 ಉದಾಹರಣೆಗಳಿಂದ ಮೇಲೆ—ವಾ ಶಬ್ದಾದೇಕಸ್ಮಿನ್ ಪಕ್ಷೇ ವಿಭಕ್ತ್ಯೋ ಲೋಪಶ್ಚ ಭವಂತಿ—ಎಂದಿದೆ. 5 ಸಪ್ತಮ್ಯಾಂ ಪರಾಯಾಂ. 6 ಅಲ್. 7 ಈ ವಾಕ್ಯವು ಒಂದು ಪ್ರತಿಯಲ್ಲಿ ಮಾತ್ರ ಇದೆ.

ಟೀ॥ ಸಪ್ತಮ್ಯಾಂ ಚ = ಅಕಾರಾಂತವಪ್ಪ ದಿಕ್ಕಂ ಪೇೞ್ವ ಶಬ್ದದತ್ತಣಿಂ ಪರವಾದ ಸಪ್ತಮೀವಿಭಕ್ತಿಗಂ ವಿಕಲ್ಪದಿಂ ಅಲ್ ಪ್ರತ್ಯಯಮಕ್ಕುಂ. ಉ॥ (ವೃ. ನೋ.)

ಸೂ॥ ಉತ ಏತ್ ॥ 59 ॥

ವೃ॥ ಉ[1]ಕಾರಾಂತಾದ್ದಿಗ್ವಾಚಿನಃ ಶಬ್ದಾತ್ ಪರಭೂತಾಯಾಃ ಸಪ್ತಮ್ಯಾಃ ಸ್ಥಾನೇ ಏಕಾರೋ ಭವತಿ॥

ಉ॥ ಮೇಗಿರ್ದುದು, ಕೆೞಗೆ ಪೊಲಂ, ಬಳಗೆ ಪಳಗು, ಪೊಱಗೆ ಕಟ್ಟಲೆ.

ದಿ[2]ಗ್ವಾಚಿಭ್ಯೋಽಣ್—ಇತಿ ಅಣಿ ಪ್ರಾಪ್ತೇ ಸಾಕ್ಷಾತ್ಸಪ್ತಮ್ಯಭಾವಾತ್ ಅಣ್ ನ ಸ್ಯಾತ್।

ಉತ ಇತಿ ಕಿಂ? ಅತ್ತಲ್, ಇತ್ತಲ್.

ಟೀ॥ ಉತಃ = ದಿಕ್ಕಂ ಪೇೞ್ವ ಶಬ್ದದ ಕಡೆಯ ಉಕಾರಕ್ಕೆ. ಏತ್ = ಸಪ್ತಮೀವಿಭಕ್ತಿ ಪರವಾಗೆ ಏಕಾರಮಕ್ಕುಂ. ಉ॥ (ವೃ. ನೋ.)

ಸೂ॥ ಅಂತೇ ದಂ ತೃತೀಯಾಯಾಃ ॥ 60 ॥

ವೃ॥ ತೃತೀಯಾವಿಭಕ್ತ್ಯಂತಸ್ಯ ಶ[3]ಬ್ದಸ್ಯಾಂತೇ ದಂ ಭವತಿ ಸ್ವಾರ್ಥೇ॥

ಉ॥ ದಾನದಿಂದಂ, ದಯೆಯಿಂದಂ, ಗತಿಯಿಂದಂ, ಮತಿಯಿಂದಂ.

ಟೀ॥ ತೃತೀಯಾಯಾಃ = ತೃತೀಯಾವಿಭಕ್ತಿಯ. ಅಂತೇ = ಕಡೆಯಲ್ಲಿ. ಸಿದ್ಧವಾದ ಪದದ ಮುಂದೆ, ದಂ = ದಂ ಎಂಬುದಕ್ಕುಂ. ಉ॥ (ವೃ. ನೋ.)

ಸೂ॥ ಏದಂತತಾ ಚ ॥ 61 ॥

ವೃ॥ ತಸ್ಯ ತೃತೀಯಾಂತಸ್ಯ ಶಬ್ದರೂಪಸ್ಯ ಏಕಾರಾಂತತಾ ಚ ಭವತಿ॥

ಉ॥ ಅದಱಿಂದೆ, ಯದೃಚ್ಛೆಯಿಂದೆ, ಗಂಧದಿಂದೆ.

ನ[4]ಪುಂಸಕೇ ಕೇವಲಾದಪಿ। ಉ॥ ಗಂಧದೆ, ನೆಲದೆ, ಪೊಲದೆ, ಬಗೆದಂತಾಗೆ ಸುರೇಂದ್ರಿಂ ಕ್ರಮದೆ ಕಲ್ಯಾಣದ್ವಯಂ.

ಟೀ॥ ಏದಂತತಾ ಚ = ಆ ತೃತೀಯೆಗಾಗಮವಾದ 'ದಂ' ಎಂಬುದರ್ಕೆ ಅನುಸ್ವಾರಂ ಲೋಪವಾಗಿ ಏಕಾರಾಂತತೆಯುಮಕ್ಕುಂ. ಉ॥ (ವೃ. ನೋ.)

ಕೆಲವೆಡೆಯೊಳ್ ಬಱಿಯ ಏಕಾರಾದೇಶಮಕ್ಕುಂ. ಉ॥ (ವೃ. ನೋ.)

ಸೂ॥ ಅ[5]ತಶ್ಚತುರ್ಥ್ಯಾಸ್ತೃತೀಯೋಽನುಸ್ವಾರಪೂರ್ವಃ ಪುಂಸಿ ॥ 62 ॥

ವೃ॥ ಅಕಾರಾಂತಾತ್ ಪು[6]ಲ್ಲಿಂಗಾತ್ಪರಭೂತಾಯಾಶ್ಚತುರ್ಥೀವಿಭಕ್ತೇಃ ಅನುಸ್ವಾರಪೂರ್ವಸ್ತೃತೀಯೋ ಭವತಿ॥

---

1 ದಿಗ್ವಾಚಿಸಂಬಂಧಿನ ಉಕಾರಸ್ಯ ಸಪ್ತಮೀವಿಭಕ್ತೌ ಪರಾಯಾಮೇಕಾರಾದೇಶೋ ಭವತಿ. 2 ಈ ವಾಕ್ಯವು ಒಂದೇ ಪ್ರತಿಯಲ್ಲಿ ಮಾತ್ರ ಇದೆ. 3 ಶಬ್ದಸ್ಯ ತದಂತೇ ದಂ ಭವತಿ. 4 ಈ ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇದೆ. 5 ಅಕಾರಾಂತಾತ್. 6 ಲಿಂಗಾತ್ಪರಸ್ಯ ಚತುರ್ಥ್ಯಾಃ ಪುಂಸಿ.

ಉ॥ ನೃಪಂಗೆ, ದೇವಂಗೆ, ಇಂದ್ರಂಗೆ, ಚಂದ್ರಂಗೆ, ಅಯ್ಯಂಗೆ, ಅಪ್ಪಂಗೆ, ಪೆಱಂಗೆ, ಅವಂಗೆ.

ಟೀ॥ ಅತಃ=ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ. ಚತುರ್ಥ್ಯಾಃ=ಚತುರ್ಥೀವಿಭಕ್ತಿಗೆ. ಪುಂಸಿ=ಪುಲ್ಲಿಂಗದಲ್ಲಿ. ಅನುಸ್ವಾರಪೂರ್ವಃ=ಸೊನ್ನೆಯಂ ಮೊದಲೊಳುಳ್ಳುದಾಗಿ. ತೃತೀಯಃ=ತನ್ನ ತೃತೀಯಾಕ್ಷರಮಕ್ಕುಂ. ಉ॥ (ವೃ. ನೋ.)

ಸೂ ॥ ವಾ ನಪುಂಸಕೇ ದ್ವಿತ್ವಂ ॥ 63 ॥

ವೃ॥ ಅ[1]ಕಾರಾಂತಾತ್ ಪರಭೂತಾಯಾಶ್ಚತುರ್ಥ್ಯಾಃ ನಪುಂಸಕಲಿಂಗವಿಷಯೇ ದ್ವಿತ್ವಂ ವಾ ಭವತಿ ॥

ಉ॥ ಕುಲಕ್ಕೆ, ಕುಲಕೆ; ಚಲಕ್ಕೆ, ಚಲಕೆ; ಮನಕ್ಕೆ, ಮನಕೆ; ಬನಕ್ಕೆ, ಬನಕೆ; ನೆಲಕ್ಕೆ, ನೆಲಕೆ; ತೃಣಕ್ಕೆ, ತೃಣಕೆ.

ಟೀ॥ ಅಕಾರಾಂತಮಪ್ಪ ಲಿಂಗದತ್ತಣಿಂ ಪರಮಾದ ಚತುರ್ಥೀವಿಭಕ್ತಿಗೆ, ನಪುಂಸಕೇ=ನಪುಂಸಕಲಿಂಗದಲ್ಲಿ. ವಾ=ವಿಕಲ್ಪದಿಂ. ದ್ವಿತ್ವಂ=ದ್ವಿತ್ವಮಕ್ಕುಂ. ಉ॥(ವೃ. ನೋ.)

ಸೂ ॥ ಶೇಷಾತ್ತೃತೀಯತ್ವಂ ॥ 64 ॥

ವೃ॥ ಅಕಾರಾಂತಾದವಶೇಷಾತ್ ಶಬ್ದರೂಪಾತ್ ಪರಸ್ಯಾಃ ಚತುರ್ಥ್ಯಾಃ ತೃತೀಯತ್ವಮೇವ ಭವತಿ ॥

ಉ॥ ಯತಿಗೆ, ಮತಿಗೆ, ಗಿಡುಗೆ, ಮಡುಗೆ, ಮನೆಗೆ, ನೆಲೆಗೆ, ಊರ್ಗೆ, ನೀರ್ಗೆ, ಕೆಯ್ಗೆ, ತೋಳ್ಗೆ, ಪವಣ್ಗೆ, ಕಲ್ಗೆ.

ಟೀ॥ ಶೇಷಾತ್=ಅಕಾರಾಂತಮಲ್ಲದುೞಿದ ಲಿಂಗದತ್ತಣಿಂ ಪರಮಾದ ಚತುರ್ಥೀವಿಭಕ್ತಿಯ ಕೆಕಾರಕ್ಕೆ. ತೃತೀಯತ್ವಂ=ಆ ಕವರ್ಗದ ತೃತೀಯಾಕ್ಷರಮಪ್ಪ ಗಕಾರಮಕ್ಕುಂ. ಉ॥ (ವೃ. ನೋ.)

ಸೂ ॥ ಸ[2]ರ್ವನಾಮ್ನೋಽಲಿಂಗಾದೋ ವಾ ॥ 65 ॥

ವೃ॥ ಅಲಿಂಗಾತ್ಸರ್ವನಾಮ್ನಃ ಪರಸ್ಯಾಶ್ಚತುರ್ಥ್ಯಾಃ ಪೂರ್ವಂ ಅಕಾರೋ ವಾ ಭವತಿ ॥

ಉ॥ ಅದರ್ಕೆ, ಅದಕೆ; ಇದರ್ಕೆ, ಇದಕೆ.

ಟೀ॥ ಅಲಿಂಗಾತ್=ಅಲಿಂಗಮಪ್ಪ. ಸರ್ವನಾಮ್ನಃ=ಸರ್ವನಾಮದತ್ತಣಿಂ ಪರಮಾದ ಚತುರ್ಥೀವಿಭಕ್ತಿಯ ಮೊದಲೊಳ್. ವಾ=ವಿಕಲ್ಪದಿಂ. ಅಃ=ಅಕಾರಮಕ್ಕುಂ. ಉ॥ (ವೃ. ನೋ.)

---

1 ನಪುಂಸಕಲಿಂಗವಿಷಯಾದಕಾರಾಂತಾತ್ಪರತ್ರ ವ್ಯವಸ್ಥಿತಾಯಾಶ್ಚತುರ್ಥ್ಯಾಃ ದ್ವಿತ್ವಂ ವಾ ಭವತಿ. 2 ಕೆಲವು ಪ್ರತಿಗಳಲ್ಲಿ ಈ ಸೂತ್ರವೇ ಇಲ್ಲ. ಒಂದರಲ್ಲಿ—ಸರ್ವನಾಮ್ನೋಽಲಿಂಗಾದವಾ—ಎಂದಿದೆ. ಮತ್ತೊಂದರಲ್ಲಿ—ಸರ್ವನಾಮ್ನೋಽಲಿಂಗಾದವಾ । ಸರ್ವನಾಮ್ನೋಽಲಿಂಗಾತ್ಪರಸ್ಯಾಶ್ಚತುರ್ಥೀವಿಭಕ್ತೇಃ ಪೂರ್ವೋಽತ್ರ ಅಕಾರೋ ಭವತಿ ವಾ—ಎಂದಿದೆ.

ಸೂ ॥ ಅತ್ತಣಿಂ ತ್ವ[1]ನುಸಂಧೇಯಃ ಪಂಚಮ್ಯಾಃ ॥ 66 ॥

ವೃ ॥ ಪಂಚಮ್ಯಂತಸ್ಯ[2]ಶಬ್ದಸ್ಯ ತದಭಿವ್ಯಕ್ತಯೇ ಪುನಸ್ತದಂತೇ ಅತ್ತಣಿಮಿತಿ ಶಬ್ದೋಽನುಸಂಧೇಯಃ ಅ[3]ನುಪ್ರಯುಜ್ಯತ ಇತ್ಯರ್ಥಃ ॥

ಉ ॥ ಊರತ್ತಣಿಂ ಬಂದಂ, ಅವನತ್ತಣಿಂ ಭಯಂ, ಕೆಱೆಯತ್ತಣಿಂ ತಂದಂ.

ಟೀ ॥ ಪಂಚಮ್ಯಾಃ=ಪಂಚಮೀವಿಭಕ್ತಿಗೆ. ಅತ್ತಣಿಂ=ಅತ್ತಣಿಂ ಎಂಬ ಶಬ್ದಂ. ಅನುಸಂಧೇಯಃ=ಪತ್ತಿಸಲ್ಪಡವೇಳ್ಕುಂ. ಉ ॥ (ವೃ. ನೋ.)

ಸೂ ॥ ದೀರ್ಘಾದೇಶಃ ಷಷ್ಠ್ಯಾ ಯಥೇಷ್ಟಂ ॥ 67 ॥

ವೃ ॥ ಷಷ್ಠ್ಯಂತಸ್ಯ ಶಬ್ದಸ್ಯ ದೀರ್ಘಾದೇಶಃ ಕಾಮಚಾರತೋ ವೇ[4]ದಿತವ್ಯಃ ॥

ಉ ॥ ನ[5]ರೇಂದ್ರನಾ ಪರಿಜನಂ, ಎಸೆದತ್ತಾ ಲೋಕವಮಾಕಾಂತೆಯಾ, ಪರ್ಮ ಧರ್ಮದಾ. ಕಾ[6]ಮಚಾರಾದಿಹ ನ ಭವತಿ । ಮದನನ ಕೆಯ್ಯುವೆಲ್ಲಿದನನಂಗನ ಕೆಯ್ವಿಡಿಯಲ್ಲಿದಂ.

ಟೀ ॥ ಈ ಕರ್ಣಾಟಕಭಾಷೆಯೊಳ್, ಷಷ್ಠ್ಯಾಃ=ಷಷ್ಠೀವಿಭಕ್ತಿಗೆ. ಯಥೇಷ್ಟಂ=ಇಷ್ಟಪಟ್ಟಂತು. ದೀರ್ಘಾದೇಶಃ=ದೀರ್ಘಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ದ್ವಿತೀಯಾಂತಸ್ಯ ವಾ ಸ್ವರೇ ॥ 68 ॥

ವೃ ॥ ದ್ವಿ[7]ತೀಯಾಂತಸ್ಯ ಪದಸ್ಯ ಸ್ವರೇ ಪರೇ ವಾ ದೀರ್ಘೋ ಭವತಿ ॥

ಹ[8]ರಿಪಾಲಪ್ರಯೋಗಃ—ಕಲ್ಲಾನೇಱಿದಂ, ಕಲ್ಲನೇಱಿದಂ; ಬಿಲ್ಲಾನೇಱಿಸಿದಂ, ಬಿಲ್ಲನೇಱಿಸಿದಂ. ತಥಾ ಗುಣವರ್ಮಕವಿಪ್ರಯೋಗಃ—

ಎ[9]ನಿತ್ತನಿತ್ತಂಬುಜಪತ್ರನೇತ್ರೆಯಾ ।
ಘನಸ್ತನಂಗಳ್ ಬಳೆಗುಂ ಕಿರಾತೆಯಾ ॥
ಅನಿತ್ತನಿತ್ತಂ ವನದೊಳ್ ವನೇಚರಂ ।
ತನತ್ತು ಬಿಲ್ಲಾನದನೊತ್ತಿ ಕೀಸುಗುಂ ॥

ಟೀ ॥ ದ್ವಿತೀಯಾಂತಸ್ಯ=ದ್ವಿತೀಯಾವಿಭಕ್ತ್ಯಂತಮಪ್ಪ ಪದಕ್ಕೆ. ಸ್ವರೇ=ಸ್ವರಂ ಪರಮಾಗೆ. ವಾ=ವಿಕಲ್ಪದಿಂ ದೀರ್ಘಮಕ್ಕುಂ. ಉ ॥ ಬಿಲ್ಲಂ, ಬಿಲ್ಲಾಂ.

ಮತ್ತಮನ್ಯವ್ಯಾಕರಣಸೂತ್ರಮಿಂತೆಂದಪುದು—

---

1 ಚಾನುಸಂಧೇಯಃ. 2 ಷಷ್ಠೀವ್ಯಕ್ತಯೇ. 3 ಇದು ಒಂದು ಪ್ರತಿಯಲ್ಲಿ ಮಾತ್ರ ಇದೆ. 4 ವಿಧಾತವ್ಯಃ. 5 ನೃಪೇಂದ್ರನಾ. 6 ಕಾಮಚಾರಶ್ಚವಿಧಾನಾನ್ನ ಭವತಿ ಚ, ಕಾಮಚಾರತೋ ದೀರ್ಘೋ ನ ಭವತಿ, ಯಥೇಷ್ಟ, ಷಷ್ಠ್ಯಾಂ ದೀರ್ಘೋ ನ. 7 ದ್ವಿತೀಯಾವಿಭಕ್ತ್ಯಂತಸ್ಯ ಸ್ವರೇ ಪರೇ. 8 ಒಂದು ಪ್ರತಿಯಲ್ಲಿ ಹರಿಪಾಲಪ್ರಯೋಗಃ—ಎಂಬುದೂ, ತಥಾ ಗುಣವರ್ಮಕವಿಪ್ರಯೋಗಃ—ಎಂಬುದೂ ಅದರ ಕೆಳಗೆ ಕೊಟ್ಟಿರುವ ಉದಾಹರಣಪದ್ಯವೂ ಇಲ್ಲ. 9 ಕಾವ್ಯಾವಲೋಕನ, ಪದ್ಯ 359.

ಆ[1]ದಿಸ್ವರಪದಮಂತ್ಯಕ ।
ಳಾದೆಡೆಯೊಳ್ ದೀರ್ಘಮಕ್ಕುಮೆರಡನೆಯ ವಿಭ ॥
ಕ್ತ್ಯಾದಾನಪದಂ ದೀರ್ಘಂ ।
ಮಾಬಾಂತ್ಯದೊಳಂಟಿದ ತಾವಿನೊಳ್ ಸ್ವಚ್ಛಂದಂ ॥

ಇದರ್ಕೆ ಗುಣವರ್ಮನ ಪ್ರಯೋಗಂ—(ವೃ. ನೋ.)

ಮತ್ತಂ ಶಿಷ್ಟಪ್ರಯೋಗಂ—

ನೃ[2]ಪನಾನಭಿನುತಮನನಾ ।
ನುಪಮೇತರನಾನಪಾರಕೀರ್ತಿಧ್ವಜನಂ ॥
ವಿಪುಳಗುಣಜ್ಞನನುಚಿತನ ।
ನಪಗತದೋಷನನುದಾರಚರಿತ್ರೋದಯನಂ ॥

ಇಂತು ದ್ವಿತೀಯೆ ಪಿರಿದುಂ ದೀರ್ಘಪ್ರಯೋಗಂ ವಿರಸಂ ಶಿಥಿಲಬಂಧಮೆನಿಸುಗುಂ.

ನೃ[2]ಪನನಭಿಮಾನಧನನನ ।
ನುಪಮನನತಿಶಯವಿಶಾಲಕೀರ್ತಿಧ್ವಜನಾ ॥
ನುಪಚಿತಗುಣನಾನುಚಿತನ ।
ನ[3]ಪಗತದೋಷನನುದಾರಚರಿತೋದಯನಂ ॥

ಸೂ ॥ ಸಪ್ತಮ್ಯಾ ಅಲ್ಲಿ ವಾ ॥ 69 ॥

ವೃ ॥ ಲಿಂ[4]ಗಸಂಜ್ಞಕಾದ್ವಿಹಿತಾಯಾಃ ಸಪ್ತಮ್ಯಾಃ ಸ್ಥಾನೇ ಅಲ್ಲಿ ವಾ ಭವತಿ ॥

ಉ ॥ ಮನದೊಳ್, ಮನದಲ್ಲಿ ; ಬನದೊಳ್, ಬನದಲ್ಲಿ.

ಟೀ ॥ ಸಪ್ತಮ್ಯಾಃ = ಲಿಂಗದತ್ತಣಿಂ ಪರಮಾದ ಸಪ್ತಮೀವಿಭಕ್ತಿಯ ' ಒಳ್ ' ಎಂಬಲ್ಲಿ, ವಾ = ವಿಕಲ್ಪದಿಂ. ಅಲ್ಲಿ = ' ಅಲ್ಲಿ ' ಎಂಬುದಕ್ಕುಂ. ಉ ॥ (ವೃ. ನೋ.)

ಸೂ ॥ ಆಮಂತ್ರಣೇ ಪ್ರಥಮೈಕವಚನಸ್ಯ ಲೋಪಃ ॥ 70 ॥

ವೃ ॥ ಆಮಂತ್ರಣಾರ್ಥೇ ವಿಹಿತಸ್ಯ ಪ್ರಥಮೈಕವಚನಸ್ಯ ಲೋಪೋ ಭವತಿ ॥

ಉ ॥ ಎಲೆ ದೇವ, ಎಲೆ ಭೂಪ, ಎಲೆ ಅಣ್ಣ, ಎಲೆ ಅಕ್ಕ.

ಟೀ ॥ ಆಮಂತ್ರಣೇ = ಸಂಬೋಧನೆಯಲ್ಲಿ. ಪ್ರಥಮೈಕವಚನಸ್ಯ = ಪ್ರಥಮೈಕವಚನದ ಮಕಾರಕ್ಕೆ. ಲೋಪಃ = ಲೋಪಮಕ್ಕುಂ. ಉ ॥ (ವೃ. ನೋ.)

ಸೂ ॥ ಏ[5]ತ್ವಂ ವಾ ತದಂತಸ್ಯ ॥ 71 ॥

ವೃ ॥ ಆ[6]ಮಂತ್ರಣಾರ್ಥೇ ವರ್ತಮಾನಸ್ಯ ಪ್ರಥಮಾವಿಭಕ್ತೇರೇಕವಚನಸ್ಯ ಏತ್ವಂ ವಾ ಭವತಿ ॥

---

1 ಕವಿರಾಜಮಾರ್ಗ 2—15. 2 ಅಲ್ಲೇ. 2—16. 3 ನಪೇತದೋಷ. 4 ಲಿಂಗಸಂಜ್ಞಾಯಾಂ ವಿಹಿತಾಯಾಃ.
5 ಆಮಂತ್ರಣಪ್ರಥಮಾಯಾ ಏತ್ವಂ. 6 ಆಮಂತ್ರಣಪ್ರಥಮೈಕವಚನಸ್ಯ ವಿಕಲ್ಪೇನ ಏತ್ವಂ ಭವತಿ.

ಉ॥ ಎಲೆ ಮಂದಾನಿಲನೇ, ತಂಬೆಲರೇ, ಮಾವೇ, ಮಲ್ಲಿಗೆಯೇ, ಇಂದೋಳವೇ.

ವಾ[1]ಶಬ್ದೋಯಂ ವ್ಯವಸ್ಥಿತವಿಭಾಷಾಯಾಂ ವರ್ತಮಾನೋ ಗೃಹ್ಯತೇ । ತೇನ ಕ್ವಚಿನ್ನ ಭವತಿ—ಎಲೆ ದೇವ, ಎಲೆ ಭೂಪ, ಇತ್ಯಾದಿ.

ಟೀ॥ ತದಂತಸ್ಯ=ಆಮಂತ್ರಣಾರ್ಥದಲ್ಲಿ ವರ್ತಿಸುವ ಪ್ರಥಮಾವಿಭಕ್ತಿಯ ಏಕವಚನದ ಮಕಾರಕ್ಕೆ. ವಾ=ವಿಕಲ್ಪದಿಂ. ಏತ್ವಂ=ಏಕಾರಮಕ್ಕುಂ. ಉ॥ (ವೃ. ನೋ.)

ಸೂ ॥ ಇರಾಶ್ಲೇಷೋ ಗಳಃ ಸಂ[2]ಬೋಧನ ವಿಷಯೇ ॥ 72 ॥

ವೃ॥ ದ್ವಿ[3]ತ್ವಬಹುತ್ವಯೋರ್ವರ್ತಮಾನಸ್ಯ ಗಳಃ ಇರಾಶ್ಲೇಷೋ ಭವತಿ ಸಂಬೋಧನ ವಿಷಯೇ ॥

ಉ॥ ದೈವಂಗಳಿರ, ದೇವತೆಗಳಿರ, ಮಾಮರಂಗಳಿರ, ನಂದನಂಗಳಿರ.

ಇ[4]ರೋ ಗಳ ಇತಿ ಪಂಚಮ್ಯಾ ಸಿದ್ಧೇ ಆಶ್ಲೇಷಗ್ರಹಣಂ ದ್ವಿತ್ವಬಹುತ್ವವ್ಯಕ್ತ್ಯರ್ಥಂ । ತೇನ ಕ್ವಚಿದಿರೋ ಭವತಿ—ನಂಟರಿರ, ನಲ್ಲರಿರ, ಪಂಡಿತರ್ಕಳಿರ, ತಾಯ್ವಿರ್ಕಳಿರ.

ಟೀ॥ ಸಂಬೋಧನವಿಷಯೇ=ಆ ಸಂಬೋಧನೆಯಲ್ಲಿ. ಗಳಃ=ದ್ವಿತ್ವಬಹುತ್ವಕ್ಕೆ ಉಕ್ತಮಾದ ಗಳ್ ಪ್ರತ್ಯಯದ ಮುಂದೆ. ಇರಾಶ್ಲೇಷಃ=ಇರಾಗಮಮಕ್ಕುಂ.
ಉ॥ (ವೃ. ನೋ.)

ಅನ್ಯಪ್ರಯೋಗಂ—

ಸು[5]ರತರುನಂದನಂಗಳಿರ ರತ್ನಪಿನದ್ಧವಿಮಾನಕುಟ್ಟಿಮಾಂ ।
ತರಸುರತಾಲಯಂಗಳಿರ ಚಾರುವಿಲೋಲಕಟಾಕ್ಷಪಾತಸುಂ ॥
ದರಪರಿವಾರದೇವಿಯರಿರಾ ಕಡುಕೆಯ್ದು ಕೃತಾಂತನಿಂತು ನಿ ।
ರ್ನೆರವೊಟಿರೆದುಯ್ವೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪುದೇ ॥

ಸೂ ॥ ದೀರ್ಘೋಕ್ತಿರ್ನಯಸೇನಸ್ಯ ॥ 73 ॥

ವೃ॥ ಸಂಬೋಧನಾರ್ಥೇ ವರ್ತಮಾನಸ್ಯ ಸರ್ವಸ್ಯಾಪಿ ಶ[6]ಬ್ದಸ್ಯ ನಯಸೇನಮುನೇ ರ್ಮತೇ ದೀ[7]ರ್ಘೋಕ್ತಿರ್ಭವತಿ ॥

ಉ॥ ದೇವಾ ಬಿನ್ನಪಂ, ದೇವ ಬಿನ್ನಪಂ; ಸುಗ್ಗೀ, ಸುಗ್ಗಿ; ವಿಧೂ, ವಿಧು; ಕಾಂತೇ, ಕಾಂತೆ; ಗಿ[8]ಳಿಗಳಿರಾ, ಗಿಳಿಗಳಿರ.

ಟೀ॥ ನಯಸೇನಸ್ಯ=ನಯಸೇನಾಚಾರ್ಯನ ಮತದಿಂ. ದೀರ್ಘೋಕ್ತಿಃ=ಸಂಬೋಧನೆಯೊಳ್ ದೀರ್ಘಾದೇಶಮಕ್ಕುಂ. ಉ॥ (ವೃ. ನೋ.)

ಇತಿ ಕರ್ಣಾಟಕವ್ಯಾಕರಣವಿವರಣೇ ವಿಭಕ್ತಿವಿಧಾನಂ ನಾಮ
ತೃತೀಯಃ ಪರಿಚ್ಛೇದಃ.

---

1 ವಾಶಬ್ದೇನ ಕ್ವಚಿನ್ನ ಭವತಿ. 2. ಸಂಬೋಧನವಿಷಯೇ ಎಂಬುದು ಒಂದು ಪ್ರತಿಯಲ್ಲಿಲ್ಲ. 3 ಸಂಬೋಧನದ್ವಿತ್ವಬಹುತ್ವವಿಷಯೇ ಗಳಃಶೇ ಇರಾಶ್ಲೇಷೋ ಭವತಿ. 4 ಈ ಭಾಗವು ಒಂದು ಪ್ರತಿಯಲ್ಲಿ ಮಾತ್ರ ಇದೆ. 5 ಕಾವ್ಯಾವಲೋಕನ, ಪದ್ಯ 130. ಆದಿಪುರಾಣ, 8—4 6 ಶಬ್ದರೂಪಸ್ಯ. 7 ದೀರ್ಘೋ ಭವತಿ. 8 ಇದಕ್ಕೆ ಹಿಂದೆ ನಯಸೇನ ಎಂದು ಒಂದು ಪ್ರತಿಯಲ್ಲಿದೆ.

4. ಕಾರಕವಿಧಾನಂ.

ಅ[1]ಥ ಕಾರಕಂ ನಿರೂಪ್ಯತೇ.

ಟೀ॥ ಅಥ=ಸಂಜ್ಞಾಸಂಧಿವಿ[2]ಭಕ್ತಿವ್ಯಾಖ್ಯಾನಾನಂತರಂ, ಕಾರಕಂ=ಕರ್ತೃಕರ್ಮಕರಣಸಂಪ್ರದಾನಾಪಾದಾನಸ್ವಾಮ್ಯಾಧಿಕರಣಂಗಳೆಂಬ ಪೆಸರನುಳ್ಳ ಕಾರಕಂ, ಯಥಾಕ್ರಮದಿಂ, ನಿರೂಪ್ಯತೇ=ಪೇಳಲ್ಪಡುತ್ತಿರ್ಪುದು.

ಸೂ ॥ ಲಿಂಗಾರ್ಥವಚನಮಾತ್ರೇ ಪ್ರಥಮಾ ॥ 74 ॥

ವೃ॥ ಲಿಂಗಾರ್ಥವಚನಮಾತ್ರೇ ವಿವಕ್ಷಿತೇ ಪ್ರಥಮಾವಿಭಕ್ತಿರ್ಭವತಿ ॥

ಉ॥ ಲಿಂ[3]ಗಮಾತ್ರೇ ತಾವತ್—ದೇವಂ, ನೃಪಂ; ನಾರಿ, ನಲ್ಲಳ್; ಕುಲಂ, ಜ[4]ಲಂ. ಅರ್ಥಮಾತ್ರೇ—ಉಚ್ಚಂ, ನೀಚಂ.[5] ವಚನಮಾತ್ರೇ—ಒಂದಾನುಂ, ಎರಡಾನುಂ.

ಟೀ॥ ಲಿಂಗಾರ್ಥವಚನಮಾತ್ರೇ=ಲಿಂಗದಲ್ಲಿಯುಂ ಅರ್ಥದಲ್ಲಿಯುಂ ವಚನದಲ್ಲಿಯುಂ. ಪ್ರಥಮಾ=ಪ್ರಥಮಾವಿಭಕ್ತಿಯಪ್ಪುದು. ಉ॥ (ವೃ. ನೋ.)

ಸೂ ॥ ಸಂಬೋಧನೇ ಚ ॥ 75 ॥

ವೃ॥ ಸಂಬೋಧನಮಭಿಮುಖೀಕ[6]ರಣಂ ತ[7]ದರ್ಥೇಽಪಿ ಪ್ರಥಮಾವಿಭಕ್ತಿರ್ಭವತಿ ॥

ಉ॥ ನೃಪೇಂದ್ರ, ಕಾಂತೆ, ಕೊಳನೇ, ವನವೆ, ವಸಂತನೆ.

ಟೀ॥ ಸಂಬೋಧನೇ ಚ=ಸಂಬೋಧನೆಯೆಂಬುದು ಇದಿರೊಳಿರ್ಪರಂ ತನ್ನತ್ತಲ್ ಮುಂದುಮಾಡಿಕೊ[8]ಳ್ವುದಱ ಪೆಸರ್, ಆ ಸಂಬೋಧನೆಯಲ್ಲಿಯುಂ ಪ್ರಥಮಾವಿಭಕ್ತಿಯಪ್ಪುದು. ಉ॥ (ವೃ. ನೋ). ಅನ್ಯಪ್ರ[9]ಯೋಗಂ—

ನೀಲಾಳಕೆ ಮಂಜುಳಮೃಗ।
ಬಾಲೇಕ್ಷಣೆ ತುಂಗಕುಚೆ ಸರೋಜಾಸ್ಯೆ ಲಸ॥
ದ್ವ್ಯಾಲಗಜಗಮನೆ ನಿ[10]ನ್ನುಮ।
ನಾಲೋಕಿಸಿ ಸೋಲದಿರ್ಪ ಗಂಡರುಮೊಳರೇ ॥

---

1 ಈ ವಾಕ್ಯವು ಕನ್ನಡಟೀಕೆಯಲ್ಲಿಮಾತ್ರ ಇದೆ; ಇತರಪ್ರತಿಗಳಲ್ಲಿಲ್ಲ. ಇದು ಸೂತ್ರವಾಗಿ ತೋರುವುದಿಲ್ಲ. 2 ವಿಭಕ್ತಿ, ಪದಸಿದ್ಧಿವ್ಯಾಖ್ಯಾನಾನಂತರಂ. 3 ಲಿಂಗೇ. 4 ಜನಂ. 5 ಇದರ ಮುಂದೆ, ಅತ್ರ ಅಕಾರೋಚ್ಚಾರ ಇತ್ಯುಚ್ಚಾರಃ— ಎಂದು ಒಂದು ಪ್ರತಿಯಲ್ಲಿ ಮಾತ್ರ ಇದೆ. 6 ಕರಣಮಾತ್ರಂ. 7 ತಸ್ಮಿನ್ ವಿವಕ್ಷಿತೇ. 8 ಕೊಳ್ವುದು. 9 ಗ್ರಂಥಲಾಘಂ. 10 ನಿನ್ನನು। ಮಾಲೋಕಿಸಿ.

ಸೂ ॥ ಕ[1]ರ್ಮಣಿ ದ್ವಿತೀಯಾ ॥ 76 ॥

ವೃ ॥ ಯ[2]ತ್ಕ್ರಿಯತೇ ತತ್ಕರ್ಮ ಉಚ್ಯತೇ । ತ[3]ದೇಕಂ ನಿರ್ವರ್ತ್ಯಂ ವಿಕಾರ್ಯಂ ಪ್ರಾಪ್ಯಂ ವೈ[4]ಷಯಿಕಮಿತಿ ಚತುರ್ಧಾ ಭಿದ್ಯತೇ । ಅಸ್ಮಿನ್ನರ್ಥೇ ದ್ವಿತಿಯಾವಿಭಕ್ತಿರ್ಭವತಿ ॥

ಉ ॥ ನಿರ್ವರ್ತ್ಯೇ—ಮನೆಯುಂ ಮಾಡಿದಂ. ವಿಕಾರ್ಯೇ—ಪಟುವಂ ಕಡಿದಂ. ಪ್ರಾಪ್ಯೇ—ಊರನೆಯ್ದಿದಂ. ವೈಷಯಿಕೇ—ನೇಸಱಂ ನೋಡಿದಂ.

ತಚ್ಚೇಪ್ಸಿತಮನೀಪ್ಸಿತಮಿತಿ ದ್ವಿಧಾ ಭವತಿ ॥

ಉ ॥ ಈಪ್ಸಿತೇ—ಕೂಳನಟ್ಟಂ, ಬಾಡಂ ಕೊಯ್ದಂ. ಅನೀಪ್ಸಿತೇ—ಪಾವಂ ದಾಂಟಿದಂ. ಕೊಳಡನೆ[5]ಪರ್ಚಿದಂ.

ಟೀ ॥ ಆವುದು ಮಾಡಲ್ಪಡುವುದೋ ಅದು ಕರ್ಮಂ. ಕರ್ಮಣಿ=ಕರ್ಮಾರ್ಥದಲ್ಲಿ. ದ್ವಿತೀಯಾ=ದ್ವಿತೀಯಾವಿಭಕ್ತಿಯಪ್ಪುದು. ಆ ಕರ್ಮಂ ನಿರ್ವರ್ತ್ಯವೆಂದುಂ ವಿಕಾರ್ಯವೆಂದುಂ ಪ್ರಾಪ್ಯವೆಂದುಂ ವೈಷಯಿಕವೆಂದುಂ ನಾಲ್ಕು ತೆಱನಕ್ಕುಂ. ಉ ॥ (ವೃ. ನೋ.) ಮತ್ತಮದು ಇಷ್ಟವೆಂದುಂ ಅನಿಷ್ಟವೆಂದುಂ ಇರ್ತೆಱನಕ್ಕುಂ. ಉ ॥ (ವೃ. ನೋ.)

ಸೂ ॥ ಕಾಲಾಧ್ವನೋರವಿಚ್ಛೇದೇ ॥ 77 ॥

ವೃ ॥ ಕಾ[6]ಲೇ ಅಧ್ವನಿ ವಾ ಅವಿಚ್ಛೇದಃ ಕ್ರಿಯಾವ್ಯಾಪ್ತಿಃ ತತ್ರ ದ್ವಿತೀಯಾವಿಭಕ್ತಿರ್ಭವತಿ ॥

ಉ ॥ ಕಾಲೇ—ಒಂದು ಬರಿಸಮನಿರ್ದಂ, ಇರ್ತಿಂಗಳನೋದಿದಂ, ಅರೆಜಾವಮಂ ನಿದ್ದೆಗೆ[7]ಯ್ದಂ. ಅಧ್ವನಿ—ಬರ್ಗಾವುದಮಂ ಪರಿದಂ, ನಾಲ್ಗಾವುದಮಂ ನಡೆದಂ.

ಟೀ ॥ ಕಾಲಾಧ್ವನೋಃ=ಕಾಲದಲ್ಲಿ ಮೇಣ್ ಬಟ್ಟೆಯಲ್ಲಿ. ಅವಿಚ್ಛೇದೇ=ಕ್ರಿಯೆಯು ವ್ಯಾಪ್ತಿಯಾಗೆ ದ್ವಿತೀಯಾವಿಭಕ್ತಿಯಕ್ಕುಂ. ಉ ॥ (ವೃ. ನೋ.)

ಸೂ ॥ ಕರ್ತೃಕರಣಯೋಸ್ತೃತೀಯಾ ॥ 78 ॥

ವೃ ॥ ಯಃ ಕ್ರಿ[8]ಯಾಂ ಕರೋತಿ ಸ ಕರ್ತಾ । ಸಾಧಕತಮಂ ಕರಣಂ । ತ[9]ಸ್ಮಿನ್ ಕರ್ತರಿ ಕರಣೇ ಚ ವಿ[10]ವಕ್ಷಿತೇ ತೃತೀಯಾವಿಭಕ್ತಿರ್ಭವತಿ ॥

ಉ ॥ ಕರ್ತರಿ—ದೇವದತ್ತನಿಂ ಮಾ[11]ಡಲ್ಪಟ್ಟುದು, ಯಜ್ಞಮಿ[12]ತ್ರನಿಂ ಪೇ[13]ಡಲ್ಪಟ್ಟುದು. ಕರಣೇ—ಕುಡುಗೋಲಿಂ ಕೊಯ್ದಂ, ಪರಶುವಿಂ ಕಡಿದಂ.

ಟೀ ॥ ಕರ್ತೃಕರಣಯೋಃ=ಕರ್ತೃಕರಣಾರ್ಥಂಗಳಲ್ಲಿ. ತೃತೀಯಾ=ತೃತೀಯಾವಿಭಕ್ತಿಯಪ್ಪುದು. ಕರ್ತೃಕರಣಂಗಳಾವುವೆನೆ—ಮಾಡುವಾತಂ ಕರ್ತೃ, ಸಾಧಿಸುವುದು ಕರಣಂ. ಉ ॥ (ವೃ. ನೋ.)

---

1 ದ್ವಿತೀಯಾ ಕರ್ಮಣಿ. 2 ಯತ್ ಕ್ರಿಯಾಭಿವಾಸಂ ತತ್ಕರ್ಮ. 3 ತಚ್ಚತುರ್ವಿಧಂ. 4 ವಿಷಯಾಧಾರಕಮಿತಿ. 5 ನೆರಪಿದಂ. 6 ಕಾಲೇ ವಾ. 7 ಗಡುಬ್ಬು ಬಂದಂ. 8 ಒಂದು ಪ್ರತಿಯಲ್ಲಿ ಕ್ರಿಯಾಂ ಎಂಬುದಿಲ್ಲ. 9 ತಸ್ಮಿನ್ ಕರ್ತರಿ. 10 ಕಾರಣೇ. 11 ಕಾರ್ಯಂ ಮಾಡಿಸಲ್ಪಟ್ಟುದು. 12 ಪಶು. 13 ಮಂತ್ರಂ ಪೇಳಲ್ಪಟ್ಟುದು.

ಸೂ ॥ ಹೇತಾವಪಿ ॥ 79 ॥

ವೃ ॥ ಹೇತುರ್ನಿಮಿತ್ತಂ । ತಸ್ಮಿನ್ನರ್ಥೇ[2]ಽಪಿ ತೃತೀಯಾವಿಭಕ್ತಿರ್ಭವತಿ ॥

ಉ ॥ ಓಲಗದಿಂದಿರ್ದಂ, ಓಲಗದಿಂ ಬೞ್ದಂ.

ಟೀ ॥ ಹೇತಾವಪಿ = ಕಾರಣಾರ್ಥದೊಳಂ ತೃತೀಯಾವಿಭಕ್ತಿಯಕ್ಕುಂ. ಉ ॥ (ವೃ. ನೋ.)

ಸೂ ॥ ಸಂಪ್ರದಾನೇ ಚತುರ್ಥೀ ॥ 80 ॥

ವೃ ॥ ಕ[1]ರ್ಮಣೋ ವಿಷಯಭೂತತ್ವೇನ ವಿವಕ್ಷಿತಂ ಸಂಪ್ರದಾನಂ । ತ[2]ಸ್ಮಿನ್ ಚತುರ್ಥೀ ವಿಭಕ್ತಿರ್ಭವತಿ ॥

ಉ ॥ ಉಪಾಧ್ಯಾಯಂಗೆ ದಕ್ಷಿಣೆಯಂ ಕೊಟ್ಟಂ, ಬ್ರಾಹ್ಮಣಂಗೆ ಗೋವನಿತ್ತಂ.

ಟೀ ॥ ....ಕರ್ಮದೊಡನೆ ಕೂಡಿದುದು ಸಂಪ್ರದಾನಮೆಂಬುದು. ಸಂಪ್ರದಾನೇ = ಆ ಸಂಪ್ರದಾನಕಾರಕದಲ್ಲಿ. ಚತುರ್ಥೀ = ಚತುರ್ಥೀವಿಭಕ್ತಿಯಕ್ಕುಂ. ಸಂಪ್ರದಾನಮೆಂದು ಕೊಳ್ವ ಪಾತ್ರಂ. ಉ ॥ (ವೃ. ನೋ.)

ಸೂ ॥ ರುಚಿಹಿತೇರ್ಷ್ಯಾಭಯೇಷು ಚ ॥ 81 ॥

ವೃ ॥ ರುಚೌ ಹಿತೇ ಈರ್ಷ್ಯಾಯಾಂ ಭಯೇ ಚ ಚತುರ್ಥೀವಿಭಕ್ತಿರ್ಭವತಿ ॥

ಉ ॥ ರುಚೌ—ದೇವದತ್ತಂಗೆ ರುಚಿಯಾಯ್ತು ಮೋದಕಂ. ಹಿತೇ—ಪಶುವಿಂಗೆ ಹಿತಂ ತೃಣಂ. ಈರ್ಷ್ಯಾಯಾಂ—ಆರ್ಯಂಗೆ ಸೆಣಸುಗುಂ ದುರ್ಜನಂ. ಭಯೇ—ಪಾಪಕ್ಕಂಜುಗುಂ ತಕ್ಕಂ.

ಟೀ ॥ ರುಚಿಹಿತೇರ್ಷ್ಯಾಭಯೇಷು ಚ = ರುಚಿಯಲ್ಲಿಯುಂ ಹಿತದಲ್ಲಿಯುಂ ಸೆಣಸಿನಲ್ಲಿಯುಂ ಭೀತಿಯಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ ॥ (ವೃ. ನೋ.)

ಸೂ ॥ ಮನ್ಯಕ[3]ರ್ಮಣಿ ಚಾನಾದರೇ ॥ 82 ॥

ವೃ ॥ ಅನಾದರೇ ಗಮ್ಯಮಾನೇ ಮನ್ಯತೇಃ ಕರ್ಮಣಿ ಚ ಚತುರ್ಥೀವಿಭಕ್ತಿರ್ಭವತಿ ॥

ಉ ॥ ಅವನಂ ಪುಲ್ಗೆ ಕಷ್ಟಮಾಗೆ ಬಗೆದಂ, ಆತನ ಮಾತನೊಂದಡಕೆಗೆ ಕೊಳ್ಳಂ.

ಟೀ ॥ ಅನಾದರೇ = ಆದರಣೆಯಿಲ್ಲದಲ್ಲಿ. ಮನ್ಯಕರ್ಮಣಿ ಚ = ಬಗೆಧಾತುವಿನ ಕರ್ಮದಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ ॥ (ವೃ. ನೋ.)

ಸೂ ॥ ನ[4]ಮಸ್ಕ್ರಿಯಾಯಾಂ ಸ್ವಸ್ತ್ಯಾದಿಷು ಚ ॥ 83 ॥

ವೃ ॥ ನಮಸ್ಕರಣೇ ಸ್ವಸ್ತ್ಯಾದಿಪ್ರಯೋಗೇ ಚ ಚತುರ್ಥೀವಿಭಕ್ತಿರ್ಭವತಿ ॥

---

1 ಕರ್ಮಕರಣಭೂತೇನೋಪಾಶ್ರಯತ್ವೇನ ವಿವಕ್ಷಿತಂ. 2 ತಸ್ಮಿನ್ನರ್ಥೇ. 3 ಕರ್ಮಣ್ಯನಾದರೇ. 4 ನಮಸ್ಸ್ವಸ್ತ್ಯಾದಿಷು ಚ.

ಉ॥ ದೇವಂಗೆ ನಮಸ್ಕಾರಂಗೆಯ್ವಂ, ಅರಸಂಗೆಱಗಿದಂ; ಪ್ರಜೆಗೆಲ್ಲಂ ಸ್ವಸ್ತಿಯಕ್ಕೆ, ಭದ್ರಂ ಜಿನಶಾಸನಕ್ಕೆ.

ಆದಿಶಬ್ದಾತ್ ಸ್ವಾಹಾಸ್ವಧಾಲಂವಷಡರ್ಥೇಷ್ವಪಿ ಚತುರ್ಥೀವಿಭಕ್ತಿರ್ಭವತಿ ॥

ಉ॥ ಅಗ್ನಿಗೆ ಸ್ವಾಹಾಕಾರಂ, ಪಿತೃಗಳ್ಗೆ ಸ್ವಧಾಕಾರಂ, ಮಲ್ಲಂಗೆ ಪ್ರತಿಮಲ್ಲನಲಂ (ಅಲಂ=ಸಮರ್ಥಂ), ಇಂದ್ರಂಗೆ ವಷಟ್ಕಾರಂ ಪ್ರಿಯಂ.

ಟೀ॥ ನಮಸ್ಕ್ರಿಯಾಯಾಂ=ನಮಸ್ಕಾರದಲ್ಲಿ. ಸ್ವಸ್ತ್ಯಾದಿಷು ಚ=ಸ್ವಸ್ತಿ ಎಂಬುದು ಮೊದಲಾದ ಶಬ್ದಂಗಳಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಅಪಾದಾನೇ ಪಂಚಮೀ ॥ 84 ॥

ವೃ॥ ಅಪಾದಾನಮ[1]ಪನಯನಂ । ತ[2]ಸ್ಮಿನ್ ವಿವಕ್ಷಿತೇ ಪಂಚಮೀವಿಭಕ್ತಿರ್ಭವತಿ ॥

ಉ॥ ಊರತ್ತಣಿಂ ಬಂದಂ, ಪಟದತ್ತಣಿಂದಿೞಿದಂ, ಕುದುರೆಯತ್ತಣಿಂದೋಡಿದಂ, ಪುಲಿಯತ್ತಣಿಂ ಭಯಂ.

ಟೀ॥ ಅಪಾದಾನೇ=ಅಪಾದಾನಕಾರಕದಲ್ಲಿ. ಪಂಚಮೀ=ಪಂಚಮೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಸಂ[4]ಬಂಧೇ ಷಷ್ಠೀ ॥ 85 ॥

ವೃ॥ ಸ್ವ[5]ಸ್ವಾಮಿಭಾವಾದಿಸಂಬಂಧೇ ಷಷ್ಠೀವಿಭಕ್ತಿರ್ಭವತಿ ॥

ಉ॥ ಸ್ವಸ್ವಾಮಿಭಾವೇ—ನಾಡೆಮ್ಮೆಯುಂ. ಅವಯವೇ-ಮರದ ಕೊಂಬು. ಜಾತೌ—ಪುಲ್ಲೆಯ ಪಿಂಡು. ವಸ್ತುನಿ—ಪೊನ್ನಗೆಜ್ಜೆ.

ಟೀ॥ ಸಂಬಂಧೇ=ಸ್ವಸ್ವಾಮಿಭಾವಂ ಮೊದಲಾದ ಸಂಬಂಧದಲ್ಲಿ. ಷಷ್ಠೀ=ಷಷ್ಠೀವಿಭಕ್ತಿಯಕ್ಕುಂ. ಉ॥ (ವೃ. ನೋ.)

ಸೂ ॥ ಅಧಿಕರಣೇ ಸಪ್ತಮೀ ॥ 86 ॥

ವೃ॥ ಆಧಾರೋಽಧಿಕರಣಂ । ತ[6]ಸ್ಮಿನ್ ಸಪ್ತಮೀವಿಭಕ್ತಿರ್ಭವತಿ ॥

ಉ॥ ನೆಲದೊಳ್ ಪ[7]ಟ್ಟಂ, ತೊಱೆಯೊಳ್ ಬಿಟ್ಟಂ, ಕೆಯ್ಯೊಳ್ ಕಂಕಣಂ, ಪೂವಿನೊಳ್ ಕಂಪು.

ಟೀ॥ ಅಧಿಕರಣೇ=ಅಧಿಕರಣಕಾರಕದಲ್ಲಿ. ಸಪ್ತಮೀ=ಸಪ್ತಮೀವಿಭಕ್ತಿಯಕ್ಕುಂ. ಅಧಿಕರಣಮೆಂಬೊಡೆ ಆಧಾರಂ. ಉ॥ (ವೃ. ನೋ.)

---

1 ಪದಾತ್ಪ್ರಾಗೇವ ತ. 2 ಮಪಾಯಃ. 3 ತಸ್ಮಿನ್ನರ್ಥೇ. 4 ಸ್ವಸ್ವಾಮಿಸಂಬಂಧೇ. 5 ಸ್ವಸ್ವಾಮಿ...ಸಂಬಂಧೇ ಷಷ್ಠೀವಿಭಕ್ತಿರ್ಭವತಿ. ಅವಯವಜಾತಿವಸ್ತುಷು ಚ. 6 ತಸ್ಮಿನ್ನರ್ಥೇ. 7 ಪಟ್ಟದ್ದರಂ.

ಸೂ ॥ ನಿರ್ಧಾರಣೇ ಚ ॥ 87 ॥

ವೃ ॥ ಜಾ[1]ತಿಕ್ರಿಯಾಗುಣದ್ರವ್ಯೈರೇಕದೇಶಪೃಥಕ್ಕರಣಂ ನಿರ್ಧಾರಣಂ। ತಸ್ಮಿನ್ ವಿವಕ್ಷಿತೇ ಚ ಸಪ್ತಮೀವಿಭಕ್ತಿರ್ಭವತಿ॥

ಉ ॥ ಪುರುಷರೊಳ್ ಕ್ಷತ್ರಿಯಂ ಶೂರಂ, ನುಡಿವರೊಳ್ ಕಡುಜಾಣಂ, ಕಲಿಗಳೊಳ್ ಮೊಮ್ಮಗಲಿ, ನರರೊಳುತ್ತಮಂ.

ಟೀ ॥ ನಿರ್ಧಾರಣೇ ಚ = ಜಾತಿ, ಕ್ರಿಯೆ, ಗುಣಂ, ದ್ರವ್ಯಂ, ಎಂಬಿವಱಿಂ ವಸ್ತುವಂ ಬೇರ್ಕೆಯ್ವುದು ನಿರ್ಧಾರಣಂ; ಆ ನಿರ್ಧಾರಣದಲ್ಲಿಯುಂ ಸಪ್ತಮೀವಿಭಕ್ತಿಯಕ್ಕುಂ. ಉ ॥ (ವೃ. ನೋ.)

ಸೂ ॥ ಆಸಾಂ ವ್ಯತ್ಯಯೋ ಬಹುಳಂ ॥ 88 ॥

ವೃ ॥ ಆಸಾಂ ವಿಭಕ್ತೀನಾಂ ಪ್ರಾಯೇಣ ವ್ಯತ್ಯಯೋ ವಿಪರ್ಯಾಸೋ ಭವತಿ ಉ[2]ತ್ತರತ್ರ ವಿವಕ್ಷಿತೇಽರ್ಥೇ॥

ಸ[3]ಪ್ತಮ್ಯರ್ಥೇ ಷಷ್ಠೀ —ಉ ॥ ಚಾಗಿಗಳ ಬಲ್ಲಹಂ, ಅಂಕವಮಳ್ಳರ ದೇವಂ.

ಪಂಚಮ್ಯರ್ಥೇ ತೃತೀಯಾ—ಉ ॥ ಬಱೆಯಿಂದುರ್ಚಿದಂ, ಸೆಱೆಯಿಂ ಬಿರ್ದುಂಕಿದಂ, ಮನೆಯಿಂ ಪೋಱಮಟ್ಟಂ.

ಷಷ್ಠ್ಯರ್ಥೇ ಚತುರ್ಥೀ —ಉ ॥ ನೆಲಕ್ಕೆಱೆಯಂ, ತ್ರೀಜಗಧೀಶ್ವರಂ.

ದ್ವಿತೀಯಾರ್ಥೇ ಚ[4] —ಉ ॥ ಶಿ[5]ಷ್ಯಂಗೆ ಶಿಕ್ಷಿಸಿದಂ, ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ.

ಪೃ[6]ಥಗರ್ಥೇ ಷಷ್ಠೀ —ಉ ॥ ನಿನ್ನ ಪೋಪ್ಪದುಂ ಬಿನ್ನನಿರ್ದಳ್, ನಿನ್ನ ಬರೆ ಮುರಮಥನ.

ತೃತೀಯಾರ್ಥೇ ಸಪ್ತಮೀ— ಉ ॥ ಚಲದೊಳವನ ದೊರೆಯಾವಂ, ಕೊಡಲಿಯೊಳ್ ಕಡಿದಂ.

ಟೀ ॥ ಆಸಾಂ = ಈ ವಿಭಕ್ತಿಗಳ್ಗೆ. ಬಹುಳಂ = ವಿಕಲ್ಪದಿಂ. ಮುಂದೆ ಪೇೞ್ವರ್ಥಂಗಳಲ್ಲಿ, ವ್ಯತ್ಯಯಃ = ಪಲ್ಲಟವಪ್ಪುದು.

ಸಪ್ತಮ್ಯರ್ಥೇ = ಸಪ್ತಮ್ಯರ್ಥದಲ್ಲಿ. ಷಷ್ಠೀ = ಷಷ್ಠೀವಿಭಕ್ತಿಯಕ್ಕುಂ.
ಉ ॥ (ವೃ. ನೋ.)

ಪಂಚಮ್ಯರ್ಥೇ = ಪಂಚಮ್ಯರ್ಥದಲ್ಲಿ. ತೃತೀಯಾ = ತೃತೀಯಾವಿಭಕ್ತಿಯಕ್ಕುಂ.
ಉ ॥ (ವೃ. ನೋ.)

---

1 ಕ್ರಿಯಯಾ ಗುಣೇನ ವಾ ಸಜಾತೀಯೇಷು ಯನ್ನಿರ್ಧಾರ್ಯತೇ ತನ್ನಿರ್ಧಾರಣಂ. ತತ್ರ ಷಷ್ಠೀಸಪ್ತಮ್ಯೌ ಭವತಃ. 2 ತಥಾ ಚ. 3 ಇವೂ ಇದರ ಮುಂದಣ ವಾಕ್ಯಗಳೂ ಒಂದು ಪ್ರತಿಯಲ್ಲಿ ಬೇರೆ ಬೇರೆ ಸೂತ್ರಗಳಾಗಿವೆ. 4 ಚತುರ್ಥೀ. 5 ಈ ಉದಾಹರಣೆಗಳು ಒಂದು ಪ್ರತಿಯಲ್ಲಿಲ್ಲ. ಅದರಲ್ಲಿ ನೆಲಕ್ಕೆ ವೈರಂ, ನೆಲಕ್ಕೆ ಪಂದಂ ಎಂದಿದೆ. ಬಹುತಾಪಕ್ಕೆ—ಪಂಪರಾಮಾಯಣ 7—98. 6 ಇದಕ್ಕೆ ಹಿಂದೆ, ದ್ವಿತೀಯಾರ್ಥೇ ಷಷ್ಠೀ—ಅರಸನ ಕಂಡಂ, ಎಂಬುದು ಒಂದು ಪ್ರತಿಯಲ್ಲಿ ಮಾತ್ರ ಇದೆ.

ಷಷ್ಠ್ಯರ್ಥೇ=ಷಷ್ಠೀವಿಭಕ್ತ್ಯರ್ಥದಲ್ಲಿ. ಚತುರ್ಥೀ=ಚತುರ್ಥೀವಿಭಕ್ತಿಯಕ್ಕುಂ.
ಉ॥ (ವೃ. ನೋ.)

ದ್ವಿತೀಯಾರ್ಥೇ ಚ=ದ್ವಿತೀಯಾರ್ಥದಲ್ಲಿಯುಂ ಚತುರ್ಥೀವಿಭಕ್ತಿಯಕ್ಕುಂ. ಉ॥ ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ. ಮತ್ಸ್ಯಾವತಾರಮಂ ಎಂಬುದರ್ಥಂ. ಮತ್ಸ್ಯಾವತಾರಮಂ ಪಡೆದನೆಂಬಲ್ಲಿ ಮತ್ಸ್ಯಾವತಾರಕ್ಕೆ ಎಂದಂ.

ಪ್ರಥಮಾರ್ಥೇ=ಪ್ರಥಮಾವಿಭಕ್ತ್ಯರ್ಥದಲ್ಲಿ. ಷಷ್ಠೀ=ಷಷ್ಠೀವಿಭಕ್ತಿಯಕ್ಕುಂ.
ಉ॥ (ವೃ. ನೋ.)

ತೃತೀಯಾರ್ಥೇ=ತೃತೀಯಾರ್ಥದಲ್ಲಿ. ಸಪ್ತಮೀ=ಸಪ್ತಮೀವಿಭಕ್ತಿಯಕ್ಕುಂ.
ಉ॥ (ವೃ. ನೋ.)

ಸೂ ॥ ಜಾತಿರೇಕವದ್ಬ[1]ಹ್ವಾಖ್ಯಾಯಾಂ ಬ[2]ಹುಳಂ ॥ 89 ॥

ವೃ ॥ ಜಾತಿವಾ[3]ಚೀ ಶಬ್ದಃ ಬಹ್ವಾಖ್ಯಾನೇ ಏಕವದ್ಬಹುಳಂ ಭವತಿ ॥

ಉ॥ ಕರಿಯಿವು, ಕರಿಗಳಿವು; ಕೆಯ್ ಬೆಳೆದುವು, ಕೆಯ್ಗಳ್ ಬೆಳೆದುವು.[4]

ಟೀ ॥ ಜಾತಿಃ=ಜಾತಿಯಂ ಪೇಳ್ವ ಶಬ್ದಂ. ಬಹ್ವಾಖ್ಯಾಯಾಂ=ಬಹುತ್ವಮಂ ನುಡಿವಲ್ಲಿ. ಬಹುಳಂ=ವಿಕಲ್ಪದಿಂ. ಏಕವತ್=ಏಕವಚನವಾಗಿರ್ಪುದು. ಉ॥ (ವೃ. ನೋ.)

ಸೂ ॥ ಸಂಖ್ಯೇಯೇ ಸಂಖ್ಯಾಸು ಚ ॥ 90 ॥

ವೃ ॥ ಸಂಖ್ಯೇಯೇ ಸಂಖ್ಯಾಸ್ವಪಿ ವರ್ತಮಾನಃ ಶಬ್ದಃ ಬಹ್ವಾಖ್ಯಾಯಾಮೇ[5]ಕವದ್ಭವತಿ ॥
ಉ॥ ಪತ್ತು ದೆಸೆ, ಪತ್ತು ದೆಸೆಗಳ್; ಮೂಱು ನಾಲ್ಕು, ಮೂಱು ನಾಲ್ಕುಗಳ್.

ಬಹುಳಗ್ರಹಣಾತ್ ಕ್ವಚಿನ್ನ ಭವತಿ—ಪದಿನಯ್ವರ್.

ಟೀ ॥ ಸಂಖ್ಯೇಯೇ=ಸಂಖ್ಯಾವಸ್ತುವಿನಲ್ಲಿ. ಸಂಖ್ಯಾಸು ಚ=ಸಂಖ್ಯೆಗಳಲ್ಲಿಯುಂ ಬಹುಳದಿಂ ಬಹುವಚನವೇಕವಚನರೂಪಮಕ್ಕುಂ. ಉ॥ (ವೃ. ನೋ.)

ಸೂ ॥ ಭಾವವಚನೇಽಪಿ ॥ 91 ॥

ವೃ ॥ ಭಾವಾಖ್ಯಾಯಾಂ[6] ವರ್ತಮಾನೋ ಯಃ ಶಬ್ದಃ ಸೋಽಪ್ಯೇಕವದ್ಭವತಿ ॥

ಉ॥ ಕರ್ಪು, ಬೆಳ್ಪು, ತಣ್ಪು, ತಿಣ್ಪು, ಕೂರ್ಮೆ, ಪೆರ್ಮೆ.

---

1 ಬಹುತ್ವಾಖ್ಯಾನೇ. 2 ಬಹುಳಂ ಎಂಬುದು ಕೆಲವು ಪ್ರತಿಗಳಲ್ಲಿ ಇಲ್ಲ. 3 ವಾಚಕಃ. 4 ಇದಾದಮೇಲೆ—ಬಹುಳಗ್ರಹಣಾತ್ (ಬಹುಳಾಧಿಕಾರಾತ್) ಸ್ತ್ರೀಪುರುಷ ವಿಷಯೇ ಕ್ವಚಿನ್ನ ಭವತಿ—ಎಂದು ಎರಡು ಪ್ರತಿಗಳಲ್ಲಿ ಇದೆ. 5 ಏಕವದ್ಭವತಿ. 6 ಯಾಮಪಿ.

ಬಹುಳಾಧಿಕಾರಾತ್ ಬೆಳ್ಪುಗಳ್, ತೆಳ್ಪುಗಳ್, ಇತಿ ಭವತಿ॥

ಟೀ॥ ಭಾವವಚನೇಽಪಿ—ಭಾವವಚನದಲ್ಲಿಯುಂ ಬಹುವಚನಂ ವಿಕಲ್ಪದಿಂದೇಕವಚನರೂಪಮಕ್ಕುಂ. ಉ॥ (ವೃ. ಸೂ.) ವಿಕಲ್ಪಮೆಂತೆನೆ—ಬೆಳ್ಪುಗಳ್, ಕರ್ಪುಗಳ್, ಕೂರ್ಮೆಗಳ್, ಪೆರ್ಮೆಗಳ್.

ಇತಿ ಕರ್ಣಾಟಕವ್ಯಾಕರಣವಿವರಣೇ ಕಾರಕವಿಧಾನಂ ನಾಮ

ಚತುರ್ಥಃ ಪರಿಚ್ಛೇದಃ.

5. ಯು[1]ಷ್ಮದಾದಿವಿಧಾನಂ.

ಸೂ ॥ ನೀನಾನ್ತಾನಃ ಪ್ರಥಮಾವಿಭಕ್ತೌ ನಿ[2]ನ್ನೆನ್ತನಾಂ ॥ 92 ॥

ವೃ ॥ ಯುಷ್ಮದಸ್ಮದನ್ಯದರ್ಥೇ ವರ್ತಮಾನಾನಾಂ ನಿನ್ ಎನ್ ತನ್ ಇತ್ಯೇತೇಷಾಂ ಪ್ರಥಮಾವಿಭಕ್ತೌ ಪರತಃ ನೀನ್ ಆನ್ ತಾನ್ ಇತ್ಯೇತಾನಿ ರೂಪಾಣಿ ಯ[3]ಥಾಕ್ರಮಂ ಭವಂತಿ ॥

ಉ ॥ ನೀನಿರ್ದಯೆ, ಆಂ ಪೋದಂ, ತಾಂ ಬಂದಂ.

ಟೀ ॥ ನಿನ್ನೆನ್ತನಾಂ = ನಿನ್ ಎನ್ ತನ್ ಎಂಬಿವರ್ಕೆ. ಪ್ರಥಮಾವಿಭಕ್ತೌ = ಪ್ರಥಮಾವಿಭಕ್ತಿ ಪರಮಾಗುತ್ತಿರೆ. ನೀನಾನ್ತಾನಃ = ಯಥಾಕ್ರಮದಿಂ ನೀನ್ ಆನ್ ತಾನ್ ಎಂಬ ಆದೇಶಂಗಳಪ್ಪುವು. ಉ ॥ (ವೃ. ನೋ.)

ಸೂ ॥ ನಿನಎನತನಾಶ್ಚ[4]ತುರ್ಥ್ಯಾಂ ತೃತೀಯತ್ವಂ ಚಾಸ್ಯಾಃ ॥ 93 ॥

ವೃ ॥ ನಿನ್ ಎನ್ ತನ್ ಇತ್ಯೇತೇಷಾಂ ಪುನಃ ಚತುರ್ಥೀವಿಭಕ್ತೌ ಪರತಃ ಯಥಾಸಂಖ್ಯಂ ನಿನ ಎನ ತನ ಇತ್ಯೇತೇ ಆದೇಶಾ ಭವಂತಿ। ಅಸ್ಯಾಶ್ಚತುರ್ಥ್ಯಾ ಅಪಿ ತೃತೀಯತ್ವಂ ಭವತಿ ॥

ಉ ॥ ನಿನಗೆ, ಎನಗೆ, ತನಗೆ.

ಟೀ ॥ ಆ ನಿನ್ ಎನ್ ತನ್ ಎಂಬಿವರ್ಕೆ, ಚತುರ್ಥ್ಯಾಂ = ಮತ್ತೆ ಚತುರ್ಥೀವಿಭಕ್ತಿ ಪರಮಾಗುತ್ತಿರೆ. ನಿನ ಎನ ತನಾಃ = ಯಥಾಕ್ರಮದಿಂ ನಿನ ಎನ ತನ ಎಂಬಾದೇಶಂಗಳಪ್ಪುವು. ಅಸ್ಯಾಃ = ಆ ಚತುರ್ಥೀವಿಭಕ್ತಿಗೆ. ತೃತೀಯತ್ವಂ ಚ = ತನ್ನ ವರ್ಗದ ತೃತೀಯಾಕ್ಷರಂ ಗತ್ವಮುಮಕ್ಕುಂ. ಉ ॥ (ವೃ. ನೋ.)

ಸೂ ॥ ದ್ವಿ[5]ಬಹ್ವೋರ್ನಸ್ಯ ಮಃ ॥ 94 ॥

ವೃ ॥ ದ್ವಿತ್ವಬಹುತ್ವಯೋರ್ವಿಷಯೇ ವಿವಕ್ಷಿತೇ ನಕಾರಸ್ಯ ಸ್ಥಾನೇ ಮಕಾರೋ ಭವತಿ ॥

ಉ ॥ ನೀಮುಂ, ಆಮುಂ, ತಾಮುಂ; ನಿಮಗೆ, ಎಮಗೆ, ತಮಗೆ; ನಿಮ್ಮ, ಎಮ್ಮ, ತಮ್ಮ; ನಿಮ್ಮೊಳ್, ಎಮ್ಮೊಳ್, ತಮ್ಮೊಳ್.

ಟೀ ॥ ದ್ವಿಬಹ್ವೋಃ = ಆ ಶಬ್ದಂಗ[6]ಳ್ಗೆ ದ್ವಿತ್ವಬಹುತ್ವಂಗಳಂ ನುಡಿಯಲ್ವೇಡಿದೊಡೆ. ನಸ್ಯ = ನಕಾರಕ್ಕೆ. ಮಃ = ಮಕಾರಮಕ್ಕುಂ. ಉ ॥ (ವೃ. ನೋ.)

---

1 ಯುಷ್ಮದಸ್ಮತ್ಪ್ರಕರಣಂ, ಶಬ್ದರೀತಿವಿಧಾನಂ. 2 ನಿನ್ನೆನ್ನತನ್ನಾನಾಂ. 3 ಕ್ರಮೇಣ. 4 ಚತುರ್ಥ್ಯಾಸ್ತೃತೀಯತ್ವಂ. 5 ದ್ವಿತ್ವಬಹುತ್ವಯೋಃ. 6 ಗಳ್.

ಸೂ ॥ ಅ[1]ದು ಇದು ಉದೂನಾಮಂತೇ ವತೌ ಪುಂಸಿ ॥ 95 ॥

ವೃ ॥ ಅದು ಇದು ಉದು ಇತ್ಯೇತೇಷಾಂ ಪ್ರಕೃತಿವಿಶೇಷಾಣಾಂ ಪುಲ್ಲಿಂಗವಿವಕ್ಷಾಯಾಂ ಸರ್ವಾಸು ವಿಭಕ್ತಿಷು ಪರಭೂತಾಸು ಅಂತೇ ವಕಾರತಕಾರೌ ಭವತಃ ॥

ಉ ॥ ಅವಂ, ಇವಂ, ಉವಂ; ಆತಂ, ಈತಂ, ಊತಂ. ಸ್ವ[2]ರಾದೌನಾಗಮಃ ಪುಂಸಿ (50)—ಅವನಂ, ಇವನಂ, ಉವನಂ; ಅತನಂ, ಈತನಂ, ಊತನಂ. ಏವಂ ಸರ್ವತ್ರ.

ಟೀ ॥ ಅದು ಇದು ಉದೂನಾಂ=ಅದು ಇದು ಉದು ಎಂಬಿವರ್ಕೆ. ಪುಂಸಿ=ಪುಲ್ಲಿಂಗಮಂ ನುಡಿಯಲ್ವೇಡಿದೊಡೆ. ಎಲ್ಲಾ ವಿಭಕ್ತಿಗಳ್ ಪರಮಾಗೆಯುಂ, ಅಂತೇ=ಆ ಶಬ್ದಂಗಳ ಅಂತ್ಯದ ಉಕಾರಸ್ಥಾನದಲ್ಲಿ. ವತೌ=ವಕಾರತಕಾರಂಗಳ್ ಆದೇಶಮಕ್ಕುಂ.

ಉ ॥ (ವೃ. ನೋ.) ಇಂತಿವರ್ಕೆ ಸಪ್ತವಿಭಕ್ತಿಗಳಂ ಪತ್ತಿಸುವುದು.

ಪ್ರಯೋಗಂ—

ಆತಂ ದ್ರೋಣಂ ನೆಗೞ್ದಂ ।
ಈತಂ ಕುರುರಾಯನೂತನಶ್ವತ್ಥಾಮಂ ॥

ಸೂ ॥ ವಳ್ ಕೇ ಚ ಸ್ತ್ರಿಯಾಂ ॥ 96 ॥

ವೃ ॥ ತೇಷಾಂ ಅದು ಇದು ಉದೂನಾಂ ಸ್ತ್ರೀವಿವಕ್ಷಾಯಾಂ ಸರ್ವಾಸು ವಿಭಕ್ತಿಷು ಪರಭೂತಾಸು ಅಂ[3]ತೇ ವಳ್, ಕೇ, ಇತ್ಯೇತೌ ಭವತಃ ॥

ಉ ॥ ಅವಳ್, ಇವಳ್, ಉವಳ್; ಅವಳಂ, ಇವಳಂ, ಉವಳಂ; ಆಕೆ, ಈಕೆ, ಊಕೆ; ಆಕೆಯುಂ, ಈಕೆಯುಂ, ಊಕೆಯುಂ.

ಟೀ ॥ ಅದು ಇದು ಉದು ಎಂಬಿವರ್ಕೆ, ಸ್ತ್ರಿಯಾಂ=ಸ್ತ್ರೀಲಿಂಗದಲ್ಲಿ. ಎಲ್ಲಾ ವಿಭಕ್ತಿಗಳ್ ಪರಮಾಗೆಯುಂ ಆಶಬ್ದಂಗಳ ಅಂತ್ಯದ ಉಕಾರಕ್ಕೆ, ವಳ್ ಕೇ ಚ=ವಳ್, ಕೇ, ಎಂಬೆರಡುಮಾದೇಶಮಕ್ಕುಂ.

ಉ ॥ (ವೃ. ನೋ.) ಇಂತಿವರ್ಕೆ ಎಲ್ಲಾ ವಿಭಕ್ತಿಗಳಂ ಪತ್ತಿಸುವುದು.

ಸೂ ॥ ದೀ[4]ರ್ಘಸ್ತ[5]ಕಯೋಃ ॥ 97 ॥

ವೃ ॥ ತೇಷಾಮುದುಪ್ರಭೃತೀನಾಂ ತ[5]ಕಯೋಃ ಪರಯೋಃ ಪೂರ್ವಸ್ವರಸ್ಯ ದೀರ್ಘಾದೇಶೋ ಭವತಿ ॥

ಪೂರ್ವೋಕ್ತಾನಿ ಉದಾಹರಣಾನಿ.

---

1 ಅದ್ವಿದುದೂನಾಂ. 2 ಈ ಸೂತ್ರವು ಒಂದು ಪ್ರತಿಯಲ್ಲಿ ಮಾತ್ರ ಇದೆ. 3 ಅಂತ್ಯಸ್ಯ. 4 ದೀರ್ಘಃ ತೇಕಯೋಃ. 5 ತೇಕಯೋಃ.

ಟೀ ॥ ಆ ಅದುಮೊದಲಾದ ಶಬ್ದಂಗಳ್ಗೆ ಪುಲ್ಲಿಂಗಸ್ತ್ರೀಲಿಂಗಂಗಳಲ್ಲಿ. ತಕಯೋಃ= ಅದುಇದು ಉದೂನಾಮಂತೇ ಮಶೌ ಪುಂಸಿ (95) ಎಂಬ ಸೂತ್ರದಿಂದಾದ ತಕಾರಮುಂ ಮಳ್ ಕೇ ಚ ಸ್ತ್ರಿಯಾಂ (96) ಎಂಬ ಸೂತ್ರದಿಂದಾದ ಕೇಕಾರಮುಂ ಪರಮಾಗೆ. ಪೂರ್ವಸ್ವರಕ್ಕೆ, ದೀರ್ಘಃ=ದೀರ್ಘಮಕ್ಕುಂ.

ಅದಂ ಮುಂಪೇಳ್ದುದಾಹರಣಂಗಳಿಂ ನೋಡಿಕೊಳ್ವುದು.

ಮತ್ತಮನ್ಯವ್ಯಾಕರಣಸೂತ್ರದೊಳಮಿಂತೆಂಬುದು—

ಅ[1]ವನಾತನೆಂಬ ಮಾತುಗ ।
ಳವು ಪುಲ್ಲಿಂಗಪ್ರಯೋಗದೊಳ್ ಸ್ತ್ರೀಗುಣದೊಳ್ ॥
ನ್ನವಳಾಕೆಯೆಂಬ ನುಡಿ ಸಂ ।
ಭವಿಕುಂ ಕೇವಲದೊಳದೆಂಬ ಮಾತನೆದಿರ್ಕುಂ ॥

ಸೂ ॥ ಸ್ತ್ರೀಪುಂಸಯೋರ್ವ್ಯತ್ಯಾಸಃ ಕ್ವಚಿತ್ ॥ 98 ॥

ವೃ ॥ ಸ್ತ್ರೀಲಿಂಗಪುಲ್ಲಿಂಗಯೋಃ ಕ್ವಚಿತ್ಕರುಣಾಭಿಲಾಷಾದೌ ವ್ಯತ್ಯಾಸೋ ವಿಪರ್ಯಾಸೋ ಭವತಿ ॥

ಉ ॥ ಕರುಣಂ, ಅಭಿಲಾಷೆ, ಉಪತ್ಯಕಂ.

ಟೀ ॥ ಸ್ತ್ರೀಪುಂಸಯೋಃ=ಸ್ತ್ರೀಲಿಂಗಪುಲ್ಲಿಂಗಂಗಳಲ್ಲಿ. ಕ್ವಚಿತ್=ಕರುಣಾ, ಅಭಿಲಾಷ, ಎಂಬಿವು ಮೊದಲಾದ ಕೆಲವು ಠಾವಿನಲ್ಲಿ. ವ್ಯತ್ಯಾಸಃ=ಪಲ್ಲಟಮಪ್ಪುದು.

ಉ ॥ (ವೃ. ನೋ.)

ಸೂ ॥ ನಿತ್ಯಂ ಕಳತ್ರಾದೌ ನಪುಂಸಕತ್ವಂ ॥ 99 ॥

ವೃ ॥ ಕಳತ್ರಪ್ರಭೃತಿಷು ಶಬ್ದೇಷು ನಿತ್ಯಂ ನ[2]ಪುಂಸಕತ್ವಮೇವ ಭವತಿ ॥

ಉ ॥ ಇ[3]ದು ಧರ್ಮಕಳತ್ರಂ, ಇದು ಅಪತ್ಯಂ, ಇದು ಕೂಸು.

ಟೀ ॥ ಕಳತ್ರಾದೌ=ಕಳತ್ರಂ ಮೊದಲಾದ ಶಬ್ದಂಗಳಲ್ಲಿ. ನಿತ್ಯಂ=ನಿತ್ಯಮಾಗಿ. ನಪುಂಸಕತ್ವಂ=ನಪುಂಸಕಲಿಂಗಮೆ ಅಕ್ಕುಂ. ಉ ॥ (ವೃ. ನೋ.)

ಸೂ ॥ ಆತೋ ಲಘುರೇತ್ ॥ 100 ॥

ವೃ ॥ ಲಿಂಗಾಂತಸ್ಯ ಆಕಾರಸ್ಯ ವಿಭಕ್ತಿಷು ಪರಭೂತಾಸು ಲಘುಭೂತಃ ಏಕಾರೋ ಭವತಿ ॥

ಉ ॥ ವಸುಧೆ, ವನಿತೆ, ದಯೆ, ಚಂದ್ರಿಕೆ, ಮಾಲೆ, ಶಾಲೆ, ಧಾರೆ, ದ್ರಾಕ್ಷೆ, ಇತ್ಯಾದಿ.

ಟೀ ॥ ಆತಃ=ಲಿಂಗಾಂತದ ಆಕಾರಕ್ಕೆ ವಿಭಕ್ತಿಗಣಂ ಪರಮಾಗೆ. ಲಘುಃ=ಲಘುವಪ್ಪ. ಏತ್=ಏಕಾರಮಕ್ಕುಂ. ಉ ॥ (ವೃ. ನೋ.)

---

1 ಕಾವ್ಯಾವಲೋಕನ, ಸೂತ್ರ 37. 2 ನಪುಂಸಕಲಿಂಗಂ ಭವತಿ. 3 ಇದು ಕಳತ್ರಂ.

ಸೂ ॥ ಈದೂತೋರ್ಹ್ರಸ್ವಃ ॥ 101 ॥

ವೃ ॥ ಲಿಂ[1]ಗಾಂತಗತಯೋಃ ಈಕಾರೋಕಾರಯೋಃ ಹ್ರಸ್ವೋ ಭವತಿ ॥

ಉ ॥ ಲಕ್ಷ್ಮಿ, ನದಿ, ನಾರಿ, ಸರಸ್ವತಿ ; ಸರಯು, ಕುಹು, ವಧು, ವಾಮೋರು.

ಟೀ ॥ ಈದೂತೋಃ=ಲಿಂಗಾಂತದ ಈಕಾರೋಕಾರಂಗಳ್ಗೆ. ಹ್ರಸ್ವಃ=ಹ್ರಸ್ವಮಕ್ಕುಂ. ಉ ॥ (ವೃ. ನೋ.)

ಅನ್ಯಪ್ರಯೋಗಂ—

ಲಲಿತಾಳಿಕೆ ತಿಲನಾಸಿಕೆ ।
ಲಲಿತಾಂಗಿ ವಿಶಾಲಜಘನೆ ಚಂದ್ರಾಸ್ಯೆ ಸಮು ॥
ಜ್ವಲಿತರದೆ ಮನಸಿಜಂ ಕಡು ।
ಗಲಿಯಾದಂ ನಿನ್ನಯುವ್ವನಂ ಪೆರ್ಚಲೊಡಂ ॥

ಸೂ ॥ ನೈಕಾಕ್ಷರಪದೇ ॥ 102 ॥

ವೃ ॥ ಏ[2]ಕಾಕ್ಷರಂ ಯತ್ಪದಂ ತ[3]ಸ್ಮಿನ್ ಈಕಾರೋಕಾರಯೋಃ ಹ್ರಸ್ವೋ ನ ಭವತಿ ॥

ಉ ॥ ಶ್ರೀ, ಸ್ತ್ರೀ, ಭೂ, ಭ್ರೂ.

ಟೀ ॥ ಏಕಾಕ್ಷರಪದೇ=ಏಕಾಕ್ಷರಪದಮಾದಲ್ಲಿ. ಈ[4]ಕಾರೋಕಾರಂಗಳ್ಗೆ ಹ್ರಸ್ವಂ, ನ=ಆಗದು.

ಉ ॥ (ವೃ. ನೋ.)

ಅನ್ಯವ್ಯಾಕರಣಸೂತ್ರಂ—

ಆ[5]ಕಾರಕ್ಕೆ ಲಘೂಕೃತ ।
ಮೇಕಾರಂ ತಾನದಕ್ಕು ವಿಮಾದೂದಂತ ॥
ಕ್ಕೇಕಾಕ್ಷರಪದಮುಱಿಯೆ ನಿ[6] ।
ರಾಕುಳದಿಂ ಹ್ರಸ್ವಮಕ್ಕು ಮೆಲ್ಲೆಡೆಗಳೊಳಂ ॥

ಸೂ ॥ ಧಾತೋಸ್ತೃಶಬ್ದಸ್ಯ ವಾರಃ ॥ 103 ॥

ವೃ ॥ ಧಾ[7]ತೋರ್ವಿಹಿತಸ್ಯ ತೃಶಬ್ದಸ್ಯ ವಾ ಆರಾದೇಶೋ ಭವತಿ ॥

ಉ ॥ ಕರ್ತಾರಂ, ಕರ್ತೃ ; ಧಾತಾರಂ, ಧಾತೃ ; ಭರ್ತಾರಂ, ಭರ್ತೃ ; ದಾತಾರಂ ದಾತೃ ; ಹೋತಾರಂ, ಹೋತೃ.

ಟೀ ॥ ಧಾತೋಃ=ಧಾತುವಿನ. ತೃಶಬ್ದಸ್ಯ=ತೃಶಬ್ದಕ್ಕೆ. ವಾ=ವಿಕಲ್ಪದಿಂ ಆರಃ=ಆರಾದೇಶಮಕ್ಕುಂ. ಉ ॥ (ವೃ. ನೋ.)

---

1 ಲಿಂಗಾಂತಯೋಃ. 2 ಏಕಾಕ್ಷರಪದಾಂತಾನಾಮಾಕಾರ ಈಕಾರ ಊಕಾರ ಏತೇಷಾಂ ಹ್ರಸ್ವೋ ನ ಭವತಿ. 3 ತಸ್ಮಿನ್ನೀಕಾರೋಕಾರಯೋಃ ಹ್ರಸ್ವೋ ನ ಭವತಿ. 4 ಆಕಾರ ಈಕಾರ ಊಕಾರಂಗಳ್ಗೆ. 5 ಕಾವ್ಯಾವಲೋಕನ, ಸೂತ್ರ 39. 6 ನಿರಾಕೃತದಿಂ. 7 ಧಾತುವಿಹಿತತೃಚ್ಛಬ್ದಸ್ಯಾಂತ್ಯಸ್ಯ.

ಸೂ ॥ ರಾಂತೋ ವೇಧಸಿ ವಿಧಾತುಃ ॥ 104 ॥

ವೃ ॥ ವಿ[1]ಧಾತೃಶಬ್ದಸ್ಯ ವೇ[2]ಧಸ್ಯಭಿಧೇಯೇ ರಾಂತೋ ವಾ ಭವತಿ ॥

ಉ ॥ ವಿಧಾತ್ರಂ, ವಿಧಾತೃ.

ಟೀ ॥ ವಿಧಾತುಃ = ವಿಧಾತೃಶಬ್ದಕ್ಕೆ. ವೇಧಸಿ = ಬ್ರಹ್ಮನಂ ನುಡಿವ ಅರ್ಥವಾಗೆ. ರಾಂತಃ = ರಕಾರಾಂತತೆ ವಿಕಲ್ಪದಿಂದಕ್ಕುಂ. ಉ ॥ (ವೃ. ನೋ.)

ಸೂ ॥ ಅರೋಽನ್ಯತ್ರ[3] ॥ 105 ॥

ವೃ ॥ ಕ್ರಿಯಾವಾಚಿನೋ ಧಾತೋರನ್ಯತ್ರ ವರ್ತಮಾನಸ್ಯ ತೃಶಬ್ದಸ್ಯ ಅರೋ ಭವತಿ ॥

ಉ ॥ ಪಿತರಂ, ಪಿತೃ ; ಭ್ರಾತರಂ, ಭ್ರಾತೃ ; ಇತ್ಯಾದಿ.

ಟೀ ॥ ಅನ್ಯತ್ರ = ಧಾತುವಿನದಲ್ಲದ ತೃಶಬ್ದಕ್ಕೆ. ಅರಃ = ಅರಾದೇಶಮಕ್ಕುಂ. ಉ ॥ (ವೃ. ನೋ.)

ಸೂ ॥ ಶ್ವಯುವಾಧ್ವನಾಮಾನಃ ॥ 106 ॥

ವೃ ॥ ಶ್ವನ್ ಯುವನ್ ಅಧ್ವನ್ ಇತ್ಯೇತೇಷಾಮಂತಸ್ಯ ಆನೋ ಭವತಿ ॥

ಉ ॥ ಶ್ವಾನಂ, ಯುವಾನಂ, ಅಧ್ವಾನಂ.

ಟೀ ॥ ಶ್ವಯುವಾಧ್ವನಾಂ = ಶ್ವನ್ ಯುವನ್ ಅಧ್ವನ್ ಎಂಬಿವರಂತಕ್ಕೆ. ಆನಃ = ಆನಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ಸಖ್ಯುರಾಯಃ ॥ 107 ॥

ವೃ ॥ ಸ[4]ಖಿಶಬ್ದಾಂತಸ್ಯ ಆಯಪ್ರತ್ಯಯೋಭವತಿ ॥

ಉ ॥ ಸಖಾಯಂ.

ಟೀ ॥ ಸಖ್ಯುಃ = ಸಖಿಶಬ್ದಕ್ಕೆ ವಿಭಕ್ತಿಗಣಂ ಪರವಾಗೆ, ಆಯಃ = ಆಯಪ್ರತ್ಯಯಮಕ್ಕುಂ. ಉ ॥ (ವೃ. ನೋ.)

ಸೂ ॥ ವಸ್ಸಯಸ್ನೋರುಪಾಂತ್ಯಸ್ಯ ದೀರ್ಘೋ ವಾ[5] ॥ 108 ॥

ವೃ ॥ ವಸ್ಸಯಸ್ಸಪ್ರತ್ಯಯಾಂತಯೋರುಪಾಂತ್ಯಸ್ಯ ದೀ[6]ರ್ಘೋ ವಾ ಭವತಿ ॥

ಉತ್ತರತ್ರ ಉದಾಹ್ರಿಯೇತೇ.

---

1 ವೇಧಸಿ ಅಭಿಹಿತೇ ವಿಧಾತೃಶಬ್ದಸ್ಯ ರಾಂತೋ ವಾ ಭವತಿ. 2 ವೇಧಸ್ಯರ್ಥೇ. 3 ಈ ಸೂತ್ರಪಾಠವೊಂದೆ ಹಿಂದೆ ಅಚ್ಚಾಗಿರುವ ಪುಸ್ತಕದಲ್ಲಿ—ತಸ್ಯ—ಎಂಬ ಸೂತ್ರವಿದೆ. ಆದರೆ ಈ ಸೂತ್ರವು ಈಗ ದೊರೆತಿರುವ 5 ಓಲೆಯ ಪ್ರತಿಗಳಲ್ಲಿಯೂ ಇಲ್ಲ. 4 ಸಖಿಶಬ್ದಸ್ಯ ವಿಭಕ್ತ್ಯಾಂ ಪರಭೂತಾಯಾಂ ಅಂತ್ಯಸ್ಯ ಆಯೋ ಭವತಿ. 5 ವಾ ಲೋಪಃ. 6 ದೀರ್ಘೋ ಭವತಿ । ವಿಕಲ್ಪೇನ ಶ್ರುತಿರಪ್ಯುಕ್ತಃ, ದೀರ್ಘೋ ವಾ ಭವತಿ । ಶ್ರುತಿದಂತಸ್ಯ ಲೋಪಃ.

ಟೀ ॥ ವಸ್ಸು ಯಸ್ನೋಃ=ವಸ್ಸು ಯಸ್ಸು ಪ್ರತ್ಯಯಾಂತಂಗಳ. **ಉಪಾಂತ್ಯಸ್ಯ**=**ಉಪಾಂತ್ಯಕ್ಕೆ.** ವಾ=ವಿಕಲ್ಪದಿಂ. ದೀರ್ಘಃ=ದೀರ್ಘಮಕ್ಕುಂ.

ಇದರ್ಕೆ ಮುಂದೆ ಉದಾಹರಣೆಯುಂ ತೋಱಿದಪರ್.

ಸೂ ॥ ಅದಂತತಾ ಚ ॥ 109 ॥

ವೃ ॥ ತಯೋಃ ವಸ್ಸು ಯಸ್ಸು ಪ್ರತ್ಯಯಾಂತಯೋಃ ಉಪಾಂತ್ಯಸ್ಯ ದೀರ್ಘೇ ಕೃತೇ ಅಕಾರಾಂತತಾ ಚ ಭವತಿ ॥

ಉ ॥ ವಿದ್ವಾಂಸಂ, ಕನೀಯಾಂಸಂ.

ವಾಗ್ರಹಣಾನುವರ್ತನಾತ್ ಕ್ವಚಿದ್ವಿಕಲ್ಪಃ—ಉ ॥ ಜ್ಯಾಯಾಂಸಂ, ಜ್ಯಾಯಂ; ಶ್ರೇಯಾಂಸಂ, ಶ್ರೇಯಂ.

ಟೀ ॥ ಆ ವಸ್ಸು ಯಸ್ಸು ಪ್ರತ್ಯಯಾಂತಂಗಳ ಉಪಾಂತ್ಯಕ್ಕೆ ದೀರ್ಘಮಾಗುತ್ತಿರೆ, ಅದಂತತಾ ಚ=ಅವರ್ಕೆ ಅಕಾರಾಂತತೆಯುಮಕ್ಕುಂ. ಉ ॥ (ವೃ. ನೋ.)

ವಾಶಬ್ದಸ್ವೀಕಾರದಿಂ ಕೆಲವೆಡೆಯೊಳ್ ವಿಕಲ್ಪಮಕ್ಕುಂ. ಉ ॥ (ವೃ. ನೋ.)

ಸೂ ॥ ವಿರಾಮೇ ವ್ಯಂ[1]ಜನಸ್ಯ ॥ 110 ॥

ವೃ ॥ ವಿರಾಮೇ ವರ್ತಮಾನಸ್ಯ ವ್ಯಂಜನಸ್ಯ ಅಕಾರಾಂತತಾ ಭವತಿ ॥

ಉ. ॥ ಸಂಪದಂ, ಮರುತಂ, ವಿಹಾಯಸಂ.

ಟೀ ॥ ವಿರಾಮೇ=ವಿರಾಮದಲ್ಲಿ ವರ್ತಿಸುತ್ತಿರ್ಪ. ವ್ಯಂಜನಸ್ಯ=ವ್ಯಂಜನಕ್ಕೆ ಅಕಾರಾಂತತೆಯುಕ್ಕುಂ. ಉ ॥ (ವೃ. ನೋ.)

ಸೂತ್ರ ॥ ಲೋಪೋ ವಿಭಾಷಯಾ ॥ 111 ॥

ವೃ ॥ ವಿರಾಮೇ ಸ್ಥಿತಸ್ಯ ವ್ಯಂಜನಸ್ಯ ವಿಭಾಷಯಾ ಲೋಪೋ ಭವತಿ ॥

ಉ ॥ ನವವಯಂ, ನವವಯಸಂ; ಜಾತವೇದಂ, ಜಾತವೇದಸಂ; **ಉಶನಂ, ಉಶನಸಂ**

ವ್ಯವಸ್ಥಿತವಿಭಾಷಯಾ ಕ್ವ[2]ಚಿಲ್ಲೋಪ ಏವ—ಉ ॥ ನಭಂ, ಮನಂ.

ಕ್ವಚಿದದಂತತ್ವಮೇವ—ಉ ॥ ದಿವಂ, ಕಕುಭಂ.

ಕ್ವ[3]ಚಿದುದಂತತ್ವಮೇವ । ವಿರಾಮೇ ದ್ವಿತ್ವಂ—ಉ ॥ ವಾಕ್ಕು, ದಿಕ್ಕು, ವೀರುತ್ತು, ಪರಿಷತ್ತು.

ಟೀ ॥ ಆ ವಿರಾಮದಲ್ಲಿ ವರ್ತಿಸುತ್ತಿರ್ಪ ವ್ಯಂಜನಕ್ಕೆ, ವಿಭಾಷಯಾ=ವಿಕಲ್ಪದಿಂ, ಲೋಪಃ=ಲೋಪಮಕ್ಕುಂ. ಉ ॥ (ವೃ. ನೋ.)

ಇದರ್ಕೆ ಅನ್ಯವ್ಯಾಕರಣಸೂತ್ರಂ—

---

1 ವ್ಯಂಜನಸ್ಯಾಪಿ. 2 ಕ್ವಚಿನ್ನಿತ್ಯಲೋಪಃ. 3 ಕ್ವಚಿದುದ್ವಿತ್ವಂ! ವಿರಾಮೇ ವ್ಯಂಜನಸ್ಯ ಕ್ವಚಿದ್ದ್ವಿತ್ವಮುಕ್ತ್ವಂ ಭವತಿ— ಎಂದು ಒಂದು ಪ್ರತಿಯಲ್ಲಿದೆ.

ಜನಮುಲಿವ ಸಂಸ್ಕೃತವ್ಯಂ।
ಜನಾಂತಲಿಂಗಂಗಳತ್ವಮುಂ ದ್ವಿತ್ವದಿನು॥
ತ್ವನಿಯೆೞಗಮನಂತ್ಯಾದ।
ರ್ಣನಮುಂ ಮೇೞ್ತಾಳ್ದೆ ಕನ್ನಡಕ್ಕವು ಲಿಂಗಂ॥ (ಶ. ಮ. ದ. 86)

ಇದಱಿಂ ಕಿಱಿದು ದ್ವಿತ್ವಂಗೂಡಿದುಕಾರಾಂತಮುಕ್ಕುಂ. ಉ॥ ವಾಕ್ಕು ಇತ್ಯಾದಿ. (ವೃ. ನೋ.)

ಸೂ॥ ಮನಯೋರ್ಬಿಂದುಃ ॥ 112 ॥

ವೃ॥ ಮಕಾರನಕಾರಯೋಃ ಬಿಂದುರ್ಭವತಿ ವಿರಾಮೇ॥

ಉ॥ ಕುಲಂ, ಜಲಂ, ಪೊಲಂ, ನೆಲಂ; ನೀಂ[1], ಆಂ, ತಾಂ.

ಟೀ॥ ವಿರಾಮದಲ್ಲಿ ವರ್ತಿಸುತ್ತಿರ್ಪ, ಮನಯೋಃ = ಮಕಾರ ನಕಾರಂಗಳ್ಗೆ. ಬಿಂದುಃ = ಸೊನ್ನೆಯಕ್ಕುಂ. ಉ॥ (ವೃ. ನೋ.)

ಸೂ॥ ವರ್ಗೇ ತದ್ವರ್ಗಾಂತ್ಯಃ ॥ 113 ॥

ವೃ॥ ವರ್ಗಾಕ್ಷರೇ ಪರೇ ಮ[2]ನಯೋಃ ಸ್ಥಾನೇ ತದ್ವರ್ಗಾಂತ್ಯಃ ಪಂಚಮೋ ಭವತಿ॥

ಉ॥ ಬಿಂಕಙ್ಗೆಟ್ಟಂ, ತಾಞ್ಜಲಚಿತ್ತಂ, ಸುತ್ತೆಣ್ಬುಕ್ಕುಂ, ಮೆ[3]ಲ್ಪನೊತ್ತಿರ್ಪಂ, ಬಲ್ಪಮ್ಬಿಸುಟಂ.

ಟೀ॥ ಆ ಮಕಾರನಕಾರಂಗಳ್ಗೆ, ವರ್ಗೇ = ವರ್ಗಾಕ್ಷರಂ ಪರಮಾಗುತ್ತಿರೆ. ತದ್ವರ್ಗಾಂತ್ಯಃ = ಆವರ್ಗದ ಪಂಚಮಾಕ್ಷರಮಕ್ಕುಂ. ಉ॥ (ವೃ. ನೋ.)[4]

ಸೂ॥ ಣೋ ನಸ್ಯ ಣೇನ ॥ 114 ॥

ವೃ॥ ಣಕಾರೇಣ ಯೋಗೇ ನಕಾರಸ್ಯ ಣತ್ವಂ ಭವತಿ॥

ಉ॥ ತಣ್ಣೆೞಲ್, ತಣ್ಣೀರ್.

ಟೀ॥ ಣೇನ = ಣಕಾರದೊಡನೆ ಯೋಗಮಾದ. ನಸ್ಯ = ನಕಾರಕ್ಕೆ. ಣಃ = ಣಕಾರಮಕ್ಕುಂ. ಉ॥ (ವೃ. ನೋ.)

ಸೂ॥ ಪೇ[5] ಹೋ ವಾ ॥ 115 ॥

ವೃ॥ ಪಕಾರಸ್ಯ ಸ್ಥಾನೇ ಹಕಾರೋ ವಾ ಭವತಿ॥

ಉ॥ ಪಲಗೆ, ಹಲಗೆ; ಕಾಪು, ಕಾಹು.

ಟೀ॥ ಪೇ = ಪಕಾರದ ಸ್ಥಾನದಲ್ಲಿ. ವಾ = ವಿಕಲ್ಪದಿಂ. ಹಃ = ಹಕಾರಮಕ್ಕುಂ. ಉ॥ (ವೃ. ನೋ.)

---

1 ಒಂದು ಪ್ರತಿಯಲ್ಲಿ ನೀಂ, ಆಂ, ತಾಂ ಎಂಬ [illegible]. 2 ಅನುಸ್ವಾರಸ್ಯ. 3 ಒಂದು ಪ್ರತಿಯಲ್ಲಿ [illegible]. 4 [illegible] ವಿಕಲ್ಪಮಾಗಕ್ಕುಂ। [illegible] 5 ಒಂದು ಪ್ರತಿಯಲ್ಲಿ [illegible].

ಸೂ ॥ ಶಷಯೋಃ ಸಃ ॥ 116 ॥

ವೃ ॥ ಶಕಾರಷಕಾರಯೋಃ ಸಕಾರೋ ಭವತಿ ॥

ಉ ॥ ಸಸಿ, ಸೇಸೆ, ಸಿಸು, ಮಸಿ.

ಟೀ ॥ ಶಷಯೋಃ=ಶಕಾರಷಕಾರಂಗಳ್ಗೆ. ಸಃ=ಸಕಾರಮಕ್ಕುಂ.
ಉ ॥ (ವೃ. ನೋ.)

ಸೂ ॥ ರೇಫಸಂಯೋಗೇ ತದಂತರೇ ತ್ವಿಃ ॥ 117 ॥

ವೃ ॥ ರೇಫಸಂಯೋಗೇ ಸತಿ ಶಷಯೋಃ ರೇಫಸ್ಯ ಚಾಂತರೇ ಇಕಾರೋ ಭವತಿ ॥

ಉ ॥ ಪರಿಸಂ, ಸಿರಿ; ಹರಿಸಂ, ಬರಿಸಂ, ಸರಿಸಪಂ.

ಟೀ ॥ ರೇಫಸಂಯೋಗೇ=ರೇಫೆ ಸಂಯೋಗಮಾಗುತ್ತಿರೆ. ತದಂತರೇ=ಆ ರೇಫೆಯ ಶಷಕಾರಂಗಳ ನಡುವೆ. ಇಃ=ಇಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ಹಕಾರಸ್ಯೋಃ[1] ॥ 118 ॥

ವೃ ॥ ರೇಫಸಂಯೋಗೇ ಸತಿ ಹಕಾರರೇಫಯೋರಂತರೇ ಉಕಾರೋ ಭವತಿ ॥

ಉ ॥ ಅರುಹಂ, ಬರುಹಂ, ಅರುಹಂತಂ, ಗಾರುಹಪತ್ಯಂ.

ಟೀ ॥ ಹಕಾರಸ್ಯ=ಹಕಾರಕ್ಕೆ ರೇಫೆ ಸಂಯೋಗಮಾಗುತ್ತಿರೆ. ರೇಫೆಯು ಹಕಾರದ ನಡುವೆ, ಉಃ=ಉಕಾರಮಕ್ಕುಂ. ಉ ॥ (ವೃ. ನೋ.)

ಸೂ ॥ ೞಕಾರಃ ಪದವಿಧೌ ಡಸ್ಯ ವ್ಯಂಜನೇಷು ॥ 119 ॥

ವೃ ॥ ಡಕಾರಸ್ಯ ಸ್ಥಾನೇ ವ್ಯಂಜನೇಷು ಪರೇಷು ಪದವಿಧೌ ಕ್ರಿಯಮಾಣೇ ೞಕಾರೋ ಭವತಿ॥

ಉ ॥ ಕಾೞ್ಪುರಂ, ಕಾೞ್ಕಿಚ್ಚು, ನಾೞ್ಪಗರಣಂ, ನಾೞ್ಕಡೆ, ಕೋೞ್ಕಟ್ಟು.

ಟೀ ॥ ಪದವಿಧೌ=ಸಮಾಸವಿಧಾನದಲ್ಲಿ. ವ್ಯಂಜನೇಷು=ವ್ಯಂಜನಂಗಳ್ ಪರಮಾಗುತ್ತಿರೆ. ಡಸ್ಯ=ಡಕಾರಕ್ಕೆ. ೞಕಾರಃ=ೞಕಾರಮಕ್ಕುಂ.

ಉ ॥ (ವೃ. ನೋ.) ಇವರ್ಕೆ ಸಮಾಸವಿಧಿಯಲ್ಲಿ ಪೂರ್ವಪದದ ಅಂತ್ಯಸ್ವರಂ ಲೋಪಮಾಗಿ ಈ ರೀತಿಯಿಂ ರೂಪಂ ಸಿದ್ಧಂ.

ಸೂ ॥ ಅತಿ ಟಃ ॥ 120 ॥

ವೃ ॥ ಅತಿ ಪ್ರತ್ಯಯೇ ಪರೇ ಡಕಾರಸ್ಯ ಟಕಾರೋ ಭವತಿ ॥

ಉ ॥ ಆಟಂ, ನೋಟಂ, ಮಾಟಂ, ಬೇಟಂ, ಕೂಟಂ, ಊಟಂ, ಕಾಟಂ, ಪಾಟಂ.

ಟೀ ॥ ಆ ಡಕಾರಕ್ಕೆ, ಅತಿ=ಅಪ್ರತ್ಯಯಂ ಪರಮಾಗುತ್ತಿರೆ. ಟಃ=ಟಕಾರಮಕ್ಕುಂ. ಉ ॥ (ವೃ. ನೋ.)

---

1 ಸ್ಯೋಃ. 2 ಡಕಾರ, ದಾಂತಸ್ಯ.

ಸೂ ॥ ೞ[1]ಕಾರಸ್ಯ ರೇಫಃ ॥ 121 ॥

ವೃ ॥ ೞಕಾರಸ್ಯ ಸ್ಥಾನೇ ವ್ಯಂಜನೇಷು ಪರೇಷು ರೇಫೋ ಭವತಿ ॥

ಉ॥ ಮಾರ್ಕಣೆ, ಮಾರ್ಕೊರಲ್, ಮಾರ್ದನಿ, ಮಾರ್ಪಡೆ, ನೂರ್ಮಡಿ.

ಟೀ॥ ೞಕಾರಸ್ಯ = ೞಕಾರಕ್ಕೆ. ವ್ಯಂಜನಂ ಪರಮಾಗುತ್ತಿರೆ, ರೇಫಃ = ರಕಾರವಕ್ಕುಂ. ಉ॥ (ವೃ. ನೋ.)

ಸೂ ॥ ಆದೇರೃರಿಃ ॥ 122 ॥

ವೃ ॥ ಆದಿಭೂತಸ್ಯ ಋಕಾರಸ್ಯ ಸ್ಥಾನೇ ರಿಕಾರೋ ಭವತಿ ॥

ಉ॥ ರಿಣಂ, ರಿತು, ರಿಸಿ.

ಟೀ॥ ಆದೇಃ = ಶಬ್ದದ ಆದಿಯಾದ. ಋಃ = ಋಕಾರಕ್ಕೆ. ರಿಃ = ರಿಕಾರವಕ್ಕುಂ. ಉ॥ (ವೃ. ನೋ.)

ಸೂ ॥ ಯವಯೋರನಾದಿಸ್ಥಯೋರೈ[2]ಔ ಸ್ವರೇಣ ವಾ ॥ 123 ॥

ವೃ ॥ ಅನಾದಿಭೂತಯೋಃ ಯಕಾರವಕಾರಯೋಃ ಸ್ಥಾನೇ ಸ್ವರೇಣ ಸಹ ಐ[3]ಔ ವಾ ಭವತಃ ॥

ಉ॥ ಕಯ್ವಾರಂ, ಕೈವಾರಂ; ಪಾರಯಿಸಿದಂ, ಪಾರೈಸಿದಂ; ಕವುಂಗು, ಕೌಂಗು; ತವುದಲೆ, ತೌದಲೆ.

ಟೀ॥ ಅನಾದಿಸ್ಥಯೋಃ = ಆದಿಯಲ್ಲದಂತಪ್ಪ. ಯವಯೋಃ = ಯಕಾರವಕಾರಂಗಳ್ಗೆ. ಸ್ವರೇಣ = ಸ್ವರದೊಡನೆ ಕೂಡಿ. ವಾ = ವಿಕಲ್ಪದಿಂ. ಐ ಔ = ಐ, ಔ, ಎಂಬಿವಕ್ಕುಂ. ಉ॥ (ವೃ. ನೋ.)

ಇತಿ ಕರ್ಣಾಟಕವ್ಯಾಕರಣವಿವರಣೇ ಯುಷ್ಮದಾದಿವಿಧಾನಂ ನಾಮ
ಪಂಚಮಃ ಪರಿಚ್ಛೇದಃ.

---

1 ೞಶ. 2 ರೈಔ ಸ್ವರೇಣ ವಾ. 3 ವಾ ಐಔ ಭವತಿ, ದ್ವಿಕಾರಸಂಖ್ಯಾ ವಾ ಐಔ ಭವತಿ.

6. ಸಮಾಸವಿಧಾನಂ.

ಸೂ ॥ ನಾಮ್ನಾಂ ಸಮಾಸಃ ಸಂಗತಾರ್ಥಃ ॥ 124 ॥

ವೃ ॥ ನಾಮ್ನಾಂ ನಾಮಪದಾನಾಂ ಸಂಗತಾರ್ಥಃ ಸಂಬಂಧಾರ್ಥಃ ಸಮಾಸೋ ವೇ[1]ದಿತವ್ಯಃ[2] ॥

ಟೀ ॥ ನಾಮ್ನಾಂ=ನಾಮಪದಂಗಳ. ಸಂಗತಾರ್ಥಃ=ಕೂಡಿನುಡಿವರ್ಥಂ. ಸಮಾಸಃ=ಸಮಾಸವೆಂಬುದು.

ಸೂ ॥ ತ[3]ತ್ರಾಂತರ್ವರ್ತಿನ್ಯೋ ವಿಭಕ್ತಯೋ ಲೋಪ್ಯಾಃ ॥ 125 ॥

ವೃ ॥ ತತ್ರ ತಸ್ಮಿನ್ ಸಮಾಸೇ ಅಂ[4]ತರ್ವರ್ತಿನ್ಯೋ ವಿಭಕ್ತಯೋ ಲೋಪ್ಯಾ ಭವಂತಿ ॥

ಟೀ ॥ ತತ್ರ=ಆ ಸಮಾಸದಲ್ಲಿ. ಅಂತರ್ವರ್ತಿನ್ಯಃ=ನಡುವೆ ವರ್ತಿಸುತ್ತಿರ್ಪ. ವಿಭಕ್ತಯಃ=ವಿಭಕ್ತಿಗಳ್. ಲೋಪ್ಯಾಃ=ಲೋಪಿಸಲ್ಪಡುವುವು.

ಇದರ್ಕನ್ಯಲಕ್ಷಣಸೂತ್ರಂ—

ಸಂಗತಿಯಿಂದಂ ನಾಮಪ ।
ದಂಗಳನೇಕಾರ್ಥಗತಿಯೊಳಾಗೆ ಸಮಾಸಂ ॥
ಸಂಗಳಿಸುಗುಂ ವಿಭಕ್ತಿಗ ।
ಳಂಗಳ್ಗಂತರದೊಳಲ್ಲಿ ಲೋಪಮೆ ಅಕ್ಕುಂ ॥ (ಕಾವ್ಯಾವಲೋಕನ, ಸೂ. 45.)

ಸಮಾಸಾಃ ಕೇ?

ಸೂ ॥ ಉತ್ತರಪದಾರ್ಥವೃ[5]ತ್ತಿಸ್ತತ್ಪುರುಷಃ ॥ 126 ॥

ವೃ ॥ ಉ[6]ತ್ತರಪದಾರ್ಥೇ ವೃತ್ತಿರ್ಯಃ ಸಮಾಸಸ್ತತ್ಪುರುಷಸಂಜ್ಞೋ ಭವತಿ ॥

ಉ ॥ ಅರಮನೆ, ಸೂಳೆಗೇರಿ, ಮೂಂಗಾಮ್, ಸಿರ್ಪೇರೆ, ಆನೆವಾಲು, ಪೊನ್ನೋಲೆ.

ಟೀ ॥ ಉತ್ತರಪದಾರ್ಥವೃತ್ತಿಃ=ಮುಂದಣ ಪದದ ಅರ್ಥವಾನೆ ಮುಖ್ಯಮಾಗುಳ್ಳುದು. ತತ್ಪುರುಷಃ=ತತ್ಪುರುಷಸಮಾಸಮೆಂಬುದು.

ಉ ॥ (ವೃ. ನೋ.) ಸೂಳೆಯರ ಕೇರಿ ಎಂಬಲ್ಲಿ ವಿಭಕ್ತಿಲೋಪಮಾಗಿ ಸೂಳೆಗೇರಿ ಎಂದಾಯ್ತು.

---

1 ಭವತಿ. 2 ಇದಾದಮೇಲೆ, ಸಂಗತಾರ್ಥಃ ಏಕಾರ್ಥ ಇತ್ಯರ್ಥಃ—ಎಂದು ಒಂದು ಪ್ರತಿಯಲ್ಲಿಯೂ, ಏಕಾರ್ಥೀಭಾವಃ ಸಮಾಸಶಕ್ತಿಃ ಯೂವತ—ಎಂದು ಮತ್ತೊಂದರಲ್ಲಿಯೂ ಇದೆ. 3 ತತ್ರಾಂತರ್ವರ್ತಿವಿಭಕ್ತೇರ್ಲೋಪಃ. 4 ಮಧ್ಯಸ್ಥಿತವಿಭಕ್ತೇರ್ಲೋಪೋ ಭವತಿ. 5 ಪ್ರವೃತ್ತಿ. 6 ಉತ್ತರಪದಾರ್ಥವೃತ್ತಿಪ್ರಧಾನಃ ತತ್ಪುರುಷಃ ಸಮಾಸಃ.

ಸೂ ॥ ಸ[1] ಏವೈಕಾಶ್ರಯಃ ಕರ್ಮಧಾರಯಃ ॥ 127 ॥

ವೃ ॥ ಸ[2] ಏವ ತತ್ಪುರುಷಃ ಏ[3]ಕಾಶ್ರಯಶ್ಚೇತ್ ಕರ್ಮಧಾರಯಸಂಜ್ಞೋ ಭವತಿ ॥

ಉ ॥ ನಳಿತೋಳ್, ಕೆಂದಳಂ, ತೆಳ್ವಸಿಱ್, ಪೆರ್ವೊಲೆ, ಕರ್ಗಯ್ಸಿಲ್, ಕಟ್ಬಾಳ್.

ಟೀ ॥ ಸ ಏವ = ಆ ತತ್ಪುರುಷಸಮಾಸವೆ. ಏಕಾಶ್ರಯಃ = ಒಂದೇ ಅಧಿಕರಣ ಮುಳ್ಳುದಾಗೆ. ಕರ್ಮಧಾರಯಃ = ಕರ್ಮಧಾರಯಸಮಾಸವೆಂದು ಪೆಸರಂ ಪಡೆಗುಂ.

ಉ ॥ (ವೃ. ನೋ.) ಕೆಂಪುಂ ತಾನೇ ತಾವರೆಯುಂ ತಾನೇ ಆಗಿ ಏಕಾಶ್ರಯವಾಗಿ ವಿಭಕ್ತಿಲೋಪವಾಗಿ ಕೆಂದಾವರೆ ಎಂದಾಯ್ತು.

ಸೂ ॥ ಸಂಖ್ಯಾದಿಶ್ಚೇತ್ ದ್ವಿಗುಃ ॥ 128 ॥

ವೃ ॥ ಸಂ[4]ಖ್ಯಾದಿಪದಶ್ಚೇತ್ ಸ ಏವ ಕರ್ಮಧಾರಯಃ ದ್ವಿಗುಸಂಜ್ಞೋ ಭವತಿ ॥

ಉ ॥ ಒರ್ತಲೆ, ಒರ್ಪಿಡಿ, ಇರ್ಕೆಯ್, ಇರ್ಕಣ್, ಮೂಲೋಕಂ, ಮುಕ್ಕೊಡೆ, ನಾಲ್ಗಾವುದಂ, ಅಯ್ಸರಂ, ಅಯ್ವಿಂಡಿಗೆ.

ಟೀ ॥ ಸಂಖ್ಯಾದಿಶ್ಚೇತ್ = ಆ ಕರ್ಮಧಾರಯಸಮಾಸವು ಸಂಖ್ಯಾಪದಂ ಮೊದಲೊಳುಳ್ಳುದಾದೊಡೆ. ದ್ವಿಗುಃ = ದ್ವಿಗುಸಮಾಸವೆಂದು ಪೆಸರಂ ಪಡೆಗುಂ. ಉ ॥ (ವೃ. ನೋ.)

ಸೂ ॥ ಪೂರ್ವಪದಾರ್ಥಪ್ರಧಾನೋಽವ್ಯಯೀಭಾವಃ ॥ 129 ॥

ವೃ ॥ ಪೂ[5]ರ್ವಪದಾರ್ಥಮು[6]ಖ್ಯವೃತ್ತಿಃ ಸಮಾಸೋಽವ್ಯಯೀಭಾವಸಂಜ್ಞೋ ಭವತಿ ॥

ಉ ॥ ಕಿಱ್ಕೆಱೆ, ಕಿಱುವೊಡೆ, ಮೇಗೆಯ್, ಮೇಗಾಲ್, ಅಂಗೆಯ್, ಅಂಗಾಲ್.

ಟೀ ॥ ಪೂರ್ವಪದಾರ್ಥಪ್ರಧಾನಃ = ಮೊದಲ ಪದದ ಅರ್ಥಮನೆ ಮುಖ್ಯಮಾಗುಳ್ಳುದು. ಅವ್ಯಯೀಭಾವಃ = ಅವ್ಯಯೀಭಾವಸಮಾಸವೆಂಬುದು. ಉ ॥ (ವೃ. ನೋ.)

ಸೂ ॥ ಸ[7]ರ್ವಪದಾರ್ಥಪ್ರಧಾನೋ ದ್ವಂದ್ವಃ ॥ 130 ॥

ವೃ ॥ ಸ[8]ಮಸ್ತಪದಾನಾಂ ಸಮುಚ್ಚಯೋ ದ್ವಂದ್ವಸಮಾಸಸಂಜ್ಞೋ ಭವತಿ ॥

ಉ ॥ ಕೆಯ್ವನೆಗಳ್, ಕೆಱೆಕೊಱೆಗಳ್, ಕಱಿಮುಱಿಗಳ್, ನಾಡುಬೀಡುಗಳ್, ಜಟ್ಟಿಗಟ್ಟಂಗಳ್, ಕೆಯ್ಗಾಲ್ಗಳ್.

ಟೀ ॥ ಸರ್ವಪದಾರ್ಥಪ್ರಧಾನಃ = ಎಲ್ಲಾಪದಂಗಳ ಅರ್ಥಮುಂ ಮುಖ್ಯಮಾಗುಳ್ಳುದು. ದ್ವಂದ್ವಃ = ದ್ವಂದ್ವಸಮಾಸವೆಂಬುದು. ಉ ॥ (ವೃ. ನೋ.)

---

1 ಸ ಏಕಾಶ್ರಯಃ. 2 ಭಿನ್ನಪ್ರವೃತ್ತಿ[illegible]ಕಾಶ್ರಯೇ[illegible] ಸ ಏವ ತತ್ಪುರುಷಃ ಕರ್ಮಧಾರಯಸಂಜ್ಞೋ ಭವತಿ. 3 ಏಕಾಧಿಕರಣಶ್ಚೇತ್. 4 ಸಂಖ್ಯಾ[illegible]. 5 ಪೂರ್ವಪದಾರ್ಥಮುಖ್ಯವೃತ್ತಿಃ [illegible] ಪದಾರ್ಥ[illegible]ನಂ [illegible] ಸೋಽವ್ಯಯೀಭಾವಸಮಾಸಸಂಜ್ಞೋ ಭವತಿ. 6 [illegible] 7 [illegible]ಪದಮುಖ್ಯೋ ದ್ವಂದ್ವಃ. 8 [illegible]

ಸೂ ॥ ಅನ್ಯಪದಾರ್ಥಪ್ರಧಾನೋ ಬಹುವ್ರೀಹಿಃ ॥ 131 ॥

ವೃ ॥ ಅನ್ಯಸ್ಯ ಪ[1]ದಸ್ಯಾರ್ಥೇ ವ[2]ರ್ತಮಾನಃ ಸಮಾಸೋ ಬಹುವ್ರೀಹಿಸಂಜ್ಞೋ ಭವತಿ ॥

ಉ ॥ ಕರ್ಬುವಿಲ್ಲಂ, ಕುಡುವಿಲ್ಲಂ, ಕಲ್ಲೆರ್ದೆಯಂ, ಕುಸಿಗೊರಲಂ, ನುಚ್ಚಕ್ಕಿವಲ್ಲಂ, ಕೆಂದಲೆಯಂ, ಮೆಲ್ಲಡಿಯಂ, ಕುಱುಗೆಯ್ಯಂ, ಬಿಸುಗದಿರಂ, ತಣ್ಗದಿರಂ.

ಟೀ ॥ ಅನ್ಯಪದಾರ್ಥಪ್ರಧಾನಃ = ಮತ್ತೊಂದುಪದದ ಅರ್ಥಮನೆ ಮುಖ್ಯಮಾಗುಳ್ಳುದು. ಬಹುವ್ರೀಹಿಃ = ಬಹುವ್ರೀಹಿಸಮಾಸಮೆಂಬುದು.

ಸೂ ॥ ಸಮಸಂಸ್ಕೃತಂ ದೇಶೀಯಪದೇನ ಸ[3]ಮಂ ಸಮಸ್ಯತೇ ॥ 132 ॥

ವೃ ॥ ಸಂಸ್ಕೃತಪದಸಮಂ ಯತ್ಪದಂ ತತ್ಸಮಸಂಸ್ಕೃತಂ । ತದ್ದೇಶೀಯಪದೇನ ಸ[4]ಮಂ ಸಮಸ್ಯತೇ ॥

ಉ ॥ ಪರದೇಸಂ, ಪರಕೊತ್ತಱಿ, ಪರವೆಣ್, ಪರಮಂಡಳಿಗಂ ; ಬಳ್ಗವಿ, ಬೆಳ್ಗವಿ, ಅಱಿಗವಿ ; ಕೂರಸಿ, ಮಾಜನಂ, ಮಾಪಾತಕಂ, ತುರಗದಱಿ, ಮಂ[5]ಗಳಾರತಿ, ಕಡುರಾಗಂ, ಪೊಡವೀಶಂ.

ಟೀ ॥ ಸಮಸಂಸ್ಕೃತಂ = ಸಮಸಂಸ್ಕೃತಪದಂ. ದೇಶೀಯಪದೇನ ಸಮಂ = ಕರ್ಣಾಟಕಪದದೊಡನೆ. ಸಮಸ್ಯತೇ = ಸಮಾಸಿಸಲ್ಪಡುವುದು.

ಸಮಸಂಸ್ಕೃತಮೆಂಬ ಪೆಸರನುಳ್ಳುದರ್ಕ್ಕೆ ಅನ್ಯಲಕ್ಷಣಸೂತ್ರಂ—

ಸಮುದಿತಸಂಖ್ಯಾವ್ಯಯರಹಿ ।
ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ ॥
ತ್ತಮವರ್ಣಪ್ರಕೃತಿಗಳಂ ।
ಸಮಸಂಸ್ಕೃತಪೆಸರನಿಟ್ಟು ಲಿಂಗಂಮಾಳ್ಪರ್ ॥ (ಶ. ಮ. ದ. 80)

ನಾರದದಂಡಿಗೆ, ಶ್ರೀರಾಮಪಟ್ಟಣಂ. ಅಂತುಮಲ್ಲದೆಯುಂ ಕೆಲವುಂಟು—(ವೃ.ನೋ.)

ಸೂ ॥ ಕಾರಕಂ ಪ[6]ರೇಣ ಸಮರ್ಥಕ್ರಿಯಾಪದೇನ ॥ 133 ॥

ವೃ ॥ ಕರ್ಮಾದಿಕಂ ಯತ್ಕಾರಕಂ ತ[7]ತ್ಪರತ್ರಾವಸ್ಥಿತೇನ ಸ[8]ಮರ್ಥೇನ ಕ್ರಿಯಾವಾಚಿನಾ ಪದೇನ ಸಮಂ ಸಮಸ್ಯತೇ ॥

ಉ ॥ ಊರೇಱಲ್ ಬಂದಂ, ನಾಡ್ಕುಡೆವ್ಪೋದಂ, ತೆಱೆದೆತ್ತಂ, ಎಱಿತ್ತುಗೊಂಡಂ, ಸೆಱೆಯಿರ್ದಂ, ಬಕ್ಕಲ್ವೋದಂ, ಬಿ[5]ಲ್ಲತ್ತಿದಂ, ಬಳೆದೊಟ್ಟಂ, ಸೇದೆವಡೆದಂ.

---

1 ಪದಸ್ಯಾರ್ಥೋ ಯತ್ರ ಸಮಸ್ಯತೇ ಸ ಸಮಾಸೋ. 2 ಸಮಸ್ಯಮಾನ್ಯೈಕಪದಂ ಯದಿ ವ್ಯಕ್ತಿ ಬಹುವ್ರೀಹಿಸಮಾಸೋ ಭವತಿ. 3 ಒಂದು ಪ್ರತಿಯಲ್ಲಿ ಸಮಂ ಎಂಬುದಿಲ್ಲ. 4 ಸಹ. 5 ಇಲ್ಲಿಂದ ಮುಂದೆ ಇರುವ ಉದಾಹರಣೆಗಳು ಒಂದು ಪ್ರತಿಯಲ್ಲಿ ಮಾತ್ರ ಇವೆ. 6 ಒಂದು ಪ್ರತಿಯಲ್ಲಿ ಪರೇಣ ಎಂಬುದಿಲ್ಲ. 7 ತತ್ಪರೋಽವಸ್ಥಿತೇನ. 8 ಸಮರ್ಥ ಕ್ರಿಯಾವಾಚಿನಾ.

ಟೀ॥ ಕಾರಕಂ—ಕರ್ಮಂ ಮೊದಲಾದ ಕಾರಕಪದಂ. ಪರೇಣ—ಮುಂದಣ. ಸಮರ್ಥಕ್ರಿಯಾಪದೇನ—ಸಮರ್ಥಮಾದ ಕ್ರಿಯಾಪದದೊಡನೆ ಸಮಾಸಿಸಲ್ಪಡುಗುಂ. ಉ॥ (ವೃ. ನೋ.)

ಸೂ॥ ಅ[1]ಕಾರಾಂತಾನ್ಮಃ ॥ 134 ॥

ವೃ॥ ಅಕಾರಾಂತಾತ್ ಕಾರಕಾತ್ ಕ್ರಿ[2]ಯಾವಾಚಿನಾ ಸಮಸ್ಯಮಾನಾತ್ ಪರೋ ಮ[3]ಕಾರಾಗಮೋ ಭವತಿ ॥

ಉ॥ ಮನಂಗೊಳ್ಗುಂ, ಗುಣಂಗೊಂಡಂ, ಜಸಂಬಡೆದಂ, ಕಳಸಮಿಟ್ಟಂ.

ಟೀ॥ ಅಕಾರಾಂತಾತ್—ಅಕಾರಾಂತಮಪ್ಪ ಕಾರಕದತ್ತಣಿಂ ಪರಮಾಗಿ. ಮಃ—ಮಕಾರಾಗಮಮಕ್ಕುಂ. ಉ॥ (ವೃ. ನೋ.)

ಸೂ॥ ವಿಶೇಷ್ಯೋತ್ತರಪ[4]ದಪೂರ್ವಪದಸ್ಯೋಪಾಂತ್ಯಸ್ವರಾದೇರ್ಲೋಪಃ ॥ 135 ॥

ವೃ॥ ವಿಶೇಷ್ಯೋತ್ತರಪದಸ್ಯ ವಿಶೇಷಣರೂಪತಯಾಽವಸ್ಥಿತಸ್ಯ ಪೂರ್ವಪದಸ್ಯ ಉಪಾಂತ್ಯಸ್ವರಾದೇರವಯವಸ್ಯ ಲೋಪೋ ಭವತಿ ॥

ಉ॥ ಕಾರ್ಮುಡು, ಕೂರ್ವಾಳ್, ಇಮ್ಮಾವು, ಇನ್ನುಣಿಸು, ನುಣ್ಬಾರಂ, ಬಳ್ವಾತು, ಬಳ್ಗಣಂ, ಬಳ್ನುಡಿ, ಬಳ್ವಾನಸಂ.

